ಶುಕ್ರವಾರ, ಫೆಬ್ರುವರಿ 19, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 50 | ಪುಟ 14 + 2
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ಸಿನಿಮಾ ನಂಗೆ ಗ್ರಾಂಟೆಡ್ ಅಲ್ಲ ಎನ್ನುವ ಧ್ರುವ ಸರ್ಜಾ ಅವರಿಗೆ ಈಗ 'ಪೊಗರು' ಚಿತ್ರ ಬಿಡುಗಡೆ ಸಂಭ್ರಮ. ಇನ್ಮುಂದೆ ಅವರಿಗೆ ಬೇಗ ಬೇಗ ಸಿನಿಮಾ ಮಾಡುವ ಇರಾದೆ...



ಆಳ-ಅಗಲ
ಮೀಟೂ ಏಟು

ಜೈಪುರ: ಇಂದಿನಿಂದ 'ಸಾಹಿತ್ಯದ ಕುಂಭಮೇಳ' 9
'ಬಸ್ ಪ್ರಯಾಣ ದರ ಏರಿಕೆ ಇಲ್ಲ' 8

ಸೆನ್ಸೆಕ್ಸ್	ನಿಫ್ಟಿ	₹/$
51,325 ▼	15,119 ▼	72.65 ▲

ಟೂಲ್‌ಕಿಟ್ ಎಫ್‌ಐಆರ್ • 'ಸಿಖ್ಸ್ ಫಾರ್ ಜಸ್ಟಿಸ್'ನಿಂದ ಗಲಭೆಗೆ ಹಣ

'ಹಿಂಸೆಗೆ ಪ್ರತ್ಯೇಕತೆ ಕುಮ್ಮಕ್ಕು'

ಪ್ರಜಾವಾಣಿ ವಾರ್ತೆ

ನವದೆಹಲಿ: ಗಣರಾಜ್ಯೋತ್ಸವ ದಿನವಾದ ಜನವರಿ 26ರಂದು ದೆಹಲಿಯ ಇಂಡಿಯಾ ಗೇಟ್‌ನಲ್ಲಿ ಪ್ರತ್ಯೇಕತಾವಾದಿ ಧ್ವಜ ಹಾರಿಸಬೇಕು ಎಂದು ಖಾಲಿಸ್ತಾನಿ ಹೋರಾಟದ ಪರವಾಗಿರುವ ನಿಷೇಧಿತ ಸಂಘಟನೆ ಸಿಖ್ಸ್ ಫಾರ್ ಜಸ್ಟಿಸ್ ಕರೆ ಕೊಟ್ಟಿತ್ತು ಎಂದು ಪೊಲೀಸರು ಎಫ್‌ಐಆರ್‌ನಲ್ಲಿ ಆಪಾದಿಸಿದ್ದಾರೆ.

ಅಂದು ರೈತರು ನಡೆಸಿದ ಟ್ರ್ಯಾಕ್ಟರ್ ರ‍್ಯಾಲಿಯಲ್ಲಿ ಹಿಂಸಾಚಾರ ಎಸಗುವುದಕ್ಕಾಗಿ 2.5 ಲಕ್ಷ ಡಾಲರ್‌ಗಳನ್ನು (ಸುಮಾರು ₹1.8 ಕೋಟಿ) ಈ ಸಂಘಟನೆ ನೀಡಿದೆ. ಭಾರತ ಮತ್ತು ಭಾರತದ ಕೆಲವು ಕಂಪನಿಗಳ ವಿರುದ್ಧ ವಾಣಿಜ್ಯ ಸಮರಕ್ಕೂ ಟೂಲ್‌ಕಿಟ್‌ನಲ್ಲಿ ಕರೆಕೊಡಲಾಗಿದೆ. ಟ್ರ್ಯಾಕ್ಟರ್ ರ‍್ಯಾಲಿ ಸಂದರ್ಭದಲ್ಲಿನ ಹಿಂಸಾಚಾರವು 'ಪೂರ್ವಯೋಜಿತ ಸಂಚು' ಎಂದು ಟೂಲ್‌ಕಿಟ್ ಪ್ರಕರಣದ ಎಫ್‌ಐಆರ್‌ನಲ್ಲಿ ಹೇಳಲಾಗಿದೆ.

ದೆಹಲಿ ಪೊಲೀಸ್ ಇಲಾಖೆಯ ಸೈಬರ್ ಅಪರಾಧ ತಡೆ ವಿಭಾಗವು ಸಾಮಾಜಿಕ ಮಾಧ್ಯಮದ ಮೇಲೆ ಇರಿಸಿದ ನಿಗಾದ ಆಧಾರದಲ್ಲಿ ಫೆ. 4ರಂದು ಎಫ್‌ಐಆರ್ ದಾಖಲಿಸಲಾಗಿದೆ. ಸ್ವೀಡನ್‌ನ ಪರಿಸರ ಕಾರ್ಯಕರ್ತೆ ಗ್ರೇಟಾ ಥನ್‌ಬರ್ಗ್ ಅವರು ಟೂಲ್‌ಕಿಟ್ ಅನ್ನು ಲಗತ್ತಿಸಿ ಮಾಡಿದ ಟ್ವೀಟ್, ಆಕಸ್ಮಿಕವಾಗಿ ತನಿಖಾಧಿಕಾರಿಗಳ ಕಣ್ಣಿಗೆ ಬಿತ್ತು. ಗ್ರೇಟಾ ಅವರು ಈ ಟ್ವೀಟ್ ಅನ್ನು ಬಳಿಕ ಅಳಿಸಿ ಹಾಕಿದ್ದಾರೆ ಎಂದು ಎಫ್‌ಐಆರ್‌ನಲ್ಲಿ ಹೇಳಲಾಗಿದೆ.

ಜ. 26ರ ಹಿಂಸಾಚಾರವು ಪೂರ್ವಯೋಜಿತ ಎಂಬುದು ಟೂಲ್‌ಕಿಟ್‌ನ ವಿವರಗಳನ್ನು ಪರಿಶೀಲಿಸಿದರೆ ತಿಳಿಯುತ್ತದೆ. ಈ ಟೂಲ್‌ಕಿಟ್ ಅನ್ನು ಗ್ರೇಟಾ ಅವರಿಗೆ ನೀಡಿದ್ದು ಬೆಂಗಳೂರಿನ ಪರಿಸರ ಕಾರ್ಯಕರ್ತೆ ದಿಶಾ ರವಿ. ದಿಶಾ, ಮುಂಬೈನ ವಕೀಲೆ ನಿಕಿತಾ ಜೇಕಬ್ ಮತ್ತು ಬೀಡ್‌ನ ಶಾಂತನು ಮುಲುಕ್ ಹಾಗೂ ಇತರರು ಈ ಟೂಲ್‌ಕಿಟ್ ಸಿದ್ಧಪಡಿಸಿದ್ದಾರೆ ಎಂದು ಆರೋಪಿಸಲಾಗಿದೆ. ಆದರೆ, ಈ ಆರೋಪವನ್ನು ಈ ಎಲ್ಲರೂ ನಿರಾಕರಿಸಿದ್ದಾರೆ.

ಪ್ರತ್ಯೇಕತಾವಾದಿ ಧ್ವಜ ಹಾರಿಸಲು ಮತ್ತು ಹಿಂಸಾಚಾರ ನಡೆಸಲು ಸಿಖ್ಸ್ ಫಾರ್ ಜಸ್ಟಿಸ್ ಸಂಘಟನೆಯು 2.5 ಲಕ್ಷ ಡಾಲರ್ ಕೊಟ್ಟಿತ್ತು ಎಂದು ಎಫ್‌ಐಆರ್‌ನಲ್ಲಿ ಇದೆ. ಆದರೆ, ಜ. 26ರಂದು ಕೆಂಪು ಕೋಟೆಯಲ್ಲಿ ಹಾರಿಸಿದ್ದು ಧಾರ್ಮಿಕ ಧ್ವಜ.

ಶಾಂತಿಯುತವಾಗಿ ಟ್ರ್ಯಾಕ್ಟರ್ ರ‍್ಯಾಲಿ ನಡೆಸಲು ರೈತರು ಒಪ್ಪಿದ್ದರು. ಆದರೆ, ಟೂಲ್‌ಕಿಟ್‌ನ ಹಿಂದಿರುವ ಶಕ್ತಿಗಳೇ ಗಲಭೆಗೆ ಕುಮ್ಮಕ್ಕು ಕೊಟ್ಟಿವೆ ಎಂದು ಪೊಲೀಸರು ಆರೋಪಿಸಿದ್ದಾರೆ.

'ಪಂಜಾಬ್ ಅನ್ನು ಭಾರತದಿಂದ ಪ್ರತ್ಯೇಕಿಸಿ ಖಾಲಿಸ್ತಾನ ಎಂದು ಘೋಷಿಸಬೇಕು ಎಂದು ಸಿಖ್ಸ್ ಫಾರ್ ಜಸ್ಟಿಸ್ ಸಂಘಟನೆಯು ಬಹಳ ಹಿಂದಿನಿಂದಲೂ ಪ್ರತಿಪಾದಿಸುತ್ತಿದೆ. ರೈತರ ಪ್ರತಿಭಟನೆಯನ್ನು ಮುಂದಿರಿಸಿಕೊಂಡು ತನ್ನ ಕಾರ್ಯಸೂಚಿಯನ್ನು ಮುಂದಕ್ಕೆ ತರುತ್ತಿದೆ. ಜನರಿಗೆ ಹಣ ನೀಡಿ, ಅಕ್ರಮವನ್ನು ಪ್ರಚೋದಿಸುವ ವಿಚಾರಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡು ಈ ಸಂಘಟನೆಯು ಹಿಂಸೆಗೆ ಕುಮ್ಮಕ್ಕು ನೀಡಿದೆ' ಎಂದು ಎಫ್‌ಐಆರ್‌ನಲ್ಲಿ ಇದೆ.

ಭಾರತದ ಸಂಕೇತಗಳಾದ ಯೋಗ ಮತ್ತು ಚಹಾದ ಮಹತ್ವವನ್ನು ಹಾಳುಗೆಡವುವಂತೆಯೂ ಕರೆ ನೀಡಲಾಗಿದೆ. ಭಾರತದ ಕೆಲವು ಪ್ರದೇಶಗಳ ನಡುವೆ ವೈರತ್ವ ಸೃಷ್ಟಿಯ ಪ್ರಯತ್ನವೂ ನಡೆದಿದೆ ಎಂದು ಎಫ್‌ಐಆರ್ ಹೇಳಿದೆ.

ಮಾಧ್ಯಮದಿಂದ ಖಾಸಗಿತನದ ಹಕ್ಕು ಉಲ್ಲಂಘನೆ: ದಿಶಾ ಆರೋಪ

ತಮ್ಮದು ಎಂದು ಹೇಳಲಾಗುತ್ತಿರುವ ವಾಟ್ಸ್‌ಆ್ಯಪ್ ಸಂವಾದದ ಆಧಾರದಲ್ಲಿ ಏಕಪಕ್ಷೀಯ, ಅಪಮಾನಕರ ಮತ್ತು ವ್ಯಂಗ್ಯದಿಂದ ಕೂಡಿದ ಅರ್ಧಸತ್ಯವನ್ನು ಪ್ರಕಟಿಸುವ ಮೂಲಕ ಕೆಲವು ಮಾಧ್ಯಮ ಸಂಸ್ಥೆಗಳು ತಮ್ಮ ಖಾಸಗಿತನದ ಹಕ್ಕನ್ನು ಉಲ್ಲಂಘಿಸಿವೆ. ಹೆಸರಿಗೆ ಮಸಿ ಬಳಿದು ನ್ಯಾಯಯುತ ತನಿಖೆ ಸಾಧ್ಯವಾಗದಂತೆ ಮಾಡುತ್ತಿವೆ. ಇಂತಹ ವರದಿ ಪ್ರಕಟಿಸುವುದಕ್ಕೆ ತಡೆ ನೀಡಬೇಕು ಎಂದು ದಿಶಾ ರವಿ ಅವರು ದೆಹಲಿ ಹೈಕೋರ್ಟ್‌ಗೆ ಗುರುವಾರ ಅರ್ಜಿ ಸಲ್ಲಿಸಿದ್ದಾರೆ.

ತನಿಖಾ ದಾಖಲಾತಿಗಳು, ಇತರರ ಜತೆ ತಾವು ನಡೆಸಿದ ವಾಟ್ಸ್‌ಆ್ಯಪ್ ಚಾಟ್ ಮತ್ತು ಇತರ ಸಂವಹನಗಳನ್ನು ತನಿಖಾ ಸಂಸ್ಥೆಗಳು ಮಾಧ್ಯಮಗಳಿಗೆ ಬಿಡುಗಡೆ ಮಾಡುವುದಕ್ಕೆ ತಡೆ ನೀಡಬೇಕು ಎಂದೂ ತಮ್ಮ ಅರ್ಜಿಯಲ್ಲಿ ದಿಶಾ ಕೋರಿದ್ದಾರೆ.

9ನೇ ಪುಟ ನೋಡಿ

ರೈಲು ತಡೆ ಚಳವಳಿ

ಕೃಷಿ ಕಾಯ್ದೆಗಳನ್ನು ರದ್ದುಪಡಿಸಲು ಒತ್ತಾಯಿಸಿ ದೆಹಲಿ, ಮಹಾರಾಷ್ಟ್ರ ಹರಿಯಾಣ ಹಾಗೂ ಪಂಜಾಬ್ ಸೇರಿದಂತೆ ದೇಶದ ಹಲವು ಭಾಗಗಲ್ಲಿ ಗುರುವಾರ ರೈಲು ತಡೆ ಚಳವಳಿ ನಡೆಸಲಾಯಿತು. ರೈತರು ರೈಲ್ವೆ ಹಳಿಗಳ ಮೇಲೆ ಕುಳಿತು ಧರಣಿ ನಡೆಸಿದರು. ರಾಷ್ಟ್ರವ್ಯಾಪಿ ರೈಲು ತಡೆ ಚಳವಳಿಗೆ ಸಂಯುಕ್ತ ಕಿಸಾನ್ ಮೋರ್ಚಾ ಕಳೆದವಾರ ಕರೆ ನೀಡಿತ್ತು. 9

ಮಾ.8ಕ್ಕೆ ರಾಜ್ಯ ಬಜೆಟ್

ಬೆಂಗಳೂರು: ಮಾರ್ಚ್ 4 ರಿಂದ ರಾಜ್ಯ ಬಜೆಟ್ ಅಧಿವೇಶನ ಆರಂಭವಾಗಲಿದ್ದು, ಮಾ.8 ರಂದು ಬಜೆಟ್ ಮಂಡಿಸಲು ಸಚಿವ ಸಂಪುಟ ಸಭೆ ತೀರ್ಮಾನಿಸಿದೆ.

ಸಂಸದೀಯ ವ್ಯವಹಾರಗಳ ಸಚಿವ ಬಸವರಾಜ ಬೊಮ್ಮಾಯಿ ಸಚಿವ ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

ಮಾರ್ಚ್ ಕೊನೆಯವರೆಗೆ ಕಲಾಪ ನಡೆಯಲಿದೆ. ಮಾ.4 ಮತ್ತು 5 ರಂದು 'ಒಂದು ದೇಶ ಒಂದು ಚುನಾವಣೆ' ಕುರಿತು ಚರ್ಚೆ ನಡೆಸಲಾಗುವುದು ಎಂದು ಹೇಳಿದರು.

ವೈದ್ಯ ಸೀಟು ಹಂಚಿಕೆಯಲ್ಲಿ ₹ 402 ಕೋಟಿ ಅಕ್ರಮ ಪತ್ತೆ

₹ 15 ಕೋಟಿ, 81 ಕೆ.ಜಿ. ಚಿನ್ನ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ವೈದ್ಯಕೀಯ ಕಾಲೇಜುಗಳನ್ನು ನಡೆಸುತ್ತಿರುವ ಒಂಬತ್ತು ಸಂಸ್ಥೆಗಳಲ್ಲಿ ನಡೆಸಿರುವ ಶೋಧದಲ್ಲಿ ₹ 15.09 ಕೋಟಿ ನಗದು ಮತ್ತು ₹30 ಕೋಟಿ ಮೌಲ್ಯದ 81 ಕೆ.ಜಿ. ಚಿನ್ನ ವಶಕ್ಕೆ ಪಡೆಯಲಾಗಿದೆ. ಅಕ್ರಮವಾಗಿ ವೈದ್ಯಕೀಯ ಸೀಟುಗಳನ್ನು ಹಂಚಿಕೆ ಮಾಡಿ ₹ 402.78 ಕೋಟಿಯನ್ನು ನಗದು ರೂಪದಲ್ಲಿ 'ಕ್ಯಾಪಿಟೇಷನ್ ಶುಲ್ಕ' ಪಡೆದಿರುವುದು ಪತ್ತೆಯಾಗಿದೆ ಎಂದು ಆದಾಯ ತೆರಿಗೆ (ಐ.ಟಿ) ಇಲಾಖೆ ತಿಳಿಸಿದೆ.

ವೈದ್ಯಕೀಯ ಸೀಟುಗಳ ಹಂಚಿಕೆಯಲ್ಲಿ ಅಕ್ರಮ ನಡೆಯುತ್ತಿರುವ ಶಂಕೆ ಮೇಲೆ ಬೆಂಗಳೂರು ಮತ್ತು ಮಂಗಳೂರಿನಲ್ಲಿ ನೋಂದಣಿಯಾಗಿರುವ ಒಂಬತ್ತು ಟ್ರಸ್ಟ್‌ಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಹಾಗೂ ಕೇರಳದ 56 ಸ್ಥಳಗಳಲ್ಲಿ ಬುಧವಾರದಿಂದ ಶೋಧ ನಡೆಸಲಾಗಿದೆ. ನೀಟ್ ಪರೀಕ್ಷೆಯಲ್ಲಿ ಹೆಚ್ಚಿನ ರ‍್ಯಾಂಕ್ ಗಳಿಸಿದ ವಿದ್ಯಾರ್ಥಿಗಳನ್ನು ಬಳಸಿಕೊಂಡು ವೈದ್ಯಕೀಯ ಸೀಟುಗಳನ್ನು ಕಾಯ್ದಿರಿಸಿ ನಂತರ ದುಬಾರಿ ದರಕ್ಕೆ ಮಾರಾಟ ಮಾಡಿರುವುದು ಪತ್ತೆಯಾಗಿದೆ. ವಿದ್ಯಾರ್ಥಿಗಳಿಂದ 'ಕ್ಯಾಪಿಟೇಶನ್ ಶುಲ್ಕ' ಸಂಗ್ರಹಿಸಲು ಈ ಟ್ರಸ್ಟ್‌ಗಳ ಪ್ರಮುಖರು ಮತ್ತು ಟ್ರಸ್ಟಿಗಳು ಮಧ್ಯವರ್ತಿಗಳನ್ನು ಇರಿಸಿಕೊಂಡಿರುವುದೂ ಕಾರ್ಯಾಚರಣೆಯಲ್ಲಿ ಬೆಳಕಿಗೆ ಬಂದಿದೆ ಎಂದು ಆದಾಯ ತೆರಿಗೆ ಇಲಾಖೆಯ ಕೇಂದ್ರ ಕಚೇರಿಯ ಪ್ರಕಟಣೆ ತಿಳಿಸಿದೆ.

8ನೇ ಪುಟ ನೋಡಿ

'ಕೈ' ಶಾಸಕ ಖಾದರ್ ತಮ್ಮನ ಮನೆಯಲ್ಲಿ ಶೋಧ

ವೈದ್ಯಕೀಯ ಕಾಲೇಜುಗಳಲ್ಲಿನ ವ್ಯವಹಾರಕ್ಕೆ ಸಂಬಂಧಿಸಿದಂತೆ ಮಂಗಳೂರಿನ ಶಾಸಕ ಯು.ಟಿ. ಖಾದರ್ ಅವರ ತಮ್ಮ ಡಾ.ಯು.ಟಿ. ಇಫ್ತಿಕಾರ್ ಅಲಿ ಅವರ ಮನೆಯ ಮೇಲೆ ಗುರುವಾರ ದಾಳಿ ಮಾಡಿರುವ ಆದಾಯ ತೆರಿಗೆ ಅಧಿಕಾರಿಗಳು ಶೋಧ ನಡೆಸಿದ್ದಾರೆ. ಹಲವು ದಾಖಲೆಗಳನ್ನು ವಶಕ್ಕೆ ಪಡೆದಿದ್ದು, ವಿಚಾರಣೆ ಆರಂಭಿಸಿದ್ದಾರೆ.

ಮಂಗಳೂರಿನಲ್ಲಿ ನಾಲ್ಕು ವೈದ್ಯಕೀಯ ಕಾಲೇಜುಗಳ ಮೇಲೆ ಬುಧವಾರ ಐ.ಟಿ ದಾಳಿ ನಡೆದಿತ್ತು. ಈ ಪೈಕಿ ಒಂದು ಕಾಲೇಜಿನ ಆಡಳಿತ ಮಂಡಳಿಯಲ್ಲಿ ಇಫ್ತಿಕಾರ್ ಪಾಲುದಾರಿಕೆ ಹೊಂದಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ.

ಇಂದಿನ ಪಾಡ್‌ಕಾಸ್ಟ್ ವಿಶೇಷ
ಕಥೆ ಕೇಳು ಮಗುವೆ ಸಿನಿಮಾ ಮ್ಯಾಟಿನಿ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ಚಿನಕುರಳಿ
ಪ್ರಕಾಶ್ ಶೆಟ್ಟಿ



ಬಿಹಾರದಲ್ಲಿ ಬಿಜೆಪಿ ಸೋಲಿಸಲು ವಿಜಯೇಂದ್ರ ದುಡ್ಡು: ಯತ್ನಾಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಹಾರದ ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸಲು ವಿಜಯೇಂದ್ರ (ಯಡಿಯೂರಪ್ಪ ಪುತ್ರ) ತಮ್ಮ ಆಪ್ತರ ಮೂಲಕ ಹಣ ಕಳುಹಿಸಿದ್ದಾರೆ. ಪ್ರಧಾನಿ ಮೋದಿ ಶಕ್ತಿ ಕುಗ್ಗಿಸಲು ಹಣ ಸಂದಾಯ ಮಾಡಿದ್ದಾರೆ' ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಆಪಾದಿಸಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, ಆರ್‌ಜೆಡಿ, ಕಾಂಗ್ರೆಸ್‌ಗೆ ವಿಜಯೇಂದ್ರ ಫಂಡಿಂಗ್ ಮಾಡಿದ್ದಾರೆ. ಈ ಬಗ್ಗೆಯೂ ತನಿಖೆ ಆಗಬೇಕು ಎಂದು ಒತ್ತಾಯಿಸಿದರು.


ಯತ್ನಾಳ

'ಪಕ್ಷದಿಂದ ನೋಟಿಸ್ ಬಂದಿರುವುದು ನಿಜ. ಅದಕ್ಕೆ ಹನ್ನೊಂದು ಪುಟಗಳ ಉತ್ತರ ನೀಡಿದ್ದೇನೆ. ಮುಖ್ಯಮಂತ್ರಿ ಯಡಿಯೂರಪ್ಪ ಅವರಿಂದ ಸರ್ಕಾರಕ್ಕೆ ಹೇಗೆ ಕೆಟ್ಟ ಹೆಸರು ಬರುತ್ತಿದೆ ಎಂಬುದನ್ನು ಪತ್ರದಲ್ಲಿ ಪ್ರಸ್ತಾಪಿಸಿದ್ದೇನೆ' ಎಂದರು.

'ಸರ್ಕಾರದಲ್ಲಿ ಕುಟುಂಬದ ಹಸ್ತಕ್ಷೇಪ ಇರಬಾರದು ಎನ್ನುವುದು ನರೇಂದ್ರ ಮೋದಿ ಆಶಯ. ಆದರೆ, ಅವರ ಆಶಯದಂತೆ ಇಲ್ಲಿ ಸರ್ಕಾರ ಇಲ್ಲ' ಎಂದು ಟೀಕಿಸಿದರು.

'ಯಡಿಯೂರಪ್ಪ ಅವರ ಕುಟುಂಬ ರಾಜಕಾರಣದ ಬಗ್ಗೆ 45 ಪ್ಯಾರಾಗಳಲ್ಲಿ ವಿವರಿಸಿದ್ದೇನೆ. ಯಡಿಯೂರಪ್ಪ ಅವರ ಕುಟುಂಬ ಬಿಜೆಪಿ ಶಾಸಕರನ್ನು ಗೌರವಿಸುತ್ತಿಲ್ಲ. ಯಡಿಯೂರಪ್ಪ ಅವರ ಕುಟುಂಬದ ಬಗ್ಗೆಯೂ ತನಿಖೆಗೆ ಒತ್ತಾಯಿಸಿದ್ದೇನೆ' ಎಂದು ಹೇಳಿದರು.

8ನೇ ಪುಟ ನೋಡಿ


ಕ್ರಿಸ್‌ಗೆ ಜಾಕ್‌ಪಾಟ್, ಕನ್ನಡಿಗ ಗೌತಮ್‌ಗೆ ಬಂಪರ್


ಚೆನ್ನೈ: ದಕ್ಷಿಣ ಆಫ್ರಿಕಾದ ಆಲ್‌ರೌಂಡರ್ ಕ್ರಿಸ್ ಮೊರಿಸ್ ಮತ್ತು ಕನ್ನಡಿಗ ಕೃಷ್ಣಪ್ಪ ಗೌತಮ್ ಅವರಿಗೆ ಗುರುವಾರ ಇಲ್ಲಿ ನಡೆದ ಇಂಡಿಯನ್ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್ ಟೂರ್ನಿಯ ಆಟಗಾರರ ಹರಾಜಿನಲ್ಲಿ ಶುಕ್ರದೆಸೆ ಒಲಿಯಿತು.

ರಾಜಸ್ಥಾನ್ ರಾಯಲ್ಸ್ ತಂಡವು ₹ 16.25 ಕೋಟಿ ನೀಡಿ ಬಲಗೈ ಆಟಗಾರ ಕ್ರಿಸ್ ಅವರನ್ನು ಸೆಳೆದುಕೊಂಡಿತು. ಅವರ ಮೂಲಬೆಲೆ ₹ 75 ಲಕ್ಷ ನಿಗದಿ ಮಾಡಲಾಗಿತ್ತು. ಟೂರ್ನಿಯ ಇತಿಹಾಸದಲ್ಲಿಯೇ ಅತಿ ಹೆಚ್ಚು ಮೌಲ್ಯಕ್ಕೆ ಹರಾಜಾದ ಆಟಗಾರನೆಂಬ ಹೆಗ್ಗಳಿಕೆ ಅವರದ್ದಾಯಿತು. ಈ ಹಿಂದೆ ಯುವರಾಜ್ ಸಿಂಗ್ (₹ 16 ಕೋಟಿ) ಮಾಡಿದ್ದ ದಾಖಲೆಯನ್ನು 30 ವರ್ಷದ ಕ್ರಿಸ್ ಮೀರಿದರು.

ಕರ್ನಾಟಕದ ಆಲ್‌ರೌಂಡರ್ ಕೃಷ್ಣಪ್ಪ ಗೌತಮ್ ಅವರಿಗೂ ಅದೃಷ್ಟ ಒಲಿಯಿತು. ಚೆನ್ನೈ ಸೂಪರ್ ಕಿಂಗ್ಸ್ ತಂಡವು ಅವರನ್ನು ₹ 9.25 ಕೋಟಿಗೆ ಖರೀದಿಸಿತು.


ಕೈಲ್ ಜೆಮಿಸನ್, (ಆಲ್‌ರೌಂಡರ್)
ತಂಡ; ರಾಯಲ್ ಚಾಲೆಂಜರ್ಸ್ ಬೆಂಗಳೂರು
ಮೌಲ್ಯ: ₹ 15 ಕೋಟಿ
ದೇಶ: ನ್ಯೂಜಿಲೆಂಡ್




ಗ್ಲೆನ್ ಮ್ಯಾಕ್ಸ್‌ವೆಲ್, (ಆಲ್‌ರೌಂಡರ್)
ತಂಡ; ರಾಯಲ್ ಚಾಲೆಂಜರ್ಸ್ ಬೆಂಗಳೂರು
ಮೌಲ್ಯ: ₹ 14.25 ಕೋಟಿ
ದೇಶ: ಆಸ್ಟ್ರೇಲಿಯಾ


ಜೇ ರಿಚರ್ಡ್ಸನ್, (ಬೌಲರ್)
ತಂಡ; ಪಂಜಾಬ್ ಕಿಂಗ್ಸ್
ಮೌಲ್ಯ: ₹ 14 ಕೋಟಿ
ದೇಶ: ಆಸ್ಟ್ರೇಲಿಯಾ

ಎಪಿಡಿ: ಸಸ್ಯಮೇಳ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಿ ಅಸೋಸಿಯೇಷನ್ ಆಫ್ ಪೀಪಲ್ ವಿತ್ ಡಿಸೆಬಿಲಿಟಿ (ಎಪಿಡಿ) ವತಿಯಿಂದ ಸಸ್ಯಮೇಳ ಇದೇ 19ರಿಂದ 27ರವರೆಗೆ ನಡೆಯಲಿದೆ.

ಸಂಸ್ಥೆಯ ಎಸ್.ಎಸ್. ಹೆಮಾನಿ ತೋಟಗಾರಿಕಾ ತರಬೇತಿ ಕೇಂದ್ರದ ಆವರಣದಲ್ಲಿ 9 ದಿನಗಳವರೆಗೆ ಬೆಳಿಗ್ಗೆ 9ರಿಂದ ಸಂಜೆ 6ರವರೆಗೆ ಈ ಮೇಳ ನಡೆಯಲಿದೆ. ನಗರದ ದೊಡ್ಡಗುಬ್ಬಿ ರಸ್ತೆಯಲ್ಲಿರುವ ಕ್ಯಾಲಸನಹಳ್ಳಿಯಲ್ಲಿ ಈ ಕೇಂದ್ರವಿದೆ. ಇಂಡೊ ಅಮೆರಿಕನ್ ಹೈಬ್ರೀಡ್ ಸೀಡ್ಸ್ ಕಂಪನಿಯ ಜಂಟಿ ವ್ಯವಸ್ಥಾಪಕ ನಿರ್ದೇಶಕ ರಿಶ್ವಿ ಆಚ್ಚಾರ್ ಮೇಳವನ್ನು ಉದ್ಘಾಟಿಸಲಿದ್ದಾರೆ.

ವಿಶೇಷ ಸಸ್ಯಗಳು, ಅಲಂಕಾರಿಕ ಗಿಡಗಳು, ಗಿಡಮೂಲಿಕೆ, ಸುಗಂಧ ಸಸ್ಯಗಳು ಮತ್ತು ಔಷಧಿ ಸಸ್ಯಗಳ ಪ್ರದರ್ಶನ ಮತ್ತು ಮಾರಾಟ ಇರುತ್ತದೆ. ಎಪಿಡಿಯಲ್ಲಿ ತೋಟಗಾರಿಕಾ ತರಬೇತಿ ಪಡೆಯುತ್ತಿರುವ ಅಂಗವಿಕಲ ಸದಸ್ಯರು ಮತ್ತು ವೃತ್ತಿಪರರು ಗಿಡಗಳನ್ನು ಕಲಾತ್ಮಕವಾಗಿ ಜೋಡಿಸಿ ಪ್ರದರ್ಶಿಸಲಿದ್ದಾರೆ. ವಿಶೇಷ ಮಕ್ಕಳ ಕುರಿತು ಜಾಗೃತಿ ಕಾರ್ಯಕ್ರಮವೂ ನಡೆಯಲಿದೆ.

ಇದೇ ಭಾನುವಾರ (ಫೆ.21) 'ಊಟ ಫ್ರಂ ಯುವರ್ ತೋಟ' ಎಂಬ ಕಾರ್ಯಾಗಾರವನ್ನೂ ಹಮ್ಮಿಕೊಳ್ಳಲಾಗಿದೆ.

ತೋಟಗಾರಿಕೆ ತರಬೇತಿ ಪಡೆಯುತ್ತಿರುವ ಯುವಸಮೂಹಕ್ಕೆ ವಿವಿಧ ಸಸ್ಯಗಳ ಜೋಡಣೆ ಹಾಗೂ ಪ್ರದರ್ಶನದ ಮೂಲಕ ಅವರ ಕಲಿಕೆ, ಕೌಶಲ ಮತ್ತು ಸೃಜನಶೀಲತೆಯನ್ನು ಪ್ರದರ್ಶಿಸಲು ಮೇಳವು ಉತ್ತಮ ವೇದಿಕೆಯಾಗಿದೆ ಎಂದು ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ.

ಮಾಹಿತಿಗೆ, 98445-32307.



ತೈಲ ಬೆಲೆ ಏರಿಕೆ ಹಾಗೂ ಕಾರ್ಮಿಕ ವಿರೋಧಿ ನೀತಿಗಳನ್ನು ಖಂಡಿಸಿ ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್ (ಎಐಟಿಯುಸಿ) ಸದಸ್ಯರು ನಗರದ ಮೈಸೂರು ಬ್ಯಾಂಕ್ ವೃತ್ತದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ಉದ್ಯಮಿಗಳ 'ಮನೆ ಬಾಗಿಲಿ'ಗೆ ಸರ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಬಂಡವಾಳ ಹೂಡಿಕೆಗೆ ಉತ್ಸುಕರಾಗಿರುವವರಿಗೆ ಅಗತ್ಯ ಮೂಲಸೌಲಭ್ಯ ಕಲ್ಪಿಸಿಕೊಡುವ ಉದ್ದೇಶದಿಂದ ಇಲಾಖೆಯನ್ನು ಜನಸ್ನೇಹಿಗೊಳಿಸುವ ಜೊತೆಗೆ, 'ಉದ್ಯಮಿಗಳ ಮನೆಬಾಗಿಲಿಗೆ ಸರ್ಕಾರ' ಯೋಜನೆಯನ್ನು ಹಮ್ಮಿಕೊಳ್ಳಲಾಗುವುದು' ಎಂದು ಗಣಿ ಮತ್ತು ಭೂ ವಿಜ್ಞಾನ ಸಚಿವ ಮುರುಗೇಶ್ ನಿರಾಣಿ ಹೇಳಿದರು.

ಕ್ವಾರಿ ಮತ್ತು ಸ್ಟೋನ್ ಕ್ರಷರ್ ಮಾಲೀಕರ ಸಂಘದ ಒಕ್ಕೂಟದ ನಿಯೋಗ ನಿರಾಣಿ ಅವರನ್ನು ಗುರುವಾರ ಭೇಟಿ ಮಾಡಿ ಬೇಡಿಕೆಗಳ ಮನವಿ ಸಲ್ಲಿಸಿತ್ತು. ಈ ವೇಳೆ ಮಾತನಾಡಿದ ಸಚಿವರು, ರಾಜ್ಯವನ್ನು 'ಉದ್ಯಮಸ್ನೇಹಿ' ಮಾಡುವುದು ತಮ್ಮ ಮುಂದಿರುವ ಮೊದಲ ಸವಾಲು ಎಂದರು.

'ನಿಮ್ಮ ಬೇಡಿಕೆಗಳನ್ನು ಬಜೆಟ್‌ನಲ್ಲಿ ಸೇರಿಸಲಾಗುವುದು. ನೀವು ಯಾವುದೇ ಆತಂಕಪಡಬೇಕಿಲ್ಲ. ಇಲಾಖೆಯಲ್ಲಿ ಈಗಾಗಲೇ ಕೆಲವು ಮಹತ್ವದ ಸುಧಾರಣೆಗಳನ್ನು ತೆಗೆದುಕೊಳ್ಳಲಾಗಿದೆ. ಮರಳು, ಕಲ್ಲು ಕ್ವಾರಿ ಉದ್ಯಮಿಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ' ಎಂದು ನಿಯೋಗಕ್ಕೆ ನಿರಾಣಿ ಭರವಸೆ ನೀಡಿದರು.


ಮುರುಗೇಶ್ ನಿರಾಣಿ

'2021- 2026ನೇ ಸಾಲಿನ ಹೊಸ ಮರಳು ನೀತಿ ಶೀಘ್ರವೇ ಜಾರಿಗೆ ಬರಲಿದೆ. ಅದರಲ್ಲಿ ಅನೇಕ ಹೊಸ ಹೊಸ ಸುಧಾರಣೆಗಳನ್ನು ಜಾರಿಗೆ ತರುತ್ತಿದ್ದೇವೆ. ಕಟ್ಟಕಡೆಯ ಮನುಷ್ಯನಿಗೂ ಸುಲಭವಾಗಿ ಮರಳು ಸಿಗಬೇಕು ಎಂಬುವುದೇ ನಮ್ಮ ಉದ್ದೇಶ' ಎಂದರು.

ಬೇಡಿಕೆಗಳೇನು?: 'ಗಣಿ ಮತ್ತು ಖನಿಜ ಅಭಿವೃದ್ಧಿ ಮತ್ತು ನಿಯಂತ್ರಣ (ಎಂಎಂಡಿಆರ್) ಕಾಯ್ದೆಯಡಿ ₹ 5 ಲಕ್ಷದಂತೆ ಪ್ರಕರಣವನ್ನು ಒಮ್ಮೆಗೆ ಇತ್ಯರ್ಥಪಡಿಸುವುದು, ಇಲಾಖೆ ವತಿಯಿಂದ ಈ ಹಿಂದೆ ಕೈಗೊಳ್ಳಲಾದ ಡ್ರೋನ್ ಸಮೀಕ್ಷೆಯ ವರದಿ ಅವೈಜ್ಞಾನಿಕ ಹಾಗೂ ಏಕಪಕ್ಷೀಯವಾಗಿರುವುದರಿಂದ ಅದರ ಆಧಾರದ ಮೇಲೆ ವಿಧಿಸಲಾಗಿರುವ 5 ಪಟ್ಟು ದಂಡವನ್ನು ರದ್ದುಪಡಿಸುವುದು, ಕಲ್ಲು ಗಣಿ ಗುತ್ತಿಗೆದಾರರಿಂದ ಸಾಗಣೆಯ ರಾಜಧನ (ಎಂಡಿಪಿ/ಎಂಡಿಆರ್) ಪರವಾನಗಿ ಪಡೆಯುವುದು ಕಡ್ಡಾಯಗೊಳಿಸಬೇಕು ಮತ್ತಿತರ ಬೇಡಿಕೆಗಳನ್ನು ಈಡೇರಿಸುವಂತೆ ನಿಯೋಗ ಒತ್ತಾಯಿಸಿದೆ.

ನಿಯೋಗದಲ್ಲಿ ಒಕ್ಕೂಟದ ಗೌರವಾಧ್ಯಕ್ಷ ಎಸ್. ದತ್ತಾತ್ರಿ, ಅಧ್ಯಕ್ಷ ಸಂಜೀವ ಹಟ್ಟಿಹೊಳಿ, ಉಪಾಧ್ಯಕ್ಷರಾದ ಡಿ.ಸಿದ್ದರಾಜು, ಎನ್.ಮಂಜುನಾಥ್, ಪ್ರಧಾನ ಕಾರ್ಯದರ್ಶಿ ಪುರುಷೋತ್ತಮ ಇದ್ದರು.

ಶಸ್ತ್ರಚಿಕಿತ್ಸೆ ನಡೆಸದೆಯೇ ಹೃದಯ ಕವಾಟ ಬದಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೃದಯ ಸಮಸ್ಯೆ ಎದುರಿಸುತ್ತಿದ್ದ 78 ವರ್ಷದ ವೃದ್ಧೆಗೆ ನಗರದ ಆಸ್ಟರ್ ಆರ್‌ವಿ ಆಸ್ಪತ್ರೆಯ ವೈದ್ಯರು ಶಸ್ತ್ರಚಿಕಿತ್ಸೆ ನಡೆಸದೆಯೇ ಹೃದಯ ಕವಾಟ ಬದಲಿಸಿದ್ದಾರೆ.

ವೃದ್ಧೆಯು 2013ರಲ್ಲಿ ತೆರೆದ ಹೃದಯ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. ಆ ವೇಳೆ ಅವರಿಗೆ ಕೃತಕ ಹೃದಯ ಕವಾಟ ಅಳವಡಿಕೆ ಮಾಡಲಾಗಿತ್ತು. ಆದರೆ, ಎರಡು ವರ್ಷಗಳಿಂದ ಆ ಕವಾಟ ಕ್ಷೀಣಿಸುತ್ತಿತ್ತು. ಹಾನಿಯ ಪ್ರಮಾಣವು ಗಂಭೀರ ಸ್ವರೂಪ ಪಡೆದ ಬಳಿಕ ಅವರಿಗೆ ಹೃದಯದ ಭಾಗದಲ್ಲಿ ಹೆಚ್ಚಿನ ಸಮಸ್ಯೆಗಳು ಕಾಣಿಸಿಕೊಳ್ಳಲಾರಂಭಿಸಿತು. ಇದರಿಂದಾಗಿ ಜನವರಿಯಲ್ಲಿ ಆಸ್ಪತ್ರೆಗೆ ದಾಖಲಾದರು. ಹೃದಯ ವೈಫಲ್ಯದ ಲಕ್ಷಣಗಳು ಕೂಡ ಅವರಲ್ಲಿ ಕಾಣಿಸಿಕೊಂಡಿದ್ದವು. ಉಸಿರಾಟ ಸೇರಿದಂತೆ ವಿವಿಧ ಅನಾರೋಗ್ಯ ಸಮಸ್ಯೆಗಳನ್ನು ಅವರು ಎದುರಿಸುತ್ತಿದ್ದ ಕಾರಣ ಮತ್ತೊಮ್ಮೆ ತೆರೆದ ಹೃದಯ ಶಸ್ತ್ರಚಿಕಿತ್ಸೆ ನಡೆಸದಿರಲು ನಿರ್ಧರಿಸಲಾಯಿತು ಎಂದು ಆಸ್ಪತ್ರೆ ತಿಳಿಸಿದೆ.

ಅಧಿಕ ವಯಸ್ಸು ಹಾಗೂ ಅನಾರೋಗ್ಯ ಸಮಸ್ಯೆಗಳು ಕೃತಕ ಕವಾಟವನ್ನು ಬದಲಾಯಿಸುವ ಶಸ್ತ್ರಚಿಕಿತ್ಸೆಗೆ ಅಡ್ಡಿಯಾಗಿತ್ತು. ಇದರಿಂದಾಗಿ ಹೃದ್ರೋಗ ತಜ್ಞರು ಟ್ರಾನ್ಸ್ಕ್ಯಾಟರ್ ಮಿಟ್ರಲ್ ಕವಾಟ ಬದಲಾವಣೆ (ಸಣ್ಣ ರಂಧ್ರದ ಮೂಲಕ ಬದಲಾವಣೆ) ವಿಧಾನ ಅನುಸರಿಸಿದರು. 4 ದಿನಗಳ ಬಳಿಕ ಅವರನ್ನು ಆಸ್ಪತ್ರೆಯಿಂದ ಮನೆಗೆ ಕಳುಹಿಸಲಾಯಿತು. ಈಗ ಅವರು ಸಂಪೂರ್ಣ ಚೇತರಿಸಿಕೊಂಡಿದ್ದಾರೆ ಎಂದು ಆಸ್ಪತ್ರೆ ಹೇಳಿದೆ.

'ವಯಸ್ಸಾದ ರೋಗಿಗಳು ಹಾಗೂ ಗಂಭೀರ ಕಾಯಿಲೆಗಳನ್ನು ಎದುರಿಸುತ್ತಿರುವವರಿಗೆ ತೆರೆದ ಹೃದಯ ಶಸ್ತ್ರಚಿಕಿತ್ಸೆಯು ಅಪಾಯವನ್ನುಂಟು ಮಾಡುವ ಸಾಧ್ಯತೆ ಇರುತ್ತದೆ. ಅಂತಹವರಿಗೆ ನೂತನ ವಿಧಾನವು ಸಹಕಾರಿಯಾಗಿದೆ. ಇದು ಫಲಿತಾಂಶವನ್ನೂ ನೀಡಲಿದೆ' ಎಂದು ಆಸ್ಪತ್ರೆಯ ಹೃದ್ರೋಗ ತಜ್ಞ ಡಾ. ಎಸ್. ವೆಂಕಟೇಶ್ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಕಾಳಿದಾಸ ಹೆಲ್ತ್ ಅಂಡ್ ಎಜುಕೇಷನ್ ಟ್ರಸ್ಟ್, ಕುರುಬ ಸಮುದಾಯದ ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲು ನಿರ್ಧರಿಸಿದ್ದು ಇದಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಿದೆ.

ನೀಟ್ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಿ ಸರ್ಕಾರಿ ಕೋಟಾದಲ್ಲಿ ಎಂಬಿಬಿಎಸ್ ಸೀಟು ಪಡೆದಿರುವವರು ಇದೇ 24ರೊಳಗೆ ಅರ್ಜಿ ಸಲ್ಲಿಸಬೇಕು. 'ಇದೇ 28ರಂದು ಎಚ್.ಬಿ.ಆರ್. ಬಡಾವಣೆಯಲ್ಲಿರುವ ಸಾಯಿ ಕಲಾ ಮಂದಿರದಲ್ಲಿ ಎಲ್ಲ ವಿದ್ಯಾರ್ಥಿನಿಗಳಿಗೆ ಅಭಿನಂದನಾ ಸಮಾರಂಭ ಆಯೋಜಿಸಲಾಗಿದೆ' ಎಂದು ಪ್ರಕಟಣೆ ತಿಳಿಸಿದೆ.

ಹೆಚ್ಚಿನ ಮಾಹಿತಿ 9141137382ಗೆ ವಾಟ್ಸ್‌ಆ್ಯಪ್ ಮಾಡಬಹುದು.

'ಎಲ್ಲ ಸರ್ಕಾರಿ ಆಸ್ಪತ್ರೆಗಳಲ್ಲೂ ಜನೌಷಧ ಕೇಂದ್ರ'



ಬೆಂಗಳೂರು: ಜನ ಸಾಮಾನ್ಯರ ಅನುಕೂಲಕ್ಕಾಗಿ ದೇಶದ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲೂ ಜನೌಷಧ ಕೇಂದ್ರ ತೆರೆಯಲಾಗುವುದು ಎಂದು ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವ ಡಿ.ವಿ. ಸದಾನಂದಗೌಡ ಹೇಳಿದರು.

ನಾಗರಬಾವಿಯಲ್ಲಿ ಜನೌಷಧಿ ಮಳಿಗೆ ಉದ್ಘಾಟಿಸಿ ಮಾತನಾಡಿದ ಅವರು, 'ಆಸ್ಪತ್ರೆಗಳಿಗೆ ಬರುವ ರೋಗಿಗಳಿಗೆ ಅದರಲ್ಲೂ ಬಡವರಿಗೆ ಜನೌಷಧಿಯನ್ನೇ ವೈದ್ಯರು ಬರೆದುಕೊಡಬೇಕು' ಎಂದು ಮನವಿ ಮಾಡಿದರು.

'ಜನೌಷಧಿಯೂ ಬ್ರಾಂಡೆಡ್ ಔಷಧಗಳಷ್ಟೇ ಗುಣಮಟ್ಟದ್ದು. ಆದರೆ, ದರ ಕಡಿಮೆ. ಉದಾಹರಣೆಗೆ ಮಧುಮೇಹ, ರಕ್ತದೊತ್ತಡ ಮುಂತಾದ ಖಾಯಿಲೆಗಳಿಗೆ ಸಾಮಾನ್ಯ ಔಷಧ ಅಂಗಡಿಗಳಲ್ಲಿ ಔಷಧ ಖರೀದಿಸಬೇಕೆಂದರೆ ತಿಂಗಳಿಗೆ ₹2,500 ರಿಂದ ₹3 ಸಾವಿರ ವೆಚ್ಚವಾಗುತ್ತದೆ. ಇದೇ ಔಷಧ ಜನೌಷಧ ಕೇಂದ್ರಗಳಲ್ಲಿ ₹250ರಿಂದ ₹300ರೊಳಗೆ ಸಿಗಲಿದೆ' ಎಂದರು.

ಇಎಸ್‌ಐ ವಿಮೆ ಸೌಲಭ್ಯ ಖಾಸಗಿ ಆಸ್ಪತ್ರೆಗಳಲ್ಲೂ ಲಭ್ಯ

ನವದೆಹಲಿ (ಪಿಟಿಐ): ಇಎಸ್‌ಐ ಆರೋಗ್ಯ ವಿಮೆ ಹೊಂದಿರುವವರಿಗೆ ತಮ್ಮ ನಿವಾಸದ 10 ಕಿ.ಮೀ. ಸುತ್ತಳತೆಯಲ್ಲಿ ಇಎಸ್‌ಐ ಆಸ್ಪತ್ರೆ ಇಲ್ಲದಿದ್ದರೆ, ನೌಕರರ ರಾಜ್ಯ ವಿಮೆ ನಿಗಮದ ಜೊತೆ ಒಪ್ಪಂದ ಮಾಡಿಕೊಂಡಿರುವ ಖಾಸಗಿ ಆಸ್ಪತ್ರೆಗಳಲ್ಲಿ ಅವರು ಆರೋಗ್ಯ ಸೇವೆಗಳನ್ನು ಪಡೆದುಕೊಳ್ಳಬಹುದು.

ಇಎಸ್‌ಐ ವಿಮೆ ವ್ಯಾಪ್ತಿಗೆ ಬರುವ ನೌಕರರ ಸಂಖ್ಯೆಯಲ್ಲಿ ಹೆಚ್ಚಳ ಆಗಿರುವುದನ್ನು ಪರಿಗಣಿಸಿ, ಅಂತಹ ನೌಕರರ ನಿವಾಸದ ಸಮೀಪದಲ್ಲೇ ಉತ್ತಮ ಆರೋಗ್ಯ ಸೇವೆಗಳನ್ನು ಒದಗಿಸಲು ಇಎಸ್‌ಐನ ಮೂಲಸೌಕರ್ಯ ಹೆಚ್ಚಿಸುವ ಪ್ರಯತ್ನ ನಡೆದಿದೆ ಎಂದು ಕೇಂದ್ರ ಕಾರ್ಮಿಕ ಸಚಿವಾಲಯದ ಪ್ರಕಟಣೆ ಹೇಳಿದೆ.

ಇಎಸ್‌ಐ ವಿಮೆ ಹೊಂದಿರುವವರು ಇಎಸ್‌ಐ ಜೊತೆ ಒಪ್ಪಂದ ಮಾಡಿಕೊಂಡಿರುವ ಖಾಸಗಿ ಆಸ್ಪತ್ರೆಗೆ ಇಎಸ್‌ಐ ಇ-ಪೆಹಚಾನ್ ಕಾರ್ಡ್ ಅಥವಾ ಆರೋಗ್ಯ ಪಾಸ್‌ಬುಕ್ ಒಯ್ಯಬೇಕು. ಜೊತೆಯಲ್ಲೇ, ಆಧಾರ್ ಅಥವಾ ಸರ್ಕಾರ ನೀಡಿರುವ ಯಾವುದಾದರೂ ಇತರ ಗುರುತಿನ ಚೀಟಿ ಒಯ್ಯಬೇಕು. ಅವರು ಒಪಿಡಿ ಸೇವೆಗಳನ್ನು ನಗದುರಹಿತವಾಗಿ ಪಡೆದುಕೊಳ್ಳಬಹುದು.

ವೈದ್ಯರು ಹೇಳುವ ಔಷಧಕ್ಕೆ ಪಾವತಿಸಿದ ಹಣವನ್ನು, ಇಎಸ್‌ಐನ ಹತ್ತಿರದ ಶಾಖೆ ಅಥವಾ ಪ್ರಾದೇಶಿಕ ಕಚೇರಿಯಿಂದ ಮರಳಿ ಪಡೆಯಬಹುದು. ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯಬೇಕಾದಲ್ಲಿ, ನಗದು ರಹಿತವಾಗಿ ಸೇವೆ ಪಡೆಯಲು ಅಗತ್ಯವಿರುವ ಒಪ್ಪಿಗೆಯನ್ನು ಖಾಸಗಿ ಆಸ್ಪತ್ರೆಯ ಸಿಬ್ಬಂದಿ ಆನ್‌ಲೈನ್ ವ್ಯವಸ್ಥೆಯ ಮೂಲಕ 24 ಗಂಟೆಗಳಲ್ಲಿ ಇಎಸ್‌ಐನಿಂದ ಪಡೆದುಕೊಳ್ಳಲಿದ್ದಾರೆ ಎಂದು ಪ್ರಕಟಣೆ ಹೇಳಿದೆ.

ಕೋವಿಡ್ ನಿರ್ವಹಣೆ: ವಿಚಾರ ಸಂಕಿರಣ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಕೋಪ ಪರಿಸ್ಥಿತಿ ಎದುರಿಸಲು ಬೇಕಾದ ಸಿದ್ಧತೆ ಮತ್ತು ಅದನ್ನು ನಿರ್ವಹಿಸುವುದಕ್ಕೆ ಬೇಕಾದ ಕ್ರಮಗಳು ಕುರಿತು ನಗರದ ದಯಾನಂದ ಸಾಗರ ಕಾಲೇಜಿನಲ್ಲಿ ಶುಕ್ರವಾರ (ಫೆ.19) ವಿಚಾರ ಸಂಕಿರಣ ಹಮ್ಮಿಕೊಳ್ಳಲಾಗಿದೆ.

ಕೋವಿಡ್ ನಿರ್ವಹಣೆ ಮತ್ತು ಇಂತಹ ವಿಕೋಪಗಳನ್ನು ಎದುರಿಸಲು ಬೇಕಾದ ಕ್ರಮಗಳ ಬಗ್ಗೆ ಚರ್ಚೆ, ಉಪನ್ಯಾಸ ನಡೆಯಲಿದೆ. ಕಾಲೇಜಿನ ಸಿವಿಲ್ ಎಂಜಿನಿಯರಿಂಗ್ ವಿಭಾಗದಿಂದ ಹಮ್ಮಿಕೊಂಡಿರುವ ಈ ವಿಚಾರ ಸಂಕಿರಣವನ್ನು ರಾಜ್ಯ ಕೋವಿಡ್ ತಾಂತ್ರಿಕ ಸಲಹಾ ಸಮಿತಿಯ ಮುಖ್ಯಸ್ಥ ಡಾ. ಎಂ.ಕೆ. ಸುದರ್ಶನ್ ಉದ್ಘಾಟಿಸಲಿದ್ದಾರೆ.


ಐಐಟಿ ಗುವಾಹಟಿಯ ಡಾ. ಟಿ.ಜಿ. ಸೀತಾರಾಮನ್ ಮುಖ್ಯ ಭಾಷಣ ಮಾಡಲಿದ್ದು, ಇಂಡಿಯನ್ ವಾಟರ್ ವರ್ಕ್ಸ್ ಅಸೋಸಿಯೇಷನ್‌ನ ಬೆಂಗಳೂರು ಕೇಂದ್ರದ ಮುಖ್ಯಸ್ಥ ಬಿ.ಶ್ರೀನಿವಾಸ ರೆಡ್ಡಿ ಉಪನ್ಯಾಸ ನೀಡಲಿದ್ದಾರೆ.

ತಜ್ಞರಾದ ಡಾ.ವಿ.ಎಸ್. ಪ್ರಕಾಶ್, ಡಾ. ಜಿ.ಎನ್. ನಾಗೇಶ್ ಮತ್ತಿತರರು ವಿಚಾರಗೋಷ್ಠಿಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಕಾಲೇಜಿನ ಪ್ರಾಚಾರ್ಯ ಡಾ.ಸಿ.ಪಿ.ಎಸ್. ಪ್ರಕಾಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಡಾ. ಶ್ರೀನಿವಾಸ್ ಐಎಂಎಗೆ ನೇಮಕ

ಬೆಂಗಳೂರು: ಭಾರತೀಯ ವೈದ್ಯಕೀಯ ಸಂಘದ (ಐಎಂಎ) ಮಕ್ಕಳ ಆರೋಗ್ಯ ಸ್ಥಾಯಿ ಸಮಿತಿಯ ಅಧ್ಯಕ್ಷರಾಗಿ ಇಲ್ಲಿನ ಡಾ. ಶ್ರೀನಿವಾಸ್ ಎಸ್. ನೇಮಕರಾಗಿದ್ದಾರೆ.


ಡಾ. ಶ್ರೀನಿವಾಸ್

ಅವರು ಸದ್ಯ ಕಿಮ್ಸ್ ಆಸ್ಪತ್ರೆಯ ಮಕ್ಕಳ ವಿಭಾಗದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಐಎಂಎ ಕರ್ನಾಟಕ ರಾಜ್ಯ ಶಾಖೆಯ ಕಾರ್ಯದರ್ಶಿಯಾಗಿ ಕೂಡ ಕಾರ್ಯನಿರ್ವಹಿಸಿದ ಅನುಭವ ಹೊಂದಿದ್ದಾರೆ. 14 ಮಂದಿಯನ್ನು ಒಳಗೊಂಡ ಸಮಿತಿಯಲ್ಲಿ ತಮಿಳುನಾಡು, ದೆಹಲಿ, ಮಹಾರಾಷ್ಟ್ರ ಸೇರಿದಂತೆ ವಿವಿಧ ರಾಜ್ಯಗಳ ಪ್ರತಿನಿಧಿಗಳು ಸದಸ್ಯರಾಗಿ ನೇಮಕರಾಗಿದ್ದಾರೆ. ಮುಂದಿನ ಆದೇಶದವರೆಗೆ ಈ ನೇಮಕಾತಿ ಜಾರಿಯಲ್ಲಿ ಇರಲಿದೆ ಎಂದು ಐಎಂಎ ತಿಳಿಸಿದೆ.

5 ಹೊಸ ಮಾರ್ಗಗಳಲ್ಲಿ ವಿಮಾನ ಸೇವೆ

ಬೆಂಗಳೂರು: ನಗರದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ (ಕೆಐಎ) ಈ ತಿಂಗಳ ಕೊನೆಯಲ್ಲಿ ಐದು ಹೊಸ ಮಾರ್ಗಗಳಿಗೆ ವಿಮಾನಯಾನ ಸೇವೆ ಆರಂಭವಾಗಲಿದೆ. ದೇಶದಲ್ಲಿನ ಎರಡನೇ ಹಂತದ ನಗರಗಳಿಗೂ ಸಂಪರ್ಕ ಸಾಧ್ಯವಾಗಲಿದೆ.

ಆಗ್ರಾ, ಕರ್ನೂಲು, ರಾಜಕೋಟ್, ದುರ್ಗಾಪುರ ಮತ್ತು ದಿಬ್ರುಗಡಕ್ಕೆ ಹೊಸದಾಗಿ ವಿಮಾನಗಳು ಸಂಚರಿಸಲಿವೆ. ರಾಜಕೋಟ್, ದುರ್ಗಾಪುರಕ್ಕೆ ಸ್ಪೈಸ್‌ಜೆಟ್ ಮತ್ತು ದಿಬ್ರುಗಡಕ್ಕೆ ಇಂಡಿಗೊ ವಿಮಾನಗಳು ಈ ತಿಂಗಳ ಕೊನೆಯಲ್ಲಿ ಸಂಚಾರ ಆರಂಭಿಸಲಿವೆ. ಆಗ್ರಾ ಮತ್ತು ಕರ್ನೂಲ್‌ಗೆ ಮಾರ್ಚ್ ಮೊದಲ ವಾರದಿಂದ ವಿಮಾನ ಸೇವೆ ಲಭ್ಯವಾಗಲಿದೆ ಎಂದು ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಸಂಸ್ಥೆ (ಬಿಐಎಎಲ್) ಹೇಳಿದೆ. ಆ ಮೂಲಕ, ನಗರದಿಂದ ದೇಶದ 61 ಸ್ಥಳಗಳಿಗೆ ವಿಮಾನಯಾನ ಸೇವೆ ಸಿಕ್ಕಂತಾಗಲಿದೆ.

ಪಿಎಚ್‌ಡಿ: 2ನೇ ಸುತ್ತಿನ ಸೀಟು ಹಂಚಿಕೆ 23ರಿಂದ

ಬೆಂಗಳೂರು: ಪಿಎಚ್.ಡಿ ಬಾಕಿ ಉಳಿದಿರುವ ಸೀಟುಗಳಿಗಾಗಿ ಎರಡನೇ ಸುತ್ತಿನ ಹಂಚಿಕೆ ಪ್ರಕ್ರಿಯೆ ಇದೇ 23ರಂದು ಸಂಬಂಧಪಟ್ಟ ಸ್ನಾತಕೋತ್ತರ ವಿಭಾಗಗಳಲ್ಲಿ ನಡೆಯಲಿದೆ ಎಂದು ಬೆಂಗಳೂರು ವಿಶ್ವವಿದ್ಯಾಲಯ ಹೇಳಿದೆ.

ಅಂದು ಬೆಳಿಗ್ಗೆ 9.30ರಿಂದ ಕೌನ್ಸೆಲಿಂಗ್ ಆರಂಭವಾಗಲಿದ್ದು, ಮೊದಲನೇ ಸುತ್ತಿನಲ್ಲಿ ಭಾಗವಹಿಸಲು ಸಾಧ್ಯವಾಗದ, ಹಂಚಿಕೆಯಾಗದ ಅರ್ಜಿದಾರರು ಭಾಗವಹಿಸಬಹುದು. ಮಾಹಿತಿಗೆ ವಿಶ್ವವಿದ್ಯಾಲಯದ ವೆಬ್‌ಸೈಟ್ ನೋಡಬಹುದು ಎಂದು ಕುಲಸಚಿವರು ಹೇಳಿದ್ದಾರೆ.

ಜಲಸ್ಪಂದನ ನಾಳೆ

ಬೆಂಗಳೂರು: ಜಲಮಂಡಳಿಯು ನಗರದ 16 ಕಡೆಗಳಲ್ಲಿ ಇದೇ 20ರಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 1ರವರೆಗೆ ಜಲಸ್ಪಂದನ ಕಾರ್ಯಕ್ರಮ ಹಮ್ಮಿಕೊಂಡಿದೆ.

ಮಂಡಳಿಯ ಪ್ರಧಾನ ಮುಖ್ಯ ಎಂಜಿನಿಯರ್ ಮತ್ತು ಹೆಚ್ಚುವರಿ ಮುಖ್ಯ ಎಂಜಿನಿಯರ್‌ಗಳ ನೇತೃತ್ವದಲ್ಲಿ ಸಂವಾದ ನಡೆಯಲಿದೆ.

ಬಳಕೆದಾರರು ನೀರು ಪೂರೈಕೆಗೆ ಸಂಬಂಧಿಸಿದ ದೂರುಗಳನ್ನು ಅಧಿಕಾರಿಗಳ ಗಮನಕ್ಕೆ ತರಬಹುದು. ಜಲಸ್ಪಂದನ ನಡೆಯುವ ಸ್ಥಳಗಳ ಬಗ್ಗೆ ಮಾಹಿತಿಗೆ ಮಂಡಳಿಯ ವೆಬ್‌ಸೈಟ್ www.bwssb.gov.in ಸಂಪರ್ಕಿಸಬಹುದು.

ಮಂಡಳಿಯ 24/7 ದೂರು ನಿರ್ವಹಣಾ ಕೇಂದ್ರದ ದೂರವಾಣಿ ಸಂಖ್ಯೆ ಸಂಖ್ಯೆ:22238888, ಸಹಾಯವಾಣಿ 1916 ಹಾಗೂ ವಾಟ್ಸ್‌ಆ್ಯಪ್ 87622–28888 ಸಂಪರ್ಕಿಸಬಹುದಾಗಿದೆ.

ಆರೋಗ್ಯ ಇಲಾಖೆ: ಸಮಾನ ವೇತನಕ್ಕೆ ನೌಕರರ ಆಗ್ರಹ

‘ಶೇ 15ರಷ್ಟು ವೇತನ ಹೆಚ್ಚಳ ಶಿಫಾರಸು ಅವೈಜ್ಞಾನಿಕ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಮಗ್ರ ಮಾನವ ಸಂಪನ್ಮೂಲ ನೀತಿ ರಚಿಸಿ, ವರದಿ ಸಲ್ಲಿಸಲು ಸರ್ಕಾರ ರಚಿಸಿದ ಸಮಿತಿಯು ಅವೈಜ್ಞಾನಿಕವಾಗಿ ವೇತನ ಶಿಫಾರಸು ಮಾಡಿದೆ. ಸಮಾನ ಕೆಲಸಕ್ಕೆ ಸಮಾನ ವೇತನ ಒದಗಿಸಬೇಕು’ ಎಂದು ಆರೋಗ್ಯ ಇಲಾಖೆಯ ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರು ಒತ್ತಾಯಿಸಿದ್ದಾರೆ.

ನಿವೃತ್ತ ಐಎಎಸ್ ಅಧಿಕಾರಿ ಪಿ.ಎನ್. ಶ್ರೀನಿವಾಸಾಚಾರಿ ಅಧ್ಯಕ್ಷತೆಯಲ್ಲಿ ರಚನೆಯಾದ ಸಮಿತಿಯು, ಆರೋಗ್ಯ ಇಲಾಖೆಯ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಕಾರ್ಯನಿರ್ವಹಿಸುತ್ತಿರುವ ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರಿಗೆ ಕಡಿಮೆ ವೇತನ ನೀಡುತ್ತಿರುವುದನ್ನು ಒಪ್ಪಿಕೊಂಡಿತ್ತು. ಈ ಸಮಿತಿಯು ವೇತನವನ್ನು ಶೇ 15 ರಷ್ಟು ಹೆಚ್ಚಳ ಮಾಡಲು ಶಿಫಾರಸು ಮಾಡಿದೆ.

‘ಕೋವಿಡ್ ಕಾಣಿಸಿಕೊಂಡ ಬಳಿಕ ದಿನದ ಎಲ್ಲ ಅವಧಿಯಲ್ಲಿ ನೌಕರರಿಂದ ಕೆಲಸ ಮಾಡಿಸಿಕೊಳ್ಳಲಾಗಿದೆ. ಸರ್ಕಾರಿ ಕಾಯಂ ವೈದ್ಯರಿಗೆ ಇತ್ತೀಚೆಗೆ ಭತ್ಯೆ ಹೆಚ್ಚಿಸಿ ಆದೇಶ ಮಾಡಲಾಗಿದೆ. ಅವರಿಗೆ ನೀಡುವ ಭತ್ಯೆಯ ಅರ್ಧದಷ್ಟು ಕೂಡ ನಮ್ಮ ನೌಕರರ ವೇತನ ಹೆಚ್ಚಳ ಮಾಡಿಲ್ಲ. ವೇತನ ಹೆಚ್ಚಳಕ್ಕೆ ಸಂಬಂಧಿಸಿದ ಶಿಫಾರಸು ಅವೈಜ್ಞಾನಿಕ’ ಎಂದು ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆ ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರ ಸಂಘದ ಅಧ್ಯಕ್ಷ ವಿಶ್ವಾರಾಧ್ಯ ಯಮೋಜಿ ಬೇಸರ ವ್ಯಕ್ತಪಡಿಸಿದ್ದಾರೆ.

‘ನೌಕರರಿಗೆ ಸಾಮಾಜಿಕ ಭದ್ರತೆ ಅಡಿಯಲ್ಲಿ ಎಲ್ಲ ಸೌಲಭ್ಯಗಳನ್ನು ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರಿಗೆ ವಿಸ್ತರಿಸಬೇಕು. ಕಾರ್ಮಿಕರ ಭವಿಷ್ಯನಿಧಿ (ಪಿಎಫ್), ಇಎಸ್ಐ ಯೋಜನೆ ವ್ಯಾಪ್ತಿಗೆ ಎಲ್ಲ ನೌಕರರನ್ನು ಒಳಪಡಿಸಬೇಕು. ಕೋವಿಡ್‌ನಿಂದ ಮೃತಪಟ್ಟ ನೌಕರರ ಕುಟುಂಬಕ್ಕೆ ಪರಿಹಾರ ಧನ ಸೇರಿದಂತೆ ವಿವಿಧ ಬೇಡಿಕೆಗಳನ್ನು ಸರ್ಕಾರ ಈಡೇರಿಸಬೇಕು’ ಎಂದು ಪ್ರಕಟಣೆಯಲ್ಲಿ ಆಗ್ರಹಿಸಿದ್ದಾರೆ.

‘ನೂತನ ಪಾರ್ಕಿಂಗ್ ನೀತಿ ನಿರ್ಧಾರವಾಗಿಲ್ಲ’

ಪ್ರಜಾವಾಣಿ ವಾರ್ತೆ


ಅಶ್ವತ್ಥನಾರಾಯಣ

ಬೆಂಗಳೂರು: ‘ನೂತನ ಪಾರ್ಕಿಂಗ್ ನೀತಿ ಬಗ್ಗೆ ಸರ್ಕಾರ ಈವರೆಗೆ ಯಾವುದೇ ನಿರ್ಧಾರ ಕೈಗೊಂಡಿಲ್ಲ’ ಎಂದು ಉಪಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.

ನಗರದ ಸರ್ಕಾರಿ ಕಲಾ ಕಾಲೇಜಿನಲ್ಲಿ ಗುರುವಾರ ನೂತನ ಜಿಮ್ ಹೌಸ್ ಉದ್ಘಾಟಿಸಿ ಮಾತನಾಡಿದ ಅವರು, ‘ದುಬಾರಿ ಪಾರ್ಕಿಂಗ್ ಶುಲ್ಕ ವಿಧಿಸಿ, ವಾಹನ ಸಂಚಾರ ಕಡಿಮೆ ಮಾಡುವ ಮೂಲಕ ಸಾರ್ವಜನಿಕ ಸಾರಿಗೆಯನ್ನು ಉತ್ತೇಜಿಸಬೇಕು ಎಂದು ತಜ್ಞರಿಂದ ಸಲಹೆ ಬಂದಿದೆ. ಈ ಬಗ್ಗೆ ಪರಿಶೀಲಿಸಿದ ನಂತರವೇ ಅಂತಿಮ ತೀರ್ಮಾನ ಕೈಗೊಳ್ಳಲಾಗುತ್ತದೆ’ ಎಂದು ಸ್ಪಷ್ಟಪಡಿಸಿದರು.

ಕಾರ್ಯಕ್ರಮದಲ್ಲಿ ಶಾಸಕ ರಿಜ್ವಾನ್ ಅರ್ಷದ್, ವಿಧಾನ ಪರಿಷತ್ ಸದಸ್ಯ ಪುಟ್ಟಣ್ಣ, ಕಾಲೇಜು ಶಿಕ್ಷಣ ಇಲಾಖೆಯ ಮುಖ್ಯ ಆಡಳಿತಾಧಿಕಾರಿ ಬಾಲಚಂದ್ರ, ಸರ್ಕಾರಿ ಕಾಲೇಜು ಅಧ್ಯಾಪಕರ ಸಂಘದ ಅಧ್ಯಕ್ಷ ಡಾ.ಟಿ.ಎಂ.ಮಂಜುನಾಥ, ಕಾಲೇಜಿನ ಪ್ರಾಚಾರ್ಯ ಪ್ರೊ.ಕೋಡದ ರಾಜಶೇಖರಪ್ಪ, ಸಹಾಯಕ ಪ್ರಾಧ್ಯಾಪಕಿ ಡಾ. ಶಶಿಕಲಾ ಇದ್ದರು.

ಸಿಗರೇಟ್ ಬಾಕ್ಸ್ ಕದ್ದಿದ್ದವರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಗರೇಟ್ ಬಾಕ್ಸ್, ಕಾರು ಕಳ್ಳತನ ಹಾಗೂ ಮನೆಯಲ್ಲಿ ಕಳವು ಮಾಡುತ್ತಿದ್ದ ಆರೋಪದಡಿ ನಾಲ್ವರನ್ನು ಸಿಟಿ ಮಾರ್ಕೆಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ರಾಜಸ್ಥಾನದ ಜಿತೇಂದ್ರಕುಮಾರ್ (24), ಪ್ರಕಾಶ್ (38), ಅಮರರಾಮ್ (42) ಹಾಗೂ ರಮೇಶ್ ಕುಮಾರ್ (24) ಬಂಧಿತರು. ಅವರಿಂದ ₹ 28.70 ಲಕ್ಷ ಮೌಲ್ಯದ 20 ಸಿಗರೇಟ್ ಬಾಕ್ಸ್‌ಗಳು, 2 ಕಾರು ಹಾಗೂ ₹ 25 ಸಾವಿರ ನಗದು ಜಪ್ತಿ ಮಾಡಲಾಗಿದೆ’ ಎಂದೂ ಪೊಲೀಸರು ಹೇಳಿದರು.

‘ಫೆ. 15ರಂದು ಆರೋಪಿಗಳು, ಓ.ಟಿ. ಪೇಟೆ ಜಂಕ್ಷನ್‌ನಲ್ಲಿ ಅನುಮಾನಾಸ್ಪದವಾಗಿ ಓಡಾಡುತ್ತಿದ್ದರು. ಅವರು ಬಳಸುತ್ತಿದ್ದ ಕಾರಿಗೆ ನೋಂದಣಿ ಫಲಕ ಇರಲಿಲ್ಲ. ಅನುಮಾನಗೊಂಡ ಪಿಎಸ್ಐ ಜಿ. ಶ್ರುತಿ ಹಾಗೂ ಸಿಬ್ಬಂದಿ, ಆರೋಪಿಗಳನ್ನು ಪರಿಶೀಲನೆ ನಡೆಸಿದ್ದರು. ಕಾರಿನಲ್ಲಿ ಮಾರಕಾಸ್ತ್ರಗಳು ಪತ್ತೆಯಾಗುತ್ತಿದ್ದಂತೆ ಆರೋಪಿಗಳನ್ನು ವಶಕ್ಕೆ ಪಡೆದಿದ್ದರು. ಸಿಟಿ ಮಾರ್ಕೆಟ್ ಠಾಣೆ ವ್ಯಾಪ್ತಿಯ ಎರಡು ಮನೆಯಲ್ಲಿ ಆರೋಪಿಗಳು ಕಳ್ಳತನ ಮಾಡಿದ್ದರು. ದಾವಣಗೆರೆಯಲ್ಲಿ 12 ಸಿಗರೇಟ್ ಬಾಕ್ಸ್ ಹಾಗೂ 8 ಸಿಗರೇಟ್ ಬಾಕ್ಸ್‌ಗಳನ್ನು ಕದ್ದಿದ್ದರು. ವಿಲ್ಸನ್ ಗಾರ್ಡನ್ ಠಾಣೆ ವ್ಯಾಪ್ತಿಯಲ್ಲಿ ಕಾರು ಕಳವು ಮಾಡಿದ್ದರೆಂಬ ಸಂಗತಿ ತನಿಖೆಯಿಂದ ಗೊತ್ತಾಗಿದೆ’ ಎಂದೂ ಪೊಲೀಸರು ಹೇಳಿದರು.

ಇಂದಿರಾನಗರ ಇನ್‌ಸ್ಪೆಕ್ಟರ್‌ಗೆ ನಿರೀಕ್ಷಣಾ ಜಾಮೀನು ನಕಾರ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪರಾಧ ಪ್ರಕರಣವೊಂದರಲ್ಲಿ ‘ಬಿ’ ವರದಿ ಸಲ್ಲಿಸಲು ₹ 10 ಲಕ್ಷ ಲಂಚ ಪಡೆದಿರುವ ಆರೋಪ ಎದುರಿಸುತ್ತಿರುವ ಇಂದಿರಾನಗರ ಠಾಣೆಯ ಇನ್‌ಸ್ಪೆಕ್ಟರ್ ರಾಮಮೂರ್ತಿ ಬಿ. ಅವರು ನಿರೀಕ್ಷಣಾ ಜಾಮೀನು ಕೋರಿ ಸಲ್ಲಿಸಿದ್ದ ಅರ್ಜಿಯನ್ನು ನಗರದ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಪ್ರಕರಣಗಳ ವಿಶೇಷ ನ್ಯಾಯಾಲಯ ತಿರಸ್ಕರಿಸಿದೆ.

ಇಂದಿರಾನಗರ ಕ್ಲಬ್‌ನಲ್ಲಿ ನಡೆದಿದ್ದ ಗಲಾಟೆ ಪ್ರಕರಣವೊಂದರಲ್ಲಿ ಆರೋಪಿಗಳ ಪರ ವರದಿ ಸಲ್ಲಿಸಲು ರಾಮ್ ಮೋಹನ್ ಮೆನನ್ ಮತ್ತು ಇತರರಿಂದ ₹ 10 ಲಕ್ಷ ಲಂಚ ಪಡೆದಿರುವ ಆರೋಪ ಇನ್‌ಸ್ಪೆಕ್ಟರ್ ರಾಮಮೂರ್ತಿ ಮತ್ತು ಸಬ್ ಇನ್‌ಸ್ಪೆಕ್ಟರ್ ಚಿದಾನಂದ ಶಿವಾಂಗಿ ಮೇಲಿದೆ. ಇಂದಿರಾನಗರ ಕ್ಲಬ್ ಕಾರ್ಯದರ್ಶಿ ಎಂ. ನಾಗೇಂದ್ರ ನೀಡಿರುವ ದೂರನ್ನು ಆಧರಿಸಿ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಪ್ರಕರಣ ದಾಖಲಿಸಿತ್ತು.

ಈ ಪ್ರಕರಣದಲ್ಲಿ ನಿರೀಕ್ಷಣಾ ಜಾಮೀನು ಕೋರಿ ರಾಮಮೂರ್ತಿ ಅರ್ಜಿ ಸಲ್ಲಿಸಿದ್ದರು. ಆಕ್ಷೇಪಣೆ ಸಲ್ಲಿಸಿದ್ದ ಎಸಿಬಿ ಪರ ಪಬ್ಲಿಕ್ ಪ್ರಾಸಿಕ್ಯೂಟರ್, ಇನ್‌ಸ್ಪೆಕ್ಟರ್ ಈಸ್ಟ್ ಕಲ್ಚರಲ್ ಅಸೋಸಿಯೇಷನ್ ಕ್ಲಬ್‌ನಲ್ಲಿ ಸದಸ್ಯತ್ವ ಪಡೆಯಲು ರಾಮ್ ಮೋಹನ್ ಮೆನನ್ ಒಡೆತನದ ಕಂಪನಿಯ ಖಾತೆಯಿಂದ ಹಣ ಪಾವತಿಸಿರುವುದನ್ನು ತನಿಖಾ ತಂಡ ಪತ್ತೆ ಮಾಡಿರುವುದನ್ನು ನ್ಯಾಯಾಲಯಕ್ಕೆ ತಿಳಿಸಿದ್ದರು. ಹಲವು ದಾಖಲೆಗಳನ್ನೂ ನ್ಯಾಯಾಲಯಕ್ಕೆ ಸಲ್ಲಿಸಿದ್ದರು.

‘ಭ್ರಷ್ಟಾಚಾರದ ಆರೋಪ ಹೊತ್ತಿರುವ ಪೊಲೀಸ್ ಅಧಿಕಾರಿಗಳಿಗೆ ಜಾಮೀನು ಮಂಜೂರು ಮಾಡುವಾಗ ಉದಾರ ನೀತಿ ಅನುಸರಿಸಿದರೆ ಕ್ರಿಮಿನಲ್ ನ್ಯಾಯದಾನ ವ್ಯವಸ್ಥೆಯ ಕುರಿತಂತೆ ಸಾಮಾಜಿಕವಾಗಿ ಕೆಟ್ಟ ಪರಿಣಾಮಗಳು ಉಂಟಾಗುವ ಸಾಧ್ಯತೆ ಇದೆ. ಆರೋಪಿಯು ಇನ್ನೂ ₹ 7.05 ಲಕ್ಷ ಲಂಚದ ಹಣವನ್ನು ಯಾವ ಮಾರ್ಗದಲ್ಲಿ ಪಡೆದಿದ್ದಾರೆ ಎಂಬುದನ್ನು ತನಿಖೆ ನಡೆಸಬೇಕಿದೆ. ಈ ಹಂತದಲ್ಲಿ ಆರೋಪಿಯು ನಿರೀಕ್ಷಣಾ ಜಾಮೀನು ಪಡೆಯಲು ಅರ್ಹನಲ್ಲ’ ಎಂದು ರಾಮಮೂರ್ತಿ ಅವರ ಅರ್ಜಿಯನ್ನು ತಿರಸ್ಕರಿಸಿ ಫೆಬ್ರುವರಿ 16ರಂದು ಹೊರಡಿಸಿರುವ ಆದೇಶದಲ್ಲಿ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಲಕ್ಷ್ಮೀನಾರಾಯಣ ಭಟ್ ಉಲ್ಲೇಖಿಸಿದ್ದಾರೆ.

‘ಕೋರ್ ಬ್ಯಾಂಕಿಂಗ್ ವ್ಯವಸ್ಥೆ ವಿಲೀನ ಯಶಸ್ವಿ’

ಬೆಂಗಳೂರು: ಅಲಹಾಬಾದ್ ಬ್ಯಾಂಕ್ ಅನ್ನು ಇಂಡಿಯನ್ ಬ್ಯಾಂಕ್‌ನಲ್ಲಿ ವಿಲೀನಗೊಳಿಸಿದ ನಂತರ ಕೋರ್ ಬ್ಯಾಂಕಿಂಗ್ ಸಲ್ಯೂಷನ್ಸ್ (ಸಿಬಿಎಸ್) ಪ್ಲಾಟ್‌ಫಾರಂನ ಏಕೀಕರಣ ಪ್ರಕ್ರಿಯೆ ಯಶಸ್ವಿಯಾಗಿದೆ ಎಂದು ಇಂಡಿಯನ್ ಬ್ಯಾಂಕ್ ತಿಳಿಸಿದೆ.

ಎರಡೂ ಬ್ಯಾಂಕ್‌ಗಳ ಗ್ರಾಹಕರ ಖಾತೆಗಳಲ್ಲಿ ಯಾವುದೇ ಬದಲಾವಣೆ ಆಗಿಲ್ಲ. ಇಂಟರ್‌ನೆಟ್ ಬ್ಯಾಂಕಿಂಗ್ ಮತ್ತು ಮೊಬೈಲ್ ಬ್ಯಾಂಕಿಂಗ್ ಲಾಗಿನ್ ಐಡಿಯನ್ನು ಹಾಗೆಯೇ ಉಳಿಸಿಕೊಳ್ಳಲಾಗಿದೆ ಎಂದು ಅದು ಪ್ರಕಟಣೆಯಲ್ಲಿ ತಿಳಿಸಿದೆ.

ಸಾಮೂಹಿಕ ರಜೆ ಹಾಕುವ ಮೂಲಕ ಆಕ್ರೋಶ ಹೊರಹಾಕಿದ ಪಾಲಿಕೆ ನೌಕರರು

ಮೃತರ ಕುಟುಂಬಕ್ಕೆ ಸಿಗದ ಪರಿಹಾರ: ಪ್ರತಿಭಟನೆ

ಪ್ರಜಾವಾಣಿ ವಾರ್ತೆ



ಪಾಲಿಕೆ ಕಚೇರಿ ಎದುರು ಪ್ರತಿಭಟನೆ ನಡೆಸಿದ ನೌಕರರು –ಪ್ರಜಾವಾಣಿ ಚಿತ್ರ

ಬೆಂಗಳೂರು: ಕೋವಿಡ್‌ನಿಂದ ಮೃತಪಟ್ಟ ನೌಕರರ ಕುಟುಂಬಕ್ಕೆ ವಿಮಾ ಪರಿಹಾರ ಪಾವತಿಸುವಂತೆ ಒತ್ತಾಯಿಸಿ ಬಿಬಿಎಂಪಿ ಸಿಬ್ಬಂದಿ ಮತ್ತು ಅಧಿಕಾರಿಗಳು ಸಾಮೂಹಿಕ ರಜೆ ಹಾಕಿ ಗುರುವಾರ ಪ್ರತಿಭಟನೆ ನಡೆಸಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ನೇತೃತ್ವದಲ್ಲಿ ಬಿಬಿಎಂಪಿ ಕೇಂದ್ರ ಕಚೇರಿಯ ಎದುರು ಜಮಾಯಿಸಿದ ನೌಕರರು, ಘೋಷಣೆಗಳನ್ನು ಕೂಗಿದರು.

ಕೋವಿಡ್ ನಿಯಂತ್ರಣ ಕಾರ್ಯದಲ್ಲಿ ತೊಡಗಿದ್ದ ಬಿಬಿಎಂಪಿಯ 18 ನೌಕರರು ಮೃತಪಟ್ಟಿದ್ದಾರೆ. ಅವರ ಕುಟುಂಬಕ್ಕೆ ಈವರೆಗೆ ವಿಮಾ ಪರಿಹಾರ ತಲುಪಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ಕೋವಿಡ್ ವ್ಯಾಪಕವಾಗಿ ಹರಡುತ್ತಿದ್ದ ಸಂದರ್ಭದಲ್ಲಿ ಜೀವವನ್ನೂ ಲೆಕ್ಕಿಸದೆ ಬಿಬಿಎಂಪಿ ನೌಕರರು ಕರ್ತವ್ಯ ನಿರ್ವಹಿಸಿದ್ದಾರೆ. ಮೃತಪಟ್ಟ ಕುಟುಂಬದವರ ರಕ್ಷಣೆಗೆ ತಕ್ಷಣವೇ ಸ್ಪಂದಿಸುವುದು ಸರ್ಕಾರದ ಜವಾಬ್ದಾರಿ. ಆದರೆ, ಈವರೆಗೆ ಅವರ ಕುಟುಂಬಗಳಿಗೆ ₹30 ಲಕ್ಷ ವಿಮಾ ಪರಿಹಾರ ದೊರಕಿಸದೆ ಇರುವುದು ಅನ್ಯಾಯ’ ಎಂದು ನೌಕರರು ಹೇಳಿದರು.

‘3 ಸಾವಿರಕ್ಕೂ ಹೆಚ್ಚು ಸಿಬ್ಬಂದಿ ಮತ್ತು ಅಧಿಕಾರಿಗಳು ಸಾಮೂಹಿಕ ರಜೆ ಹಾಕಿ ಪ್ರತಿಭಟನೆ ನಡೆಸಿದ್ದಾರೆ. ಬೆಂಗಳೂರು ಮಹಾನಗರದ ಉಸ್ತುವಾರಿಯನ್ನು ಮುಖ್ಯಮಂತ್ರಿಯವರೇ ಹೊಂದಿದ್ದು, ಒಮ್ಮೆಯೂ ಬಿಬಿಎಂಪಿ ನೌಕರರ ಕುಂದು–ಕೊರತೆಗಳನ್ನು ಆಲಿಸಿಲ್ಲ. ಕೋವಿಡ್ ನಿರ್ವಹಣೆ ಮಾಡಿದ ನೌಕರರಿಗೆ ಆತ್ಮಸ್ಥೈರ್ಯ ತುಂಬುವ ಕೆಲಸ ಮಾಡಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

ರಜೆ ಪಡೆದಿಲ್ಲ: ಆಯುಕ್ತರ ಸ್ಪಷ್ಟನೆ

ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ನೌಕರರು ಯಾರೂ ರಜೆ ಪಡೆದಿಲ್ಲ ಎಂದು ಬಿಬಿಎಂಪಿ ಆಯುಕ್ತ ಎನ್. ಮಂಜುನಾಥ ಪ್ರಸಾದ್ ಸ್ಪಷ್ಟಪಡಿಸಿದರು.

‘ಪ್ರತಿಭಟನೆ ಬಳಿಕ ಕೆಲವರು ಕರ್ತವ್ಯಕ್ಕೆ ಹಾಜರಾಗಿದ್ದಾರೆ. ರಜೆ ಹಾಕದೆ ಕರ್ತವ್ಯಕ್ಕೂ ಹಾಜರಾಗದೆ ಇದ್ದವರ ಒಂದು ದಿನದ ವೇತನ ಕಡಿತಗೊಳಿಸಲು ಸೂಚನೆ ನೀಡಿದ್ದೇನೆ’ ಎಂದು ತಿಳಿಸಿದರು.

‘ಪಾಲಿಕೆ ನೌಕರರ ವೃಂದ ಮತ್ತು ನೇಮಕಾತಿ ಹೊಸ ನಿಯಮಗಳು ನೌಕರರಿಗೆ ಪ್ರತಿಕೂಲವಾಗಿವೆ. ಮಂಜೂರಾದ ಸಾವಿರಾರು ಹುದ್ದೆಗಳು ಖಾಲಿ ಇವೆ. ಕೆಲಸದ ಹೊರೆ ಹೆಚ್ಚಾಗಿದೆ. ನೌಕರರು ಒತ್ತಡದಲ್ಲಿ ಕರ್ತವ್ಯ ನಿರ್ವಹಿಸಬೇಕಾದ ಸ್ಥಿತಿ ಇದೆ’ ಎಂದರು.

‘ಬಡ್ತಿ ವಿಷಯದಲ್ಲೂ ಪಾಲಿಕೆ ನೌಕರರಿಗೆ ಅನ್ಯಾಯ ಆಗುತ್ತಿದೆ. ಕಂದಾಯ ಪರಿವೀಕ್ಷಕರ ಬಡ್ತಿಯಲ್ಲಿ ಶೇ 28ರಷ್ಟು ನೇರ ನೇಮಕಾತಿಗೆ ಅವಕಾಶ ನೀಡಲಾಗಿದೆ. ಈ ರೀತಿಯ ನಿಯಮಗಳು ನೌಕರರ ಮನೋಬಲ ಕುಗ್ಗಿಸಿವೆ. ಅಧಿಕಾರಿ ಮತ್ತು ನೌಕರರ ಬೇಡಿಕೆಗಳನ್ನು ಸರ್ಕಾರ ಕೂಡಲೇ ಈಡೇರಿಸಬೇಕು’ ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಪಾಲ್ಗೊಂಡ ಬಿಜೆಪಿ ಬೆಂಗಳೂರು ದಕ್ಷಿಣ ಜಿಲ್ಲಾ ಘಟಕದ ಅಧ್ಯಕ್ಷ ಎನ್.ಆರ್.ರಮೇಶ್, ನೌಕರರ ಕುರಿತ ಸರ್ಕಾರದ ಧೋರಣೆಗೆ ಅಸಮಾಧಾನ ವ್ಯಕ್ತಪಡಿಸಿದರು. ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಷಡಕ್ಷರಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ವರ್ಷದ ಬಳಿಕ ಸಿಕ್ಕಿಬಿದ್ದ ಆರೋಪಿ ಹರೀಶ್

ಪತ್ನಿ ಮೇಲೆ ಕಣ್ಣು ಹಾಕಿದ್ದಕ್ಕೆ ಕೊಲೆ

ಪ್ರಜಾವಾಣಿ ವಾರ್ತೆ



ಹರೀಶ್



ವೆಂಕಟೇಶ್

ಬೆಂಗಳೂರು: ತನ್ನ ಪತ್ನಿ ಮೇಲೆ ಕಣ್ಣು ಹಾಕಿದ್ದನೆಂಬ ಕಾರಣಕ್ಕೆ ಸ್ನೇಹಿತ ವೆಂಕಟೇಶ್‌ನನ್ನು (45) ಹತ್ಯೆ ಮಾಡಿದ್ದ ಆರೋಪಿ ಹರೀಶ್, ಮರಣೋತ್ತರ ಪರೀಕ್ಷೆ ನೀಡಿದ್ದ ಸುಳಿವಿನಿಂದಾಗಿ ವರ್ಷದ ಬಳಿಕ ಬ್ಯಾಡರಹಳ್ಳಿ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾನೆ.

‘ಕೀಟನಾಶಕ ಮಾರಾಟ ಅಂಗಡಿ ಇಟ್ಟುಕೊಂಡಿದ್ದ ವೆಂಕಟೇಶ್ 2020ರ ಫೆ. 14ರಂದು ಮೃತಪಟ್ಟಿದ್ದರು. ಮೃತದೇಹದ ಮೇಲೆ ಯಾವುದೇ ಗಾಯಗಳು ಇರಲಿಲ್ಲ. ಸ್ಥಳದಲ್ಲಿ ಯಾವುದೇ ರಕ್ತದ ಕಲೆಯೂ ಕಂಡಿರಲಿಲ್ಲ. ಹೀಗಾಗಿ, ಇದೊಂದು ಅಸಹಜ ಸಾವೆಂದು ಭಾವಿಸಲಾಗಿತ್ತು. ಇತ್ತೀಚೆಗೆ ಮರಣೋತ್ತರ ಪರೀಕ್ಷೆ ವರದಿ ಬಂದಿದ್ದು, ಇದೊಂದು ಕೊಲೆ ಎಂಬುದು ಖಾತ್ರಿಯಾಗಿದೆ. ಆರೋಪಿ ಹರೀಶ್‌ನನ್ನು ಬಂಧಿಸಿ ಹೆಚ್ಚಿನ ಮಾಹಿತಿ ಕಲೆಹಾಕಲಾಗುತ್ತಿದೆ’ ಎಂದು ಬ್ಯಾಡರಹಳ್ಳಿ ಪೊಲೀಸ್ ಮೂಲಗಳು ಹೇಳಿವೆ.

‘ಮೃತ ವೆಂಕಟೇಶ್ ಹಾಗೂ ಆರೋಪಿ ಹರೀಶ್ ಸ್ನೇಹಿತರಾಗಿದ್ದರು. ಪರಸ್ಪರ ಮನೆಗೂ ಬಂದು ಹೋಗುವುದು ಮಾಡುತ್ತಿದ್ದರು. ಹರೀಶ್ ಪತ್ನಿ ಜೊತೆ ವೆಂಕಟೇಶ್ ಹೆಚ್ಚು ಮಾತನಾಡಲಾರಂಭಿಸಿದ್ದರು. ಅದನ್ನು ನೋಡಿದ್ದ ಹರೀಶ್, ಹಲವು ಬಾರಿ ಎಚ್ಚರಿಕೆ ನೀಡಿದ್ದ. ಮದ್ಯದ ಪಾರ್ಟಿ ವೇಳೆ ಇಬ್ಬರ ನಡುವೆ ಗಲಾಟೆಯೂ ಆಗಿತ್ತು.’

‘ಬುದ್ಧಿವಾದ ಹೇಳಿದರೂ ಸುಮ್ಮನಾಗದ ವೆಂಕಟೇಶ್, ‘ಪತ್ನಿಯನ್ನು ಮಾತನಾಡಿಸುತ್ತೇನೆ. ಏನು ಮಾಡುತ್ತೀಯಾ ನೋಡುತ್ತೇನೆ’ ಎಂದು ಬೆದರಿಕೆ ಸಹ ಹಾಕಿದ್ದರು. ಅದರಿಂದಾಗಿ ಸಿಟ್ಟಾಗಿದ್ದ ಹರೀಶ್, ಮದ್ಯದ ಬಾಟಲಿಯಿಂದ ತಲೆಗೆ ಹೊಡೆದಿದ್ದ. ತಲೆಯಲ್ಲಿ ರಕ್ತ ಹೆಪ್ಪುಗಟ್ಟಿ ವೆಂಕಟೇಶ್ ಸ್ಥಳದಲ್ಲೇ ಮೃತಪಟ್ಟಿದ್ದರು. ಘಟನೆ ನಡೆದ ಸ್ಥಳವನ್ನು ಸ್ವಚ್ಛಗೊಳಿಸಿ ಆರೋಪಿ ಪರಾರಿಯಾಗಿದ್ದ.’

‘ಆರಂಭದಲ್ಲಿ ಸ್ಥಳಕ್ಕೆ ಹೋಗಿದ್ದ ಪೊಲೀಸರು, ವಿಪರೀತ ಮದ್ಯ ಕುಡಿದು ಅಥವಾ ಬೇರೆ ಕಾರಣಕ್ಕೆ ಸತ್ತಿರಬಹುದೆಂದು ತಿಳಿದಿದ್ದರು. ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹವನ್ನು ಸಂಬಂಧಿಕರಿಗೆ ಹಸ್ತಾಂತರಿಸಿದ್ದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪತ್ನಿಗಾಗಿ ಕೊಲೆ: ‘ತನ್ನ ಪತ್ನಿ ಜೊತೆ ವೆಂಕಟೇಶ್ ಸಲುಗೆ ಬೆಳೆಸುತ್ತಿದ್ದ. ಅದನ್ನು ಸಹಿಸಲಾಗದೇ ಆತನನ್ನು ಕೊಂದಿರುವುದಾಗಿ ಆರೋಪಿ ಹರೀಶ್ ಹೇಳುತ್ತಿದ್ದಾನೆ’ ಎಂದೂ ಮೂಲಗಳು ಹೇಳಿವೆ.

ಕರೆ ಸ್ವೀಕರಿಸದಿದ್ದಕ್ಕೆ ಮಹಿಳೆ ಕೊಂದು ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಮೊಬೈಲ್ ಕರೆ ಸ್ವೀಕರಿಸಲಿಲ್ಲವೆಂಬ ಕಾರಣಕ್ಕೆ ಸ್ನೇಹಿತೆ ರಮ್ಯಾ (35) ಅವರನ್ನು ಕೊಲೆ ಮಾಡಿರುವ ಆರೋಪಿ ಚಿಕ್ಕಮೊಗ (45), ಕೃತ್ಯದ ಬಳಿಕ ತಾನೂ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಕೋಣನಗುಂಟೆ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

‘ಮೃತ ರಮ್ಯಾ, ಗಾರ್ಮೆಂಟ್ಸ್ ಕಾರ್ಖಾನೆಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಆರೋಪಿ ಚಿಕ್ಕಮೊಗ, ಭದ್ರತಾ ಸಿಬ್ಬಂದಿ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಪತಿ ತೊರೆದಿದ್ದ ರಮ್ಯಾ, ಚಿಕ್ಕಮೊಗ ಜೊತೆ ಒಂದೇ ಮನೆಯಲ್ಲಿ ವಾಸವಿದ್ದರು. ಆರೋಪಿಗೂ ಮದುವೆಯಾಗಿತ್ತು. ಆತನೂ ಪತ್ನಿ ತೊರೆದಿದ್ದ. ರಮ್ಯಾ ಅವರ ಮೊಬೈಲ್‌ಗೆ ಚಿಕ್ಕಮೊಗ ಕರೆ ಮಾಡಿದ್ದರು. ಅದನ್ನು ಸ್ವೀಕರಿಸಿರಲಿಲ್ಲ. ಅದೇ ಸಿಟ್ಟಿನಲ್ಲೇ ಮನೆಗೆ ಬಂದಿದ್ದ ಆರೋಪಿ, ಜಗಳ ತೆಗೆದಿದ್ದ. ಅಕ್ಕ–ಪಕ್ಕದ ನಿವಾಸಿಗಳು, ವಿಚಾರಿಸಲು ಬಂದಾಗ ಅವರಿಗೆ ಬೈದು ಮನೆಯಿಂದ ವಾಪಸು ಕಳುಹಿಸಿದ್ದ. ನಂತರ ಮಾರಕಾಸ್ತ್ರದಿಂದ ಹೊಡೆದು ರಮ್ಯಾ ಅವರನ್ನು ಕೊಂದಿದ್ದ. ಬಳಿಕ, ಮನೆಯಲ್ಲೇ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ’ ಎಂದೂ ಪೊಲೀಸ್ ಮೂಲಗಳು ಹೇಳಿವೆ.

ಆಟಿಕೆ ಚೆಂಡಿನೊಳಗೆ ಚಿನ್ನದ ಗಟ್ಟಿ

ಬೆಂಗಳೂರು: ಆಟಿಕೆ ಚೆಂಡಿನೊಳಗೆ ಬಚ್ಚಿಟ್ಟಿದ್ದ ಚಿನ್ನದ ಗಟ್ಟಿಯನ್ನು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಸ್ಟಮ್ಸ್ ಅಧಿಕಾರಿಗಳು ಜಪ್ತಿ ಮಾಡಿದ್ದಾರೆ.

‘ದುಬೈನಿಂದ ಬೆಂಗಳೂರಿಗೆ ಮಂಗಳವಾರ ರಾತ್ರಿ ಬಂದಿದ್ದ ಇಂಡಿಗೊ ವಿಮಾನದಲ್ಲಿ ಆಟಿಕೆ ಚೆಂಡು ಪತ್ತೆಯಾಗಿತ್ತು. ಅದು ಯಾರಿಗೆ ಸೇರಿದ್ದು ಎಂಬುದು ಗೊತ್ತಿರಲಿಲ್ಲ. ಚೆಂಡು ಬಿಚ್ಚಿ ನೋಡಿದಾಗ, ಅದರಲ್ಲೇ ₹ 11.30 ಲಕ್ಷ ಮೌಲ್ಯದ ಚಿನ್ನದ ಗಟ್ಟಿ ಇತ್ತು’ ಎಂದು ಮೂಲಗಳು ಹೇಳಿವೆ.

‘ಅಕ್ರಮವಾಗಿ ಚಿನ್ನ ಸಾಗಣೆ ಮಾಡುತ್ತಿದ್ದ ಪ್ರಯಾಣಿಕರು, ಭದ್ರತೆಗೆ ಹೆದರಿ ವಿಮಾನದಲ್ಲೇ ಚೆಂಡು ಬಿಟ್ಟು ಹೋಗಿರುವ ಸಾಧ್ಯತೆ ಇದೆ. ಪ್ರಯಾಣಿಕರ ಪಟ್ಟಿ ಪಡೆದು ಪರಿಶೀಲನೆ ನಡೆಸಲಾಗುತ್ತಿದೆ’ ಎಂದೂ ತಿಳಿಸಿವೆ.

ಸುದ್ದಿ 2 ನಿಮಿಷ

₹ 3 ಲಕ್ಷ ಮೌಲ್ಯದ ಬೆಳ್ಳಿ ಕಳವು: ಕೆಲಸಗಾರನ ಬಂಧನ

ಬೆಂಗಳೂರು: ಬ್ಯಾಡರಹಳ್ಳಿ ಬಳಿಯ ಕಾಳಿಕಾನಗರದಲ್ಲಿರುವ ಮಳಿಗೆಯೊಂದರಲ್ಲಿ ಬೆಳ್ಳಿ ವಸ್ತುಗಳನ್ನು ಕಳವು ಮಾಡಿದ್ದ ಆರೋಪದಡಿ, ಅದೇ ಮಳಿಗೆಯ ಕೆಲಸಗಾರ ಚೇತನ್ (26) ಎಂಬುವರನ್ನು ಪೊಲೀಸರು ಬಂಧಿಸಿದ್ದಾರೆ.

‘ರಾಮನಗರ ಜಿಲ್ಲೆಯ ಸುಗ್ಗನಹಳ್ಳಿಯ ಚೇತನ್, ಎರಡೂವರೆ ತಿಂಗಳಿನಿಂದ ಮಳಿಗೆಯಲ್ಲಿ ಕೆಲಸ ಮಾಡುತ್ತಿದ್ದ. ಆತನಿಂದ ₹ 3 ಲಕ್ಷ ಮೌಲ್ಯದ ಚಿನ್ನದ ವಸ್ತುಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಮಳಿಗೆ ಮಾಲೀಕರು ಕೆಲಸ ನಿಮಿತ್ತ ಊರಿಗೆ ಹೋಗಿದ್ದರು. ಚೇತನ್ ಮಾತ್ರ ಅಂಗಡಿಯಲ್ಲಿದ್ದ. ಎರಡು ದಿನ ಬಿಟ್ಟು ಮಾಲೀಕರು ಅಂಗಡಿಗೆ ಬರುವಷ್ಟರಲ್ಲೇ ಆರೋಪಿ ಚಿನ್ನದ ವಸ್ತುಗಳನ್ನು ಕದ್ದುಕೊಂಡು ಪರಾರಿಯಾಗಿದ್ದ’ ಎಂದೂ ತಿಳಿಸಿದರು.

ಚಿಣ್ಣರ ಕುತೂಹಲ ತಣಿಸಿದ ಐಐಎಫ್‌ಟಿ ಕಾರ್ಯಾಗಾರ



ಬೆಂಗಳೂರು: ಟೀಶರ್ಟ್ ಮೇಲೆ ಚಿತ್ರ ಬಿಡಿಸುವುದು ಹೇಗೆ? ಆಹ್ವಾನಪತ್ರಿಕೆಗಳ ಮೇಲೂ ಪೇಂಟ್ ಮಾಡಬಹುದಾ? ಗೋಡೆಗೆ ತೂಗು ಹಾಕುವ ಕಲಾಕೃತಿಗಳನ್ನು ಮಾಡುವುದು ಹೇಗೆ..? ಈ ಬಗ್ಗೆ ಮಕ್ಕಳಿಗೆ ಇರುವ ಕುತೂಹಲವನ್ನು ತಣಿಸುವ ಕಾರ್ಯವನ್ನು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಫ್ಯಾಷನ್ ಟೆಕ್ನಾಲಜಿಯು (ಐಐಎಫ್‌ಟಿ) ಇತ್ತೀಚೆಗೆ ಹಮ್ಮಿಕೊಂಡಿತ್ತು.

ಹೆಸರಘಟ್ಟದಲ್ಲಿರುವ ಸ್ಪರ್ಶ ಟ್ರಸ್ಟ್‌ನ 60 ಮಕ್ಕಳಿಗೆ ಈ ಕುರಿತು ತರಬೇತಿ ಕಾರ್ಯಾಗಾರವನ್ನು ಐಐಎಫ್‌ಟಿ ಹಮ್ಮಿಕೊಂಡಿತ್ತು. ಕಟ್ಟಡ ಕಾರ್ಮಿಕರ, ಏಕಪೋಷಕರಿರುವ ಮತ್ತು ಶೋಷಿತ ಮಕ್ಕಳು ಈ ಟ್ರಸ್ಟ್‌ನಲ್ಲಿ ಆಶ್ರಯ ಪಡೆದಿದ್ದಾರೆ.

ಪರಿಸರ ಸ್ನೇಹಿ ವಸ್ತುಗಳನ್ನು ಬಳಸಿ ಆಲಂಕಾರಿಕ ವಸ್ತುಗಳನ್ನು ರೂಪಿಸುವುದು, ಸ್ಕ್ರೀನ್‌ಪ್ರಿಂಟಿಂಗ್, ಸ್ಟೆನ್ಸಿಲ್ ಪ್ರಿಂಟಿಂಗ್ ಕುರಿತು ಸಂಸ್ಥೆಯ 20 ಸಿಬ್ಬಂದಿ ಮಕ್ಕಳಿಗೆ ತರಬೇತಿ ನೀಡಿದರು.

‘ಮಕ್ಕಳ ಕುತೂಹಲ ತಣಿಸುವ ಉದ್ದೇಶವನ್ನು ಈ ಉಚಿತ ಕಾರ್ಯಾಗಾರ ಹೊಂದಿದೆ. ಆಸಕ್ತಿ ಇರುವವರು ಎಸ್ಸೆಸ್ಸೆಲ್ಸಿ, ಪಿಯುಸಿ ನಂತರ ಈ ಕುರಿತು ಕೋರ್ಸ್ ತೆಗೆದುಕೊಳ್ಳಬಹುದು. ಸ್ವಉದ್ಯೋಗ ಕೈಗೊಳ್ಳಲೂ ಈ ಕೌಶಲ ನೆರವಾಗಲಿದೆ’ ಎಂದು ಐಐಎಫ್‌ಟಿಯ ಸಹಾಯಕ ಪ್ರಾಧ್ಯಾಪಕಿ ಶ್ರೀಲಕ್ಷ್ಮಿ ಹೇಳಿದರು.

ಬಾಗಿಲು ಪರದೆ, ಸೋಫಾ, ಟೇಬಲ್ ಮೇಲೆ ಹಾಕುವ ವಸ್ತ್ರಗಳ ಮೇಲೂ ಕಲಾಕೃತಿ ಅಥವಾ ಸ್ಕ್ರೀನ್ ಪ್ರಿಂಟಿಂಗ್ ಮಾಡುವ ಬಗ್ಗೆಯೂ ಹೇಳಿಕೊಡಲಾಯಿತು. 10ರಿಂದ 14 ವರ್ಷದ ಮಕ್ಕಳು ಕಾರ್ಯಾಗಾರದ ಉಪಯೋಗ ಪಡೆದುಕೊಂಡರು. ಹೊಸ ಅನ್ವೇಷಣೆಗಳ ಮೂಲಕ ಸಾಮಾಜಿಕ ಪ್ರಗತಿ ಸಾಧಿಸುವ ಉದ್ದೇಶದಿಂದ ಬಿ. ವೇದಗಿರಿಯವರು 2001ರಲ್ಲಿ ಈ ಐಐಎಫ್‌ಟಿ ಸ್ಥಾಪಿಸಿದ್ದರು.

ಪಕ್ಷದ ಬಲವರ್ಧನೆಗೆ ರೂಪಿಸಿಬೇಕಾದ ತಂತ್ರಗಳ ಬಗ್ಗೆ ಚರ್ಚೆ: ಸುರ್ಜೇವಾಲ

‘ಬ್ಲಾಕ್ ಮಟ್ಟದಲ್ಲಿ ಪ್ರತಿಭಟನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯ ಸರ್ಕಾರದ ಭ್ರಷ್ಟಾಚಾರ, ದುರಾಡಳಿತದಿಂದ ಜನರು ಬೇಸತ್ತಿದ್ದಾರೆ. ಇನ್ನು ಮುಂದೆ ಪ್ರತಿ ಬ್ಲಾಕ್ ಮಟ್ಟದಲ್ಲಿಯೂ ಪಕ್ಷದಿಂದ ಪ್ರತಿಭಟನೆ ಹಮ್ಮಿಕೊಳ್ಳುತ್ತೇವೆ. ಮನೆಮನೆ ಅಭಿಯಾನವನ್ನೂ ಆರಂಭಿಸುತ್ತೇವೆ’ ಎಂದು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಹೇಳಿದರು.

ಕುಮಾರಕೃಪಾ ಅತಿಥಿಗೃಹದಲ್ಲಿ ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, ರಾಜ್ಯದಲ್ಲಿ ಪಕ್ಷದ ಬಲವರ್ಧನೆಗೆ ರೂಪಿಸಿಬೇಕಾದ ಕಾರ್ಯತಂತ್ರಗಳ ಬಗ್ಗೆ ಪ್ರಮುಖ ನಾಯಕರ ಜೊತೆ ಎರಡು ದಿನ ಸುದೀರ್ಘವಾಗಿ ಚರ್ಚೆ ನಡೆಸಿದ್ದೇನೆ’ ಎಂದೂ ಹೇಳಿದರು.



ರಣದೀಪ್ ಸಿಂಗ್ ಸುರ್ಜೇವಾಲ

‘ಮುಖ್ಯವಾಗಿ ಬಿಬಿಎಂಪಿ ಚುನಾವಣೆ ಬಗ್ಗೆ ಚರ್ಚೆ ಮಾಡಿದ್ದೇವೆ. ನಾನಾ ತೆರಿಗೆಗಳು, ಕುಡಿಯುವ ನೀರು, ತ್ಯಾಜ್ಯ ವಿಲೇವಾರಿ, ರಸ್ತೆ ಸೇರಿದಂತೆ ಬೆಂಗಳೂರಿನ ಸಮಸ್ಯೆಗಳ ಬಗ್ಗೆ ಚರ್ಚಿಸಿದ್ದೇವೆ. ಅದರ ವಿರುದ್ಧ ಪಕ್ಷ ಹೋರಾಟ ಮಾಡುತ್ತಿದೆ. ಬಿಬಿಎಂಪಿ ಚುನಾವಣೆ ವಿಚಾರ ಕೋರ್ಟ್‌ನಲ್ಲಿ ಇದೆ. ಯಾವುದೇ ಸಮಯದಲ್ಲೂ ಚುನಾವಣೆ ಘೋಷಣೆ ಆಗಬಹುದು. ಅದಕ್ಕೆ ನಾವು ಸಜ್ಜಾಗುತ್ತಿದ್ದೇವೆ’ ಎಂದರು.

ಎಐಸಿಸಿ ಪ್ರಧಾನ ಕಾರ್ಯದರ್ಶಿ ದಿನೇಶ್ ಗುಂಡೂರಾವ್ ಮಾತನಾಡಿ, ‘ಪಕ್ಷ ಸಂಘಟನೆ ಕುರಿತು ಸುರ್ಜೇವಾಲ ಜೊತೆ ಚರ್ಚಿಸಿದ್ದೇನೆ. ಕಾಂಗ್ರೆಸ್ ಪಕ್ಷ ಜಾತಿ ರಾಜಕೀಯ ಮಾಡಲ್ಲ. ಅಹಿಂದ ಸಮಾವೇಶ ಉಹಾಪೋಹ. ಈ ಬಗ್ಗೆ ಸಿದ್ದರಾಮಯ್ಯ ಅಧಿಕೃತವಾಗಿ ಎಲ್ಲೂ ಹೇಳಿಲ್ಲ. ಸಮಾವೇಶಗಳನ್ನು ಪಕ್ಷದ ಚೌಕಟ್ಟಿನಲ್ಲಿ ಮಾಡುತ್ತಾರೆ’ ಎಂದರು.

‘ತಮಿಳುನಾಡಿನಲ್ಲಿ ಕಾಂಗ್ರೆಸ್-ಡಿಎಂಕೆ ಮೈತ್ರಿ ಚೆನ್ನಾಗಿಯೇ ಇದೆ. ನಮ್ಮಲ್ಲಿ ಗೊಂದಲಗಳಿಲ್ಲ. ಆದರೆ, ಬಿಜೆಪಿ–ಎಐಡಿಎಂಕೆ ನಡುವೆ ಸಾಕಷ್ಟು ಗೊಂದಲಗಳಿವೆ. ಶಶಿಕಲಾ ಅವರು ರಾಜಕೀಯದಲ್ಲಿ ಮತ್ತೆ ಸಕ್ರಿಯರಾಗಿರುವುದು ಎಐಡಿಎಂಕೆಯಲ್ಲೇ ಗೊಂದಲ ಸೃಷ್ಟಿಸಿದೆ’ ಎಂದರು.

ಡಿಕೆಶಿ ಚರ್ಚೆ: ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಕೂಡಾ ಸುರ್ಜೇವಾಲರನ್ನು ಭೇಟಿ ಮಾಡಿ ಸಮಾಲೋಚನೆ ನಡೆಸಿದರು.

‘ಅಖಂಡಗೆ ನ್ಯಾಯ ಒದಗಿಸಿ’

ಬೆಂಗಳೂರು: ಡಿ.ಜೆ ಹಳ್ಳಿ ಗಲಾಟೆ ಪ್ರಕರಣದಲ್ಲಿ ಪುಲಿಕೇಶಿನಗರದ ಶಾಸಕ ಅಖಂಡ ಶ್ರೀನಿವಾಸಮೂರ್ತಿ ಅವರಿಗೆ ಆಗಿರುವ ಅನ್ಯಾಯ ಸರಿಪಡಿಸುವಂತೆ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಗೆ ಶಾಸಕ ಜಮೀರ್ ಅಹ್ಮದ್ ಖಾನ್ ಮನವಿ ಮಾಡಿದ್ದಾರೆ.

ಮನವಿ ಸಲ್ಲಿಸುವ ಮೊದಲು ಸುದ್ದಿಗಾರರ ಜತೆ ಮಾತನಾಡಿದ ಜಮೀರ್, ‘ಅಖಂಡ ಶ್ರೀನಿವಾಸಮೂರ್ತಿ ಪರವಾಗಿ ನಾನು ಇದ್ದೇನೆ. ಗಲಾಟೆಯಲ್ಲಿ ಮಾಜಿ ಮೇಯರ್ ಸಂಪತ್ ರಾಜ್ ಕೈವಾಡ ಈಗ ಸಾಬೀತಾಗಿದೆ. ಜೈಲಿಗೆ ಹೋಗಿ ಬಂದಿದ್ದಾರೆ. ಮೂರು ತಿಂಗಳಾದರೂ ಪಕ್ಷ ಅವರ ಮೇಲೆ ಕ್ರಮ ತೆಗೆದುಕೊಂಡಿಲ್ಲ’ ಎಂದರು.

ರೈಲು ತಡೆಗೆ ಯತ್ನ: ರೈತರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೆಹಲಿಯಲ್ಲಿ ರೈತರು ನಡೆಸುತ್ತಿರುವ ಹೋರಾಟ ಬೆಂಬಲಿಸಿ ಯಶವಂತಪುರ ನಿಲ್ದಾಣದಲ್ಲಿ ರೈಲು ತಡೆ ಚಳವಳಿ ನಡೆಸಲು ಪ್ರಯತ್ನಿಸಿದ ರೈತರನ್ನು ಪೊಲೀಸರು ಬಂಧಿಸಿ ಬಿಡುಗಡೆಗೊಳಿಸಿದರು.

ರಾಷ್ಟ್ರೀಯ ಸಂಯುಕ್ತ ಕಿಸಾನ್ ಮೋರ್ಚಾ ಕರೆಗೆ ಬೆಂಬಲಿಸಿ ರೈಲು ತಡೆ ಚಳವಳಿಯನ್ನು ರೈತ, ದಲಿತ, ಕಾರ್ಮಿಕರ ಐಕ್ಯ ಹೋರಾಟ ಸಮಿತಿಯಿಂದ ಹಮ್ಮಿಕೊಳ್ಳಲಾಗಿತ್ತು.

ಯಶವಂತಪುರ ನಿಲ್ದಾಣಕ್ಕೆ ಬಂದ ರೈತರನ್ನು ಪೊಲೀಸರು ತಡೆದರು. ಆದರೂ, ಘೋಷಣೆ ಕೂಗುತ್ತಾ ನಿಲ್ದಾಣದ ಒಳ ನುಗ್ಗಲು ರೈತರು ಮುಂದಾದರು. ಅದಕ್ಕೂ ಅವಕಾಶ ನೀಡದಿದ್ದಾಗ ಪ್ರತಿಭಟನೆಗೆ ಅವಕಾಶ ನೀಡದಿದ್ದರೆ ಪ್ರತಿದಿನವೂ ರಾಜ್ಯದಾದ್ಯಂತ ರೈಲು ತಡೆ ನಡೆಸುವುದಾಗಿ ರೈತರು ಎಚ್ಚರಿಕೆ ನೀಡಿದರು.

ಬಳಿಕ ರೈತ ಮುಖಂಡರ ಜತೆ ಮಾತುಕತೆ ನಡೆಸಿದ ಪೊಲೀಸರು, ನಿಲ್ದಾಣದ ಒಳ ಪ್ರವೇಶಿಸಲು ಅವಕಾಶ ನೀಡಿದರು. ಆದರೆ, ರೈಲು ತಡೆ ನಡೆಸಲು ಪ್ರಯತ್ನಿಸಿದಾಗ ಅವರನ್ನು ಬಂಧಿಸಿ ಕರೆದೊಯ್ದರು.



ಯಶವಂತಪುರ ರೈಲು ನಿಲ್ದಾಣದಲ್ಲಿ ರೈತರನ್ನು ಬಂಧಿಸಿ ಕರೆದೊಯ್ಯುತ್ತಿರುವ ಪೊಲೀಸರು

ಈ ನಡುವೆ, ಮೈಸೂರಿನಿಂದ ರೈಲಿನಲ್ಲಿ ಬಂದಿದ್ದ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಮತ್ತು ಹಲವು ರೈತರು ನಿಲ್ದಾಣದೊಳಗೆ ಚಳವಳಿ ನಡೆಸಲು ಮುಂದಾದರು. ಅದನ್ನು ತಡೆದ ಪೊಲೀಸರು ಅವರನ್ನೂ ಹೊರಕ್ಕೆ ಕರೆದೊಯ್ದರು.

‘ಪೊಲೀಸರ ದಬ್ಬಾಳಿಕೆ ಸರಿಯಲ್ಲ. ಪ್ರಧಾನಿ ನರೇಂದ್ರ ಮೋದಿ ಅವರು ಕಾರ್ಪೊರೇಟ್ ಕಂಪನಿಗಳ ಮರ್ಜಿಯಲ್ಲಿ ಕಾರ್ಯನಿರ್ವಹಿಸದೆ ದೇಶದ ರೈತರ ಹಿತ ರಕ್ಷಣೆಗೆ ದುಡಿಯಬೇಕು. ರೈತ ವಿರೋಧಿ ಕಾನೂನುಗಳನ್ನು ವಾಪಸ್ ಪಡೆಯಬೇಕು. ಕೂಡಲೇ ರೈತರ ಸಭೆ ಕರೆದು ಮಾತುಕತೆ ನಡೆಸಬೇಕು’ ಎಂದು ಕುರುಬೂರು ಶಾಂತಕುಮಾರ್ ಒತ್ತಾಯಿಸಿದರು.

‘ನಾನು ಕಾಂಗ್ರೆಸ್ ಬಿಡುತ್ತೇನೆಂದು ಎಲ್ಲೂ ಹೇಳಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಾನು ಕಾಂಗ್ರೆಸ್ ಬಿಡುತ್ತೇನೆಂದು ಎಲ್ಲೂ ಹೇಳಿಲ್ಲ, ಸಮಸ್ಯೆಗಳಿವೆ ಎಂದು ಹೇಳಿದ್ದೇನೆ. ಸಮಸ್ಯೆ ಬಗೆಹರಿಸುವ ಬಗ್ಗೆ ಸುರ್ಜೇವಾಲ ಮಾತನಾಡಿದ್ದಾರೆ. ಮುಂದೆ ವರಿಷ್ಠರನ್ನು ಕೂಡ ಭೇಟಿ ಮಾಡುತ್ತೇನೆ’ ಎಂದು ವಿಧಾನಪರಿಷತ್ ಸದಸ್ಯ ಸಿ.ಎಂ. ಇಬ್ರಾಹಿಂ ಹೇಳಿದರು.

ಕಾಂಗ್ರೆಸ್‌ನಿಂದ ಇಬ್ರಾಹಿಂ ದೂರವಾಗುತ್ತಿದ್ದಾರೆಂಬ ಕಾರಣಕ್ಕೆ ಬೆನ್ಸನ್ ಟೌನ್‌ನಲ್ಲಿರುವ ಅವರ ನಿವಾಸಕ್ಕೆ ಗುರುವಾರ ಮಧ್ಯಾಹ್ನ ಭೇಟಿ ನೀಡಿ, ಕಾಂಗ್ರೆಸ್ ಉಸ್ತುವಾರಿ ರಣದೀಪ ಸಿಂಗ್ ಸುರ್ಜೇವಾಲ ಕೆಲಹೊತ್ತು ಚರ್ಚೆ ನಡೆಸಿದರು.

ಅತ್ಯುತ್ತಮ ಶಿಕ್ಷಕರಿಗೆ ‘ಗುರುದಕ್ಷಿಣೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೋಟರಿ ಅಂತರರಾಷ್ಟ್ರೀಯ ಜಿಲ್ಲೆ 3190ರ ರೋಟರಿ ಬೆಂಗಳೂರು ಆಗ್ನೇಯ, ರೋಟರಿ ಬೆಂಗಳೂರು ಸ್ಪಂದನ, ರೋಟರಿ ಬೆಂಗಳೂರು ಲೇಕ್‌ಸೈಡ್ ಹಾಗೂ ರೋಟರಿ ಬೆಂಗಳೂರು ಮಾನ್ಯತಾ ಕ್ಲಬ್‌ಗಳ ಸಹಯೋಗದಲ್ಲಿ ‘ಗುರುದಕ್ಷಿಣೆ ಪ್ರಶಸ್ತಿ’ ನೀಡಲು ನಿರ್ಧರಿಸಲಾಗಿದೆ.

ಪೂರ್ವ ಪ್ರಾಥಮಿಕ ಶಾಲೆ, ಪ್ರಾಥಮಿಕ ಶಾಲೆ, ಪ್ರೌಢಶಾಲೆ, ಕಾಲೇಜು, ಕ್ರೀಡೆ, ಕಲೆ ಮತ್ತು ಸಂಗೀತ, ಸಾಂಪ್ರದಾಯಿಕ ಜ್ಞಾನ ಹಾಗೂ ವಿಶೇಷ ಮಕ್ಕಳು ಎಂಬ ಎಂಟು ವಿಭಾಗಗಳಲ್ಲಿ ಪ್ರಶಸ್ತಿ ನೀಡಲಾಗುತ್ತಿದೆ.

ಅರ್ಜಿ ಸಲ್ಲಿಸುವವರು ಅಥವಾ ನಾಮನಿರ್ದೇಶಿತರು ತಮ್ಮ ಹೆಸರು, ವಿಳಾಸ, ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆ, ಸಂಪರ್ಕ ಸಂಖ್ಯೆ, ಇ-ಮೇಲ್ ವಿಳಾಸ, ಹಿಂದಿನ ಮೂರು ವರ್ಷಗಳಲ್ಲಿ ನೀಡಿರುವ ಕೊಡುಗೆ ಹಾಗೂ ಅದರ ಪರಿಣಾಮ, ಸೇವಾ ಅನುಭವ, ಶೈಕ್ಷಣಿಕ ಅರ್ಹತೆ, ಹಿಂದೆ ಕೆಲಸ ಮಾಡಿದ ಸಂಸ್ಥೆಗಳು, ಇತರ ಕ್ಷೇತ್ರಗಳಲ್ಲಿನ ಕೊಡುಗೆ ಮತ್ತು ಯಾವುದಾದರೂ ಪ್ರಶಸ್ತಿಗಳನ್ನು ಪಡೆದಿದ್ದರೆ ಆ ಕುರಿತ ಮಾಹಿತಿಯನ್ನು ಪಿಡಿಎಫ್ ರೂಪದಲ್ಲಿ ಒದಗಿಸಬೇಕು.

ಇತ್ತೀಚೆಗೆ ತಮ್ಮ ವಿದ್ಯಾರ್ಥಿಗಳಿಗೆ ಮಾಡಿದ ಬೋಧನೆ, ಕಲಿಕೆ ಅಥವಾ ಮೌಲ್ಯಮಾಪನದಲ್ಲಿ ಪ್ರಯತ್ನಿಸಿದ ಮೂರು ನವೀನ ವಿಚಾರಗಳು ಅಥವಾ ಪ್ರಯೋಗಗಳ ಕುರಿತು ಸುಮಾರು 300 ಪದಗಳಲ್ಲಿ ವಿವರಿಸಬೇಕು. ಇದನ್ನು ಕನಿಷ್ಠ ಎರಡು ಮಾದರಿಗಳೊಂದಿಗೆ ತರಗತಿಯಲ್ಲಿ ಅನುಷ್ಠಾನಗೊಳಿಸಿರಬೇಕು. ಇದರ ಜೊತೆಗೆ ಎರಡು ಛಾಯಾಚಿತ್ರಗಳು, ಎರಡು ನಿಮಿಷದ ವಿಡಿಯೊ ತುಣುಕು, ವಿದ್ಯಾರ್ಥಿಗಳ ಪ್ರತಿಕ್ರಿಯೆ, ಶಾಲೆಯ ಮುಖ್ಯೋಪಾಧ್ಯಾಯರು ಅಥವಾ ಸಹ ಶಿಕ್ಷಕರ ಪ್ರತಿಕ್ರಿಯೆ ಮತ್ತು ಸ್ವಯಂ ಅವಲೋಕನದ ವಿವರಗಳನ್ನು ಲಗತ್ತಿಸಿರಬೇಕು.

ಅರ್ಜಿ ಸಲ್ಲಿಸಲು ಅಥವಾ ನಾಮನಿರ್ದೇಶನ ಮಾಡಲು ಮಾರ್ಚ್ 5 ಕೊನೆಯ ದಿನ. ಏಪ್ರಿಲ್ 25ರಂದು ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ರೊ.ಪ್ರಸನ್ನಕುಮಾರಿ, ಡಿ–304, ಮಂತ್ರಿ ಎಲೈಟ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560976 ಈ ವಿಳಾಸಕ್ಕೆ ಅಂಚೆ/ಕೊರಿಯರ್ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದು. ಸಂಪರ್ಕಕ್ಕೆ 9449750492.

‘ಮುಖ್ಯಮಂತ್ರಿ’ ಚಂದ್ರುಗೆ ರಂಗಮನೆ ಪ್ರಶಸ್ತಿ



ಮುಖ್ಯಮಂತ್ರಿ ಚಂದ್ರು

ಸುಳ್ಯ: ಇಲ್ಲಿನ ಸಾಂಸ್ಕೃತಿಕ ಕಲಾ ಕೇಂದ್ರ ‘ರಂಗಮನೆ’ ಪ್ರತಿವರ್ಷ ನೀಡುವ ‘ಸುಳ್ಯ ರಂಗಮನೆ ಪ್ರಶಸ್ತಿ’ಗೆ ಈ ಬಾರಿ ಹಿರಿಯ ರಂಗಭೂಮಿ ಮತ್ತು ಚಲನಚಿತ್ರ ನಟ ‘ಮುಖ್ಯಮಂತ್ರಿ’ ಚಂದ್ರು ಅವರನ್ನು ಆಯ್ಕೆ ಮಾಡಲಾಗಿದೆ.

ಪ್ರಶಸ್ತಿ ಗೌರವಧನ, ಫಲಕ, ಸ್ಮರಣಿಕೆ ಒಳಗೊಂಡಿದೆ. ಮಾ.14 ರಂದು ರಂಗಮನೆಯಲ್ಲಿ ನಡೆಯುವ 8 ದಿನಗಳ ಬಹುಭಾಷಾ ನಾಟಕೋತ್ಸವದ ಸಮಾರೋಪದಲ್ಲಿ ಪ್ರದಾನ ಮಾಡಲಾಗುವುದು ಎಂದು ರಂಗಮನೆ ಅಧ್ಯಕ್ಷ ಜೀವನ್ ರಾಂ ಸುಳ್ಯ ತಿಳಿಸಿದರು.

ನಗರದಲ್ಲಿ ಇಂದು

ಅಗ್ನಿಹೋತ್ರ ಮತ್ತು ಸೂರ್ಯ ನಮಸ್ಕಾರ: ರಥಸಪ್ತಮಿ ಪ್ರಯುಕ್ತ 1,008 ಹೋಮ ಕುಂಡಗಳಲ್ಲಿ ಸಾಮೂಹಿಕ ಅಗ್ನಿಹೋತ್ರ, ಸಾಮೂಹಿಕ 108 ಸೂರ್ಯ ನಮಸ್ಕಾರ, ಆಯೋಜನೆ: ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ, ಸ್ಥಳ: ನ್ಯಾಷನಲ್ ಕಾಲೇಜು ಆಟದ ಮೈದಾನ, ಬಸವನಗುಡಿ, ಬೆಳಿಗ್ಗೆ 5.30

ಸವಿತಾ ಮಹರ್ಷಿ ಜಯಂತಿ: ಬಿ.ಎಸ್. ಯಡಿಯೂರಪ್ಪ, ಅರವಿಂದ ಲಿಂಬಾವಳಿ, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಬೆಳಿಗ್ಗೆ 10

ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ: ಬಿ.ಎಸ್. ಯಡಿಯೂರಪ್ಪ, ಅರವಿಂದ ಲಿಂಬಾವಳಿ, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 6

‘ಸ್ಪರ್ಧಾತ್ಮಕ ಪರೀಕ್ಷೆಗಳ ಸಿದ್ಧತೆಗೆ ಸ್ಪರ್ಧಾ ವಾಣಿ’

ಪ್ರಜಾವಾಣಿ ವಾರ್ತೆ

ಆನೇಕಲ್: ‘ವಿದ್ಯಾರ್ಥಿಗಳು ಪತ್ರಿಕೆ ಓದುವ ಹವ್ಯಾಸ ಮೈಗೂಡಿಸಿಕೊಳ್ಳಬೇಕು. ಇತ್ತೀಚಿನ ದಿನಗಳಲ್ಲಿ ಎಲ್ಲಾ ಕ್ಷೇತ್ರಗಳಲ್ಲೂ ಸ್ಪರ್ಧೆ ಹೆಚ್ಚಾಗಿದೆ. ‘ಪ್ರಜಾವಾಣಿ’ ಹೊರತಂದಿರುವ ಸ್ಪರ್ಧಾ ವಾಣಿ ಸಂಚಿಕೆಯು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಜ್ಜುಗೊಳ್ಳಲು ಸಹಕಾರಿಯಾಗಿದೆ’ ಎಂದು ಅತ್ತಿಬೆಲೆ ಸರ್ಕಲ್ ಇನ್‌ಸ್ಪೆಕ್ಟರ್ ಕೆ.ವಿಶ್ವನಾಥ್ ತಿಳಿಸಿದರು.

ಅತ್ತಿಬೆಲೆಯ ಸೆಂಟ್ ಫಿಲೋಮಿನಾ ವಿದ್ಯಾ ಸಂಸ್ಥೆಯಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ಅವರು ‘ಪ್ರಜಾವಾಣಿ’ಯು ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗಾಗಿ ಹೊರ ತರುತ್ತಿರುವ ಸ್ಪರ್ಧಾ ವಾಣಿ ಸಂಚಿಕೆ ಬಿಡುಗಡೆ ಮಾಡಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಪಿ.ನರಸಿಂಹರಾಜು, ಸಂಸ್ಥೆಯ ಸಂಸ್ಥಾಪಕ ಕಾರ್ಯದರ್ಶಿ ಜಿ.ಎನ್.ಸುರೇಶ್ ಇದ್ದರು.



ಪ್ರಜಾವಾಣಿಯು ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗಾಗಿ ಹೊರ ತರುತ್ತಿರುವ ಸ್ಪರ್ಧಾ ವಾಣಿ ಸಂಚಿಕೆಯನ್ನು ಅತ್ತಿಬೆಲೆ ಸರ್ಕಲ್ ಇನ್‌ಸ್ಪೆಕ್ಟರ್ ಕೆ.ವಿಶ್ವನಾಥ್ ಬಿಡುಗಡೆಗೊಳಿಸಿದರು. ಕ್ಷೇತ್ರ ಶಿಕ್ಷಣಾಧಿಕಾರಿ ಪಿ.ನರಸಿಂಹರಾಜು ಚಿತ್ರದಲ್ಲಿದ್ದಾರೆ

ಕಾಶ್ಮೀರದ ಗುಲ್ಮಾರ್ಗ್‌ನಲ್ಲಿ ನಡೆಯಲಿರುವ ರಾಷ್ಟ್ರೀಯ ಚಳಿಗಾಲದ ಕ್ರೀಡಾಕೂಟದಲ್ಲಿ ರಾಜ್ಯವನ್ನು ಪ್ರತಿನಿಧಿಸಲಿದ್ದಾರೆ

ಖೇಲೋ ಇಂಡಿಯಾಗೆ ಆರ್ಯನ್

ಬೆಂಗಳೂರು: ಕುಂದಲಹಳ್ಳಿಯ ರಿಯಾನ್ ಇಂಟರ್‌ನ್ಯಾಷನಲ್ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಜಿಯಾ ಆರ್ಯನ್ ಈ ವರ್ಷ ಕಾಶ್ಮೀರದ ಗುಲ್ಮಾರ್ಗ್‌ನಲ್ಲಿ ನಡೆಯಲಿರುವ ಖೇಲೋ ಇಂಡಿಯಾ ರಾಷ್ಟ್ರೀಯ ಚಳಿಗಾಲದ ಕ್ರೀಡಾಕೂಟದಲ್ಲಿ ರಾಜ್ಯವನ್ನು ಪ್ರತಿನಿಧಿಸಲಿದ್ದಾರೆ.



ಜಿಯಾ ಆರ್ಯನ್

2019ರ ಫೆಬ್ರುವರಿಯಲ್ಲಿ ಜವಾಹರ್ ಇನ್‌ಸ್ಟಿಟ್ಯೂಟ್ ಆಫ್ ಮೌಂಟೈನೀರಿಂಗ್ ಆ್ಯಂಡ್ ಇಂಟರ್ ಸ್ಪೋರ್ಟ್ಸ್ ನಡೆಸಿದ ಪರೀಕ್ಷೆಯಲ್ಲಿ ಅವರು ತೇರ್ಗಡೆಯಾಗಿದ್ದರು. ಅವರು ಸದ್ಯ 7ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ.

‘2024ರಲ್ಲಿ ದಕ್ಷಿಣ ಕೊರಿಯಾದಲ್ಲಿ ನಡೆಯುವ ಒಲಿಂಪಿಕ್ ಕ್ರೀಡಾಕೂಟದಲ್ಲಿ ಪದಕ ಜಯಿಸುವುದೇ ನನ್ನ ಮುಂದಿನ ಗುರಿ’ ಎಂದು ಜಿಯಾ ತಿಳಿಸಿದ್ದಾರೆ.

ಸಚಿವರ ವಿರುದ್ಧ ವಿಚಾರಣೆಗೆ ಅನುಮತಿ ಕೋರಿದ್ದ ಅರ್ಜಿ ವರ್ಗಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಕ್ರಮ ಆಸ್ತಿ ಸಂಪಾದನೆ ಹಾಗೂ ಆಸ್ತಿಯ ಮಾಹಿತಿ ಮುಚ್ಚಿಟ್ಟ ಆರೋಪದಡಿ ಕ್ರೀಡಾ ಮತ್ತು ಯುವ ಸಬಲೀಕರಣ ಸಚಿವ ಕೆ.ಸಿ. ನಾರಾಯಣ ಗೌಡ ವಿರುದ್ಧ ವಿಚಾರಣೆಗೆ ಅನುಮತಿ ಕೋರಿ ಸಾಮಾಜಿಕ ಹೋರಾಟಗಾರ ದಿನೇಶ್ ಕಲ್ಲಹಳ್ಳಿ ಸಲ್ಲಿಸಿದ್ದ ಅರ್ಜಿಯನ್ನು ರಾಜ್ಯಪಾಲ ವಜುಭಾಯಿ ವಾಲಾ ಅವರು ಮುಂದಿನ ಕ್ರಮಕ್ಕಾಗಿ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ವರ್ಗಾಯಿಸಿದ್ದಾರೆ.

ಜನವರಿ 13ರಂದು ಹಲವು ದಾಖಲೆಗಳೊಂದಿಗೆ ರಾಜ್ಯಪಾಲರಿಗೆ ಅರ್ಜಿ ಸಲ್ಲಿಸಿದ್ದ ದಿನೇಶ್, ಕ್ರೀಡಾ ಮತ್ತು ಯುವ ಸಬಲೀಕರಣ ಸಚಿವರ ವಿರುದ್ಧ ವಿಚಾರಣೆ ಆರಂಭಿಸಲು ಅಪರಾಧ ದಂಡ ಪ್ರಕ್ರಿಯಾ ಸಂಹಿತೆಯ ಅಡಿಯಲ್ಲಿ ಅನುಮತಿ ನೀಡುವಂತೆ ಕೋರಿದ್ದರು. ಈ ಅರ್ಜಿಯನ್ನು ಫೆಬ್ರುವರಿ 15ರಂದು ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಅವರಿಗೆ ವರ್ಗಾಯಿಸಿರುವ ರಾಜ್ಯಪಾಲರು, ಮುಂದಿನ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದಾರೆ.

‘2013, 2014 ಮತ್ತು 2015ರಲ್ಲಿ ನಾರಾಯಣ ಗೌಡ ಅವರು ಲೋಕಾಯುಕ್ತ, ಚುನಾವಣಾ ಆಯೋಗ ಮತ್ತು ಆದಾಯ ತೆರಿಗೆ ಇಲಾಖೆಗಳಿಗೆ ಸಲ್ಲಿಸಿದ್ದ ಮಾಹಿತಿಯನ್ನು ಕಲೆಹಾಕಲಾಗಿದೆ. ನಂತರದಲ್ಲಿ ಅವರು ಸಲ್ಲಿಸಿರುವ ಆಸ್ತಿ ಮತ್ತು ಆದಾಯದ ವಿವರಗಳನ್ನೂ ಸಂಗ್ರಹಿಸಿ ತಾಳೆ ಮಾಡಲಾಗಿದೆ. 2013ರಲ್ಲಿ ವಾರ್ಷಿಕ ₹ 5 ಲಕ್ಷ ಆದಾಯ ಘೋಷಿಸಿಕೊಂಡಿದ್ದರು. 2017ರಲ್ಲಿ ವಾರ್ಷಿಕ ಆದಾಯದ ಮೊತ್ತ ₹ 5 ಕೋಟಿಗೆ ಏರಿಕೆಯಾಗಿದೆ. ಕೆಲವು ಆಸ್ತಿಗಳ ವಿವರಗಳನ್ನು ಚುನಾವಣಾ ಆಯೋಗ, ಲೋಕಾಯುಕ್ತರಿಗೆ ಸಲ್ಲಿಸದೇ ಗೋಪ್ಯವಾಗಿ ಇಟ್ಟಿದ್ದಾರೆ’ ಎಂದು ದೂರಿನಲ್ಲಿ ಆರೋಪಿಸಲಾಗಿದೆ.



ಕೂಡಲ ಸಂಗಮದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಹಾಗೂ ಹೋರಾಟ ಸಮಿತಿಯವರು ಮಾದನಾಯಕನಹಳ್ಳಿ ಗ್ರಾಮದಿಂದ ಗುರುವಾರ ಸಂಜೆ ಪಾದಯಾತ್ರೆ ಮುಂದುವರೆಸಿದರು.

‘ರಾಜ್ಯ ಸರ್ಕಾರಕ್ಕೆ ಮೀಸಲಾತಿ ಕೊಡುವ ಪರಮಾಧಿಕಾರ’

ಹೆಸರಘಟ್ಟ: ಪಂಚಮಸಾಲಿ ಸಮುದಾಯವನ್ನು ಪ್ರವರ್ಗ 2 ಎಗೆ ಸೇರಿಸುವಂತೆ ಒತ್ತಾಯಿಸಿ ಕೂಡಲ ಸಂಗಮದ ಬಸವ ಜಯಮೃತ್ಯುಂಜಯ ಸ್ವಾಮೀಜಿ ನೇತೃತ್ವದಲ್ಲಿ ನಡೆಯುತ್ತಿರುವ ಪಾದಯಾತ್ರೆ ಮಾದನಾಯಕನಹಳ್ಳಿ ಗ್ರಾಮದ ಪದ್ಮಾವತಿ ಕಲ್ಯಾಣ ಮಂಟಪದಿಂದ ಗುರುವಾರ ಸಂಜೆ ಬೆಂಗಳೂರು ಕಡೆಗೆ ಸಾಗಿತು.

ಮಾಧ್ಯಮದೊಂದಿಗೆ ಮಾತನಾಡಿದ ಬಸವ ಜಯಮೃತ್ಯುಂಜಯ ಸ್ವಾಮೀಜಿ, ’ಸರ್ಕಾರವು ನಮ್ಮ ಬೇಡಿಕೆಗೆ ಸ್ಪಂದಿಸುವ ನಿರೀಕ್ಷೆ ಇದ್ದು, ನಮ್ಮ ಹೋರಾಟ ಯಶಸ್ಸು ಕಾಣಲಿದೆ‘ ಎಂದರು.

’ರಾಜ್ಯ ಸರ್ಕಾರಕ್ಕೆ ಮೀಸಲಾತಿ ನೀಡುವ ಸಂಪೂರ್ಣ ಪರಮಾಧಿಕಾರ ಇದೆ. ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ತಮ್ಮ ಪರಮಾಧಿಕಾರ ಉಪಯೋಗಿಸಿಕೊಂಡು ಪಂಚಮಸಾಲಿ ಸಮುದಾಯವನ್ನು ಪ್ರವರ್ಗ 2ಎಗೆ ಸೇರಿಸಲಿ’ ಎಂದರು.


ಬಡಗಲಪುರ ನಾಗೇಂದ್ರ ಪುನರಾಯ್ಕೆ

ಮೈಸೂರು: ಬಡಗಲಪುರ ನಾಗೇಂದ್ರ ಅವರು ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷರಾಗಿ ಪುನರಾಯ್ಕೆಯಾಗಿದ್ದಾರೆ.

ಗುರುವಾರ ಇಲ್ಲಿ ನಡೆದ ಸಭೆಯಲ್ಲಿ ರಾಜ್ಯ ಕಾರ್ಯಕಾರಿ ಸಮಿತಿಯನ್ನು ಪುನರ್ ರಚಿಸಲಾಗಿದ್ದು, ಗೌರವ ಅಧ್ಯಕ್ಷರಾಗಿ ಚಾಮರಸ ಮಾಲೀಪಾಟೀಲ ಮರು ಆಯ್ಕೆಯಾಗಿದ್ದಾರೆ. ವರಿಷ್ಠ ಮಂಡಳಿ ಸದಸ್ಯರಾಗಿ ಸುನೀತಾ ಪುಟ್ಟಣ್ಣಯ್ಯ ಆಯ್ಕೆಯಾಗಿದ್ದಾರೆ.

ಟಿ.ನುಲೇನೂರು ಎಂ.ಶಂಕರಪ್ಪ ಮತ್ತು ರವಿಕಿರಣ್ ಪುಣಚ ಅವರನ್ನು ಪ್ರಧಾನ ಕಾರ್ಯದರ್ಶಿಯನ್ನಾಗಿ ಹಾಗೂ ದರ್ಶನ್ ಪುಟ್ಟಣ್ಣಯ್ಯ ಅವರನ್ನು ಸಂಘಟನಾ ಕಾರ್ಯದರ್ಶಿಯನ್ನಾಗಿ ಆಯ್ಕೆ ಮಾಡಲಾಗಿದೆ.

ಧರಂಪಾಲ್ ಜನ್ಮಶತಾಬ್ದಿ: 5 ಪುಸ್ತಕಗಳ ಬಿಡುಗಡೆ ಇಂದು



ಧರಂಪಾಲ್

ಬೆಂಗಳೂರು: ಗಾಂಧಿವಾದಿ ಧರಂಪಾಲ್ ಜನ್ಮಶತಾಬ್ದಿ ವರ್ಷದ ಪ್ರಯುಕ್ತ ರಾಷ್ಟ್ರೋತ್ಥಾನ ಪರಿಷತ್ 5 ಪುಸ್ತಕಗಳ ಬಿಡುಗಡೆ ಕಾರ್ಯಕ್ರಮವನ್ನು ಶುಕ್ರವಾರ (ಫೆ.19) ಸಂಜೆ 6 ಗಂಟೆಗೆ ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ ಹಮ್ಮಿಕೊಂಡಿದೆ.

ಈ ವರ್ಷ ಧರಂಪಾಲ್ ಅವರ ಸಾಹಿತ್ಯವನ್ನು ಜನರಿಗೆ ತಲುಪಿಸುವ ಯೋಜನೆ ಹಮ್ಮಿಕೊಳ್ಳಲಾಗಿದೆ. 'ಧರಂಪಾಲ್ ಕ್ಲಾಸಿಕ್ ಸಿರೀಸ್' ಮೂಲಕ ಅವರ ಸಾಹಿತ್ಯವನ್ನು ಪಸರಿಸಲಾಗುತ್ತಿದೆ. ಈ ಸರಣಿಯ ಹತ್ತು ಪುಸ್ತಕಗಳಲ್ಲಿ 'ಪಂಚಾಯತ್ ರಾಜ್ ಆ್ಯಸ್ ದಿ ಬೇಸಿಸ್ ಆಫ್ ಇಂಡಿಯನ್ ಪಾಲಿಟಿ', 'ಇಂಡಿಯನ್ ಸೈನ್ಸ್ ಆ್ಯಂಡ್ ಟೆಕ್ನಾಲಜಿ ಇನ್ ದಿ ಎಯಿಟಿಂತ್ ಸೆಂಚುರಿ', 'ಸಿವಿಲ್ ಡಿಸ್‌ಒಬಿಡಿಯನ್ಸ್ ಆ್ಯಂಡ್ ಇಂಡಿಯನ್ ಟ್ರೆಡಿಷನ್ಸ್', 'ದಿ ಬ್ಯುಟಿಫುಲ್ ಟ್ರೀ' ಹಾಗೂ 'ಭಾರತೀಯ ಚಿತ್ತ ಮಾನಸ್ ಆ್ಯಂಡ್ ಕಲಾ' ಕೃತಿ ಬಿಡುಗಡೆಯಾಗಲಿದೆ ಎಂದು ಪರಿಷತ್ ತಿಳಿಸಿದೆ.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹ ಸುರೇಶ್ ಸೋನಿ ಅವರು ಪುಸ್ತಕಗಳನ್ನು ಬಿಡುಗಡೆ ಮಾಡಲಿದ್ದಾರೆ. ಕೇಂದ್ರ ಸರ್ಕಾರದ ಪ್ರಧಾನ ವೈಜ್ಞಾನಿಕ ಸಲಹೆಗಾರ ಡಾ.ಕೆ. ವಿಜಯರಾಘವನ್, ಜಲಗಾಂವ್‌ನ ಗಾಂಧಿ ಸಂಶೋಧನಾ ಪ್ರತಿಷ್ಠಾನದ ಡಾ. ಗೀತಾ ಧರಂಪಾಲ್ ಹಾಗೂ ಧರಂಪಾಲ್ ಕ್ಲಾಸಿಕ್ ಸೀರಿಸ್‌ನ ಸಂಪಾದಕ ಡಾ.ಜೆ.ಕೆ. ಬಜಾಜ್ ಹಾಗೂ ಡಾ.ಎಂ.ಡಿ. ಶ್ರೀನಿವಾಸ್ ಉಪಸ್ಥಿತರಿರಲಿದ್ದಾರೆ. ಕಾರ್ಯಕ್ರಮದಲ್ಲಿ ಪುಸ್ತಕಗಳು ರಿಯಾಯಿತಿ ದರದಲ್ಲಿ ದೊರೆಯಲಿವೆ ಎಂದು ಪ್ರಕಟಣೆ ತಿಳಿಸಿದೆ.

ಪ್ರತಿ ಎಕರೆಗೆ 10,781 ಅಡಿ ಅಭಿವೃದ್ಧಿಪಡಿಸಿದ ನಿವೇಶನ • ಸಾಲ ವಸೂಲಿಗೆ ಕಿರುಕುಳಕೊಟ್ಟರೆ ಶಿಕ್ಷೆ ದುಪ್ಪಟ್ಟು

ಕೈಗಾರಿಕೆಗೆ ಭೂಮಿ ಕೊಟ್ಟ ರೈತರಿಗೆ ಪರಿಹಾರ ಹೆಚ್ಚಳ

ಪ್ರಜಾವಾಣಿ ವಾರ್ತೆ


ಬೆಂಗಳೂರು: ಕೈಗಾರಿಕಾ ಉದ್ದೇಶಕ್ಕಾಗಿ ಜಮೀನು ನೀಡುವ ರೈತರಿಗೆ ಪರಿಹಾರವಾಗಿ ಪ್ರತಿ ಎಕರೆಗೆ 10,781 ಚದರಡಿ ಅಭಿವೃದ್ಧಿಪಡಿಸಿದ ನಿವೇಶನ ನೀಡಲು ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಸಚಿವ ಸಂಪುಟ ಸಭೆಯ ಬಳಿಕ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಬಸವರಾಜ ಬೊಮ್ಮಾಯಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

ಈವರೆಗೆ ಪ್ರತಿ ಎಕರೆಗೆ 9,583 ಚದರ ಅಡಿಯಷ್ಟು ಅಭಿವೃದ್ಧಿ ಪಡಿಸಿದ ನಿವೇಶನವನ್ನು ಪರಿಹಾರವಾಗಿ ನೀಡಲಾಗುತ್ತಿತ್ತು. ನಿವೇಶನ ನೀಡಿಕೆ ಪ್ರಮಾಣವನ್ನು ಶೇ 40 ರಿಂದ 45 ಕ್ಕೆ ಏರಿಸಲಾಗಿದೆ. ಭೂಮಿ ಕೊಟ್ಟವರು ನಿವೇಶನ ಅಥವಾ ಹಣ ಎರಡರಲ್ಲಿ ಒಂದನ್ನು ಪಡೆಯಬಹುದಾಗಿದೆ ಎಂದು ಅವರು ಹೇಳಿದರು.

ಶಿಕ್ಷೆ ಹೆಚ್ಚಳ: ಕರ್ನಾಟಕ ಲೇವಾದೇವಿ ತಿದ್ದುಪಡಿ ಮಸೂದೆಗೆ ಒಪ್ಪಿಗೆ ನೀಡಿದ್ದು, ಇದರ ಅನ್ವಯ ದೈಹಿಕವಾಗಿ ಕಿರುಕುಳ ಕೊಟ್ಟು ಅಸಲು ಮತ್ತು ಬಡ್ಡಿ ವಸೂಲಿ ಮಾಡುವವರಿಗೆ ಶಿಕ್ಷೆಯ ಪ್ರಮಾಣವನ್ನು ಹೆಚ್ಚಿಸಲಾಗಿದೆ. ಈ ಹಿಂದೆ 6 ತಿಂಗಳು ಇದ್ದ ಜೈಲು ಶಿಕ್ಷೆಯನ್ನು ಒಂದು ವರ್ಷಕ್ಕೂ, 2ನೇ ಬಾರಿ ಅದೇ ಅಪರಾಧ ಮಾಡಿದರೆ 2 ವರ್ಷಗಳಿಗೆ ಹೆಚ್ಚಿಸಲಾಗಿದೆ. ದಂಡದ ಪ್ರಮಾಣವನ್ನು ₹5 ಸಾವಿರದಿಂದ ₹50 ಸಾವಿರಕ್ಕೆ ಹೆಚ್ಚಿಸಲಾಗಿದೆ ಎಂದು ಬೊಮ್ಮಾಯಿ ತಿಳಿಸಿದರು.

ಕೋವಿಡ್ ಬಿಲ್ ₹700 ಕೋಟಿ



ರಾಜ್ಯದ ವಿವಿಧ ಖಾಸಗಿ ಆಸ್ಪತ್ರೆಗಳಲ್ಲಿ ಸರ್ಕಾರದ ಪರವಾಗಿ 1,35,754 ಕೋವಿಡ್ ರೋಗಿಗಳಿಗೆ ಚಿಕಿತ್ಸೆ ನೀಡಿದ್ದು, ಇದರ ವೆಚ್ಚ ಸುಮಾರು ₹700 ಕೋಟಿ ಆಗಿದೆ. ಈ ಹಣವನ್ನು ಆಸ್ಪತ್ರೆಗಳಿಗೆ ಪಾವತಿ ಮಾಡಲು ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ. ಜನವರಿವರೆಗೆ ಆಗಿರುವ ಬಿಲ್ ಮೊತ್ತ ₹620 ಕೋಟಿ. ಮಾರ್ಚ್ ಕೊನೆಯವರೆಗೂ ಚಿಕಿತ್ಸಾ ವೆಚ್ಚ ಭರಿಸಲು ₹80 ಕೋಟಿ ಬೇಕಾಗುತ್ತದೆ ಎಂದು ಅಂದಾಜು ಮಾಡಲಾಗಿದೆ. ಹಣ ಬಿಡುಗಡೆಗೆ ಒಪ್ಪಿಗೆ ನೀಡಲಾಗಿದೆ ಎಂದು ಬಸವರಾಜ ಬೊಮ್ಮಾಯಿ ತಿಳಿಸಿದರು.

ಪ್ರಮುಖ ನಿರ್ಣಯಗಳು

- ಚಾಮರಾಜ ನಗರದಲ್ಲಿ ಹೊಸ ಕೃಷಿ ಕಾಲೇಜು ಆರಂಭಿಸಲು ಒಪ್ಪಿಗೆ.
- ₹199 ಕೋಟಿ ವೆಚ್ಚದಲ್ಲಿ ತಾಯಿ ಮತ್ತು ಮಕ್ಕಳ 8 ಆಸ್ಪತ್ರೆಗಳು, 2 ಸಾರ್ವಜನಿಕ ಆಸ್ಪತ್ರೆಗಳು ಹಾಗೂ ವಿಜಯಪುರ ಜಿಲ್ಲಾ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಲು ಅನುಮತಿ
- ರಾಜ್ಯದ ತಾಯಿ ಮತ್ತು ಮಕ್ಕಳ 22 ಆಸ್ಪತ್ರೆಗಳಿಗೆ ರಾಜ್ಯ ನಿಧಿ ಮತ್ತು ಎನ್‌ಎಚ್‌ಎಂನಿಂದ ₹14.64 ಕೋಟಿ ವೆಚ್ಚದಲ್ಲಿ ವೈದ್ಯಕೀಯ ಉಪಕರಣಗಳ ಖರೀದಿಗೆ ಆಡಳಿತಾತ್ಮಕ ಅನುಮೋದನೆ
- 2010–11ರಲ್ಲಿ ಅನುಮೋದನೆ ಪಡೆದಿದ್ದ 225 ವಸತಿ ಯೋಜನೆಗಳ ಪೈಕಿ 4 ವಸತಿ ಯೋಜನೆಗಳು(₹561 ಕೋಟಿ) ಮತ್ತು 2011–12 ರಲ್ಲಿ ಅನುಮೋದನೆ ಪಡೆದಿದ್ದ 53 ವಸತಿ ಯೋಜನೆಗಳಲ್ಲಿ 4 ಯೋಜನೆಗಳ (₹797 ಕೋಟಿ) ಯೋಜನಾ ವೆಚ್ಚ ಪರಿಷ್ಕರಿಸಲು ಒಪ್ಪಿಗೆ.
- ಆದಿ ಚುಂಚನಗಿರಿ ಸಮೀಪದ ಅಯ್ಯನಕೆರೆ(ಜೋಡಿ ಕೆರೆ) ₹19.03 ಕೋಟಿ ವೆಚ್ಚದಲ್ಲಿ ನವೀಕರಣಕ್ಕೆ ಅನುಮತಿ
- ಬೆಂಗಳೂರಿನ ವಸಂತನಗರದಲ್ಲಿ ಲೋಕೋಪಯೋಗಿ ಇಲಾಖೆ ವಸತಿ ಗೃಹವನ್ನು ನೆಲಸಮ ಮಾಡಿ, ಆ ಜಾಗದಲ್ಲಿ ₹117 ಕೋಟಿ ವೆಚ್ಚದಲ್ಲಿ ಬಹು ಮಹಡಿ ವಸತಿ ಗೃಹ ನಿರ್ಮಾಣ ಯೋಜನೆಗೆ ಆಡಳಿತಾತ್ಮಕ ಅನುಮೋದನೆ
- ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮವು ₹350 ಕೋಟಿ ಅವಧಿ ಸಾಲ ಪಡೆಯಲು ಸರ್ಕಾರದಿಂದ ಖಾತರಿ ನೀಡಲು ಅನುಮತಿ
- ಪ್ರಧಾನಮಂತ್ರಿ ಗ್ರಾಮೀಣ ಸಡಕ್ ಯೋಜನೆಯಡಿ ಎರಡನೇ ಹಂತದಲ್ಲಿ ₹1,848.95 ಕೋಟಿ ವೆಚ್ಚದಲ್ಲಿ 2204.39 ಕಿ.ಮೀ ಗ್ರಾಮೀಣ ರಸ್ತೆ ಮತ್ತು 75 ಕಿರು ಸೇತುವೆಗಳ ನಿರ್ಮಾಣಕ್ಕೆ ಆಡಳಿತಾತ್ಮಕ ಅನುಮೋದನೆ.
- ಸಂಡೂರು ತಾಲ್ಲೂಕು ಕೊಡಲು ಮತ್ತು ಇತರ 28 ಜನವಸತಿ ಪ್ರದೇಶದಲ್ಲಿ ಕುಡಿಯುವ ನೀರು ಪೂರೈಕೆಗೆ ₹75 ಕೋಟಿ ಪರಿಷ್ಕೃತ ಅಂದಾಜು ವೆಚ್ಚಕ್ಕೆ ಆಡಳಿತಾತ್ಮಕ ಅನುಮೋದನೆ
- ಬೆಳಗಾವಿ ಜಿಲ್ಲೆ ಹುಕ್ಕೇರಿ ತಾಲ್ಲೂಕಿನ ವಿವಿಧ ಗ್ರಾಮಗಳ ಕೃಷಿ ಪ್ರದೇಶಗಳಿಗೆ ನೀರುಣಿಸುವ ಶಂಕರಲಿಂಗ ಏತ ನೀರಾವರಿ ಯೋಜನೆಗೆ ಸಮಗ್ರ ಯೋಜನಾ ವರದಿ ತಯಾರಿಸಲು ₹67.40 ಕೋಟಿ ನೀಡಲು ಆಡಳಿತಾತ್ಮಕ ಅನುಮೋದನೆ
- ಬೆಂಗಳೂರಿನ ಕೆ.ಆರ್. ಮಾರ್ಕೆಟ್‌ನಿಂದ ಕೋರಮಂಗಲ ಮೂಲಕ ಬೆಳ್ಳಂದೂರು ಕೆರೆವರೆಗಿನ ರಾಜಕಾಲುವೆ ಅಭಿವೃದ್ಧಿಪಡಿಸಲು ₹169 ಕೋಟಿ ವೆಚ್ಚದಲ್ಲಿ ಕಾಮಗಾರಿಗೆ ನಿರ್ಣಯ

ರೋಹಿಣಿಗೆ ಹೈಕೋರ್ಟ್ ತರಾಟೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವ್ಯಕ್ತಿಯೊಬ್ಬರಿಗೆ ಜಮೀನಿನ ಖಾತೆ ಮಾಡಿಕೊಡುವ ವಿಷಯದಲ್ಲಿ ಹೈಕೋರ್ಟ್ ಏಕ ಸದಸ್ಯ ಪೀಠದ ಆದೇಶ ಪಾಲನೆ ಮಾಡದ ಕಾರಣ ಮೈಸೂರು ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ಅವರನ್ನು ಹೈಕೋರ್ಟ್ ತರಾಟೆಗೆ ತೆಗೆದುಕೊಂಡಿದೆ.

ಮೈಸೂರಿನ ಎಚ್.ಬಿ. ಅಶೋಕ್ ಹಾಗೂ ಇತರ ಐವರು ದಾಖಲಿಸಿದ್ದ ನ್ಯಾಯಾಂಗ ನಿಂದನೆ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ವಿಚಾರಣೆ ನಡೆಸಿತು.

ವಿಡಿಯೊ ಕಾನ್ಫರೆನ್ಸ್ ಮೂಲಕ ಹಾಜರಾಗಿದ್ದ ರೋಹಿಣಿ ಸಿಂಧೂರಿ, 'ಜಮೀನು ಖಾತೆ ಮಾಡಿಕೊಡಲು ಹಲವು ಸಮಸ್ಯೆಗಳಿವೆ. ನಕಲಿ ದಾಖಲೆ ಸೃಷ್ಟಿಸಲಾಗಿದೆ. ಈ ವಿವಾದಿತ ಭೂಮಿಗೆ ಹಲವರು ಹಕ್ಕು ಮಂಡಿಸುತ್ತಿದ್ದಾರೆ. ಹೀಗಾಗಿ, ನ್ಯಾಯಾಲಯದ ಆದೇಶ ಪಾಲಿಸಲು 3 ತಿಂಗಳ ಕಾಲಾವಕಾಶ ನೀಡಬೇಕು' ಎಂದು ಮನವಿ ಮಾಡಿದರು.

'ಈ ವಿಷಯದಲ್ಲಿ ವಿಚಾರಣೆ ನಡೆಸುವ ಸಂದರ್ಭದಲ್ಲಿ ಈ ವಿಷಯ ಹೇಳುವ ಬದಲು ಇದೀಗ ಈ ರೀತಿ ಹೇಳುತ್ತಿರುವುದೇಕೆ. ಇಂತಹ ಅಧಿಕಾರ ನಿಮಗೆ ಎಲ್ಲಿದೆ, ನ್ಯಾಯಾಲಯದ ಆದೇಶ ಪಾಲಿಸಲು ನಿಮಗೆ ಇಚ್ಛೆ ಇದ್ದಂತೆ ಇಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿತು.

'ತಾವು ನಡೆದಿದ್ದೇ ದಾರಿ ಎಂದು ಅವರು ಭಾವಿಸಿಕೊಂಡಂತೆ ಕಾಣಿಸುತ್ತಿದೆ. ನ್ಯಾಯಾಲಯದ ಪ್ರಕ್ರಿಯೆಯಲ್ಲಿ ಹೇಗೆ ನಡೆದುಕೊಳ್ಳಬೇಕು ಎಂಬುದನ್ನು ಅಧಿಕಾರಿಗಳಿಗೆ ಹೇಳಿಕೊಡಿ' ಎಂದು ಸರ್ಕಾರಿ ವಕೀಲರಿಗೆ ಪೀಠ ತಿಳಿಸಿತು.

ರೋಹಿಣಿ ಸಿಂಧೂರಿ ಮತ್ತು ತಹಶೀಲ್ದಾರ್ ಕೆ.ಆರ್.ರಕ್ಷಿತ್ ನ್ಯಾಯಾಲಯದ ಆದೇಶ ಉಲ್ಲಂಘಿಸಿದ್ದಾರೆ. ಈ ಇಬ್ಬರೂ ಅಧಿಕಾರಿಗಳು ಮಾರ್ಚ್ 8ರ ವಿಚಾರಣೆ ವೇಳೆ ಖುದ್ದು ಹಾಜರಿರಬೇಕು ಎಂದು ಪೀಠ ಆದೇಶಿಸಿತು.

ಮೈಸೂರಿನ ಚಾಮುಂಡಿ ಬೆಟ್ಟದ ಪಕ್ಕದಲ್ಲಿರುವ ಕುರುಬರಹಳ್ಳಿಯಲ್ಲಿ ಅಶೋಕ್ ಹಾಗೂ ಇತರರು ಬಿ ಖರಾಬ್ ಜಮೀನು ಖಾತೆಗೆ ಅರ್ಜಿ ಸಲ್ಲಿಸಿದ್ದರು. ಅದನ್ನು ಜಿಲ್ಲಾಧಿಕಾರಿ ತಿರಸ್ಕರಿಸಿದ್ದರಿಂದ ಅರ್ಜಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದರು. ಅರ್ಜಿ ವಿಚಾರಣೆ ನಡೆಸಿದ್ದ ನ್ಯಾ. ಸುನಿಲ್ ದತ್ ಯಾದವ್ ಅವರಿದ್ದ ಪೀಠ, ಖಾತೆ ಮಾಡಿಕೊಡುವಂತೆ 2020ರ ಜೂನ್ 19ರಂದು ಆದೇಶಿಸಿತ್ತು.

'ಕಮ್ಮವಾರಿ ಸಂಘದ ಬೆಳವಣಿಗೆಗೆ ಸಹಕಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಮ್ಮವಾರಿ ಸಂಘವು ಶಿಕ್ಷಣ ಕ್ಷೇತ್ರಕ್ಕೆ ತನ್ನದೇ ಆದ ಕೊಡುಗೆ ನೀಡಿದೆ. ಈ ಸಂಘ ಮತ್ತಷ್ಟು ಎತ್ತರಕ್ಕೆ ಏರಬೇಕು. ಇದಕ್ಕಾಗಿ ಅಗತ್ಯ ಸಲಹೆ, ಸಹಕಾರ ನೀಡಲು ಸಿದ್ಧನಿದ್ದೇನೆ. ಸರ್ಕಾರದಿಂದಲೂ ನೆರವು ಒದಗಿಸಲು ಪ್ರಯತ್ನಿಸುತ್ತೇನೆ' ಎಂದು ಬಿಜೆಪಿ ಮುಖಂಡ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಗುರುವಾರ ತಿಳಿಸಿದರು.

ಹನುಮಂತನಗರದಲ್ಲಿರುವ ಕಮ್ಮವಾರಿ ಸಂಘ ಹಾಗೂ ಕೆ.ಎಸ್. ಸಮೂಹ ಸಂಸ್ಥೆಯ ಸಹಯೋಗದಲ್ಲಿ ನಿರ್ಮಾಣಗೊಂಡಿರುವ ಆರ್ಕಿಟೆಕ್ಚರ್ ಬ್ಲಾಕ್ ಮತ್ತು ಬಾಲಕರ ವಿದ್ಯಾರ್ಥಿ ನಿಲಯವನ್ನು ಉದ್ಘಾಟಿಸಿ ಅವರು ಮಾತನಾಡಿದರು.



ಬಾಲಕರ ವಿದ್ಯಾರ್ಥಿ ನಿಲಯವನ್ನು ಬಿಜೆಪಿ ಮುಖಂಡ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಉದ್ಘಾಟಿಸಿದರು

ಕಮ್ಮವಾರಿ ಸಂಘದ ಮಾಜಿ ಅಧ್ಯಕ್ಷರಾದ ಕೆ.ಕೃಷ್ಣ, ವೈ.ರಾಮಕೃಷ್ಣ, ಕೆಎಸ್‌ಎಸ್‌ಐಡಿಸಿಯ ಮಾಜಿ ಅಧ್ಯಕ್ಷ ಬಿ.ಗುರಪ್ಪ ನಾಯ್ಡು, ಹಾಲಿ ಅಧ್ಯಕ್ಷ ವೈ.ರಾಮಚಂದ್ರ ನಾಯ್ಡು ಹಾಗೂ ಇತರರು ಉಪಸ್ಥಿತರಿದ್ದರು.

'10 ಸಾವಿರ ಶಿಕ್ಷಕರ ನೇಮಕ ಪ್ರಸ್ತಾವ'

ಬೆಂಗಳೂರು: ಕಲ್ಯಾಣ ಕರ್ನಾಟಕ ಪ್ರದೇಶದ ಜಿಲ್ಲೆಗಳಲ್ಲಿ ವಿಶೇಷ ಶೈಕ್ಷಣಿಕ ವಲಯ ಸ್ಥಾಪಿಸಿ ಅಭಿವೃದ್ಧಿಗೊಳಿಸಲು ಮತ್ತು ಆ ಭಾಗದ ಶಾಲೆಗಳಿಗೆ 10 ಸಾವಿರ ಶಿಕ್ಷಕರ ನೇಮಕಕ್ಕೆ ಬಜೆಟ್‌ನಲ್ಲಿ ಅವಕಾಶ ಕಲ್ಪಿಸುವಂತೆ ಮುಖ್ಯಮಂತ್ರಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ತಿಳಿಸಿದರು.

ಮುಖ್ಯಮಂತ್ರಿ ಯಡಿಯೂರಪ್ಪ ಸಮ್ಮುಖದಲ್ಲಿ ಗುರುವಾರ ನಡೆದ ಬಜೆಟ್ ಪೂರ್ವಭಾವಿ ಸಭೆಯ ಬಳಿಕ ಮಾತನಾಡಿದ ಅವರು, 'ರಾಷ್ಟ್ರೀಯ ಶಿಕ್ಷಣ ನೀತಿಯ ಅಳವಡಿಕೆ ಉದ್ದೇಶದಿಂದ ನೀತಿ ನಿರೂಪಣೆಗೆ ಶಿಕ್ಷಣ ಆಯೋಗ ಸ್ಥಾಪನೆ, 50 ವರ್ಷ ಹಳೆಯ 14,613 ಸರ್ಕಾರಿ ಕಿರಿಯ ಪ್ರಾಥಮಿಕ ಶಾಲಾ ಕಟ್ಟಡಗಳ ಹಾಗೂ 634 ಸರ್ಕಾರಿ ಪ್ರೌಢ ಶಾಲೆಗಳ ಕಟ್ಟಡ ನಿರ್ವಹಣೆಗೆ ಅನುದಾನ ನೀಡುವಂತೆಯೂ ಮನವಿ ಮಾಡಲಾಗಿದೆ' ಎಂದರು.

'100ಕ್ಕಿಂತ ಹೆಚ್ಚು ಜನ ಸೇರಿದರೆ ಸಿ.ಸಿ.ಟಿ.ವಿ ಕ್ಯಾಮೆರಾ ಕಡ್ಡಾಯ'

ಬೆಂಗಳೂರು: '100 ಅಥವಾ ಅದಕ್ಕಿಂತ ಹೆಚ್ಚು ಸಾರ್ವಜನಿಕರು ಸೇರುವ ಜಾಗಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಅಳವಡಿಸುವುದು ಕಡ್ಡಾಯ. ಅದನ್ನು ಉಲ್ಲಂಘಿಸಿದರೆ ತಪ್ಪಿತಸ್ಥರ ವಿರುದ್ಧ ಶಿಸ್ತುಕ್ರಮ ಜರುಗಿಸಲಾಗುವುದು' ಎಂದು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಹೇಳಿದ್ದಾರೆ.


ಈ ಬಗ್ಗೆ ಟ್ವೀಟ್ ಮಾಡಿರುವ ಅವರು, 'ಕರ್ನಾಟಕ ಸಾರ್ವಜನಿಕರ ಸುರಕ್ಷತಾ ಕಾಯ್ದೆ 2017ರಡಿ ಕ್ಯಾಮೆರಾ ಅಳವಡಿಸಬೇಕು. ಈ ಬಗ್ಗೆ ಆಯಾ ಠಾಣೆ ಇನ್‌ಸ್ಪೆಕ್ಟರ್‌ಗಳು, ಪ್ರತಿಯೊಂದು ಪ್ರದೇಶದಲ್ಲೂ ಪರಿಶೀಲನೆ ನಡೆಸಬೇಕು' ಎಂದಿದ್ದಾರೆ.

ಪಾಕಿಸ್ತಾನ ಪರ ಜೈಕಾರ: ಥಳಿತ

ಕೆ.ಆರ್.ಪೇಟೆ (ಮಂಡ್ಯ): ಪಟ್ಟಣದ ಶ್ರೀರಂಗ ಚಿತ್ರಮಂದಿರದ ಪಾಳು ಭೂಮಿಯಲ್ಲಿ ಬೀಡು ಬಿಟ್ಟಿದ್ದ ಸರ್ಕಸ್ ತಂಡದ ವ್ಯಕ್ತಿಯೊಬ್ಬ ಗುರುವಾರ 'ಪಾಕಿಸ್ತಾನ ಜಿಂದಾಬಾದ್' ಎಂದು ಕೂಗಿದ್ದು, ಸಾರ್ವಜನಿಕರು ಆತನನ್ನು ಹಿಡಿದು ಥಳಿಸಿದ್ದಾರೆ.

ಮಹಾರಾಷ್ಟ್ರ ಮೂಲದ ಅಸ್ಲಂ ಸಮೂಲಿ ಥಳಿತಕ್ಕೆ ಒಳಗಾದ ವ್ಯಕ್ತಿ. ತಕ್ಷಣ ಆತನನ್ನು ಹಿಡಿದು ಪೊಲೀಸರಿಗೆ ಒಪ್ಪಿಸಿದರು. ಪೊಲೀಸರು ಅವನಿಗೆ ಎಚ್ಚರಿಕೆ ಕೊಟ್ಟು ಕಳುಹಿಸಿದರು. ಭಾಷೆಯ ಗೊಂದಲದಿಂದ ಸಮಸ್ಯೆಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಂಬಳವಾಗಿಲ್ಲ ಎಂದಿದ್ದಕ್ಕೆ ಸಚಿವರ ಸಿಡಿಮಿಡಿ!



ಅರವಿಂದ ಲಿಂಬಾವಳಿ

ಮೈಸೂರು: ಇಲ್ಲಿನ ಕಲಾಮಂದಿರದ ನೌಕರರಿಗೆ 5 ತಿಂಗಳಿಂದ ಸಂಬಳವಾಗಿಲ್ಲ ಎಂದು ರಂಗಾಯಣದ ನಿರ್ದೇಶಕ ಅಡ್ಡಂಡ ಸಿ ಕಾರ್ಯಪ್ಪ ಹೇಳುತ್ತಿದ್ದಂತೆಯೇ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಅರವಿಂದ ಲಿಂಬಾವಳಿ ಸಿಡಿಮಿಡಿಗೊಂಡರು.

ಸಚಿವರು ಗುರುವಾರ ರಂಗಾಯಣಕ್ಕೆ ಭೇಟಿ ನೀಡಿ, ಕಲಾವಿದರ ಸಮಸ್ಯೆಗಳನ್ನು ಆಲಿಸುವ ಸಂದರ್ಭದಲ್ಲಿ, ನಿರ್ದೇಶಕರು ಈ ವಿಚಾರವನ್ನು ಅವರ ಗಮನಕ್ಕೆ ತಂದರು.

'ಕಲಾಮಂದಿರದ ನೌಕರರು 5 ತಿಂಗಳುಗಳಿಂದ ಸಂಬಳ ಇಲ್ಲದೇ ಪರದಾಡುತ್ತಿದ್ದಾರೆ. ನೆನ್ನೆ ನನ್ನ ಕಚೇರಿಗೆ ಬಂದು ಮನವಿ ಮಾಡಿದರು' ಎಂದು ಹೇಳುತ್ತಿರುವಾಗ ಅವರ ಮಾತನ್ನು ತಡೆದ ಸಚಿವರು, 'ಯಾವುದನ್ನು ಎಲ್ಲಿ ಹೇಳಬೇಕೋ ಅಲ್ಲಿ ಹೇಳಿ. ಈ ವಿಷಯವನ್ನು ನನ್ನ ಕಚೇರಿಗೆ ಬಂದು ಮಾತನಾಡಿ. ರಂಗಾಯಣದ ನಿರ್ದೇಶಕರಾಗಿದ್ದೀರಿ; ಅಷ್ಟೂ ಗೊತ್ತಾಗುವುದಿಲ್ಲವೇ?' ಎಂದು ರೇಗಿದರು.

ಸಿನಿಮಾ ಪುರವಣಿ

ಜನ ಎಚ್ಚರವಾಗಿದ್ದಾರೆ

ಮಾಸ್ಕ್ ಹಾಕ್ಕೊಳ್ಳಿ, ಸ್ಯಾನಿಟೈಸರ್ ಹಾಕ್ಕೊಳ್ಳಿ, ಸಾಮಾಜಿಕ ಅಂತರ ಕಾಪಾಡಿಕೊಳ್ಳಿ ಅಂತೆಲ್ಲ ನಾನು ಈಗಾಗಲೇ ಸಾಕಷ್ಟು ವಿಡಿಯೊಗಳನ್ನು ಮಾಡಿ ಹಾಕಿದ್ದೇನೆ. ಇನ್ನು ನಾನು ಏನು ಹೇಳಿದರೂ ಹೇಳಿದ್ದೇ ಹೇಳಬೇಕು. ಜನರಿಗೂ ಕೇಳಿದ್ದೇ ಕೇಳ್ಬೇಕಲ್ಲಾ ಅಂತೊಂದು ಬೇಜಾರು ಬಂದ್ಬಿಟ್ಟಿದೆ. ನಾವು ಹೇಳ್ತೀವಿ ಅನ್ನೋದಕ್ಕಿಂತ ಜನರಿಗೆ ಜವಾಬ್ದಾರಿ ಬಂದಿದೆ. ಅವರು ಎಚ್ಚರಿಕೆ ತಗೊಂಡೇ ತಗೋತಾರೆ.


ಧ್ರುವ ಸರ್ಜಾ

‘ಸಿನಿಮಾ ನಂಗೆ ಗ್ರ್ಯಾಂಟೆಡ್ ಅಲ್ಲ’

ಪದ್ಮನಾಭ ಭಟ್

‘ಒಂದು ಹಾಡು ನೋಡಿ ಸಿನಿಮಾ ಜಡ್ಜ್ ಮಾಡುವ ಹಾಗಿದ್ದರೆ ಯಾರೂ ಸಿನಿಮಾನೇ ನೋಡ್ತಿರ್ಲಿಲ್ಲ. ಟೀಕಿಸುವ ಜನರು ಮೊದಲು ಸಿನಿಮಾ ನೋಡಲಿ. ಆಮೇಲೆ ಮಾತಾಡಲಿ’ –ತುಸು ಅಸಮಾಧಾನದಿಂದಲೇ ಹೇಳುವಾಗಲೂ ಧ್ರುವ ಅವರ ಧ್ವನಿ ಮಂದ್ರದಿಂದ ತುಸುವೂ ಮೇಲಕ್ಕೇರಲಿಲ್ಲ. ಇಷ್ಟು ಹೇಳಿ ತಮ್ಮನ್ನು ತಾನೇ ಸಮಾಧಾನಿಸಿಕೊಳ್ಳುವವರ ಹಾಗೆ ಸಣ್ಣಗೆ ನಕ್ಕರು. ನಂತರ, ‘ಈ ರೀತಿಯ ಹಾಡುಗಳನ್ನು ಮೊದಲು ಮಾಡಿದ್ದು ನಾನೇ ಏನಲ್ಲವಲ್ಲ? ಹಿಂದೆಯೂ ಸಾಕಷ್ಟು ಜನ ಮಾಡಿದ್ದಾರೆ. ಮತ್ತೆ, ನಾನೇನ್ ಬೇಕಂತ ಹೋಗಿ ಹುಡುಗಿ ಜುಟ್ಟು ಹಿಡಿದು ಎಳೆದಾಡಲ್ಲ. ಸಿನಿಮಾ ನಿರ್ದೇಶಕರು ಏನು ಹೇಳ್ತಾರೋ ಅದನ್ನು ಮಾಡ್ತೀನಷ್ಟೆ’ ಎಂದು ಜವಾಬ್ದಾರಿಯನ್ನು ತಮ್ಮ ಕಟ್ಟುಮಸ್ತಾದ ಭುಜದಿಂದ ಮೆಲ್ಲಗೆ ಜಾರಿಸಿ ನಿರ್ದೇಶಕರ ಟೋಪಿಗೆ ಇಳಿಸಿದರು.

ಅವರ ಈ ಸಮರ್ಥನೆಗೆ ಕಾರಣವಾದ ಪ್ರಶ್ನೆ ‘ಪೊಗರು’ ಸಿನಿಮಾದ ‘ಖರಾಬು...’ ಹಾಡಿನ ನೆಪದಲ್ಲಿ ಹುಟ್ಟಿಕೊಂಡಿದ್ದಾಗಿತ್ತು. ಧ್ರುವ ಸರ್ಜಾ ಅವರ ಬಹುತೇಕ ಎಲ್ಲ ಸಿನಿಮಾಗಳಲ್ಲಿ ನಾಯಕಿಯನ್ನು ಚುಡಾಯಿಸಲು ಒಂದು ಹಾಡು ಮೀಸಲಾಗಿದ್ದರೆ, ಇನ್ನೊಂದು ಎಣ್ಣೆ (ಮದ್ಯಪಾನ) ಹಾಡು ಇರುತ್ತದೆ. ಇವು ಸಮಾಜದಲ್ಲಿ ಯಾವ ಮನಃಸ್ಥಿತಿಯನ್ನು ಕಟ್ಟುತ್ತವೆ ಎಂದು ಕೇಳಿದಾಗ ಅವರು ಮೇಲಿನ ಸಮರ್ಥನೆ ಕೊಟ್ಟುಕೊಂಡರು.

ಅಂದಹಾಗೆ, ಧ್ರುವ ಮೂರು ವರ್ಷಗಳ ನಂತರ ಬೆಳ್ಳಿತೆರೆಯ ಮೇಲೆ ತಮ್ಮ ‘ಪೊಗರು’ ತೋರಿಸಲು ಸಜ್ಜಾಗಿದ್ದಾರೆ. ಈಗಾಗಲೇ ಬಿಡುಗಡೆಯಾಗಿರುವ ಪೋಸ್ಟರ್‌ಗಳು, ಹಾಡು, ಟೀಸರ್ ಎಲ್ಲವೂ ಅವರು ಗುಡುಗುಡು ಗುಮ್ಮನಾಗಿ ತೆರೆಯ ಮೇಲೆ ಮೆರೆಯಲಿದ್ದಾರೆ ಎಂಬುದನ್ನು ಸಾರಿ ಸಾರಿ ಹೇಳುತ್ತಿವೆ. ಆದರೆ ಅವರು ಮಾತ್ರ ಈ ನಿರೀಕ್ಷೆಗೆ ಭಿನ್ನವಾಗಿಯೇ ಮಾತಾಡುತ್ತಾರೆ.

> ನಂದಕಿಶೋರ್ ನಿರ್ದೇಶನದ, ಧ್ರುವ ಸರ್ಜಾ ಮತ್ತು ರಶ್ಮಿಕಾ ಮಂದಣ್ಣ ಅಭಿನಯದ ‘ಪೊಗರು’, ಫೆ. 19ಕ್ಕೆ ಬಿಡುಗಡೆಯಾಗುತ್ತಿದೆ. ಕೊರೊನಾ ಕಾಲದ ನಂತರ ಕನ್ನಡದಲ್ಲಿ ಬಿಡುಗಡೆಯಾಗುತ್ತಿರುವ ಮೊದಲ ಬಹುನಿರೀಕ್ಷಿತ ಸಿನಿಮಾ ಇದು. ಈ ಚಿತ್ರದ ಕುರಿತು ಹಲವು ವಿಷಯಗಳನ್ನು ಹಂಚಿಕೊಂಡಿರುವ ಧ್ರುವ ಸರ್ಜಾ, ಮುಂದಿನ ದಿನಗಳಲ್ಲಿ ಬೇಗ ಬೇಗನೇ ಸಿನಿಮಾ ಮಾಡುವ ಭರವಸೆಯನ್ನೂ ಕೊಟ್ಟಿದ್ದಾರೆ.

‘ನನ್ನ ಹಿಂದಿನ ಎಲ್ಲ ಸಿನಿಮಾಗಳಿಗಿಂತ ತುಂಬ ಭಿನ್ನ ಸಿನಿಮಾ ಇದು. ಹಿಂದಿನ ಸಿನಿಮಾಗಳ ಶೇಡ್ ಇಲ್ಲಿ ಬರುವುದೇ ಇಲ್ಲ. ಮತ್ತಿದು ಕೌಟುಂಬಿಕ ಕಥನವುಳ್ಳ ಸಿನಿಮಾ. ಯು/ಎ ಸರ್ಟಿಫಿಕೇಟ್ ಕೊಟ್ಟಿದಾರೆ. ಎಲ್ಲಿಯೂ ಅಶ್ಲೀಲ ದೃಶ್ಯಗಳಿಲ್ಲ. ಎಲ್ಲಿಯೂ ರಕ್ತ, ಹಿಂಸೆ ತೋರಿಸುವುದಿಲ್ಲ. ಇಡೀ ಫ್ಯಾಮಿಲಿ ಕೂತು ನೋಡುವ ಸಿನಿಮಾ. ರುಚಿಗೆ ತಕ್ಕಷ್ಟು ಆ್ಯಕ್ಷನ್ ಇದೆ ಅಷ್ಟೆ’ ಎನ್ನುವುದು ಅವರ ಅಂಬೋಣ.

ಇದು ನಿಜ ಜೀವನಕ್ಕೆ ತುಂಬ ಹತ್ತಿರವಾದ, ಎಲ್ಲರಿಗೂ ಕನೆಕ್ಟ್ ಆಗುವ ರೀತಿಯ ಸಿನಿಮಾವಂತೆ. ‘ನೈಜವಾಗಿ ಕಾಣಿಸುವುದಷ್ಟೇ ಅಲ್ಲ, ನಿಜವಾಗಿಯೂ ನಡೆದಿರುವ ಕಥೆ ಇದು’ ಎಂದೂ ಧ್ರುವ ಸೇರಿಸುತ್ತಾರೆ.

‘ಪೊಗರು’ ನಿರ್ದೇಶಕ ನಂದಕಿಶೋರ್, ‘ಅಧ್ಯಕ್ಷ, ‘ವಿಕ್ಟರಿ’ಯಂಥ ಕಾಮಿಡಿ ಹಿಟ್‌ಗಳನ್ನು ಕೊಟ್ಟವರು. ತನಗೂ ಅಂಥದ್ದೇ ಮಾದರಿಯ ಕಥೆ ಹೇಳುತ್ತಾರೆ ಎಂದುಕೊಂಡೇ ಧ್ರುವ ಕಥೆ ಕೇಳಲು ಹೋಗಿದ್ದು. ಆದರೆ ಅವರಿಗೆ ಅಲ್ಲಿ ಎದುರಾಗಿದ್ದು ಬೇರೆಯೇ ಥರದ ಕಥೆ. ಹಾಗಾಗಿಯೇ ಅವರು ‘ಈ ಕಥೆ ನನಗಾಗಿ ಮಾಡಿದ್ದಲ್ಲ. ಮಾಡಿರುವ ಕಥೆಗೆ ನಾನು ಹೊಂದುತ್ತೇನೆ ಅಂತ ಒಪ್ಪಿಕೊಂಡಿದ್ದು. ಇಲ್ಲಿ ನಾನು ಹೀರೊ ಅಲ್ಲ, ಕಥೆಯೇ ಹೀರೊ’ ಎಂದು ಹಿಂಜರಿಕೆ ಇಲ್ಲದೆ ಹೇಳುತ್ತಾರೆ.

‘ಪೊಗರು’ವಿನ ಪಾತ್ರಕ್ಕಾಗಿ ಧ್ರುವ ಸಾಕಷ್ಟು ಶ್ರಮಪಟ್ಟಿದ್ದಾರೆ. ಕಟ್ಟುಮಸ್ತಾಗಿದ್ದ ತಮ್ಮ ದೇಹವನ್ನು ಮೂವತ್ತು ಕೆ.ಜಿ. ಕುಗ್ಗಿಸಿಕೊಂಡು ಹತ್ತನೇ ತರಗತಿಯ ಹದಿವಯದ ಹುಡುಗನಂತಾಗಿದ್ದಾರೆ; ಮತ್ತೆ ಮೊದಲಿಗಿಂತ ದುಪ್ಪಟ್ಟು ದಪ್ಪವಾಗಿ ಸ್ನಾಯುಗಳನ್ನು ಹುರಿಗೊಳಿಸಿಕೊಂಡು ಖಳರನ್ನು ಖತಂ ಮಾಡಿದ್ದಾರೆ. ಒಂದು ಪಾತ್ರಕ್ಕಾಗಿ ಇಷ್ಟೆಲ್ಲ ಬೆವರು ಹರಿಸುವಾಗ ಅವರ ಮನಸಲ್ಲಿದ್ದದ್ದು ಒಂದೇ ಸಂಗತಿ: ‘ನನಗಿಂತ ನೋಡಲು ಚೆನ್ನಾಗಿರುವವರು, ನನಗಿಂತ ಚೆನ್ನಾಗಿ ಡಾನ್ಸ್ ಮಾಡುವವರು, ಫೈಟ್ ಮಾಡುವವರು, ಸ್ಟಂಟ್ಸ್ ಮಾಡುವವರು, ಡೈಲಾಗ್ ಹೇಳುವವರು ಪ್ರಪಂಚದಲ್ಲಿ ಎಷ್ಟೊಂದು ಜನ ಇದಾರೆ. ಆದರೆ ಅವರೆಲ್ಲರ ನಡುವೆ ಜನರು ನನ್ನ ಕೈ ಹಿಡಿದಿದ್ದಾರೆ ಅಂದ್ರೆ ಅದನ್ನು ನಾವು ಯಾವತ್ತೂ ಗ್ರ್ಯಾಂಟೆಡ್ ಆಗಿ ತಗೋಬಾರ್ದು. ಜನ ನಂಗೆ ಮೂರು ಸಿನಿಮಾಗಳಲ್ಲಿ ಬೆನ್ನುತಟ್ಟಿ ಪ್ರೋತ್ಸಾಹಿಸಿದ್ದಾರೆ. ಅವರಿಗೆ ಎಲ್ಲಿಯೂ ನಿರಾಸೆ ಮಾಡಬಾರದು ಎಂಬ ಎಚ್ಚರ ನನ್ನಲ್ಲಿದೆ’.

‘ಡಿಸ್ಟರ್ಬ್ ಚೈಲ್ಡ್‌ಹುಡ್ ಈ ಸಿನಿಮಾದ ಕಥೆಯ ಭಾಗ. ಬಾಲ್ಯ ನಮಗೆ ಸರಿಯಾಗಿ ಸಿಗಲಿಲ್ಲ ಎಂದರೆ ಅವನು ಯಾವ ಥರ ಆಗ್ತಾನೆ ಎನ್ನುವುದನ್ನು ಈ ಸಿನಿಮಾ ಹೇಳುತ್ತದೆ. ಅಂಥ ಸಾಕಷ್ಟು ಉದಾಹರಣೆಗಳು ನಮ್ಮ ನಡುವೆಯೇ ಸಾಕಷ್ಟು ಇವೆ. ಅಂಥ ಪಾತ್ರಕ್ಕೆ ಸ್ವಲ್ಪ ಜಾಸ್ತಿನೇ ಸಿದ್ಧತೆ ಮಾಡಿಕೊಳ್ಳಬೇಕಾಗಿತ್ತು’ ಎಂದು ಕಥೆಯ ಎಳೆಯನ್ನು ತುಸುವೇ ಬಿಟ್ಟುಕೊಟ್ಟು ಕುತೂಹಲದ ಒಗ್ಗರಣೆಯನ್ನು ಮನಸೊಳಗೆ ಚೊಂಯ್ಗುಡಿಸುವ ಧ್ರುವ, ಈ ಸಿನಿಮಾಗಾಗಿಯೇ ಒಂದು ವಿಶೇಷ ಅಭ್ಯಾಸವನ್ನೂ ಮಾಡಿಕೊಂಡಿದ್ದಾರಂತೆ. ‘ಅದೇನು ಅಂತ ಸಿನಿಮಾ ನೋಡಿದಾಗ ತಿಳಿಯುತ್ತದೆ’ ಎಂದು ಮೊದಲು ಹಾಕಿದ ಒಗ್ಗರಣೆಯ ಘಾಟನ್ನು ಇನ್ನಷ್ಟು ಹಬ್ಬಿಸುತ್ತಾರೆ.

ಕಳೆದ ಎಂಟು ವರ್ಷಗಳಲ್ಲಿ ಧ್ರುವ ನಾಯಕನಾಗಿ ನಟಿಸಿರುವ ಸಿನಿಮಾ ಮೂರೇ ಮೂರು. ‘ಪೊಗರು’ ನಾಲ್ಕನೇ ಸಿನಿಮಾ. ಯಾಕಿಷ್ಟು ವಿರಳವಾಗಿ ಸಿನಿಮಾ ಮಾಡುತ್ತೀರಾ ಎಂದು ಕೇಳಿದರೆ ಮತ್ತದೇ ಸಿದ್ಧತೆಯತ್ತ ಬೊಟ್ಟು ಮಾಡುತ್ತಾರೆ. ‘ಪೊಗರು ಪಾತ್ರದ ಕಥೆಯೇ ಹಾಗಿತ್ತು. ಹಾಗಾಗಿ ತುಸು ತಡವಾಗಿದ್ದು ನಿಜ. ಈಗ ಜವಾಬ್ದಾರಿ ಹೆಚ್ಚಿದೆ. ಇನ್ನು ತಡ ಮಾಡುವುದಿಲ್ಲ. ಬೇಗ ಬೇಗ ಸಿನಿಮಾ ಮಾಡುತ್ತೇನೆ’ ಎಂದು ಭರವಸೆ ಕೊಟ್ಟ ಧ್ರುವ, ‘ಕುಟುಂಬದ ಎಲ್ಲರ ಜೊತೆಗೆ ಹೋಗಿ ಸಿನಿಮಾ ನೋಡಿ’ ಎನ್ನಲು ಮರೆಯಲಿಲ್ಲ.

ಸುಶಾಂತ್‌ಗೆ ಅಲ್ಬಂನ ‘ಅಲ್ವಿದಾ’

ನೆನಪು

ಬಾಲಿವುಡ್ ನಟ ಸುಶಾಂತ್ ಸಿಂಗ್ ನಿಧನರಾಗಿ ಮುಂದಿನ ಜೂನ್‌ಗೆ ವರ್ಷ ತುಂಬುತ್ತದೆ. ಆ ಸಾವಿನ ತನಿಖೆಯಲ್ಲಿಯೇ ಸುಶಾಂತ್ ಹೆಚ್ಚು ಸುದ್ದಿಯಾದರು. ಕೊಲೆಯೋ, ಆತ್ಮಹತ್ಯೆಯೋ ಎಂಬಂಥ ಪ್ರಶ್ನೆಯೇ ದೊಡ್ಡ ಮಟ್ಟದಲ್ಲಿ ಸದ್ದುಗದ್ದಲ ಮಾಡಿತು. ಆ ಸಾವನ್ನು ಹೊರತುಪಡಿಸಿ ಬಾಲಿವುಡ್‌ನಲ್ಲಿ ಅವರ ಸಾಧನೆ ಕುರಿತು ‘ಅಲ್ವಿದಾ’ ಆಲ್ಬಂ ಹಾಡು ಇದೀಗ ಸಿದ್ಧವಾಗಿದೆ.


ಸುಶಾಂತ್ ಸಿಂಗ್

ಸುಶಾಂತ್ ಬದುಕಿನ ಹೋರಾಟವನ್ನು ‘ಪ್ಲೇ ಟು ಮಿ’ ಸಂಸ್ಥೆ ನಿರ್ಮಿಸಿದ ಅಲ್ಬಂನ ‘ಅಲ್ವಿದಾ’ ಹಾಡಿನಲ್ಲಿ ತೋರಿಸಿದ್ದಾರೆ ಗಾಯಕ ವಿನಯ್ ಚಂದ್ರ. ಸಂಗೀತವೂ ಅವರದ್ದೇ. ಹಾಡು ಹಿಂದಿಯಲ್ಲಿದೆ ಅಭಿಲಾಷ್ ಗುಪ್ತಾ ಅವರ ಸಾಹಿತ್ಯವಿದೆ. ‘ಬಾಲಿವುಡ್‌ನಲ್ಲಿ ನೆಲೆ ನಿಲ್ಲಲು ಸುಶಾಂತ್ ಅವರ ಶ್ರಮ ಹೇಗಿತ್ತು ಎಂಬುದನ್ನು ಈ ಹಾಡಿನಲ್ಲಿ ತೋರಿಸಿದ್ದೇವೆ. ಅವರ ಬಾಲ್ಯದ ಫೋಟೊಗಳಿಂದ ಹಿಡಿದ ಇತ್ತೀಚಿನ ಫೋಟೊಗಳನ್ನು ಮೂರು ನಿಮಿಷದ ವಿಡಿಯೊದಲ್ಲಿ ಸೆರೆ ಹಿಡಿದಿದ್ದೇವೆ. ಕೊನೆಗೆ ತಮ್ಮ ಈ ಸಿನಿಮಾ ಪಯಣದಲ್ಲಿ ಕೈಹಿಡಿದವರಿಗೆ, ಆಸರೆಯಾದವರಿಗೆ ಥ್ಯಾಂಕ್ಸ್ ಹೇಳಿ ಹೊರಡುವ ಪರಿಕಲ್ಪನೆಯಲ್ಲಿ ರೂಪಿಸಲಾಗಿದೆ’ ಎಂದು ಪ್ಲೇಟು ಮಿ ವೇದಿಕೆಯ ಸಿಇಒ ಕೀರ್ತಿ ವಾಸನ್ ಸುಬ್ರಮಣ್ಯಂ ಹೇಳಿದರು.

ಬೆಂಗಳೂರಿನಲ್ಲಿಯೇ ಸಂಪೂರ್ಣವಾಗಿ ಸೆಟ್ ಹಾಕಿ ಅಲ್ವಿದಾ ಹಾಡಿನ ಶೂಟಿಂಗ್ ಮಾಡಲಾಗಿದೆ. ಸದ್ಯ ಟೀಸರ್ ಬಿಡುಗಡೆ ಆಗಿದೆ. ಇನ್ನೊಂದು ವಾರದಲ್ಲಿ ಯೂಟ್ಯೂಬ್‌ನಲ್ಲಿ ಹಾಡು ಬಿಡುಗಡೆ ಆಗಲಿದೆ. ಶ್ರೀಧರ್ ಮತ್ತು ಶೀತಲ್ ಈ ಹಾಡಿಗೆ ಹಣ ಹೂಡಿದ್ದಾರೆ. ಹಾಡಿನ ನಿರ್ದೇಶನವನ್ನೂ ಶ್ರೀಧರ್ ಮಾಡಿದ್ದಾರೆ. ಅನಿಲ್ ಕುಮಾರ್ ಅವರ ಛಾಯಾಗ್ರಹಣ, ಸಂಕಲನ ಇದೆ.

ಬಿಡುಗಡೆ ಕಾರ್ಯಕ್ರಮದಲ್ಲಿ ಹಿರಿಯ ಸಂಗೀತ ನಿರ್ದೇಶಕ ವಿ. ಮನೋಹರ್, ಸಾಹಸ ನಿರ್ದೇಶಕ ಥ್ರಿಲ್ಲರ್ ಮಂಜು, ವಿನಯ್ ಚಂದ್ರ ಅವರ ತಂದೆ ಮತ್ತು ಹಿರಿಯ ಪತ್ರಕರ್ತರು ಆಗಿರುವ ಸುರೇಶ್ ಚಂದ್ರ, ರವಿಚೇತನ್, ನಟಿ ರೂಪಿಕಾ, ಅಭಯ್ ಚಂದ್ರ, ಕೀರ್ತಿ ವಾಸನ್ ಇದ್ದರು.

ಪ್ಲೇಟು ಮಿ ಭಾರತದ ಪ್ರಮುಖ ಪ್ರದರ್ಶಕ ಕಲೆಗಳ ಪ್ರದರ್ಶನ ವೇದಿಕೆಯೂ ಹೌದು.

ಬಾಯ್‌ಬಡ್ಡಿ ಅಲ್ಲ ಕಿರುತೆರೆ ಮರೆಯಲ್ಲ!

ಅಭಿಲಾಷ್ ಪಿ.ಎಸ್.

ಚಂದನವನದಲ್ಲಿ ಪ್ರಸ್ತುತ ಮಿಂಚುತ್ತಿರುವ ಬಹುಪಾಲು ನಟಿಯರಲ್ಲಿ ಬಹುತೇಕರು ಕಿರುತೆರೆ ಮೂಲದಿಂದ ಬಂದವರು. ಈ ಸಾಲಿಗೆ ಇದೀಗ ಮತ್ತೋರ್ವ ನಟಿ ಸೇರ್ಪಡೆಯಾಗಿದ್ದಾರೆ. ಝೀ ಕನ್ನಡದಲ್ಲಿ ಪ್ರಸಾರವಾಗುತ್ತಿರುವ ‘ಗಟ್ಟಿಮೇಳ’ ಧಾರಾವಾಹಿಯಲ್ಲಿ ‘ರೌಡಿ ಬೇಬಿ’ ಅಮೂಲ್ಯ ಪಾತ್ರದ ಮೂಲಕ ಕನ್ನಡಿಗರ ಮನೆಮಾತಾಗಿ ಬೆಳೆದ ನಿಶಾ ಇದೀಗ ನಟ ವಿನಯ್ ರಾಜ್‌ಕುಮಾರ್ ನಾಯಕನಾಗಿ ನಟಿಸುತ್ತಿರುವ ‘ಅಂದೊಂದಿತ್ತು ಕಾಲ’ದಲ್ಲಿ ನಾಯಕಿಯಾಗಿ ಚಂದನವನಕ್ಕೆ ಮೊದಲ ಹೆಜ್ಜೆ ಇಡುತ್ತಿದ್ದಾರೆ. ಚಿತ್ರದ ಚಿತ್ರೀಕರಣಕ್ಕೆ ನಟ ಪುನೀತ್ ರಾಜ್‌ಕುಮಾರ್ ಇತ್ತೀಚೆಗೆ ಕ್ಲ್ಯಾಪ್ ಮಾಡುವ ಮೂಲಕ ಚಾಲನೆ ನೀಡಿದ್ದು, ತಮ್ಮ ಅನುಭವ, ಪಾತ್ರದ ಕುರಿತು ನಿಶಾ ಅವರು ‘ಸಿನಿಮಾ ಪುರವಣಿ’ ಜೊತೆ ಮಾತಿಗಿಳಿದರು.

‘ಕಿರುತೆರೆಗೂ ಹಿರಿತೆರೆಗೂ ಬಹಳಷ್ಟು ವ್ಯತ್ಯಾಸವಿದೆ. ಒಳ್ಳೆಯ ಅವಕಾಶಕ್ಕಾಗಿ ಕಾಯುತ್ತಿದ್ದೆ. ಒಳ್ಳೆಯ ಕಥೆ ಬಂದಾಗ ಖಂಡಿತವಾಗಿಯೂ ಚಂದನವನಕ್ಕೆ ಕಾಲಿಡಲು ಸಿದ್ಧವಾಗಿದ್ದೆ. ಇದೀಗ ವಿನಯ್ ರಾಜ್‌ಕುಮಾರ್ ಅವರ ಜೊತೆಗೆ ನಟಿಸುವ ಅವಕಾಶ ದೊರೆತಿರುವುದು ಸಂತೋಷದ ವಿಷಯ’ ಎನ್ನುತ್ತಾರೆ.

‘ಹಿಂದೆಯೂ ಚಿತ್ರಗಳಲ್ಲಿ ನಟಿಸಲು ಅವಕಾಶ ಬಂದಿತ್ತು. ಬೆಳ್ಳಿ ತೆರೆಗೆ ಬರುವಾಗ ಒಂದು ಒಳ್ಳೆಯ ಅವಕಾಶದೊಂದಿಗೆ ಬಂದರೆ ಯಶಸ್ಸು ಕಾಣುತ್ತೇವೆ ಎಂಬ ಯೋಚನೆ ಎಲ್ಲರಿಗೂ ಇರುತ್ತದೆ. ಇದು ನನಗೂ ಇತ್ತು. ಇದೀಗ ಆ ಸಮಯ ಬಂದಿದೆ. ಮೊದಲಿಗೆ ಸಿನಿಮಾದ ನಾಯಕ ಯಾರು ಎಂದು ನನಗೆ ತಿಳಿದಿರಲಿಲ್ಲ. ಮಾತುಕತೆಗೆ ಹೋದಾಗಲೇ ವಿನಯ್ ರಾಜ್‌ಕುಮಾರ್ ಅವರಿಗೆ ನಟಿಯಾಗಿ ಪಾತ್ರ ನಿರ್ವಹಿಸುವ ವಿಷಯದ ಬಗ್ಗೆ ತಿಳಿಯಿತು. ಇಂತಹ ಅವಕಾಶ ದೊರೆತಾಗ ಯಾರಿಗೆ ತಾನೇ ಖುಷಿಯಾಗುವುದಿಲ್ಲ. ಇವರ ಜೊತೆ ನಟಿಸುವ ಅವಕಾಶ ದೊರೆತಿರುವುದಕ್ಕೆ ಲಕ್ಕಿ ಎಂದುಕೊಳ್ಳುತ್ತೇನೆ. ರಾಜ್‌ಕುಮಾರ್ ಅವರ ಕುಟುಂಬಕ್ಕೇ ನಾನು ದೊಡ್ಡ ಅಭಿಮಾನಿ’ ಎನ್ನುತ್ತಾರೆ ನಿಶಾ.

ಧಾರಾವಾಹಿ, ಸಿನಿಮಾ ಸವಾಲು

‘ಟಿವಿಯಲ್ಲಿ ಕಾಣಿಸಿಕೊಳ್ಳುವುದಕ್ಕೂ ಬೃಹತ್ ಪರದೆ ಮೇಲೆ ಕಾಣಿಸಿಕೊಳ್ಳುವುದಕ್ಕೆ ಬಹಳಷ್ಟು ಸವಾಲುಗಳಿವೆ. ಧಾರಾವಾಹಿಯಲ್ಲಿ ಇರುವ ನನ್ನ ಪಾತ್ರಕ್ಕೆ ನನಗೇ ಆದ ಅಭಿಮಾನಿಗಳ ಬಳಗವಿದೆ. ಅವರಿಗೆ ಹಿಡಿಸುವಂತೆ ಹಾಗೂ ಇತರೆ ಪ್ರೇಕ್ಷಕರಿಗೂ ಹಿಡಿಸುವಂತೆ ಪಾತ್ರವನ್ನು ನಿಭಾಯಿಸುವುದು ಮುಖ್ಯ. ಧಾರಾವಾಹಿಯಲ್ಲಿ ಪ್ರತಿದಿನವೂ ಪಾತ್ರವನ್ನು ನಿರ್ವಹಿಸಿಕೊಂಡು ಹೋಗುವುದು ಬೇರೆ ಹಾಗೂ ಸಿನಿಮಾದಲ್ಲಿ ಬಹಳ ಕಡಿಮೆ ಅವಧಿಯಲ್ಲಿ ನಮ್ಮ ಪಾತ್ರವನ್ನು ಜನರಿಗೆ ಮುಟ್ಟಿಸುವುದು ಕಠಿಣ. ಚಿತ್ರವು ಎರಡೂವರೆ ಗಂಟೆ ಇರುತ್ತದೆ. ಇದರಲ್ಲಿ ನನ್ನ ಪಾತ್ರಕ್ಕೆ ಇಂತಿಷ್ಟೇ ಅವಧಿ ಎಂದು ಇರುತ್ತದೆ. ಅದಕ್ಕೆ ತಕ್ಕ ನ್ಯಾಯವನ್ನು ನೀಡಬೇಕು ಎನ್ನುವುದು ನನ್ನ ಗುರಿ. ಸಿಕ್ಕ ಪಾತ್ರವನ್ನು ಅಚ್ಚುಕಟ್ಟಾಗಿ ಜನರ ಮನಸ್ಸು ಮುಟ್ಟುವಂತೆ ವಹಿಸುತ್ತೇನೆ’ ಎಂದು ಹೇಳುತ್ತಾರೆ ನಿಶಾ.

ಬಾಯ್‌ಬಡ್ಡಿ ಅಲ್ಲ!

ಚಿತ್ರದಲ್ಲಿ ತಮ್ಮ ಪಾತ್ರದ ಕುರಿತು ಮಾಹಿತಿ ಹಂಚಿಕೊಂಡ ನಿಶಾ, ‘ಅಂದೊಂದಿತ್ತು ಕಾಲದಲ್ಲಿ ನಾನು ಶಾಲಾ ವಿದ್ಯಾರ್ಥಿನಿಯಾಗಿ ಕಾಣಿಸಿಕೊಳ್ಳುತ್ತಿದ್ದೇನೆ. ನಾನು ಎರಡು ಲುಕ್‌ಗಳಲ್ಲಿ ಇಲ್ಲಿ ಕಾಣಿಸಿಕೊಳ್ಳುತ್ತಿದ್ದು, ಜೀವನದ ಹಲವು ಹಂತಗಳ ಕುರಿತು ಚಿತ್ರಕಥೆ ಇರುವುದರಿಂದ ಒಂದು ಹಂತದಲ್ಲಿ ನಾನು ಕಾಣಿಸಿಕೊಳ್ಳುತ್ತೇನೆ. ನನಗೆ ಇದೊಂದು ವಿಭಿನ್ನವಾದ ಪಾತ್ರ. ಇಷ್ಟು ದಿನ ಟಿವಿಯಲ್ಲಿ ಬಾಯ್‌ಬಡ್ಡಿಯಾಗಿ ಕಾಣಿಸಿಕೊಳ್ಳುತ್ತಿದ್ದೆ. ನಿಜ ಜೀವನದಲ್ಲಿ ನಾನು ಬಾಯ್‌ಬಡ್ಡಿ ಅಲ್ಲ. ಚಿತ್ರದಲ್ಲೂ ಇದೇ ರೀತಿ ಪಾತ್ರ ದೊರಕಿದೆ’ ಎನ್ನುತ್ತಾರೆ.

ಕಿರುತೆರೆ ಮರೆಯಲ್ಲ

‘ಚಂದನವನಕ್ಕೆ ಕಾಲಿಟ್ಟ ತಕ್ಷಣ, ಕಿರುತೆರೆಯನ್ನು ಮರೆಯುತ್ತೇನೆ ಎನ್ನುವುದಿಲ್ಲ. ಬಂದ ದಾರಿಯನ್ನು ಮರೆಯಬಾರದು ಎನ್ನುತ್ತಾರೆ. ಹೀಗಾಗಿ, ಎರಡನ್ನೂ ಜೊತೆಯಾಗಿ ನಿರ್ವಹಿಸಿಕೊಂಡು ಹೋಗುತ್ತೇನೆ. ಮುಂದೆಯೂ ಕೆಲ ಚಿತ್ರಗಳ ಅವಕಾಶ ಬಂದಿದ್ದು, ಅವು ಚರ್ಚೆಯ ಹಂತದಲ್ಲಿವೆ’ ಎಂದು ಭವಿಷ್ಯದ ನಡೆಯನ್ನು ವಿವರಿಸುತ್ತಾರೆ.


ನಿಶಾ

ಚಿಕ್ಕಮಗಳೂರಿನಲ್ಲಿ ‘ಕಸ್ತೂರಿ ನಿವಾಸ’


‘ಕಸ್ತೂರಿ ನಿವಾಸ’ ಧಾರಾವಾಹಿಯಲ್ಲಿ ಅಮೃತಾ ರಾಮಮೂರ್ತಿ, ದಿಲೀಪ್ ಶೆಟ್ಟಿ

ಉದಯ ಟಿವಿಯ ‘ಕಸ್ತೂರಿ ನಿವಾಸ’ ಧಾರಾವಾಹಿ 250 ಸಂಚಿಕೆಗಳನ್ನು ಪೂರೈಸಿದೆ. ನಾಯಕ ರಾಘವ್, ನಾಯಕಿ ಮೃದುಲಾಳ ಅವರ ಸಂತೋಷದ ಮೂಡ್‌ನಲ್ಲಿರುವ ದೃಶ್ಯಗಳ ಚಿತ್ರೀಕರಣ ಚಿಕ್ಕಮಗಳೂರಿನಲ್ಲಿ ನಡೆಯುತ್ತಿದೆ. ಕುಟುಂಬದ ಆನಂದ, ಅತ್ತೆ ಸೊಸೆ ಬಾಂಧವ್ಯ ಈ ಧಾರಾವಾಹಿಯ ಪ್ರಮುಖ ಕಥಾ ಅಂಶ. ಈ ಜೋಡಿಯ ಬದುಕಿನಲ್ಲಿ ಹೊಸದೊಂದು ತಿರುವು ಬರುವ ಸನ್ನಿವೇಶವನ್ನು ಈ ಸಂಚಿಕೆಗಳಲ್ಲಿ ನೋಡಬಹುದು ಎಂದು ಧಾರಾವಾಹಿಯ ತಂಡ ಹೇಳಿದೆ.

ಚಿಕ್ಕಮಗಳೂರಿನ ತಾಣಗಳಾದ ಮುಳ್ಳಯ್ಯನಗಿರಿ, ಕಾಪು ದೀಪಸ್ತಂಭ, ಬಾಬಾ ಬುಡನಗಿರಿ, ಸುಂದರ ಕಾಫಿ ತೋಟಗಳ ನಡುವೆ ಚಿತ್ರಿಕರಣ ಮಾಡಲಾಗಿದೆ. ಉಡುಪಿಯ ಸೇಂಟ್ ಮೇರೀಸ್ ದ್ವೀಪದಲ್ಲೂ ಚಿತ್ರೀಕರಣ ನಡೆದಿದೆ.

ಧಾರಾವಾಹಿ ಸೋಮವಾರದಿಂದ ಶನಿವಾರದವರೆಗೆ ಸಂಜೆ 7ಕ್ಕೆ ಉದಯ ಟಿವಿಯಲ್ಲಿ ಪ್ರಸಾರವಾಗುತ್ತಿದೆ.




ಸುಭಾಷಿತ

ಹೆಚ್ಚು ನಿರೀಕ್ಷೆ ಇಟ್ಟುಕೊಂಡಷ್ಟೂ ನನಗೆ ಹೆಚ್ಚು ಅಸಂತೋಷವೇ ಆಗುತ್ತದೆ. ಹೆಚ್ಚು ಅಂಗೀಕರಿಸಿದಷ್ಟೂ ನಾನು ಹೆಚ್ಚು ಪ್ರಶಾಂತವಾಗಿ ಇರುತ್ತೇನೆ.

-ಮೈಕಲ್ ಜೆ. ಫಾಕ್ಸ್

ಅಕ್ಬರ್– ಪ್ರಿಯಾ ಪ್ರಕರಣ ಅಚ್ಚಳಿಯದೆ ಉಳಿಯಲಿದೆ ಆದೇಶ

ಸುಬ್ರಮಣಿಯನ್ ಸ್ವಾಮಿ ಮತ್ತು ಕೇಂದ್ರ ಸರ್ಕಾರದ ನಡುವಿನ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ 2016ರ ಮೇ ತಿಂಗಳಿನಲ್ಲಿ ನೀಡಿರುವ ತೀರ್ಪು, ಮೈಲಿಗಲ್ಲು ಅನ್ನಿಸುವಂಥದ್ದು. ಈ ತೀರ್ಪಿನಲ್ಲಿ ಸುಪ್ರೀಂ ಕೋರ್ಟ್, ವ್ಯಕ್ತಿಯು ಸಮಾಜದಲ್ಲಿ ಹೊಂದಿರುವ ಹೆಸರು, ಆತ ಸಂಪಾದಿಸಿರುವ ಕೀರ್ತಿಯು ಸಂವಿಧಾನದ 21ನೆಯ ವಿಧಿಯು ನೀಡಿರುವ ಜೀವಿಸುವ ಸ್ವಾತಂತ್ರ್ಯದ ಅವಿಭಾಜ್ಯ ಅಂಗ ಎಂದು ಹೇಳಿದೆ. ವ್ಯಕ್ತಿ ತಾನು ಸಂಪಾದಿಸಿದ ಕೀರ್ತಿಯನ್ನು ರಕ್ಷಿಸಿಕೊಳ್ಳುವುದು ಮೂಲಭೂತ ಹಕ್ಕು ಎಂದು ಕೂಡ ಸುಪ್ರೀಂ ಕೋರ್ಟ್ ಹೇಳಿದೆ. ಪತ್ರಕರ್ತ ಹಾಗೂ ಕೇಂದ್ರದ ಮಾಜಿ ಸಚಿವ ಎಂ.ಜೆ. ಅಕ್ಬರ್ ಅವರು ಪತ್ರಕರ್ತೆ ಪ್ರಿಯಾ ರಮಣಿ ವಿರುದ್ಧ ಹೂಡಿದ್ದ ಮಾನನಷ್ಟ ಮೊಕದ್ದಮೆ ಪ್ರಕರಣದಲ್ಲಿ, ದೆಹಲಿಯ ಹೆಚ್ಚುವರಿ ಮುಖ್ಯ ಮೆಟ್ರೊಪಾಲಿಟನ್ ನ್ಯಾಯಾಲಯವು ಪ್ರಿಯಾ ಅವರನ್ನು ಆರೋಪ ಮುಕ್ತಗೊಳಿಸಿದೆ. ದೇಶದಲ್ಲಿ ಮಾನನಷ್ಟ ಮೊಕದ್ದಮೆಗಳು ನೂರಾರು ಸಂಖ್ಯೆಯಲ್ಲಿ ದಾಖಲಾಗುತ್ತಲೇ ಇರುತ್ತವೆ. ಮಾನನಷ್ಟಕ್ಕೆ ಸಂಬಂಧಿಸಿದ ಎಲ್ಲ ಪ್ರಕರಣಗಳು ಅಕ್ಬರ್ ಮತ್ತು ಪ್ರಿಯಾ ಅವರ ಪ್ರಕರಣದಷ್ಟು ಗಮನ ಸೆಳೆಯುವುದಿಲ್ಲ. ಇವರಿಬ್ಬರೂ ಸಾರ್ವಜನಿಕ ಜೀವನದಲ್ಲಿ ಇರುವ ವ್ಯಕ್ತಿಗಳಾದುದರಿಂದ, ಈ ಪ್ರಕರಣವು ಸಮಾಜದ ಗಮನವನ್ನು ದೊಡ್ಡ ಮಟ್ಟದಲ್ಲಿ ಸೆಳೆಯಿತು. ಈಗ, ಪ್ರಕರಣದಲ್ಲಿ ಹೊರಬಂದಿರುವ ಆದೇಶವು ಇನ್ನೂ ಹೆಚ್ಚಿನ ಗಮನ ಸೆಳೆದಿದೆ. ಮಹಿಳೆಯರ ಬದುಕಿನ ಘನತೆ, ಲೈಂಗಿಕ ಕಿರುಕುಳಕ್ಕೆ ತುತ್ತಾದ ಹೆಣ್ಣುಮಕ್ಕಳ ಪರವಾಗಿ ಆಡಿರುವ ಕೆಲವು ಮಾತುಗಳ ಕಾರಣದಿಂದಾಗಿ ಈ ಆದೇಶವು ಜನರ ಸ್ಮೃತಿಪಟಲದಲ್ಲಿ ಬಹುಕಾಲ ಉಳಿದುಕೊಳ್ಳಲಿದೆ. 'ಲೈಂಗಿಕವಾಗಿ ದೌರ್ಜನ್ಯಕ್ಕೆ ಗುರಿಯಾದ ಮಹಿಳೆ ದನಿ ಎತ್ತಿದಾಗ ಮಾನನಷ್ಟದ ಕಾರಣ ಹೇಳಿ ಆ ಮಹಿಳೆಯನ್ನು ಶಿಕ್ಷೆಗೆ ಗುರಿಪಡಿಸಲು ಆಗುವುದಿಲ್ಲ' ಎಂದು ದೆಹಲಿಯ ನ್ಯಾಯಾಲಯ ಹೇಳಿದೆ. ಹಾಗೆಯೇ, 'ಮಹಿಳೆಯರ ಜೀವಿಸುವ ಮತ್ತು ಘನತೆಯ ಹಕ್ಕನ್ನು ಬಲಿಕೊಟ್ಟು, ವ್ಯಕ್ತಿಯೊಬ್ಬನ ಕೀರ್ತಿಯನ್ನು ರಕ್ಷಿಸಲು ಆಗದು' ಎಂದು ಕೂಡ ನ್ಯಾಯಾಲಯವು ಸ್ಪಷ್ಟಪಡಿಸಿದೆ. ವ್ಯಕ್ತಿಯ ಕೀರ್ತಿ, ಪ್ರತಿಷ್ಠೆ ಹಾಗೂ ಮಹಿಳೆಯ ಜೀವಿಸುವ ಸ್ವಾತಂತ್ರ್ಯ, ಘನತೆಯ ಬದುಕಿನ ನಡುವಿನ ಪ್ರಶ್ನೆ ಎದುರಾದಾಗ ನ್ಯಾಯಾಲಯವು ಮಹಿಳೆಯ ಬದುಕಿನ ಸ್ವಾತಂತ್ರ್ಯ ಹೆಚ್ಚು ಮಹತ್ವದ್ದು ಎಂದು ಈ ಆದೇಶದಲ್ಲಿ ಸ್ಪಷ್ಟಪಡಿಸಿದೆ. ಹೀಗಾಗಿ, ಇದೊಂದು ಪ್ರಗತಿಪರ ಹಾಗೂ ಸ್ವಾಗತಾರ್ಹ ತೀರ್ಪು.



ವ್ಯಕ್ತಿಯ ಕೀರ್ತಿ, ಪ್ರತಿಷ್ಠೆ ಹಾಗೂ ಮಹಿಳೆಯ ಜೀವಿಸುವ ಸ್ವಾತಂತ್ರ್ಯ, ಘನತೆಯ ಬದುಕಿನ ನಡುವಿನ ಪ್ರಶ್ನೆ ಎದುರಾದಾಗ ನ್ಯಾಯಾಲಯವು ಮಹಿಳೆಯ ಬದುಕಿನ ಸ್ವಾತಂತ್ರ್ಯ ಹೆಚ್ಚು ಮಹತ್ವದ್ದು ಎಂದು ಈ ಆದೇಶದಲ್ಲಿ ಸ್ಪಷ್ಟಪಡಿಸಿದೆ

2018ರ ಸುಮಾರಿನಲ್ಲಿ 'ಮೀಟೂ' ಪ್ರಕರಣಗಳು ಹೆಚ್ಚು ವರದಿಯಾದಾಗ, 'ಲೈಂಗಿಕ ದೌರ್ಜನ್ಯಕ್ಕೆ ಗುರಿಯಾಗಿದ್ದಾಗಿ ಹೇಳಿಕೊಳ್ಳುವ ಮಹಿಳೆಯರು ತಮ್ಮ ನೋವನ್ನು ಮೊದಲೇ ಏಕೆ ಬಹಿರಂಗಪಡಿಸಲಿಲ್ಲ. ದೌರ್ಜನ್ಯ ನಡೆದ ತಕ್ಷಣದಲ್ಲಿ ಅದನ್ನು ತಿಳಿಸದಿದ್ದುದು, ವರ್ಷಗಳ ನಂತರ ಅದನ್ನು ಹೇಳುತ್ತಿರುವುದು ಸರಿಯೇ' ಎಂಬ ಪ್ರಶ್ನೆಗಳು ಮೂಡಿದ್ದವು. ಆದರೆ, ತಾನು ಲೈಂಗಿಕ ದೌರ್ಜನ್ಯಕ್ಕೆ ಗುರಿಯಾಗುತ್ತಿದ್ದೇನೆ ಎಂಬುದು ಗೊತ್ತಾಗದ ಕಾರಣದಿಂದಾಗಿಯೂ ಮಹಿಳೆ ಸುಮ್ಮನಿದ್ದಿರುವ ಸಾಧ್ಯತೆ ಇದೆ ಎಂದು ನ್ಯಾಯಾಲಯ ಹೇಳಿದೆ. ಲೈಂಗಿಕ ದೌರ್ಜನ್ಯಕ್ಕೆ ಗುರಿಯಾದವರನ್ನೇ ಅವಮಾನಕ್ಕೆ ಗುರಿಪಡಿಸುವ ನಮ್ಮ ಸಮಾಜದಲ್ಲಿ, ಕಿರುಕುಳಕ್ಕೆ ತುತ್ತಾದ ಹೆಣ್ಣು ತನಗಾಗಿದ್ದನ್ನು ತಕ್ಷಣಕ್ಕೆ ಹೇಳಿಕೊಳ್ಳಬೇಕು ಎಂದು ಬಯಸುವುದೇ ತಪ್ಪು. ಈ ನಿಲುವು ಕೂಡ, ಅಕ್ಬರ್ ಮತ್ತು ಪ್ರಿಯಾ ನಡುವಿನ ಪ್ರಕರಣದ ಆದೇಶದಲ್ಲಿ ವ್ಯಕ್ತವಾಗಿದೆ. 'ಮಹಿಳೆಗೆ ತನ್ನ ನೋವನ್ನು ಯಾವುದೇ ವೇದಿಕೆಯ ಮೂಲಕ, ಘಟನೆ ನಡೆದ ದಶಕದ ನಂತರವೂ ಹೇಳಿಕೊಳ್ಳುವ ಹಕ್ಕು ಇದೆ' ಎಂದು ನ್ಯಾಯಾಲಯ ಹೇಳಿದೆ. ಲೈಂಗಿಕ ದೌರ್ಜನ್ಯ ಎಂಬುದು ಮಹಿಳೆಯ ದೇಹದ ಮೇಲೆ ಮಾತ್ರವಲ್ಲ, ಆಕೆಯ ಆತ್ಮದ ಮೇಲೆ ನಡೆಸುವ ಹಲ್ಲೆ ಎಂಬ ಮಾತನ್ನು ದೇಶದ ನ್ಯಾಯಾಂಗ ಹಿಂದೆಯೇ ಹೇಳಿದೆ. ಈ ಬಗೆಯ ದೌರ್ಜನ್ಯಕ್ಕೆ ಗುರಿಯಾದ ಹೆಣ್ಣು, ತನಗಾದ ಅನ್ಯಾಯವನ್ನು ತಕ್ಷಣಕ್ಕೆ ಹೇಳಿಬಿಡಬೇಕು ಎಂಬ ಯಾವ ಕಟ್ಟುಪಾಡೂ ಇಲ್ಲ ಎಂಬುದನ್ನು ಸ್ಪಷ್ಟಪಡಿಸಿರುವ ಈ ಆದೇಶವು ಮಾನವೀಯವೂ ಸಂವೇದನಾಶೀಲವೂ ಆಗಿದೆ ಎಂಬುದರಲ್ಲಿ ಎರಡು ಮಾತಿಲ್ಲ. ವ್ಯಕ್ತಿಯು ಜೀವಿತಾವಧಿಯಲ್ಲಿ ಸಂಪಾದಿಸುವ ಕೀರ್ತಿ ಎಂಬುದು ಆತನ ಮೂಲಭೂತ ಹಕ್ಕಿನ ಭಾಗ ಎಂಬುದು ನಿಜ. ಸುಬ್ರಮಣಿಯನ್ ಸ್ವಾಮಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಹೇಳಿದ್ದೂ ಅದನ್ನೇ. ಆದರೆ, ಲೈಂಗಿಕ ದೌರ್ಜನ್ಯಕ್ಕೆ ಸಂಬಂಧಿಸಿದ ಪ್ರಕರಣಗಳಲ್ಲಿ, ಆ ಮೂಲಭೂತ ಹಕ್ಕನ್ನು ಗುರಾಣಿಯಂತೆ ಬಳಸಿಕೊಳ್ಳಲಾಗದು ಎಂಬುದನ್ನು ದೆಹಲಿ ನ್ಯಾಯಾಲಯದ ಆದೇಶವು ಸ್ಪಷ್ಟಪಡಿಸಿದೆ. ಈ ಎಲ್ಲ ಕಾರಣಗಳಿಂದಾಗಿ ಈಗ ಬಂದಿರುವ ಆದೇಶವು ಸಾರ್ವಜನಿಕರ ನಡುವೆ ವ್ಯಾಪಕ ಚರ್ಚೆಗೆ ಒಳಗಾಗಲಿದೆ, ಸಮಾಜ ಜೀವನದಲ್ಲಿ ಅಚ್ಚಳಿಯದೆ ನಿಲ್ಲಲಿದೆ.

ಮೀಸಲಾತಿಗೆ ಅರ್ಹರಾಗಿದ್ದರೂ ಅನುಕೂಲ ಪಡೆಯದವರಿಗಷ್ಟೇ ಪ್ರತಿಭಟಿಸುವ ನೈತಿಕ ಹಕ್ಕಿದೆ

ಮೀಸಲಾತಿ ಮೇಲಾಟದ ಅಪಾಯ...



ಅನುರಣನ

ನಾರಾಯಣ ಎ.

ಕರ್ನಾಟಕದಲ್ಲೀಗ ಅಸಂಗತವಾಗಿಯೂ ಅತಾರ್ಕಿಕವಾಗಿಯೂ ನಡೆಯುತ್ತಿರುವ ಮೀಸಲಾತಿ ಸಂಬಂಧಿ ಹೋರಾಟಗಳಿಂದಾಗಿ ಎರಡು ಅಪ್ರಸ್ತುತತೆಗಳು ಸೃಷ್ಟಿಯಾಗಬಹುದಾದ ಸಾಧ್ಯತೆಗಳು ತಲೆದೋರಿವೆ. ಈ ಪೈಕಿ, ಎರಡನೆಯ ಅಪ್ರಸ್ತುತತೆಯು ಸ್ವಲ್ಪ ಆತಂಕದ ವಿಚಾರ. ಅದರ ಕುರಿತು ಯೋಚಿಸಬೇಕಿದೆ.

ಮೊದಲನೆಯದಾಗಿ, ಅಪ್ರಸ್ತುತರಾಗಬಹುದಾದವರು ಈ ಹೋರಾಟಗಳಿಗೆ ನೇತೃತ್ವ ನೀಡುತ್ತಿರುವ 'ಸ್ವಾಮಿಗಳು'. ಮಾಧ್ಯಮಗಳು ಅವರನ್ನು 'ಶ್ರೀಗಳು' ಎನ್ನುತ್ತವೆ. ಪ್ರಾಯಶಃ 'ಜಾತಿಶ್ರೀ'ಗಳು ಎಂದು ಕರೆದರೆ ಹೆಚ್ಚು ಸೂಕ್ತವಾಗುತ್ತದೆ. ಇವರ ನಡುವೆ ಕೆಲವರು ಉಪಜಾತಿಶ್ರೀಗಳೂ ಪ್ರವರ್ಗಶ್ರೀಗಳೂ ಇದ್ದಾರೆ. ಇರಲಿ. ಇಂತಹವರೆಲ್ಲಾ ಈ ಹೋರಾಟದ ತರುವಾಯ ಅಪ್ರಸ್ತುತರಾಗಿಬಿಡುತ್ತಾರೆ ಅಂತ ಹೇಳಿದ್ದು, ಇವರೆಲ್ಲಾ ಸಾರ್ವಜನಿಕ ಬದುಕಿನಿಂದ ಕಣ್ಮರೆಯಾಗಿಬಿಡಬಹುದು ಎಂಬ ಅರ್ಥದಲ್ಲಿ ಅಲ್ಲ. ಮಂದಿ ತಮ್ಮತಮ್ಮ ಜಾತಿಶ್ರೀಗಳನ್ನು ಮುಂದೆಯೂ ಆರಾಧಿಸಬಹುದು. ಇವರು ಅಪ್ರಸ್ತುತ ಆಗುವುದು ಜಾತಿಯನ್ನು ಮೀರಿ ಇವರತ್ತ ಈ ತನಕ ಗೌರವದಿಂದ ನೋಡುತ್ತಿದ್ದವರ ದೃಷ್ಟಿಯಲ್ಲಿ. ಅಂತಹವರಿಗೆ ಮುಂದೆ ಈ ಜಾತಿಶ್ರೀಗಳನ್ನೆಲ್ಲಾ 'ಸ್ವಾಮೀಜಿ' ಎಂದು ಕರೆಯಲು ಕಷ್ಟವಾದೀತು. ತುಟಿಯಲ್ಲಿ 'ಸ್ವಾಮೀಜಿ' ಎಂದರೂ ಹೃದಯ ಪ್ರತಿಭಟಿಸೀತು.

ಮೀಸಲಾತಿಯಿಂದಾಗಿ ಇನ್ನೂ ಏನೂ ಲಭಿಸದ ದುರ್ಬಲ-ಧ್ವನಿವಿಹೀನ ವರ್ಗಗಳ ಕಡೆಗೆ ಕಡು ನಿರ್ಲಕ್ಷ್ಯ ತೋರಿಸುತ್ತಾ ತಮ್ಮ ಜಾತಿಗಳಿಗೆ 'ಇನ್ನೂ ಬೇಕು' ಎಂದು ಈ ಜಾತಿಶ್ರೀಗಳೆಲ್ಲಾ ಕೇಳಬಾರದು ಅಂತ ಸಂವಿಧಾನವೇನೂ ನಿರ್ಬಂಧ ವಿಧಿಸಿಲ್ಲ. ಆದರೆ ಆತ್ಮಸಾಕ್ಷಿಗೆ ಬದ್ಧರಾಗಿರುವ ಒಂದಷ್ಟು ಮಂದಿ ಸಮಾಜದಲ್ಲಿ ಇದ್ದಾರೆ. ಈಗಾಗಲೇ ಕಾವಿ ಕಂಡರೆ ಬೆಚ್ಚಿ ಬೀಳುವ ಸ್ಥಿತಿಯಲ್ಲಿರುವ ಇವರ ಮನಸ್ಸಿನಲ್ಲಿ ಇನ್ನು ಮುಂದೆ ಕರ್ನಾಟಕ ಬ್ರ್ಯಾಂಡ್‌ನ ಕಾವಿ ಎಂತೆಂತಹ ಭಾವನೆಗಳನ್ನು ಸ್ಫುರಿಸೀತು ಎನ್ನುವುದರಲ್ಲಿ ಕಾವಿಜೀವಿಗಳ ಅಪ್ರಸ್ತುತತೆಯನ್ನು ಊಹಿಸಬೇಕು.

ಎರಡನೆಯದಾಗಿ, ಈ ಹೋರಾಟಗಳಿಂದಾಗಿ ಮೀಸಲಾತಿಯ ಪರಿಕಲ್ಪನೆಯೇ ಅಪ್ರಸ್ತುತವಾಗಿಬಿಡಬಹುದು. ಮೀಸಲಾತಿಯನ್ನು ಕಾನೂನಿನ ಮೂಲಕ ಕಿತ್ತುಹಾಕಬಹುದು ಎಂದಲ್ಲ. ಆದರೆ ಮೀಸಲಾತಿಯ ಬಗ್ಗೆ ಸಾರ್ವಜನಿಕ ಅಭಿಪ್ರಾಯ ಇನ್ನಷ್ಟು ಕೆಡಬಹುದು. ನ್ಯಾಯಯುತವಾಗಿ ಮೀಸಲಾತಿ ಕೇಳುವವರನ್ನು, ನ್ಯಾಯಬದ್ಧವಾಗಿ ಅದನ್ನು ಪಡೆದವರನ್ನು ಕೀಳಾಗಿ, ತಾತ್ಸಾರದ ರೀತಿಯಲ್ಲಿ ನೋಡುವ ಇಂದಿನ ಜಾಯಮಾನ ಹೆಚ್ಚಬಹುದು. ಹೀಗಾಗಬೇಕು ಎನ್ನುವುದೇ ಈ ಹೋರಾಟಗಳಿಗೆ ಕಿಡಿ ಹಚ್ಚಿದವರ ಉದ್ದೇಶ ಇದ್ದಂತೆ ತೋರುತ್ತದೆ. ಮೀಸಲಾತಿ ಪರ ಇದ್ದೇವೆ ಎಂದುಕೊಳ್ಳುವವರು ಬೇಕಾಬಿಟ್ಟಿಯಾಗಿ ಮೀಸಲಾತಿಯ ಬಗ್ಗೆ ಬೇಡಿಕೆಗಳನ್ನು ಮುಂದಿರಿಸುವ ಮೂಲಕ ಮೀಸಲಾತಿ ವಿರೋಧಿಗಳ ಈ ಹುನ್ನಾರಕ್ಕೆ ನೆರವಾಗುತ್ತಿದ್ದಾರೆ. ಮೀಸಲಾತಿಯನ್ನು ಅಪ್ರಸ್ತುತಗೊಳಿಸಲು ಈ ತನಕ ಮೀಸಲಾತಿಯನ್ನು ಗೊತ್ತುಗುರಿಯಿಲ್ಲದೆ ವಿರೋಧಿಸುತ್ತಾ ಬಂದವರು ಮತ್ತು ಮೀಸಲಾತಿಯ ಪ್ರಯೋಜನವನ್ನು ಅನುಭವಿಸುತ್ತಾ ಬಂದವರು ಒಂದಾಗಿ ಶ್ರಮಿಸುತ್ತಿದ್ದಾರೆ ಎನ್ನುವುದು ವಿಪರ್ಯಾಸವೂ ಹೌದು, ಅಪಾಯಕಾರಿಯಾದ ಬೆಳವಣಿಗೆಯೂ ಹೌದು.

ಆಮಿಷಗಳನ್ನು ಒಡ್ಡಿ, ಸುಳ್ಳುಗಳನ್ನು ಪೋಣಿಸಿ, ಮೋಸದ ಬಲೆ ಬೀಸಿ ತಮ್ಮ ಎದುರಾಳಿಗಳನ್ನು ನೈತಿಕವಾಗಿ ಕೆಡಹುವುದರ ಮೂಲಕ ತಮ್ಮ ಪಾರಮ್ಯ ಸ್ಥಾಪಿಸುವ ಹೊಸ ರಾಜಕೀಯ ತಂತ್ರಗಾರಿಕೆಯ ಮುಂದುವರಿದ ಭಾಗವಾಗಿ ಈ ಮೀಸಲಾತಿಯನ್ನು ಅಪ್ರಸ್ತುತಗೊಳಿಸುವ ಯೋಜನೆಯನ್ನೂ ಹಾಕಿಕೊಂಡಹಾಗಿದೆ. ಯಾಕೆಂದರೆ ಮೀಸಲಾತಿಯ ಬೇಡಿಕೆ ಸಮರ್ಪಕವಾಗಿಯೂ ತರ್ಕಬದ್ಧವಾಗಿಯೂ ಇದ್ದಷ್ಟು ಕಾಲ ಅದನ್ನು ನೈತಿಕವಾಗಿ ಮತ್ತು ಸಾಂವಿಧಾನಿಕವಾಗಿ ಎದುರಿಸಲು ಯಾರಿಗೂ ಸಾಧ್ಯವಿಲ್ಲ. ಅದನ್ನು ಎಲ್ಲರೂ ತಲೆಬುಡ ಇಲ್ಲದೆ ಕಿತ್ತುಕೊಳ್ಳ ಹೊರಟರೆ ಅದರ ನೈತಿಕ ನೆಲೆಗಟ್ಟು ಕುಸಿಯುತ್ತದೆ. ಆಗ ಕೆಡವಲು ಸುಲಭ. ಈ ಹೊಸ ರಾಷ್ಟ್ರೀಯ ಭೇದ ನೀತಿಯ ಪ್ರಯೋಗವೇ ಇನ್ನೊಂದು ರೀತಿಯಲ್ಲಿ ಮೀಸಲಾತಿಯ ಮೇಲೆ (ಪರ್ಯಾಯವಾಗಿ ಸಂವಿಧಾನದ ಮೇಲೆ) ಆಗುತ್ತಿದೆ. ಇದನ್ನು ಮೀಸಲಾತಿಯಿಂದ ಪ್ರಯೋಜನ ಪಡೆಯುತ್ತಿರುವ ವರ್ಗಗಳು ಅರ್ಥ ಮಾಡಿಕೊಳ್ಳದೇ ಹೋದದ್ದು ಮರುಕದ ವಿಚಾರ.

ಮೀಸಲಾತಿಯು ಬಡತನ ನಿರ್ಮೂಲನ ಕಾರ್ಯಕ್ರಮವಲ್ಲ. ಅದು ಚಾರಿತ್ರಿಕವಾಗಿ ಅವಕಾಶ ವಂಚಿತರಾಗಿ ಉಳಿದವರನ್ನು ಸಬಲೀಕರಿಸಲು ಮತ್ತು ಅವರನ್ನು ಒಳಗೊಳ್ಳುವ ಮೂಲಕ ವ್ಯವಸ್ಥೆಯನ್ನು ಮರುರೂಪಿಸಲು ಸಂವಿಧಾನ ಆವಿಷ್ಕರಿಸಿರುವ ಒಂದು ಅಸ್ತ್ರ. ಇದರ ಅನಿವಾರ್ಯವನ್ನು ಅರ್ಥಮಾಡಿಕೊಳ್ಳಬೇಕಾದರೆ ಮೀಸಲಾತಿ ಇಲ್ಲದೇ ಹೋಗಿದ್ದರೆ ಏನಾಗುತ್ತಿತ್ತು ಎಂದು ಒಂದು ಕ್ಷಣ ಯೋಚಿಸಬೇಕು. ಶಾಸಕಾಂಗ ಮತ್ತು ಕಾರ್ಯಾಂಗದಲ್ಲಿ ಮೀಸಲಾತಿ ಇದೆ. ನ್ಯಾಯಾಂಗದಲ್ಲಿ ಮೀಸಲಾತಿ ಇಲ್ಲ. ಮಾಧ್ಯಮ ರಂಗವು ಖಾಸಗಿ ಕ್ಷೇತ್ರದಲ್ಲಿರುವುದರಿಂದ ಅದರಲ್ಲೂ ಮೀಸಲಾತಿ ಇಲ್ಲ. ಸಂವಿಧಾನ ಜಾರಿಗೆ ಬಂದು ಏಳು ದಶಕಗಳ ನಂತರವೂ ಎಷ್ಟು ಅವಕಾಶ ವಂಚಿತ ವರ್ಗಗಳ ಜನರಿಗೆ ನ್ಯಾಯಾಂಗದಲ್ಲಿ ಪ್ರಾತಿನಿಧ್ಯ ಪಡೆಯಲು ಸಾಧ್ಯವಾಗಿದೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ಮಾಧ್ಯಮ ರಂಗದ್ದೂ ಅದೇ ಕತೆ.

ಒಂದು ವೇಳೆ ಮೀಸಲಾತಿ ಇಲ್ಲದೇ ಹೋಗಿ ಶಾಸಕಾಂಗ ಮತ್ತು ಕಾರ್ಯಾಂಗದಿಂದಲೂ ಹೀಗೆ ಹಲವಾರು ಜಾತಿ- ಜನಸಮುದಾಯಗಳು ಹೊರಗುಳಿಯುತ್ತಿದ್ದದ್ದೇ ಆಗಿದ್ದರೆ ಈ ದೇಶದ ಅಧಿಕಾರ ವ್ಯವಸ್ಥೆಯಲ್ಲಿ ಅದೆಂತಹ ಅಸಮತೋಲನ ಸೃಷ್ಟಿಯಾಗುತ್ತಿತ್ತು ಎಂದು ಊಹಿಸಿ. ಈ ಅಸಮತೋಲನದ ಪರಿಣಾಮವನ್ನು ಎದುರಿಸಿ ಈ ದೇಶಕ್ಕೆ ಈ ತನಕ ಒಂದಾಗಿ ಉಳಿಯಲು ಸಾಧ್ಯವಾಗುತ್ತಿತ್ತೇ ಎಂದು ಯೋಚಿಸಿ. ಈ ದೇಶ ಉಳಿದಿದೆ. ಇದನ್ನು ಹೇಳಲು ಹಿಂಜರಿಕೆ ಯಾಕೆ?




ಗ್ರಂಥಗಳಲ್ಲಿ ಇರುವ ನೈತಿಕತೆಯನ್ನು ವ್ಯಾವಹಾರಿಕ ಬದುಕಿನಲ್ಲೂ ಅಳವಡಿಸಿಕೊಂಡಿರುವ ವಿದೇಶಿ ಸಮಾಜಗಳಲ್ಲಿ ಒಂದು ಸಂಸ್ಥೆ ವಿವಿಧ ವರ್ಗಗಳನ್ನು ಪ್ರತಿನಿಧಿಸುವ ಮಂದಿಗೆ ಹೆಚ್ಚು ಉದ್ಯೋಗ ನೀಡಿದರೆ ಅದು ಅವರಿಗೆ ಅಭಿಮಾನದ ವಿಷಯ. ಒಂದೇ ಸಾಮಾಜಿಕ ವರ್ಗದವರೇ ಸೇರಿಕೊಂಡಿದ್ದರೆ ಅದವರಿಗೆ ನಾಚಿಕೆಯ ವಿಷಯ. ಭಾರತದಿಂದ ಹೋಗಿ ಅಲ್ಲಿ ನೆಲೆಸಿರುವ ವಲಸಿಗರೂ ವಿದೇಶಿಯರ ಸಾಮಾಜಿಕ ನ್ಯಾಯದ ಈ ಮಾದರಿಯಿಂದ ಲಾಭ ಪಡೆಯುತ್ತಾರೆ. ಭಾರತದಲ್ಲಿರುವ ಅವರ ಬಂಧುಗಳು ಇಲ್ಲಿ ಕುಳಿತು ಮೀಸಲಾತಿಯನ್ನು ಅಣಕಿಸುತ್ತಾರೆ.

ಮೀಸಲಾತಿಯಿಂದ ದಕ್ಷತೆ ಕುಸಿದು ದೇಶ ಹಾಳಾಯಿತು ಎಂದು ಗೋಳಿಡುವವರಿಗೂ ಮೀಸಲಾತಿ ರಹಿತ ನ್ಯಾಯಾಂಗದ ಮತ್ತು ಪತ್ರಿಕಾರಂಗದ ಉದಾಹರಣೆಯ ಮೂಲಕ ಉತ್ತರಿಸೋಣ. ನ್ಯಾಯಾಂಗದ ಗುಣಮಟ್ಟ ಪತನದ ಬಗ್ಗೆ ದೇಶದಲ್ಲೀಗ ಚರ್ಚೆ ನಡೆಯುತ್ತಿದೆ. ಸುಪ್ರೀಂ ಕೋರ್ಟ್‌ನ ಓರ್ವ ನಿವೃತ್ತ ಮುಖ್ಯ ನ್ಯಾಯಮೂರ್ತಿಯವರೇ 'ನ್ಯಾಯಾಂಗಕ್ಕೆ ಹೋದರೆ ನ್ಯಾಯ ಸಿಗುತ್ತದೆ ಎಂಬ ಖಾತರಿ ಇಲ್ಲ' ಅಂತ ಮೊನ್ನೆ ಹೇಳಿದರಲ್ಲಾ? ಮೀಸಲಾತಿಯ ಹಂಗಿಲ್ಲದೆ ಉಳಿದ ಖಾಸಗಿ ಟಿ.ವಿ ಚಾನೆಲ್‌ಗಳೆಲ್ಲಾ ಅಪ್ಪಟ ಎಲೆಕ್ಟ್ರಾನಿಕ್ ಟ್ಯಾಬ್ಲಾಯ್ಡ್‌ಗಳಾಗಿದ್ದು, ವಾರ್ತಾಪ್ರಸಾರ ಕೂಗುಮಾರಿಗಳ ಜೋಡಾಟ-ಕೂಡಾಟ ಆಗಿದ್ದು, ಪತ್ರಿಕೆಗಳು ನ್ಯೂಸ್ ಲೆಟರ್‌ಗಳಿಗಿಂತ ಕಡೆಯಾದದ್ದು ಹೇಗೆ ಮತ್ತು ಯಾರ ಆಧಿಪತ್ಯದಲ್ಲಿ ಅಂತ ಕೇಳಬಹುದೇ?

ಮೀಸಲಾತಿ ವಿರೋಧಿಗಳು ಮೀಸಲಾತಿಗೆ ಮಾಡಿದಷ್ಟೇ ಅಪಚಾರವನ್ನು ಮೀಸಲಾತಿಯಿಂದ ಲಾಭ ಪಡೆಯುತ್ತಿರುವ ಕೆಲ ವರ್ಗಗಳೂ ಮಾಡುತ್ತಿವೆ. ಮೀಸಲಾತಿ ಎಂದರೆ ಅದೊಂದು ಅಗಣಿತ ನಿಧಿ, ಅದನ್ನು ಸಾಧ್ಯವಾದಷ್ಟು ಕಸಿದುಕೊಂಡು ತಮ್ಮವರಿಗಾಗಿ ಕೂಡಿಹಾಕಬೇಕು ಎನ್ನುವಂತೆ ಕೆಲವು ಜಾತಿಯವರು ವರ್ತಿಸುತ್ತಿದ್ದಾರೆ. ಮೀಸಲಾತಿಗೆ ಸಂಪೂರ್ಣ ಅರ್ಹವಾಗಿದ್ದರೂ ಈ ತನಕ ಅದರಿಂದಾಗಿ ಎಳ್ಳಷ್ಟೂ ಲಾಭ ಪಡೆಯಲು ಸಾಧ್ಯವಾಗದ ಕೋಟ್ಯಂತರ ಜನ ದೇಶದಲ್ಲಿ ಇದ್ದಾರೆ. ಅಂತಹವರು ಕರ್ನಾಟಕದ ಹಿಂದುಳಿದ ವರ್ಗಗಳ 1 ಮತ್ತು 2ಎ ಪ್ರವರ್ಗಗಳಲ್ಲೂ ಇದ್ದಾರೆ; ಪರಿಶಿಷ್ಟ ಜಾತಿ-ಪಂಗಡದ ಪಟ್ಟಿಗಳಲ್ಲೂ ಇದ್ದಾರೆ. ಮೀಸಲಾತಿಯ ಬಗ್ಗೆ ಏನಾದರೂ ಧ್ವನಿ ಎತ್ತುವ ನೈತಿಕ ಹಕ್ಕು ಇರುವುದು ಅವರಿಗೆ ಮಾತ್ರ. ಅವರು ಧ್ವನಿಯನ್ನೂ ಎತ್ತಲಾರದ ದುರ್ಬಲರು. ಅಂತಹವರ ಪರವಾಗಿ ಮಾತನಾಡುವ ಅಥವಾ ಹೋರಾಡುವ ಮತ್ತು ಯಾವ್ಯಾವ ಜಾತಿಗಳು ಎಷ್ಟು ಅವಕಾಶವಂಚಿತವಾಗಿವೆ ಮತ್ತು ಮೀಸಲಾತಿಯಿಂದ ಯಾವ್ಯಾವ ಜಾತಿಗಳು ಎಷ್ಟು ಅವಕಾಶಗಳನ್ನು ಪಡೆದುಕೊಂಡಿವೆ ಎಂದು ಲೆಕ್ಕ ಕೇಳುವ ಧೈರ್ಯ ತೋರುವ ಯಾರೇ ಆಗಲಿ ಅವರು ಸ್ವಾಮಿಗಳೆಂದು ಕರೆಸಿಕೊಳ್ಳುವ ಜಾತಿಶ್ರೀಗಳಿಗಿಂತ ಹೆಚ್ಚು ಗೌರವಾರ್ಹರು.

ಚುರುಮುರಿ



ಗ್ರಹಗತಿ, ಏರುಗತಿ

• ಸಿ.ಎನ್.ರಾಜು

'ಗುರೂಜಿ, ಸಿ.ಎಂ ಗ್ರಹಗತಿ ಈಗ ಹೇಗಿದೆ...?' ಶಾಸಕರು ಕೇಳಿದರು.

ಸಿ.ಎಂ ಜಾತಕ ಪರಿಶೀಲಿಸಿದ ಗುರೂಜಿ, ಗ್ರಹಗತಿ, ಅಧೋಗತಿ, ಏರುಗತಿಗಳನ್ನು ಲೆಕ್ಕ ಹಾಕಿ, 'ಸಿ.ಎಂಗೆ ಈಗ ಶತ್ರು ಬಾಧೆ, ಶಾಂತಿ ಭಂಗ ಇದೆ. ಆದರೆ, ಕುರ್ಚಿ ಭದ್ರವಾಗಿದೆ' ಎಂದರು.

'ಯುಗಾದಿಗೆ ಹಳೆ ಸಿ.ಎಂ ಹೋಗಿ, ಹೊಸ ಸಿ.ಎಂ ಬರ್ತಾರಾ ಗುರೂಜಿ?'

'ಹಬ್ಬಕ್ಕೆ ಅಳಿಯ ಬರಬಹುದು, ಹೊಸ ಸಿ.ಎಂ ಬರುವ ಸಾಧ್ಯತೆ ಕಾಣ್ತಿಲ್ಲಾರೀ...'

'ಯುಗಾದಿಗೆ ಸಿ.ಎಂ ಬದಲಾಗ್ತಾರೆ ಅಂತ ನಮ್ಮ ಆಸ್ಥಾನ ಪಂಡಿತರು ಭವಿಷ್ಯ ನುಡಿದಿದ್ದಾರೆ ಗುರೂಜಿ'.

'ಹಬ್ಬ, ಹುಣ್ಣಿಮೆಗೆ ಬದಲಾಗಲು ಸಿ.ಎಂ ಕ್ಯಾಲೆಂಡರೇನ್ರೀ? ನಿಮ್ಮ ಪಂಡಿತರಿಗೆ ಕುರ್ಚಿ ದೋಷ ಇದೆ, ಪರಿಹಾರ ಮಾಡಿಕೊಳ್ಳಲು ಹೇಳಿ' ಗುರೂಜಿಗೆ ಸಿಟ್ಟು ಬಂತು.

'ಹಬ್ಬಹಬ್ಬಕ್ಕೂ ಒಬ್ಬಟ್ಟು ಅಲ್ಲ, ಯುಗಾದಿಗೆ ಹೋಳಿಗೆ, ಗಣೇಶ ಚತುರ್ಥಿಗೆ ಕಡುಬು, ಸಂಕ್ರಾಂತಿಗೆ ಪೊಂಗಲ್ ಇರುವಂತೆ ಹಬ್ಬ ಹಬ್ಬಕ್ಕೂ ಸಿ.ಎಂ ಬದಲಾಗುವ ಪದ್ಧತಿ ಬರಬೇಕು...' ಶಾಸಕರು ಆಸೆಪಟ್ಟರು.

'ಮಂತ್ರಿ ಸ್ಥಾನ ಕೊಡಲಿಲ್ಲ ಅಂತ ನೀವು ಸಿ.ಎಂ ಮೇಲೆ ಮುನಿಸಿಕೊಂಡಿದ್ದೀರಿ ಅಲ್ವಾ?'

'ಹೌದು ಗುರೂಜಿ, ಹಳೆಯ ಮಂತ್ರಿಗಳನ್ನು ಪಕ್ಷ ಸಂಘಟನೆಗೆ ನಿಯೋಜಿಸಿ, ನಮ್ಮಂಥವರನ್ನು ಮಂತ್ರಿ ಮಾಡಬೇಕು ಅನ್ನೋದು ನಮ್ಮ ಒತ್ತಾಯ'.

'ನೀವು ಮಂತ್ರಿ ಸ್ಥಾನದ ಆಸೆ ಬಿಟ್ಟುಬಿಡಿ...'

'ಯಾಕೆ ಗುರೂಜಿ, ನನಗೆ ಮಂತ್ರಿಯಾಗುವ ಶಕ್ತಿ, ಸಾಮರ್ಥ್ಯ ಇಲ್ಲವೇ?'

'ಹಾಗಲ್ಲ, ನಿಮಗೆ ಮುಖ್ಯಮಂತ್ರಿಯಾಗುವ ಯೋಗ ಇದೆ. ಹತ್ತಾರು ಶಾಸಕರನ್ನು ಮಂತ್ರಿ ಮಾಡುವ ಯೋಗ್ಯತೆ ಇದೆ ನಿಮಗೆ' ಎಂದರು ಗುರೂಜಿ.

ಶಾಸಕರು ರೋಮಾಂಚನಗೊಂಡರು. 'ಹೌದೇ ಗುರೂಜಿ...?! ಇವತ್ತಿನಿಂದಲೇ ಸಿ.ಎಂ ಆಗಲು ಪ್ರಯತ್ನ ಮಾಡ್ತೀನಿ, ನನಗೆ ಆಶೀರ್ವಾದ ಮಾಡಿ...' ಎಂದು ಶಾಸಕರು ಕಾಣಿಕೆ ಕೊಟ್ಟು, ಅಡ್ಡ ಬಿದ್ದು ಹೊರಟರು.

ದಿನದ ಟ್ವೀಟ್

ಭರವಸೆ ಉಳಿದಿದೆ



ನಗರವಾಸಿಗಳಾದ ಮಧ್ಯಮ ವರ್ಗದವರಿಗೆ ಪರಿಸರ ಶಿಕ್ಷಣ ನೀಡಲೇಬೇಕಾದ ಅಗತ್ಯವಿದೆ. ರಾಷ್ಟ್ರೀಯ ಉದ್ಯಾನಗಳು ಮತ್ತು ವನ್ಯಜೀವಿ ಅಭಯಾರಣ್ಯಗಳಲ್ಲಿ ಇರುವಾಗ ಅವರು ಹೇಗೆ ವರ್ತಿಸುತ್ತಾರೆ ಎಂಬುದನ್ನು ನೋಡಬೇಕು- ವನ್ಯಜೀವಿಗಳು ಹಾಗೂ ಸ್ಥಳೀಯ ಪರಿಸರದ ವಿಷಯದಲ್ಲಿ ಅವರ ವರ್ತನೆ ಅತ್ಯಂತ ಒರಟಾಗಿರುತ್ತದೆ. ಖಂಡಿತವಾಗಿಯೂ ಯುವಪೀಳಿಗೆ ಭಿನ್ನವಾಗಿದೆ. ಭರವಸೆ ಇರುವುದು ಅಲ್ಲಿಯೇ.

ಪ್ರಕಾಶ್ ಕಸ್ವಾನ್, ಸಹಪ್ರಾಧ್ಯಾಪಕ

25 ವರ್ಷಗಳ ಹಿಂದೆ

ಸೋಮವಾರ, 19-2-1996

• ಸಚಿವ ಮಿರಾಜುದ್ದೀನ್ ರಾಜೀನಾಮೆ ಅಂಗೀಕಾರ

ಬೆಂಗಳೂರು, ಫೆ. 18– ಬೀದರ್ ಜಿಲ್ಲೆಯ ಹುಮ್ನಾಬಾದ್ ಪುರಸಭೆ ಚುನಾವಣೆ ಸಂದರ್ಭದಲ್ಲಿ ಮದ್ಯ ಹಂಚಿಕೆ ವಿವಾದಕ್ಕೆ ಸಿಲುಕಿರುವ ಬಂದೀಖಾನೆ ರಾಜ್ಯ ಸಚಿವ ಮಿರಾಜುದ್ದೀನ್ ಪಟೇಲ್ ಅವರು ಸಚಿವ ಸ್ಥಾನಕ್ಕೆ ನೀಡಿರುವ ರಾಜೀನಾಮೆಯನ್ನು ರಾಜ್ಯಪಾಲ ಖುರ್ಷಿದ್ ಆಲಂ ಖಾನ್ ಅವರು ಇಂದು ಸಂಜೆ ಅಂಗೀಕರಿಸಿದರು.

ಚುನಾವಣೆ ಸಂದರ್ಭದಲ್ಲಿ ಮತದಾರರಿಗೆ ವಿತರಿಸಲೆಂದು ಮಿರಾಜುದ್ದೀನ್ ಅವರು ಮದ್ಯವನ್ನು ಆಪ್ತ ಸಹಾಯಕರೊಬ್ಬರ ಮನೆಯಲ್ಲಿ ಸಂಗ್ರಹಿಸಿ ಇಟ್ಟಿದ್ದರು. ಇದು ಸಚಿವರ ತಿಳಿವಳಿಕೆಯಲ್ಲೇ ನಡೆದಿತ್ತು ಎಂಬ ಆರೋಪ ಬಂದುದರಿಂದ ಅವರು ರಾಜೀನಾಮೆ ನೀಡಿದ್ದಾರೆ.

• ಚಿತ್ರ ವಿತರಕರ ಸಮಸ್ಯೆ ಪರಿಹಾರಕ್ಕೆ ಸಮಿತಿ: ಭರವಸೆ

ಬೆಂಗಳೂರು, ಫೆ. 18– ಕನ್ನಡ ಚಿತ್ರಗಳ ಪ್ರದರ್ಶನಕ್ಕೆ ಇನ್ನಷ್ಟು ಸೂಕ್ತ ವಾತಾವರಣ ಕಲ್ಪಿಸುವ ಉದ್ದೇಶದಿಂದ ಸರ್ಕಾರ ಇತ್ತೀಚೆಗೆ ತೆಗೆದುಕೊಂಡ ತೀರ್ಮಾನದಿಂದ ಪ್ರದರ್ಶಕ ಮತ್ತು ವಿತರಕ ವಲಯಕ್ಕೆ ಯಾವುದೇ ರೀತಿಯ ತೊಂದರೆ ಎದುರಾದಲ್ಲಿ ಅದಕ್ಕೆ ಪರಿಹಾರ ಕಲ್ಪಿಸುವ ಉದ್ದೇಶದ ಸಮಿತಿಯೊಂದನ್ನು ರಚಿಸಲಾಗುವುದು ಎಂದು ವಾರ್ತಾ ಇಲಾಖೆಯ ಕಾರ್ಯದರ್ಶಿ ಎನ್. ವಿಶ್ವನಾಥನ್ ಭರವಸೆ ಕೊಟ್ಟಿದ್ದಾರೆ.

50 ವರ್ಷಗಳ ಹಿಂದೆ

ಶುಕ್ರವಾರ, 19-2-1971

• ಕುದುರೆಮುಖ ಯೋಜನೆ ವರದಿ ಸಿದ್ಧ

ಪಣಜಿ, ಫೆ. 18 (ಪಿಟಿಐ)– ಕುದುರೆಮುಖ ಕಬ್ಬಿಣದ ಅದಿರು ಅಭಿವೃದ್ಧಿ ಯೋಜನೆ ಬಗ್ಗೆ ವಿವರಪೂರ್ಣ ಯೋಜನಾ ವರದಿಯನ್ನು ಆಖೈರುಗೊಳಿಸಲಾಗಿದೆ.

ಸುಮಾರು ₹ 190 ಕೋಟಿ ರೂಪಾಯಿಗಳ ಬಂಡವಾಳದ ಅಂದಾಜನ್ನು ಹೊಂದಿರುವ ಈ ಯೋಜನೆಗೆ ಬಂಡವಾಳ ಹೂಡಿಕೆ ಬಗ್ಗೆ ನಿರ್ಧಾರ ಕೈಗೊಳ್ಳುವುದಕ್ಕಾಗಿ ವರದಿ ಸದ್ಯದಲ್ಲೇ ಕೇಂದ್ರ ಸಂಪುಟದ ಮುಂದೆ ಬರಲಿದೆ.

ಪ್ರತಿವರ್ಷ ಸುಮಾರು ಎಪ್ಪತ್ತು ಲಕ್ಷ ಟನ್ ಕಡಿಮೆ ಕಬ್ಬಿಣದ ಅಂಶವಿರುವ ಅದಿರನ್ನು ಮೊದಲ ಹಂತದಲ್ಲೇ ರಫ್ತು ಮಾಡಬಹುದೆಂದು ಹೇಳಲಾಗಿದೆ. ಮುಂದೆ ಉತ್ತಮವಾದ ಅದಿರನ್ನು ರಫ್ತು ಮಾಡಬಹುದು.

• ಪಂಚತಾರಾ ಹೋಟೆಲ್ ಅಶೋಕ ಏಪ್ರಿಲ್‌ನಲ್ಲಿ ಆರಂಭ

ಬೆಂಗಳೂರು, ಫೆ. 18– ಅಂತರರಾಷ್ಟ್ರೀಯ ಮಟ್ಟದ ಪ್ರವಾಸಿ ಸೌಕರ್ಯಗಳುಳ್ಳ ದಕ್ಷಿಣ ಭಾರತದ ಪ್ರಥಮ 'ಪಂಚತಾರಾ' ಹೋಟೆಲ್ ಅಶೋಕ ಏಪ್ರಿಲ್ ತಿಂಗಳ ಆದಿಭಾಗದಲ್ಲಿ ಆರಂಭವಾಗಲಿದೆ.

ಒಂದೂವರೆ ಕೋಟಿ ರೂಪಾಯಿ ವೆಚ್ಚದ ಆರು ಮಹಡಿಗಳ ಹೋಟೆಲಿನಲ್ಲಿ 80 ಕೊಠಡಿಗಳಿವೆ. ಕುಮಾರಪಾರ್ಕಿನ, ಸರ್ಕಾರಿ ಅತಿಥಿಗೃಹ 'ಕುಮಾರಕೃಪಾ'ದ ಪಕ್ಕದಲ್ಲಿ ಭಾರತ ಪ್ರವಾಸೋದ್ಯಮ ಅಭಿವೃದ್ಧಿ ಕಾರ್ಪೊರೇಷನ್ ನಿರ್ಮಿಸಿರುವ ಹೋಟೆಲಿನಲ್ಲಿ ಐದು ಡಬ್ಬಲ್ ಸೂಟ್‌ಗಳು, ಐದು ಲಕ್ಸುರಿ ಸೂಟುಗಳು ಹಾಗೂ ಆರನೇ ಮಹಡಿಯಲ್ಲಿ ಒಂದು 'ಅಧ್ಯಕ್ಷೀಯ ನಿವಾಸ' ಇದೆ.

ಸಂಗತ

ನಿಜ ನಾಯಕತ್ವದ ಹುಡುಕಾಟದಲ್ಲಿ...

ತನ್ನವರ ಕ್ಷೇಮವನ್ನು ಬಯಸುವ ಪ್ರತಿಯೊಬ್ಬರೂ ನಾಯಕರೆ. ಆದರೆ?

• ವೆಂಕಿ ರಾಘವೇಂದ್ರ, ಭಾರತಿ ಮಣೂರ್

ಭಾರತವು ಸಹಜ ಸ್ಥಿತಿಗೆ ಮರಳುತ್ತಿದೆ ಮತ್ತು ಕೋವಿಡ್ ಸಾಂಕ್ರಾಮಿಕ ನಂತರದ ಬದುಕಿಗೆ ಸಿದ್ಧವಾಗುತ್ತಿದೆ. ಸಾಂಕ್ರಾಮಿಕ ಮತ್ತು ಅದು ತಂದೊಡ್ಡುವ ಹಾನಿಯನ್ನು ತಡೆಯಲು ಕೈಜೋಡಿಸಿದ ನಮ್ಮ ವೈದ್ಯರು, ದಾದಿಯರು, ಪೌರಕಾರ್ಮಿಕರು ಹಾಗೂ ಸ್ವಯಂಸೇವಕರು ಸಮುದಾಯಗಳಲ್ಲಿ ನಿಜವಾದ ನಾಯಕರಾಗಿ ಹೊರಹೊಮ್ಮಿದ್ದಾರೆ. ನಾಯಕತ್ವವೇ ಹಾಗೆ. ಅದು ರಾಜಿಗೆ ತಲೆಬಾಗುವುದಿಲ್ಲ.


1962ರಲ್ಲಿ ಬಿಡುಗಡೆಯಾದ 'ಲಾರೆನ್ಸ್ ಆಫ್ ಅರೇಬಿಯಾ' ಚಲನಚಿತ್ರ ಇತಿಹಾಸದಲ್ಲಿ 'ಮಹಾಕಾವ್ಯ' ಎನಿಸಿಕೊಂಡ ಬ್ರಿಟಿಷ್ ಚಲನಚಿತ್ರ. ಈ ಚಿತ್ರವು ಬ್ರಿಟನ್ನಿನ ಯುವಕನೊಬ್ಬ ಅರೇಬಿಯಾದ ಸ್ವಾತಂತ್ರ್ಯದ ಆಶೋತ್ತರಗಳನ್ನು ಈಡೇರಿಸುವ ನಾಯಕನಾಗುವ ಕಥೆ ಹೊಂದಿದೆ. ಚಿತ್ರಕಥೆಯು ಟಿ.ಇ.ಲಾರೆನ್ಸ್ ಅವರ ನಿಜಜೀವನವನ್ನು ಆಧರಿಸಿದೆ. ಅವರ ಸಾವಿನ 74 ವರ್ಷಗಳ ನಂತರ ನಿರ್ಮಿಸಲಾದ ಈ ಚಿತ್ರ ಎಷ್ಟು ಪರಿಣಾಮಕಾರಿಯಾಗಿ ಪರದೆಯ ಮೇಲೆ ಮೂಡಿಬಂತೋ ಅದಕ್ಕಿಂತ ಹೆಚ್ಚು ಪರಿಣಾಮಕಾರಿಯಾಗಿ ಲಾರೆನ್ಸ್ ಅವರ ಜೀವಿತಾವಧಿ ಕಳೆದಿತ್ತು. ಅವರು ಬರೆದ 'ಸೆವೆನ್ ಪಿಲ್ಲರ್ಸ್ ಆಫ್ ವಿಸ್ಡಂ' ಇವತ್ತಿಗೂ ಪುಸ್ತಕಪ್ರಿಯರ 'ಮಾಸ್ಟರ್‌ಪೀಸ್'.

ಲಾರೆನ್ಸ್ ಒಬ್ಬ ಮಹಾನ್‌ನಾಯಕನಾಗಿ ಬದಲಾಗಿದ್ದಾದರೂ ಹೇಗೆ? ಈ ಕಥೆಯಲ್ಲಿ ಎರಡು ಮೂಲಭೂತ ಪ್ರಶ್ನೆಗಳು ಉದ್ಭವವಾಗುತ್ತವೆ. ಮೊದಲನೆಯದು, ನಾಯಕ ಜನ್ಮದಿಂದಲೇ ನಾಯಕನಾಗಿರುತ್ತಾನೆ. ಎರಡನೆಯದು, ಒಬ್ಬ ವ್ಯಕ್ತಿ ತನ್ನ ಸುತ್ತಮುತ್ತಲಿನ ವಾತಾವರಣದಲ್ಲಿ ಪಡೆದ ಗುಣಗಳಿಂದ ನಾಯಕನಾಗುತ್ತಾನೆ. ನಾಯಕ ಮೊದಲಾ ಅಥವಾ ನಾಯಕತ್ವ ಮೊದಲಾ ಎಂಬ ಪ್ರಶ್ನೆ, ಕೋಳಿ ಮೊದಲಾ ಮೊಟ್ಟೆ ಮೊದಲಾ ಎಂಬ ಪ್ರಶ್ನೆಯ ಹಾಗಿದೆ.

ಗುಂಪನ್ನು ಮುನ್ನಡೆಸುವವನು ಮಾತ್ರವೇ ನಾಯಕನಲ್ಲ. ತನ್ನನ್ನು ತಾನು ಮುನ್ನಡೆಸುವವನೂ ನಾಯಕನೇ. ಆದರೆ ಎಲ್ಲರಲ್ಲೂ ಆ ನಾಯಕತ್ವ ಯಾಕೆ ಯಶಸ್ವಿಯಾಗುವುದಿಲ್ಲ? ಬೇರೆಯವರು ಒಪ್ಪಲಿ ಒಪ್ಪದಿರಲಿ, ನನಗೆ ನಾನು ನಾಯಕ ಎಂಬ ಆತ್ಮವಿಶ್ವಾಸ ಯಾಕೆ ಎಲ್ಲರ ಕಣ್ಣುಗಳಲ್ಲಿ ಕಾಣುವುದಿಲ್ಲ? ಇದಕ್ಕೆ ಕಾರಣ, ಹುಟ್ಟಿನಿಂದ ನಮ್ಮಲ್ಲಿರುವ ನಾಯಕತ್ವ ಗುಣವು ಬಾಹ್ಯ ವಾತಾವರಣದ ಶಕ್ತಿಗಳಿಂದ ಪ್ರಚೋದನೆಗೆ ಒಳಗಾಗದೇ ಇರುವುದು. ಕೋಲ್ಕತ್ತದಲ್ಲಿ ಕಂಡ ಬಡವರ ಕರುಣಾಜನಕ ಸ್ಥಿತಿಗೆ ಸ್ಪಂದಿಸಿ ಸಲ್ಲಿಸಿದ ಸೇವೆಯು ಮದರ್ ತೆರೇಸಾ ಅವರನ್ನು ಮಹಾನ್ ನಾಯಕಿಯನ್ನಾಗಿ ಮಾಡಿತು.

ನಾಯಕತ್ವವು ಲಿಂಗದೊಂದಿಗೆ ಸಂಯೋಜಿಸಿಕೊಂಡದ್ದಲ್ಲ. ಸಾಮಾನ್ಯವಾಗಿ ತಂದೆಯು ಮನೆಯ ಆದಾಯಕ್ಕೆ ಮೂಲವಾದರೂ ತಾಯಿ ಮನೆಯೊಳಗೆ ನಾಯಕತ್ವವನ್ನು ನಿಭಾಯಿಸುತ್ತಾಳೆ. ಕೆಲವು ಮಹಿಳೆಯರಂತೂ ಮನೆಯೊಳಗೆ ಮತ್ತು ಹೊರಗೆ ನಾವೂ ನಾಯಕರಾಗಬಹುದು ಎಂಬುದನ್ನು ತೋರಿಸಿ ಕೊಟ್ಟಿದ್ದಾರೆ. ಕೆಲವರ ನಾಯಕತ್ವಕ್ಕೆ ಪ್ರೇರೇಪಣೆಯ ಮಾತುಗಳು ಮೆರುಗಾದರೆ, ಇನ್ನು ಕೆಲವರ ಕೃತಿಯು ಅವರ ನಾಯಕತ್ವಕ್ಕೆ ಮೂಲ. ಸಾಲುಮರದ ತಿಮ್ಮಕ್ಕ ಎರಡನೆಯ ಪಟ್ಟಿಗೆ ಸೇರುವ ನಾಯಕಿ ಎನ್ನಬಹುದು. ಸಮಸ್ಯೆಯ ಮೂಲವನ್ನು ಹುಡುಕದೆ, ಕೇವಲ ಅದರ ಅಂತ್ಯವನ್ನು ಕಾಣಬಯಸುವ ಗುಣವು ನಾಯಕತ್ವದ ಮೂಲ ಲಕ್ಷಣ.

ಅಮೆರಿಕದ ಪ್ರಖ್ಯಾತ ವಾಗ್ಮಿ ಜಾನ್ ಸಿ. ಮ್ಯಾಕ್ಸ್‌ವೆಲ್ ಅವರು ನಾಯಕತ್ವವನ್ನು ಐದು ಹಂತಗಳಲ್ಲಿ ಗುರುತಿಸುತ್ತಾರೆ. ಸ್ಥಾನದ ಕಾರಣದಿಂದಾಗಿ ಸಿಗುವ ನಾಯಕತ್ವ, ಅನುಮತಿ ಆಧಾರಿತ ನಾಯಕತ್ವ, ಉತ್ಪಾದನಾ ನಾಯಕತ್ವ, ಜನರ ಅಭಿವೃದ್ಧಿ ನಾಯಕತ್ವ ಹಾಗೂ ಪರಾಕಾಷ್ಠೆಯ ನಾಯಕತ್ವ. ನಾಯಕತ್ವವನ್ನು ಸಾಬೀತುಪಡಿಸಲು ನಾಯಕ ಹೋರಾಡಲೇ ಬೇಕು. ಆಗಲೇ ಆ ನಾಯಕತ್ವ ಸಫಲವಾಗುವುದು. ಕೆಲವರು ಪ್ರವಾಸದ ಗೈಡ್‌ಗಳಂತೆ ಬೇರೆಯವರಿಗೆ ನಾಯಕತ್ವವನ್ನು ಕಲಿಸುತ್ತಾರೆ, ತಮ್ಮದಲ್ಲದ ಅನುಭವಗಳನ್ನು ಬೇರೆಯವರೊಂದಿಗೆ ಹಂಚಿಕೊಳ್ಳುತ್ತಾರೆ. ಇದರಿಂದ ನಾಯಕತ್ವದ ಕಲಿಕೆ ಹೇಗೆ ಸಾಧ್ಯ?



'ಥಿಂಕ್ ಆ್ಯಂಡ್ ಗ್ರೋ ರಿಚ್' ಪುಸ್ತಕದ ಲೇಖಕ ನೆಪೋಲಿಯನ್ ಹಿಲ್ ಒಮ್ಮೆ, ಯಶಸ್ವಿ ಉದ್ಯಮಿಯಾದ ಹೆನ್ರಿ ಫೋರ್ಡ್ ಅವರನ್ನು ಸಂದರ್ಶಿಸಲು ಹೋಗುತ್ತಾರೆ. ಅವರ ಕಾರು ತಯಾರಿಕಾ ಘಟಕಕ್ಕೆ ತೆರಳಿ ವಿಚಾರಿಸಿದಾಗ, ಅಲ್ಲಿ ಕಾರಿನ ಬಿಡಿಭಾಗಗಳ ಗ್ರೀಸ್ ಅನ್ನು ಸ್ವಚ್ಛಗೊಳಿಸುತ್ತಿದ್ದ ವ್ಯಕ್ತಿ ಕಚೇರಿಯ ಕಡೆ ಕೈ ತೋರಿಸಿ 'ಕಾಯಬೇಕು, ಫೋರ್ಡ್ ಅಲ್ಲಿಗೆ ಬರುತ್ತಾರೆ' ಎಂದು ತಿಳಿಸುತ್ತಾನೆ. ಬಳಿಕ ಅಲ್ಲಿಗೆ ಬಂದ ಫೋರ್ಡ್ ಬೇರೆ ಯಾರೋ ಆಗಿರದೆ, ಆ ಕಾರಿನ ಭಾಗಗಳನ್ನು ಸ್ವಚ್ಛಗೊಳಿಸುತ್ತಿದ್ದ ವ್ಯಕ್ತಿಯೇ ಆಗಿರುತ್ತಾನೆ. ಫೋರ್ಡ್ ಅವರ ನಾಯಕತ್ವ ಅವರ ಕಾಯಕದಲ್ಲಿ ಎದ್ದು ಕಾಣುವುದಲ್ಲದೆ ಅದೇ ಫೋರ್ಡ್ ಬ್ರ್ಯಾಂಡ್‌ನ ಯಶಸ್ಸಿನ ಗುಟ್ಟು ಎನ್ನುತ್ತಾರೆ ನೆಪೋಲಿಯನ್.

ಹಿಂಬಾಲಕರನ್ನು ಸೃಷ್ಟಿಸುವವನು ನಾಯಕನಲ್ಲ. ಬದಲಾಗಿ ನಾಯಕರನ್ನು ಸೃಷ್ಟಿಸುವವ ನಿಜ ಅರ್ಥದಲ್ಲಿ ನಾಯಕ. ತನ್ನವರ ಕ್ಷೇಮವನ್ನು ಬಯಸುವ ಪ್ರತಿಯೊಬ್ಬರೂ ನಾಯಕರೆ. ಆದರೆ, ಕೇವಲ ತಮ್ಮವರ ಶ್ರೇಷ್ಠತೆಯನ್ನು ಬಯಸಿ ಮನುಕುಲದ ಕೇಡನ್ನು ಬಯಸಿದ ಹಿಟ್ಲರ್ ಜೀವನಪೂರ್ತಿ ಹೋರಾಡಿದರೂ ಆತನೊಬ್ಬ ಕುಖ್ಯಾತ ನಾಯಕ.

ಕೇವಲ ಜನರ ಮೆದುಳಿನಲ್ಲಿ ವಾಸಿಸುವ ನಾಯಕತ್ವದ ಬಾಳಿಕೆಯ ಅವಧಿ ಕಡಿಮೆ. ಬದಲಾಗಿ, ಕೋವಿಡ್ ಕಾಲದಲ್ಲಿ ನಮ್ಮನ್ನು ಪೊರೆದ ಆರೋಗ್ಯ ಕಾರ್ಯಕರ್ತರು, ಪೌರಕಾರ್ಮಿಕರು ಹಾಗೂ ಸ್ವಯಂಸೇವಕರಂತೆ ಅಜ್ಞಾತವಾಗಿದ್ದೂ ಎಲ್ಲರ ಹೃದಯಗಳಲ್ಲಿ ಸ್ಥಾನ ಪಡೆಯುವುದು ನಿಜ ನಾಯಕತ್ವದ ಪೂರ್ವಾಪೇಕ್ಷಿತ ಬೇಡಿಕೆ.

ವಾಚಕರ ವಾಣಿ

ಸೌರ ವಿದ್ಯುತ್‌ನಿಂದ ಬಹೂಪಯೋಗಿ ಯೋಜನೆ

ವಿದ್ಯುತ್ ಸಮಸ್ಯೆ ನಿವಾರಿಸುವ ಸಲುವಾಗಿ ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ಸೌರ ವಿದ್ಯುತ್ ವ್ಯವಸ್ಥೆ ಕಲ್ಪಿಸಲು ಸರ್ಕಾರ ನಿರ್ಧರಿಸಿರುವುದು (ಪ್ರ.ವಾ., ಫೆ. 17) ಸರಿಯಾಗಿದೆ. ರಾಜ್ಯದಲ್ಲಿರುವ ಸಾವಿರಾರು ಕೆರೆಗಳು ಹೂಳು ತುಂಬಿ ನಿರುಪಯುಕ್ತವಾಗಿವೆ. ಈ ಕೆರೆಗಳನ್ನು ಬಳಸಿಕೊಂಡು ಸೌರ ವಿದ್ಯುತ್ ಮತ್ತು ಕುಡಿಯುವ ನೀರಿನಂತಹ ಬಹೂಪಯೋಗಿ ಯೋಜನೆಗಳ ಮೂಲಕ ಗ್ರಾಮಗಳ ವಿದ್ಯುತ್ ಹಾಗೂ ಕುಡಿಯುವ ನೀರಿನ ಸಮಸ್ಯೆಯನ್ನು ಶಾಶ್ವತವಾಗಿ ಬಗೆಹರಿಸಬಹುದಾಗಿದೆ. ಹಾಲಿ ಇರುವ ಕೆರೆಗಳ ನೀರು ನಿಲ್ಲುವ ಪ್ರದೇಶದಲ್ಲಿ ಸೌರ ಫಲಕಗಳನ್ನು ಅಳವಡಿಸಿ ವಿದ್ಯುತ್ ಉತ್ಪಾದನೆ ಮಾಡಬಹುದು. ಸೌರ ಫಲಕದ ಮೇಲೆ ಬೀಳುವ ಮಳೆ ನೀರನ್ನು ಸಂಗ್ರಹಿಸಿ ಕುಡಿಯುವ ನೀರಿಗೆ ಬಳಸಬಹುದು.

ಹಳ್ಳಿಗಳಲ್ಲಿ ರಾಜಕಾಲುವೆ ನಿರ್ಮಿಸಿ, ಹರಿದು ಬರುವ ಮಳೆ ನೀರನ್ನು ಕೆರೆಯಲ್ಲಿ ಸಂಗ್ರಹಿಸಿ, ಕೆರೆ ನೀರು ಆವಿಯಾಗದಂತೆ ಸಂರಕ್ಷಿಸಬಹುದು. ಇದರಿಂದ ಕೃಷಿಗೆ, ದನ ಕರುಗಳಿಗೆ ನೀರು ದೊರೆಯುತ್ತದೆ (ಕೆರೆಗಳಿಂದ ಕೋಟ್ಯಂತರ ಲೀಟರ್ ನೀರು ಆವಿಯಾಗಿ ನಷ್ಟವಾಗುತ್ತಿದೆ). ಕೆರೆಗಳಲ್ಲಿ ಮೀನು ಸಾಕಣೆ ಮಾಡಿ ಲಾಭ ಗಳಿಸಬಹುದು. ಕೆರೆಗಳ ಸುತ್ತಲೂ ಮರ ಬೆಳೆಸಿ, ಈ ಜೀವಂತ ಬೇಲಿಗಳ ಮೂಲಕ ಕೆರೆ ನೀರು ಆವಿಯಾಗದಂತೆ ಸಂರಕ್ಷಿಸಬಹುದು.

ಡಾ. ಎಚ್.ಆರ್.ಪ್ರಕಾಶ್, ಮಂಡ್ಯ

ದ್ವೇಷರಹಿತ ಮಾತು: ಮಾದರಿ ನಡೆ

ತಮ್ಮ ತಂದೆ ರಾಜೀವ್ ಗಾಂಧಿ ಅವರ ಹಂತಕರನ್ನು ಕ್ಷಮಿಸಿರುವುದಾಗಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ (ಪ್ರ.ವಾ., ಫೆ. 18). ಸಿನಿಮಾ ಅಥವಾ ಮಾಧ್ಯಮಗಳಲ್ಲಿ ಕಾಣಿಸಿಕೊಳ್ಳುವ ಹೀರೊ ಈ ರೀತಿ ಇರುವುದಿಲ್ಲ. ಆತ ಹಂತಕರನ್ನು ಕೊಲ್ಲುವ ತನಕ ನಿದ್ರಿಸನು. ಸಾಮಾನ್ಯ ಜನ ಸಹ ಕೋರ್ಟ್ ಮೆಟ್ಟಿಲನ್ನಾದರೂ ಹತ್ತಿ ಹಂತಕನ ವಿರುದ್ಧ ಹೋರಾಡುತ್ತಾರೆ. ಒಟ್ಟು ಅವನ ಅವನತಿಯನ್ನೇ ಬಯಸುತ್ತಾರೆ. ಆದರೆ, ದೇಶದ ದೊಡ್ಡ ರಾಜಕೀಯ ನಾಯಕನಾಗಿಯೂ ಸೌಹಾರ್ದಯುತವಾದ ಮಾತುಗಳ ಮೂಲಕ ತಮ್ಮ ನಿಲುವನ್ನು ಸ್ಪಷ್ಟಪಡಿಸಿರುವ ರಾಹುಲ್ ಅವರಿಗೆ ದೊಡ್ಡ ನಮನ. ಸಾಮಾನ್ಯವಾಗಿ ರಾಜಕೀಯ ನಾಯಕರು ತಮ್ಮ ಮಕ್ಕಳು ದಾರಿ ತಪ್ಪಿದ್ದರೂ ಅವರ ರಕ್ಷಣೆಗೆ ಮುಂದಾಗುತ್ತಾರೆ. ಜನಸಾಮಾನ್ಯರಿಗೆ ಮೋಸ ಮಾಡಿಯಾದರೂ ಸರಿ ತಮ್ಮ ಪ್ರತಿಷ್ಠೆ ಹೆಚ್ಚಿಸಿಕೊಳ್ಳಲು ಮುಂದಾಗುತ್ತಾರೆ. ಇಂತಹವರ ನಡುವೆ ರಾಹುಲ್ ಅವರ ನಡೆ ಮಾದರಿಯಾಗಿದೆ.

ಬಾಲಕೃಷ್ಣ ಎಂ.ಆರ್., ಬೆಂಗಳೂರು

ಗಡಿ... ಗಾಡಿ

ಅಬ್ಬಾ! ಅದೆಂತಹ ಏರಿಕೆ
ತಲುಪಿಯೇ ಬಿಟ್ಟಿತು ಇಂಧನ
ನೂರರ ಗಡಿ,
ಬಲು ಕಷ್ಟ ಓಡಿಸಲು
ಬದುಕಿನ ಗಾಡಿ!

ಮಹಾಂತೇಶ ಮಾಗನೂರ
ಬೆಂಗಳೂರು

ಅವೈಜ್ಞಾನಿಕ ವಿಷಯಕ್ಕೆ ಮಹತ್ವ ಬೇಡ

ಕೆಲವು ಟಿ.ವಿ ಚಾನೆಲ್‌ಗಳಲ್ಲಿ ಪೌರಾಣಿಕ ಧಾರಾವಾಹಿಗಳು ಪ್ರಸಾರವಾಗುತ್ತಿವೆ. ಚಿಕ್ಕ ಮಕ್ಕಳಿಗೆ ಶಾಲೆಗಳಿಗೆ ರಜಾ ಇರುವ ಕಾರಣ, ಇಂತಹ ಧಾರಾವಾಹಿಗಳು ಅವರನ್ನು ಆಕರ್ಷಿಸುತ್ತಿವೆ. ಈ ಬಗೆಯ ಕೆಲವು ಧಾರಾವಾಹಿಗಳಲ್ಲಿ ವಶೀಕರಣ, ಮಾಟ, ಮಂತ್ರವಿದ್ಯೆಯಂತಹ ವಿಷಯಗಳನ್ನು ವೈಭವೀಕರಿಸಲಾಗಿರುತ್ತದೆ.

ಈ ದೃಶ್ಯಗಳು ಮಕ್ಕಳ ಮೇಲಷ್ಟೇ ಅಲ್ಲ ದೊಡ್ಡವರ ಮೇಲೂ ಕೆಟ್ಟ ಪರಿಣಾಮ ಬೀರುತ್ತವೆ. ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯ ಮದನಪಲ್ಲಿಯಲ್ಲಿ ಇತ್ತೀಚೆಗೆ ಜ್ಯೋತಿಷಿಯ ಮಾತು ಕೇಳಿ, ತಮ್ಮ ಇಬ್ಬರು ಮಕ್ಕಳನ್ನೇ ಪೋಷಕರು ಆಯುಧದಿಂದ ಚುಚ್ಚಿ ಕೊಂದಿರುವುದು ಇದಕ್ಕೆ ನಿದರ್ಶನ. ಇಂತಹ ಹಲವಾರು ಬಗೆಯ ಪ್ರಕರಣಗಳು ಸಮಾಜದಲ್ಲಿ ನಡೆಯುತ್ತಿರುವಾಗ, ಅದಕ್ಕೆ ಪೂರಕವಾಗುವಂತಹ ಸಂಗತಿಗಳೇ ಪ್ರಸಾರವಾದರೆ ಸಾಮಾಜಿಕ ಅವನತಿಗೆ ದಾರಿಯಾದಂತೆ ಆಗುತ್ತದೆ. ಕಪಟ ಜ್ಯೋತಿಷಿಗಳಿಗೆ ದಾರಿ ಮಾಡಿಕೊಟ್ಟಂತಾಗುತ್ತದೆ. ಈ ವಿಷಯವನ್ನು ಧಾರಾವಾಹಿಗಳ ನಿರ್ಮಾಪಕರು, ನಿರ್ದೇಶಕರು ಗಂಭೀರವಾಗಿ ಪರಿಗಣಿಸಬೇಕು.

ಎಂ.ಎಸ್.ಉಷಾ ಪ್ರಕಾಶ್, ಮೈಸೂರು

ರಾಮಾ ಜೋಯಿಸ್: ಶಿಕ್ಷಕರ ಕಣ್ಮಣಿ

ಮಂಗಳವಾರ ನಿಧನರಾದ ನ್ಯಾಯಮೂರ್ತಿ ಎಂ.ರಾಮಾ ಜೋಯಿಸ್ ಅವರು ಶಿಕ್ಷಕ ವಲಯದಲ್ಲಿ ಸ್ಮರಣೀಯರು. ಅವರು ವಕೀಲರಾಗಿ ಕಾರ್ಯನಿರ್ವಹಿಸುತ್ತಿದ್ದಾಗ ರಾಜ್ಯದ ಸಾವಿರಾರು ಶಿಕ್ಷಕರಿಗೆ ನೆರವಾಗಿದ್ದರು. ಅಂದಿನ ಸರ್ಕಾರವು ಶಿಕ್ಷಕರ ನಿವೃತ್ತಿ ವಯಸ್ಸನ್ನು 58ರಿಂದ 55ಕ್ಕೆ ಇಳಿಸಿತ್ತು. ಕೆಲವು ಶಿಕ್ಷಕರು ನ್ಯಾಯಾಲಯದ ಮೆಟ್ಟಿಲೇರಿ ತಡೆಯಾಜ್ಞೆ ತಂದರು. ಯಾರೆಲ್ಲ ತಡೆಯಾಜ್ಞೆ ತಂದರೋ ಅವರನ್ನು ಮಾತ್ರ ಸರ್ಕಾರ 58ರವರೆಗೆ ಸೇವೆಯಲ್ಲಿ ಮುಂದುವರಿಸಿತು. ಇದರಿಂದಾಗಿ 55 ವರ್ಷದ ಅಂಚಿಗೆ ಬಂದ ಶಿಕ್ಷಕರೆಲ್ಲರೂ ಕೋರ್ಟ್ ಮೆಟ್ಟಿಲೇರುತ್ತಿದ್ದರು. ದೂರದ ಊರಿನ ಶಿಕ್ಷಕರು ರಾಮಾ ಜೋಯಿಸ್ ಅವರಿಗೆ ₹ 120 ಮನಿಯಾರ್ಡರ್ ಮಾಡಿದರೆ ಸಾಕು, ಕೋರ್ಟಿನ ತಡೆಯಾಜ್ಞೆ ಅವರ ಕೈ ಸೇರುತ್ತಿತ್ತು. ಮೂರು ವರ್ಷಗಳ ಸೇವಾ ಅವಧಿ ದೊರೆಯುತ್ತಿತ್ತು.

ರಾಮಾ ಜೋಯಿಸರು 1977ರಲ್ಲಿ ಹೈಕೋರ್ಟಿನ ನ್ಯಾಯಮೂರ್ತಿಯಾಗಿ ನೇಮಕಗೊಂಡ ಸುದ್ದಿ ತಿಳಿದು ಶಿಕ್ಷಕರೆಲ್ಲರೂ ಒಟ್ಟಾಗಿ ಸೇರಿ ಬೆಂಗಳೂರಿನ ರಾಷ್ಟ್ರೀಯ ವಿದ್ಯಾಲಯದಲ್ಲಿ ಅವರನ್ನು ಸನ್ಮಾನಿಸಿದರು. ಅವರ ರಾಜಾಜಿನಗರದ ನಿವಾಸದಿಂದ ಸನ್ಮಾನ ಸ್ಥಳಕ್ಕೆ ಕರೆದುಕೊಂಡು ಹೋಗುವ ಭಾಗ್ಯ, ಸಹಾಯಕ ಶಿಕ್ಷಣಾಧಿಕಾರಿಯಾಗಿದ್ದ ನನಗೆ ದೊರೆತಿತ್ತು. ನ್ಯಾಯಮೂರ್ತಿಯಾಗಿ ನೇಮಕಗೊಂಡಾಗ ಅವರಿಗೆ ಕೊಟ್ಟ ಪ್ರಥಮ ಸನ್ಮಾನ ಸಮಾರಂಭ ತಮ್ಮದೆಂದು ಶಿಕ್ಷಕರು ಸಂತಸಪಟ್ಟರು.

ಎಸ್.ವಿಶ್ವನಾಥ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಮೀಟೂ ಅಭಿಯಾನದ ಭಾಗವಾಗಿ ತಮ್ಮ ಮೇಲೆ ಲೈಂಗಿಕ ದೌರ್ಜನ್ಯದ ಆರೋಪ ಮಾಡಿದ್ದ ಪತ್ರಕರ್ತೆ ಪ್ರಿಯಾ ರಮಣಿ ವಿರುದ್ಧ ಕೇಂದ್ರದ ಮಾಜಿ ಸಚಿವ ಎಂ.ಜೆ. ಅಕ್ಬರ್ ಹೂಡಿದ್ದ ಮಾನನಷ್ಟ ಮೊಕದ್ದಮೆಯಲ್ಲಿ ಪ್ರಿಯಾ ಅವರನ್ನು ದೆಹಲಿಯ ನ್ಯಾಯಾಲಯವು ಖುಲಾಸೆಗೊಳಿಸಿದೆ. ದೌರ್ಜನ್ಯದ ವಿರುದ್ಧ ದನಿ ಎತ್ತಿದ ಮಹಿಳೆಯನ್ನು ಮಾನನಷ್ಟದ ಹೆಸರಿನಲ್ಲಿ ದಮನ ಮಾಡಲಾಗದು ಎಂದು ತೀರ್ಪು ಹೇಳಿದೆ. ಈ ತೀರ್ಪಿನಿಂದಾಗಿ ಮೀಟೂ ಅಭಿಯಾನವು ಮತ್ತೆ ಚರ್ಚೆಗೆ ಬಂದಿದೆ


ಮೀಟೂ ಏಟು



ಕೆಲಸದ ಸ್ಥಳದಲ್ಲಿ ಮೇಲಧಿಕಾರಿ ಅಥವಾ ತನಗಿಂತಲೂ ಉನ್ನತ ಸ್ಥಾನದಲ್ಲಿರುವ ಪುರುಷನು ನಡೆಸಿದ ಲೈಂಗಿಕ ದೌರ್ಜನ್ಯದ ವಿರುದ್ಧ ದನಿಯೆತ್ತುವ ಅಭಿಯಾನವಾಗಿ #ಮೀಟೂ ರೂಪುಗೊಂಡಿತ್ತು. 2017ರಲ್ಲಿ ಈ ಅಭಿಯಾನವು ವಿಶ್ವದಾದ್ಯಂತ ಭಾರಿ ಸದ್ದು ಮಾಡಿತು. ಆದರೆ ಈ ಅಭಿಯಾನ ಶುರುವಾದದ್ದು 2006ರಲ್ಲಿ. ಅಮೆರಿಕದ ಮಾನವ ಹಕ್ಕುಗಳ ರಕ್ಷಣಾ ಹೋರಾಟಗಾರ್ತಿ ಟರನಾ ಬರ್ಕ್ ಅವರು, ಲೈಂಗಿಕ ದೌರ್ಜನ್ಯದ ವಿರುದ್ಧ ದನಿಯೆತ್ತಲು 'ಮೀಟೂ' ಪದವನ್ನು ಮೊದಲು ಬಳಸಿದರು. ಆದರೆ ಈ ಅಭಿಯಾನಕ್ಕೆ ಜಾಗತಿಕ ಮನ್ನಣೆ ದೊರೆತಿದ್ದು 2017ರಲ್ಲಿ.

ಹಾಲಿವುಡ್ ನಟಿ ಅಲ್ಯೆಸಾ ಮಿಲಾನೊ ಅವರು 2017ರ ಅಕ್ಟೋಬರ್ 15ರಂದು #ಮೀಟೂ ಹ್ಯಾಶ್‌ಟ್ಯಾಗ್‌ನಲ್ಲಿ ಟ್ವೀಟ್ ಮಾಡಿದ್ದರು. 'ಲೈಂಗಿಕ ದೌರ್ಜನ್ಯಕ್ಕೆ ಒಳಗಾಗಿರುವ ಎಲ್ಲಾ ಮಹಿಳೆಯರು #ಮೀಟೂ ಹೆಸರಿನಲ್ಲಿ ಟ್ವೀಟ್ ಮಾಡಿದರೆ, ಈ ದೌರ್ಜನ್ಯದ ತೀವ್ರತೆ ಎಷ್ಟು ಇದೆ ಎಂಬುದು ಜನಕ್ಕೆ ಗೊತ್ತಾಗುತ್ತದೆ' ಎಂದು ಗೆಳೆಯರೊಬ್ಬರು ಹೇಳಿದರು. ನೀವು ಲೈಂಗಿಕ ದೌರ್ಜನ್ಯಕ್ಕೆ ಒಳಗಾಗಿದ್ದರೆ, ಪ್ರತಿಕ್ರಿಯೆಯಲ್ಲಿ ಮೀಟೂ ಎಂದು ಬರೆಯಿರಿ ಎಂದು ಟ್ವೀಟ್ ಮಾಡಿದ್ದರು. ಈ ಟ್ವೀಟ್ ಬರುವುದಕ್ಕೂ 10 ದಿನ ಮೊದಲು, ಹಾಲಿವುಡ್ ನಿರ್ಮಾಪಕ ಹಾರ್ವೆ ವೀನ್‌ಸ್ಟೀನ್ ವಿರುದ್ಧ ಲೈಂಗಿಕ ದೌರ್ಜನ್ಯ ಆರೋಪದ ಲೇಖನ ನ್ಯೂಯಾರ್ಕ್ ಟೈಮ್ಸ್‌ನಲ್ಲಿ ಪ್ರಕಟವಾಗಿತ್ತು. ಅಲ್ಯೆಸಾ ಅವರ ಟ್ವೀಟ್‌ನ ನಂತರ ಹಲವು ಮಂದಿ ಮೀಟೂ ಹೆಸರಿನಲ್ಲಿ ಟ್ವೀಟ್ ಮಾಡಲು ಆರಂಭಿಸಿದರು.

2018ರಲ್ಲಿ ಈ ಅಭಿಯಾನವು ವಿಶ್ವದ ಅನೇಕ ರಾಷ್ಟ್ರಗಳಿಗೆ ಪಸರಿಸಿತು. ಭಾರತ, ಜಪಾನ್, ಆಸ್ಟ್ರೇಲಿಯಾ, ಫ್ರಾನ್ಸ್, ಮಧ್ಯಪ್ರಾಚ್ಯ ದೇಶಗಳು, ನೈಜೀರಿಯಾ, ಮೆಕ್ಸಿಕೊಗಳಲ್ಲಿ ಈ ಅಭಿಯಾನವು ತೀವ್ರತೆ ಪಡೆಯಿತು. ಲೈಂಗಿಕ ದೌರ್ಜನ್ಯಕ್ಕೆ ಒಳಗಾದವರು 'ಮೀಟೂ' ಎಂದಷ್ಟೇ ಟ್ವೀಟ್ ಮಾಡುತ್ತಿದ್ದರು. ನಂತರದ ದಿನಗಳಲ್ಲಿ ದೌರ್ಜನ್ಯ ಎಸಗಿದವರ ವಿವರಗಳನ್ನೂ ಹಂಚಿಕೊಳ್ಳಲು ಆರಂಭಿಸಿದರು. ಜಗತ್ತಿನ ಎಲ್ಲೆಡೆ ಈ ಅಭಿಯಾನಕ್ಕೆ ಚಾಲನೆ ನೀಡಿದವರು ಸಿನಿಮಾ ಮಂದಿಯೇ ಆಗಿದ್ದಾರೆ. ಪತ್ರಿಕೋದ್ಯಮ, ಸರ್ಕಾರಿ ಕಚೇರಿಗಳು, ಉದ್ಯಮ ಸಂಸ್ಥೆಗಳಲ್ಲಿ ನಡೆದ ಲೈಂಗಿಕ ದೌರ್ಜನ್ಯದ ಪ್ರಕರಣಗಳೂ ಈ ಅಭಿಯಾನದ ಕಾರಣ ಬೆಳಕಿಗೆ ಬಂದವು. ಉನ್ನತ ಹುದ್ದೆಯಲ್ಲಿ ಇದ್ದವರು ಕೆಲಸದ ಸ್ಥಳದಲ್ಲಿ ನಡೆಸಿದ ಅತ್ಯಾಚಾರ, ಅಸಭ್ಯ ವರ್ತನೆ, ಅಸಭ್ಯವಾಗಿ ಮೈಸೋಕಿಸುವುದು, ಅಸಭ್ಯವಾಗಿ ಮಾತನಾಡುವುದು, ಅಸಭ್ಯವಾಗಿ ನೋಡುವುದು ಮೊದಲಾದ ಕೃತ್ಯಗಳನ್ನು ಎಸಗಿದವರನ್ನೂ ಗುರಿ ಮಾಡಿ ಸಂತ್ರಸ್ತ ಮಹಿಳೆ/ಯುವತಿಯರು ಟ್ವೀಟ್ ಮಾಡಲು ಆರಂಭಿಸಿದರು.



ಈ ಎಲ್ಲಾ ದೇಶಗಳಲ್ಲಿ ಸಾವಿರಾರು ಸಂಖ್ಯೆಯಲ್ಲಿ ಮೀಟೂ ಆರೋಪ ಕೇಳಿಬಂದರೂ, ನ್ಯಾಯಾಲಯದ ಮೆಟ್ಟಿಲು ಏರಿದ್ದು ಕೆಲವೇ ಪ್ರಕರಣಗಳು. ಆದರೆ ಆರೋಪ ಮಾಡಿದ ಯುವತಿ/ಮಹಿಳೆಯರೇ ಬೇರೆಯವರ ಕೆಂಗಣ್ಣಿಗೆ ಗುರಿಯಾಗಿದ್ದು ನಿಜ. ಆರೋಪ ಮಾಡಿದ ಹಲವರು ತಮ್ಮ ವೃತ್ತಿಬದುಕಿನಲ್ಲಿ ಹಿನ್ನಡೆ ಅನುಭವಿಸಿದ ಉದಾಹರಣೆಗಳು ಸಾಕಷ್ಟಿವೆ. ಭಾರತದಲ್ಲಿ ಇಂತಹ ಉದಾಹರಣೆಗಳ ಸಂಖ್ಯೆ ಹೆಚ್ಚು. ಆದರೆ, ಈ ಅಭಿಯಾನ ಅಂತ್ಯವಾಯಿತು ಎನ್ನುವಷ್ಟರಲ್ಲೇ ಜಗತ್ತಿನ ಎಲ್ಲೋ ಒಂದು ಕಡೆ ಮತ್ತೆ 'ಮೀಟೂ' ಮುನ್ನೆಲೆಗೆ ಬರುತ್ತಿದೆ.

#ಮೀಟೂ ಪ್ರಕರಣಗಳು

ತನುಶ್ರೀ ದತ್ತಾ ಅವರು ಬಾಲಿವುಡ್ ನಟ ನಾನಾ ಪಾಟೇಕರ್ ವಿರುದ್ಧ ಲೈಂಗಿಕ ಕಿರುಕುಳದ ಆರೋಪ ಮಾಡುವುದರೊಂದಿಗೆ ಭಾರತದಲ್ಲೂ ಮೀಟೂ ಪ್ರಕರಣಗಳು ಭಾರಿ ಸದ್ದು ಮಾಡಲು ಆರಂಭಿಸಿದವು. ನೂರಾರು ಸೆಲೆಬ್ರಿಟಿಗಳ ವಿರುದ್ಧ ಆರೋಪಗಳು ಕೇಳಿ ಬಂದವು. ಸಿನಿಮಾ, ಧಾರಾವಾಹಿಯ ಕಲಾವಿದರು, ಗಾಯಕರು, ಬರಹಗಾರರ ಹೆಸರು ಮೀಟೂ ಅಭಿಯಾನದಲ್ಲಿ ಕೇಳಿ ಬಂದಿತು

ನಾನಾ ಪಾಟೇಕರ್

ಬಾಲಿವುಡ್ ನಟಿ ತನುಶ್ರೀ ದತ್ತಾ ಅವರು 2008ರಲ್ಲಿ 'ಹಾರ್ನ್ ಓಕೆ ಪ್ಲೀಸ್' ಚಿತ್ರದ ಸೆಟ್‌ನಲ್ಲಿ ಪ್ರಸಿದ್ಧ ನಟ ನಾನಾ ಪಾಟೇಕರ್ ಅವರಿಂದ ಲೈಂಗಿಕ ಕಿರುಕುಳ ಎದುರಿಸಿದ ಆರೋಪ ಹೊರಿಸಿದ್ದರು. ಪಾಟೇಕರ್ ಈ ಆರೋಪವನ್ನು ಅಲ್ಲಗಳೆದಿದ್ದರು.

ಅನು ಮಲಿಕ್

ಬಾಲಿವುಡ್‌ನ ಖ್ಯಾತ ಸಂಗೀತ ನಿರ್ದೇಶಕ ಅನು ಮಲಿಕ್ ಅವರ ವಿರುದ್ಧ ಸೋನಾ ಮಹಾಪಾತ್ರ, ಶ್ವೇತಾ ಪಂಡಿತ್ ಅವರಲ್ಲದೆ ಇತರ ಇಬ್ಬರು ಮಹಿಳೆಯರು ಕೂಡ ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ಮಾಡಿದ್ದರು. 'ಇದು ಚಾರಿತ್ರ್ಯವಧೆ ಮಾಡುವ ಯತ್ನ' ಎಂದು ಮಲಿಕ್ ಅವರ ವಕೀಲರು ಆರೋಪಿಸಿದ್ದರು. ಪ್ರಕರಣ ಬಯಲಿಗೆ ಬಂದ ಬಳಿಕ ಮಲಿಕ್ ಅವರು 'ಇಂಡಿಯನ್ ಐಡಲ್' ಕಾರ್ಯಕ್ರಮದ ತೀರ್ಪುಗಾರ ಸ್ಥಾನ ತ್ಯಜಿಸಬೇಕಾಯಿತು.

ಸಾಜಿದ್ ಖಾನ್

ಚಲನಚಿತ್ರ ನಿರ್ಮಾಪಕ ಸಾಜಿನ್ ಖಾನ್ ಅವರ ಸಹಾಯಕಳಾಗಿ ಕೆಲಸ ಮಾಡುತ್ತಿದ್ದಾಗ ಅವರು ತಮಗೆ ಲೈಂಗಿಕ ಕಿರುಕುಳ ನೀಡಿದ್ದಾರೆ ಎಂದು ನಟಿ ಸಲೋನಿ ಚೋಪ್ರಾ ಆರೋಪಿಸಿದ್ದರು. ಇನ್ನೂ ಕೆಲವು ಮಹಿಳೆಯರು ಇದೇ ರೀತಿಯ ಆರೋಪ ಮಾಡಿದ್ದರು. ವಿವಾದದಿಂದ ಕಂಗೆಟ್ಟ ಸಾಜಿದ್ ಖಾನ್ ಅವರು ತಮ್ಮ ವಿರುದ್ಧದ ಆರೋಪಗಳನ್ನು ಅಲ್ಲಗಳೆದರೂ 'ಹೌಸ್‌ಫುಲ್ 4' ಚಿತ್ರದ ನಿರ್ದೇಶನದ ಹೊಣೆಯನ್ನು ತ್ಯಜಿಸಬೇಕಾಯಿತು.

ಸುಭಾಷ್ ಘಾಯ್

ಬಾಲಿವುಡ್ ನಿರ್ದೇಶಕ ಸುಭಾಷ್ ಘಾಯ್ ಅವರು ಮಾದಕ ದ್ರವ್ಯ ಸೇವಿಸಿ ತನ್ನ ಮೇಲೆ ಅತ್ಯಾಚಾರ ಎಸಗಿದ್ದಾರೆ ಎಂದು ಅನಾಮಧೇಯ ಮಹಿಳೆಯೊಬ್ಬರು ಸಾಮಾಜಿಕ ಮಾಧ್ಯಮದಲ್ಲಿ ಆರೋಪಿಸಿದ್ದರು. ಮತ್ತೊಂದು ಘಟನೆಯಲ್ಲಿ ಘಾಯ್ ಅವರು ತನ್ನನ್ನು ಹಿಡಿದು ಚುಂಬಿಸಲು ಪ್ರಯತ್ನಿಸಿದ್ದರು ಎಂದು ನಟಿ ಕೇಟ್ ಶರ್ಮಾ ಹೇಳಿದ್ದರು.

ಅಲೋಕ್‌ನಾಥ್

ಕಿರುತೆರೆ ನಟ ಅಲೋಕ್‌ನಾಥ್ ಅವರು 19 ವರ್ಷಗಳ ಹಿಂದೆ ತಮ್ಮ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂದು ಟಿವಿ ಬರಹಗಾರ್ತಿ, ನಿರ್ಮಾಪಕಿ ಮತ್ತು ನಿರ್ದೇಶಕಿ ವಿನತಾ ನಂದಾ ಅವರು ಫೇಸ್‌ಬುಕ್ ಪೋಸ್ಟ್‌ನಲ್ಲಿ ಬರೆದಿದ್ದರು. ನಟಿಯರಾದ ಸಂಧ್ಯಾ ಮೃದುಲ್ ಮತ್ತು ನವನೀತ್ ನಿಶಾನ್ ಸೇರಿ ಹಲವು ಮಹಿಳೆಯರು ಅಲೋಕ್ ವಿರುದ್ಧ ಲೈಂಗಿಕ ಕಿರುಕುಳದ ಆರೋಪ ಮಾಡಿದ್ದಾರೆ. ಅಲೋಕ್ ನಾಥ್ ವಿರುದ್ಧ ಎಫ್‌ಐಆರ್ ಕೂಡ ದಾಖಲಾಗಿತ್ತು. ಆದರೆ ಅವರು ನ್ಯಾಯಾಲದಿಂದ ಜಾಮೀನು ಪಡೆದರು. ಲೈಂಗಿಕ ದೌರ್ಜನ್ಯದ ಆರೋಪ ಮಾಡಿದ ಬರಹಗಾರ್ತಿ ವಿರುದ್ಧ ಅಲೋಕ್ ನಾಥ್ ಮಾನನಷ್ಟ ಮೊಕದ್ದಮೆ ಹೂಡಿದ್ದರು.

ಚೇತನ್ ಭಗತ್

ಒಂದು ದಶಕದ ಹಿಂದೆ ಜೈಪುರ ಸಾಹಿತ್ಯ ಉತ್ಸವದಲ್ಲಿ ಎರಡು ಬಾರಿ ಭೇಟಿಯಾದಾಗಲೂ ಪ್ರಸಿದ್ಧ ಲೇಖಕ ಚೇತನ್ ಭಗತ್ ಅವರು ಅಹಿತಕರವಾಗಿ ನಡೆದುಕೊಂಡರು ಎಂದು ಲೇಖಕಿ ಇರಾ ತ್ರಿವೇದಿ ಆರೋಪಿಸಿದ್ದರು. ಆದರೆ ಭಗತ್ ಅವರು ಟ್ವಿಟರ್‌ನಲ್ಲಿ ಈ ಆರೋಪಗಳನ್ನು ಅಲ್ಲಗಳೆದಿದ್ದರು. ಆದರೆ, ಅಹಿತಕರವಾಗಿ ವರ್ತಿಸಿದ್ದಕ್ಕೆ ಕ್ಷಮೆ ಕೋರಿದ್ದರು.

ಅರ್ಜುನ್ ಸರ್ಜಾ ವಿರುದ್ಧ ಆರೋಪ

ಕನ್ನಡದ ನಟಿ ಶ್ರುತಿ ಹರಿಹರನ್ ಅವರು ನಟ ಅರ್ಜುನ್ ಸರ್ಜಾ ವಿರುದ್ಧ ಆರೋಪ ಮಾಡಿದ್ದರು. ವಿಸ್ಮಯ ಸಿನಿಮಾದ ಒಂದು ಹಾಡಿನ ಚಿತ್ರೀಕರಣದ ವೇಳೆ ಅರ್ಜುನ್ ತನ್ನೊಂದಿಗೆ ಅಸಭ್ಯವಾಗಿ ವರ್ತಿಸಿದ್ದರು ಎಂದು ಶ್ರುತಿ ಆರೋಪಿಸಿದ್ದರು. ಈ ಆರೋಪದ ವಿರುದ್ಧ ಅರ್ಜುನ್ ಸರ್ಜಾ ಪರವಾಗಿ ನಟ ಧ್ರುವ ಸರ್ಜಾ ಅವರು ₹5 ಕೋಟಿ ಮಾನನಷ್ಟ ಮೊಕದ್ದಮೆ ಹೂಡಿದ್ದರು. ಪ್ರಕರಣದ ವಿಚಾರಣೆ ವಿಳಂಬವಾಯಿತು. ಚಿತ್ರರಂಗದ ಹಿರಿಯರು ಈ ಇಬ್ಬರನ್ನು ಕರೆದು, ಸಂಧಾನ ನಡೆಸಲು ಯತ್ನಿಸಿದರು. ಅದು ವಿಫಲವಾಯಿತು. ಈ ಪ್ರಕರಣವನ್ನು ವಜಾ ಮಾಡಬೇಕು ಎಂದು ಶ್ರುತಿ ಅವರು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಾಲಯವು 2019ರ ಆಗಸ್ಟ್‌ನಲ್ಲಿ ವಜಾ ಮಾಡಿತ್ತು.

ಶ್ರುತಿ ಅವರು ಈ ಸಂಬಂಧ ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಪೊಲೀಸರು ಅರ್ಜುನ್ ಸರ್ಜಾ ಅವರನ್ನು ಕರೆದು, ವಿಚಾರಣೆ ನಡೆಸಿದ್ದಾರೆ. ಅರ್ಜುನ ಸರ್ಜಾ ವಿರುದ್ಧ ಆರೋಪ ಮಾಡಿದ ನಂತರ ತಮಗೆ ಯಾವುದೇ ಚಿತ್ರದ ಆಫರ್‌ಗಳು ಬರುತ್ತಿಲ್ಲ ಎಂದು ಶ್ರುತಿ ಹರಿಹರನ್ ಅವರು ಒಮ್ಮೆ ಹೇಳಿಕೊಂಡಿದ್ದರು.

ರಘು ದೀಕ್ಷಿತ್ ಕ್ಷಮೆ

ಗಾಯಕಿ ಚಿನ್ಮಯಿ ಶ್ರೀಪಾದ್ 2018ರ ಅಕ್ಟೋಬರ್‌ನಲ್ಲಿ ಸಂಗೀತ ನಿರ್ದೇಶಕ ಮತ್ತು ಗಾಯಕ ರಘು ದೀಕ್ಷಿತ್ ವಿರುದ್ಧ ಮೀಟೂ ಆರೋಪ ಮಾಡಿದ್ದರು. ಚಿನ್ಮಯಿ ಅವರು ತಮ್ಮ ಗೆಳತಿಯ ಪರವಾಗಿ ಈ ವಿಷಯವನ್ನು ಟ್ವೀಟ್‌ನಲ್ಲಿ ಬಹಿರಂಗಪಡಿಸಿದ್ದರು. 'ಹಾಡಿನ ರೆಕಾರ್ಡಿಂಗ್ ವೇಳೆ ತನ್ನನ್ನು ಸೆಳೆದುಕೊಂಡು, ಮುತ್ತು ಕೊಡುವಂತೆ ರಘು ದೀಕ್ಷಿತ್ ಕೇಳಿದ್ದರು. ನನ್ನನ್ನು ಸ್ಟುಡಿಯೊದ ಬಾಗಿಲಿನವರೆಗೆ ಎತ್ತಿಕೊಂಡು ಹೋಗಿದ್ದರು. ಒಮ್ಮೆ ತಮ್ಮ ಮನೆಯಲ್ಲಿ ತಮ್ಮ ತೊಡೆಯ ಮೇಲೆ ಕೂತುಕೊಳ್ಳಲು ಹೇಳಿದ್ದರು. ತಮ್ಮ ಪತ್ನಿ ರಾಕ್ಷಸಿ ಎಂದೆಲ್ಲಾ ಹೇಳಿದ್ದರು' ಎಂದು ಗಾಯಕಿಯೊಬ್ಬರು ಮಾಡಿದ್ದ ಆರೋಪಗಳ ಸ್ಕ್ರೀನ್‌ಶಾಟ್ ಅನ್ನು ಚಿನ್ಮಯಿ ಶ್ರೀಪಾದ್ ಟ್ವೀಟ್ ಮಾಡಿದ್ದರು. ಇದು ಹೆಚ್ಚು ಸದ್ದು ಮಾಡಿತ್ತು. ಆದರೆ, ಯಾವುದೇ ಪ್ರಕರಣ ದಾಖಲಾಗಿರಲಿಲ್ಲ.

ಈ ಬಗ್ಗೆ ರಘು ದೀಕ್ಷಿತ್ ಸ್ಪಷ್ಟನೆ ನೀಡಿದ್ದರು. 'ಸ್ಟುಡಿಯೊದಲ್ಲಿ ಈ ಘಟನೆ ನಡೆದದ್ದು ನಿಜ. ಆದರೆ ಚಿನ್ಮಯಿ ವಿವರಿಸಿದಂತೆಯೇ ಎಲ್ಲವೂ ನಡೆದಿರಲಿಲ್ಲ. ನಾನು ಸಂದರ್ಭವನ್ನು ತಪ್ಪಾಗಿ ಅರ್ಥೈಸಿಕೊಂಡಿದ್ದೆ. ಅದು ತಪ್ಪು ಎಂದು ಆ ವ್ಯಕ್ತಿ ನನಗೆ ಅರ್ಥಮಾಡಿಸಿದ್ದರು. ಆಗ ನಾನು ಕ್ಷಮೆ ಕೇಳಿದ್ದೆ. ಈಗ ಬಹಿರಂಗವಾಗಿ ಕ್ಷಮೆ ಕೇಳುತ್ತಿದ್ದೇನೆ. ಖಾಸಗಿಯಾಗಿ ಮತ್ತೆ ಕ್ಷಮೆ ಕೇಳುತ್ತೇನೆ' ಎಂದು ರಘು ದೀಕ್ಷಿತ್ ಸ್ಪಷ್ಟನೆ ನೀಡಿದ್ದರು.

ಹಾರ್ವೆ ವೀನ್‌ಸ್ಟೀನ್‌ಗೆ ಶಿಕ್ಷೆ

ಜಾಗತಿಕ ಮಟ್ಟದಲ್ಲಿ ಹೆಚ್ಚು ಸದ್ದು ಮಾಡಿದ ಮೀಟೂ ಪ್ರಕರಣ, ಖ್ಯಾತ ಹಾಲಿವುಡ್ ನಿರ್ಮಾಪಕ ಹಾರ್ವೆ ವೀನ್‌ಸ್ಟೀನ್ ಅವರದ್ದು. ಅಲ್ಯೆಸಾ ಮಿಲಾನೊ ಅವರು ವೀನ್‌ಸ್ಟೀನ್ ವಿರುದ್ಧ ಆರೋಪ ಮಾಡಿದ್ದಲ್ಲದೆ, ಪೊಲೀಸ್ ದೂರು ದಾಖಲಿಸಿದ್ದರು. ಆನಂತರ ವೀನ್‌ಸ್ಟೀನ್‌ನಿಂದ ದೌರ್ಜನ್ಯಕ್ಕೆ ಒಳಗಾಗಿದ್ದೇವೆ ಎಂದು ಹತ್ತಾರು ನಟಿಯರು ಮತ್ತು ಯುವತಿಯರು ಟ್ವೀಟ್ ಮಾಡಲು ಆರಂಭಿಸಿದರು. ಒಂದು ವರ್ಷ ತುಂಬುವಷ್ಟರಲ್ಲಿ ವೀನ್‌ಸ್ಟೀನ್ ವಿರುದ್ಧವೇ 96 ಆರೋಪಗಳು ಕೇಳಿಬಂದಿದ್ದವು. ಅವುಗಳಲ್ಲಿ ಹಲವು ನ್ಯಾಯಾಲಯದ ಮೆಟ್ಟಿಲೇರಿದವು. 'ವೀನ್‌ಸ್ಟೀನ್ ವಿರುದ್ಧ ಆರೋಪ ಮಾಡಿದ ಯಾವ ಮಹಿಳೆಯೂ, ವೀನ್‌ಸ್ಟೀನ್ ವಿರುದ್ಧ ಇಂತಹ ಅಲೆ ಎದ್ದುಬರಲಿದೆ ಎಂದು ಊಹಿಸಿರಲಿಕ್ಕಿಲ್ಲ' ಎಂದು ಅಲ್ಯೆಸಾ ಟ್ವೀಟ್ ಮಾಡಿದ್ದರು. ವೀನ್‌ಸ್ಟೀನ್ ವಿರುದ್ಧ ತನಿಖೆ ನಡೆದು 2020ರ ಏಪ್ರಿಲ್‌ನಲ್ಲಿ, ಜೈಲುಶಿಕ್ಷೆ ಘೋಷಣೆಯಾಯಿತು.

ರೋಮನ್ ಪೊಲಾನ್ಸ್ಕಿ ಪರ ಅನುಕಂಪ

ಫ್ರಾನ್ಸ್‌ನಲ್ಲಿ ಚಲನಚಿತ್ರ ನಿರ್ದೇಶಕರಿಗೆ ನೀಡುವ ಅತ್ಯುನ್ನತ ಪ್ರಶಸ್ತಿ 2020ರ ಮಾರ್ಚ್ 8ರಂದು ಘೋಷಣೆಯಾಗಿತ್ತು. ಖ್ಯಾತ ನಿರ್ದೇಶಕ ರೋಮನ್ ಪೊಲಾನ್ಸ್ಕಿಗೆ ಈ ಗೌರವ ಸಂದಿತ್ತು. ಪ್ರಶಸ್ತಿ ಪ್ರದಾನ ಸಮಾರಂಭದಲ್ಲೇ ಖ್ಯಾತ ನಟಿ ಅಡೀಲ್ ಹೀನಲ್ ಅವರು, 'ನಾಚಿಕೆಯಾಗಬೇಕು' ಎಂದು ಹೊರನಡೆದಿದ್ದರು. ತಾವು 12 ವರ್ಷದ ಬಾಲಕಿಯಾಗಿದ್ದಾಗ ಪೊಲಾನ್ಸ್ಕಿ ತಮ್ಮ ಮೇಲೆ ಅತ್ಯಾಚಾರ, ಲೈಂಗಿಕ ದೌರ್ಜನ್ಯ ನಡೆಸಿದ್ದರು ಎಂದು ಹೀನಲ್ ಆರೋಪಿಸಿದ್ದರು. ಇದರ ಬೆನ್ನಲ್ಲೇ ಇನ್ನೂ 11 ಯುವತಿಯರು ತಾವು ಬಾಲಕಿಯರಾಗಿದ್ದಾಗ ಪೊಲಾನ್ಸ್ಕಿ ತಮ್ಮ ಮೇಲೆ ಅತ್ಯಾಚಾರ ಎಸಗಿದ್ದರು ಎಂದು ಆರೋಪಿಸಿದರು. 1978ರಲ್ಲಿ ಅಮೆರಿಕದಲ್ಲಿ ಹಾಲಿವುಡ್ ನಿರ್ದೇಶಕ ರೋಮನ್ ಪೊಲಾನ್ಸ್ಕಿ ವಿರುದ್ಧ ಅತ್ಯಾಚಾರ ಮತ್ತು ಲೈಂಗಿಕ ದೌರ್ಜನ್ಯ ಆರೋಪಗಳು ಸಾಬೀತಾಗಿದ್ದವು. ಶಿಕ್ಷೆಯಾಗುವ ಮುನ್ನ ಪೊಲಾನ್ಸ್ಕಿ ಅಮೆರಿಕ ಬಿಟ್ಟು ಫ್ರಾನ್ಸ್‌ನಲ್ಲಿ ಆಶ್ರಯ ಪಡೆದಿದ್ದರು ಎಂಬುದರ ಬಗ್ಗೆ ಹಲವು ವರದಿಗಳು ಪ್ರಕಟವಾದವು. ಆದರೆ, ಪೊಲಾನ್ಸ್ಕಿ ಪರವಾಗಿ ಅನುಕಂಪದ ಅಲೆ ಸೃಷ್ಟಿಯಾಯಿತು. ಅವರಿಗೆ ಅತ್ಯುತ್ತಮ ನಿರ್ದೇಶಕ ಪ್ರಶಸ್ತಿ ಪ್ರದಾನ ಮಾಡಲಾಯಿತು. ಈ ಆರೋಪ ಮಾಡಿದ್ದ 12 ಜನರೂ ಸ್ವಾರ್ಥಿಗಳು ಎಂದು ಫ್ರಾನ್ಸ್ ಚಿತ್ರೋದ್ಯಮ ತೆಗಳಿತು.

ವರದಿ: ಜಯಸಿಂಹ ಆರ್., ಅಮೃತಕಿರಣ್ ಬಿ.ಎಂ.



ನ್ಯಾಯಾಲಯದ ತೀರ್ಪು ಸ್ವಾಗತಾರ್ಹ. ಮಹಿಳೆಯು ತನ್ನ ಮೇಲೆ ನಡೆದ ದೌರ್ಜನ್ಯವನ್ನು ಕಾಲದ ಮಿತಿಯ ನಿರ್ಬಂಧವಿಲ್ಲದೆ ಪ್ರಶ್ನಿಸುವ, ದನಿಯೆತ್ತುವ ಮತ್ತು ನ್ಯಾಯಕ್ಕಾಗಿ ಹೋರಾಡುವ ಹಕ್ಕನ್ನು ಪುಷ್ಟೀಕರಿಸಿದಂತಾಗಿದೆ. ಮಾನನಷ್ಟಕ್ಕಿಂತ ಮಹಿಳೆಯ ಘನತೆ ಮುಖ್ಯ ಎಂಬ ಸಂದೇಶ ಸಾರಿದೆ. ಲೈಂಗಿಕ ದೌರ್ಜನ್ಯದ ವಿರುದ್ಧ ಹೋರಾಟದ ದಾರಿ ವಿಸ್ತರಣೆಗೊಂಡಂತಾಗಿದೆ. ದೈಹಿಕ ದೃಷ್ಟಿಕೋನದ ಬದಲು ಮಹಿಳೆಯ ಅಸ್ತಿತ್ವ ಮತ್ತು ಅಸ್ಮಿತೆಯನ್ನು ಪುರುಷರು ಗೌರವಿಸಬೇಕು. ಸಹಜೀವಿಯಾಗಿ ನಡೆದುಕೊಳ್ಳುವ ನಾಗರಿಕ ಬದ್ಧತೆ ತೋರಬೇಕು.

ಕೆ ನೀಲಾ, ಉಪಾಧ್ಯಕ್ಷೆ, ಜನವಾದಿ ಮಹಿಳಾ ಸಂಘಟನೆ



ಕೆಲಸದ ಸ್ಥಳದಲ್ಲಿ ಮೇಲಧಿಕಾರಿಗಳಿಂದ ಲೈಂಗಿಕ ಕಿರುಕುಳ ನಡೆದಾಗ ಅದನ್ನು ಧೈರ್ಯವಾಗಿ ಹೇಳಿದರೆ ಇಂದಿನ ಪುರುಷ ಪ್ರಧಾನ ಸಮಾಜ ಹೆಣ್ಣಿನ ಬಗ್ಗೆಯೇ ನೆಗೆಟಿವ್ ಆಗಿ ಮಾತನಾಡುತ್ತದೆ. ಸತ್ಯ ಎಂದಿಗೂ ಸತ್ಯವಾಗಿಯೇ ಇರುತ್ತದೆ. ಆದರೆ ಆ ಸತ್ಯ ಹೇಳಲು ಧೈರ್ಯ ಬರಬೇಕು. ಅದು ಇವತ್ತು ಬರಬಹುದು, ನಾಳೆ ಬರಬಹುದು. ಮೀಟೂ ಅಭಿಯಾನದಿಂದ ಹೆಣ್ಣುಮಕ್ಕಳಿಗೆ ಧೈರ್ಯ ಬರುತ್ತಿದೆ. ಪತ್ರಕರ್ತೆ ಪ್ರಿಯಾ ರಮಣಿ ಅವರ ಪರವಾದ ತೀರ್ಪು ಹೆಣ್ಣು ಮಕ್ಕಳಿಗೆ ಒಂದು ಅಸ್ತ್ರವಾಗಿದೆ.

ಎಂ.ವಿ.ಕಲ್ಯಾಣಿ, ಜಿಲ್ಲಾ ಅಧ್ಯಕ್ಷೆ, ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ, ತುಮಕೂರು



ಪ್ರಿಯಾ ರಮಣಿ ಅವರನ್ನು ದೆಹಲಿ ನ್ಯಾಯಾಲಯ ಖುಲಾಸೆಗೊಳಿಸಿರುವುದು ಎಷ್ಟೋ ಮಹಿಳೆಯರಿಗೆ ಸಮಾಧಾನ ತರಿಸಿದೆ. ಮಹಿಳೆ ತನಗಾದ ಅನ್ಯಾಯದ ವಿರುದ್ಧ ಧ್ವನಿ ಎತ್ತುವ ಹಕ್ಕನ್ನು ಹೊಂದಿದ್ದಾಳೆ ಎಂಬುದು ಸಾಬೀತಾಗಿದೆ.

ಹೇಮಾ, ಉಪನ್ಯಾಸಕಿ, ಚಿಕ್ಕಬಳ್ಳಾಪುರ



ಲೈಂಗಿಕ ದೌರ್ಜನ್ಯ ಅನುಭವಿಸಿದ ಹೆಣ್ಣಿಗೆ, ಅದು ಬದುಕಿನುದ್ದದ ಇಂಗದ ದಾವಾನಲ. ಅದು ವಿಭಿನ್ನ ಸಾಮಾಜಿಕ ಸ್ತರದ ಮಹಿಳೆಯರಿಗೆ ಬೇರೆ ಬೇರೆಯಾಗಿರುವುದು ಸಾಧ್ಯವಿಲ್ಲ. ಆದರೆ, ಅದನ್ನು ಹೊರ ಹಾಕುವುದು, ನ್ಯಾಯಕ್ಕಾಗಿ ಅವಿರತ ಹೋರಾಡುವುದು, ಗೆಲ್ಲಲು ಸಾಧ್ಯವಾಗಿರುವುದು... ಇಂದಿಗೂ ಬೆರಳೆಣಿಕೆಯಷ್ಟು ಮಹಿಳೆಯರಿಗೆ ಮಾತ್ರ! ಈ ಸತ್ಯ, ನಮ್ಮ ಕರಾಳ ವ್ಯವಸ್ಥೆಗೆ ಹಿಡಿದ ಕನ್ನಡಿ. ಈ ಸೂಕ್ಷ್ಮತೆಯನ್ನರಿಯುವ ತಾಯ್ತನದ ಕಣ್ಣು ನ್ಯಾಯ ಸ್ಥಾನಕ್ಕೆ, ಸಮಾಜಕ್ಕೆ ತೆರೆದುಕೊಂಡಾಗಲೆಲ್ಲಾ, ಹೆಣ್ಣು ನಿಜವಾದ ಅರ್ಥದಲ್ಲಿ ಬದುಕಿದ್ದಾಳೆ. ಇಲ್ಲವಾದಾಗಲೆಲ್ಲ ಬದುಕಿದ್ದೂ ಸತ್ತಿದ್ದಾಳೆ! ಪ್ರಿಯಾ ರಮಣಿಯವರ ಈ 'ಮೀಟೂ' ಪ್ರಕರಣವನ್ನು ಅತ್ಯಂತ ಸೂಕ್ಷ್ಮವಾಗಿ, ನಿಷ್ಪಕ್ಷಪಾತವಾಗಿ ವಿಶ್ಲೇಷಿಸುವ ಮೂಲಕ, ತನ್ನ ದೇಹದ ಕಾರಣಕ್ಕೇ ದಮನಕ್ಕೊಳಗಾಗಬಲ್ಲ ಹೆಣ್ಣುಸಂಕುಲದ ಪರವಾಗಿ ನಿಂತು, ನ್ಯಾಯಸ್ಥಾನ ನಂಬಿಕೆ ಹೆಚ್ಚಿಸಿಕೊಂಡಿದೆ.

ರೂಪ ಹಾಸನ, ಲೇಖಕಿ



ಲೈಂಗಿಕ ದೌರ್ಜನ್ಯದ ವಿರುದ್ಧ ಮಹಿಳೆ ಧ್ವನಿ ಎತ್ತಿದಾಗ ಅವಳ ಧ್ವನಿ ಅಡಗಿಸುವ ಪ್ರಯತ್ನಗಳು ಎಲ್ಲ ದಿಕ್ಕುಗಳಿಂದಲೂ ನಡೆಯುತ್ತವೆ. ಎಲ್ಲ ಒತ್ತಡಗಳನ್ನು ಮೀರಿ ಪ್ರಿಯಾ ರಮಣಿ, ಎಂ.ಜೆ. ಅಕ್ಬರ್ ವಿರುದ್ಧ ಆರೋಪ ಮಾಡಿದ್ದರು. ಪ್ರಿಯಾ ಹೋರಾಟಕ್ಕೆ ನ್ಯಾಯಾಲಯದಲ್ಲಿ ದೊರೆತಿರುವ ಗೆಲುವು ಮಹಿಳಾ ಸಮುದಾಯಕ್ಕೆ ಬಲ ದೊರೆತಂತಾಗಿದೆ. ದೌರ್ಜನ್ಯ ನಡೆದ ಸಂದರ್ಭದಲ್ಲಿ ಮಹಿಳೆ ಯಾವುದೇ ಒತ್ತಡಕ್ಕೆ ಮಣಿಯದೆ ಮಾತನಾಡಬೇಕು. ಸತ್ಯವನ್ನು ಬಿಚ್ಚಿಟ್ಟಾಗ ನ್ಯಾಯಕ್ಕೆ ಜಯ ಸಿಕ್ಕೇ ಸಿಗುತ್ತದೆ.

ವಿದ್ಯಾ ದಿನಕರ್, ಸಾಮಾಜಿಕ ಹೋರಾಟಗಾರ್ತಿ, ಮಂಗಳೂರು



ಮಹಿಳೆಯರ ರಕ್ಷಣೆಯ ಪರವಾಗಿರುವ, ಅವರಿಗೆ ಧೈರ್ಯ ತಂದುಕೊಡುವ ಈ ತೀರ್ಪನ್ನು ಸ್ವಾಗತಿಸುತ್ತೇನೆ. ಈ ಅಂಶವನ್ನು ಉಲ್ಲೇಖಿಸದೇ ಹೋಗಿದ್ದರೆ ಕೆಲವು ಪುರುಷರು ಮಾನನಷ್ಟ ಮೊಕದ್ದಮೆಯಂತಹ ಅವಕಾಶ ದುರುಪಯೋಗ ಮಾಡಿಕೊಳ್ಳುತ್ತಿದ್ದರು. ಮುಂದೆ, ಮಹಿಳೆಯರು ಕೂಡ ಈ ತೀರ್ಪನ್ನು ದುರುಪಯೋಗ ಮಾಡಿಕೊಳ್ಳಬಾರದು. ಸಜ್ಜನ ಪುರುಷರಿಗೆ ರಕ್ಷಣೆ ಒದಗಿಸುವ ದಿಸೆಯಲ್ಲಿಯೂ ನಿರ್ದಿಷ್ಟ ಕ್ರಮಗಳನ್ನು ರೂಪಿಸಬೇಕಾಗುತ್ತದೆ. ಮುಗ್ಧ ಮಹಿಳೆ ಮತ್ತು ಪುರುಷ ಇಬ್ಬರಿಗೂ ಅನ್ಯಾಯ ಆಗಬಾರದು ಎಂಬ ಉದ್ದೇಶ ನನ್ನದು.

ತೇಜಸ್ವಿನಿ ಗೌಡ, ವಿಧಾನ ಪರಿಷತ್ ಬಿಜೆಪಿ ಸದಸ್ಯೆ



ಕೆಲವು ಗಣ್ಯರಿಗೆ ಈ ತೀರ್ಪು ಎಚ್ಚರಿಕೆಯ ಗಂಟೆ. ಉನ್ನತ ಸ್ಥಾನದಲ್ಲಿರುವವರು ಲೈಂಗಿಕ ಶೋಷಣೆ ಮಾಡುವುದಿಲ್ಲ ಎಂದು ಹೇಳಲಾಗುವುದಿಲ್ಲ ಎಂಬ ನ್ಯಾಯಾಲಯದ ಮಾತು ಅತ್ಯಂತ ಮಹತ್ವದ್ದು. ದೊಡ್ಡವರ ವಿರುದ್ಧ ದನಿ ಎತ್ತಿದ್ದ ಮಹಿಳೆಯರಿಗೆ ಇದರಿಂದ ನಿರಾಳತೆ ಸಿಕ್ಕಂತಾಗಿದೆ. ಅನ್ಯಾಯದ ವಿರುದ್ಧದ ಧ್ವನಿಯನ್ನು ಅಡಗಿಸುವ ಕಾರ್ಯಕ್ಕೆ ಕಡಿವಾಣ ಬಿದ್ದಂತಾಗಿದೆ. ಇಷ್ಟು ದಿನ ಏಕೆ ಸುಮ್ಮನಿದ್ದರು ಎಂದು ಸಂತ್ರಸ್ತೆಯರನ್ನೇ ಪ್ರಶ್ನಿಸುವ ಬದಲು, ಮಹಿಳೆಯರ ಬೆಂಬಲಕ್ಕೆ ಸಮಾಜವೂ ನಿಲ್ಲಬೇಕು.

ಕೆ.ಎಸ್. ವಿಮಲಾ, ಜನವಾದಿ ಮಹಿಳಾ ಸಂಘಟನೆಯ ಉಪಾಧ್ಯಕ್ಷೆ

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ರೈಲಿನ ಕಿಟಕಿಯ ಹೊರಭಾಗದಲ್ಲಿ ಊಟ ಮಾಡಿ ಎಷ್ಟೋ ದಿನಗಳಾಗಿರುವಂತೆ ಕಾಣುತ್ತಿರುವ ಮಕ್ಕಳು. ರೈಲಿನ ಬೋಗಿಯೊಳಗೆ ಪುಷ್ಕಳ ಭೋಜನ ಮಾಡುತ್ತಿರುವ ಪರಿಸರ ಹೋರಾಟಗಾರ್ತಿ ಗ್ರೇಟಾ ಥನ್‌ಬರ್ಗ್. ಈ ಚಿತ್ರ ಇದೀಗ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಭಾರತದಲ್ಲಿ ರೈತ ಹೋರಾಟವನ್ನು ಬೆಂಬಲಿಸಿ ಟೂಲ್‌ಕಿಟ್ ಹಂಚಿಕೊಂಡಿದ್ದ ಗ್ರೇಟಾ ಅವರನ್ನು ಸಾಮಾಜಿಕ ಜಾಲತಾಣ ಬಳಕೆದಾರರು 'ನಕಲಿ ಹೋರಾಟಗಾರ್ತಿ' ಎಂದು ಛೇಡಿಸುತ್ತಿದ್ದಾರೆ.



ಈ ಚಿತ್ರವನ್ನು ತಿರುಚಲಾಗಿದೆ ಎಂಬ ಮಾಹಿತಿಯನ್ನು ಲಾಜಿಕಲ್ ಇಂಡಿಯನ್ ಫ್ಯಾಕ್ಟ್ ಚೆಕ್ ವೇದಿಕೆ ತಿಳಿಸಿದೆ. ರಿವರ್ಸ್ ಇಮೇಜ್‌ನಲ್ಲಿ ಪರಿಶೀಲಿಸಿದಾಗ, ಡೆನ್ಮಾರ್ಕ್‌ನಲ್ಲಿ ರೈಲಿನಲ್ಲಿ ಹೋಗುತ್ತಿರುವಾಗ ತೆಗೆದ ಚಿತ್ರವನ್ನು ಗ್ರೇಟಾ ಅವರೇ ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದರು. ಚಲಿಸುತ್ತಿರುವ ರೈಲಿನ ಕಿಟಕಿಯ ಹೊರಗಡೆ ಅರಣ್ಯ ಇರುವ ದೃಶ್ಯವು ಮೂಲ ಚಿತ್ರದಲ್ಲಿದೆ. ಆದರೆ ತಿರುಚಲಾದ ಚಿತ್ರದಲ್ಲಿರುವ ಬಡಮಕ್ಕಳ ದೃಶ್ಯವು ಆಫ್ರಿಕಾಕ್ಕೆ ಸಂಬಂಧಿಸಿದ್ದು. 2007ರಲ್ಲಿ ರಾಯಿಟರ್ಸ್‌ನಲ್ಲಿ ಪ್ರಕಟವಾದ ಲೇಖನವೊಂದರಲ್ಲಿ ಮಕ್ಕಳ ಚಿತ್ರ ಬಳಕೆಯಾಗಿದೆ ಎಂದು ವೆಬ್‌ಸೈಟ್ ವಿವರಿಸಿದೆ.

ಗುಂಡಣ್ಣ



ದಿನ ಭವಿಷ್ಯ

ಶುಕ್ರವಾರ 19 ಫೆಬ್ರುವರಿ 2021

ಶಾರ್ವರಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ಮಾಘ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಶತಬಿಷ ಸಪ್ತಮೀ ಗಂ. 4-48 (ಬೆ. 8-41) ಶುಕ್ರವಾರ ನಿತ್ಯ ನಕ್ಷತ್ರ ಕೃತ್ತಿಕಾ ಗಂ 52-25 (ರಾ. 3-45) ಐಂದ್ರ ನಾಮ ಯೋಗ ಗಂ 49-54 ವಣಿಜ ಕರಣ ಗಂ 4-44 ವಿಷ. ಗಂ. 19-8 ಅಮೃತ ಗಂ. 45-39: ರಾಹುಕಾಲ ಬೆ ಗಂ. 10-30 ರಿಂದ 12-00 ಗುಳಿಕ ಬೆ ಕಾಲ ಗಂ 7-30 ರಿಂದ 9-00 ಯಮಗಂಡ ಕಾಲ ಮ ಗಂ 3-00 ರಿಂದ 4-30 ಸೂರ್ಯೋದಯ: 6-44 ಸೂರ್ಯಾಸ್ತ: 6-23 ಅದೃಷ್ಟ ಸಂಖ್ಯೆ 9

ಮೇಷ: ಅಧಿಕಾರ ಅಥವಾ ಉದ್ಯೋಗದಲ್ಲಿ ಬದಲಾವಣೆ ನಿರೀಕ್ಷೆ. ಎಲ್ಲ ಕಡೆಯಿಂದಲೂ ಗೌರವಾದರಗಳನ್ನು ಪಡೆದುಕೊಳ್ಳಲಿದ್ದೀರಿ. ವಿದೇಶದಲ್ಲಿರುವ ಬಂಧುಗಳಿಂದ ಸಹಾಯ ದೊರಕುವ ಸಾಧ್ಯತೆ ಕಂಡುಬರುವುದು.

ವೃಷಭ: ಶ್ರಮಕ್ಕೆ ತಕ್ಕ ಪ್ರತಿಫಲ ನಿಮ್ಮದಾಗಲಿದೆ. ಅತಿಯಾದ ಪ್ರಯಾಣದ ಆಲಸ್ಯ ಉಂಟಾಗುವ ಸಾಧ್ಯತೆ. ಸ್ತ್ರೀಯರಿಂದ ಅವಮಾನಕರ ಸನ್ನಿವೇಶ ಎದುರಾದೀತು. ದೇವತಾರಾಧನೆಯಿಂದ ನೆಮ್ಮದಿ.

ಮಿಥುನ: ಉನ್ನತ ಅಧಿಕಾರಿಗಳ ನೆರವಿನಿಂದಾಗಿ ಉದ್ಯೋಗದಲ್ಲಿ ಸ್ಥಿರತೆ. ಪ್ರಯಾಣ ಮಾಡಬೇಕಾದ ಸಂಭವ. ಆದಾಯದಲ್ಲಿ ಹೆಚ್ಚಳ. ಹೊಸ ಯೋಜನೆಯೊಂದನ್ನು ಸ್ಥಾಪಿಸುವ ಸಲುವಾಗಿ ಸಮಾಲೋಚನೆ ನಡೆಸಲಿದ್ದೀರಿ.

ಕರ್ಕಾಟಕ: ವಿವಾಹಿತರಿಗೆ ಪ್ರಾಪಂಚಿಕ ವಿಷಯಗಳನ್ನು ಉತ್ತಮವಾಗಿ ಅನುಭವಿಸುವ ಯೋಗ. ಬಂಧುಗಳೊಂದಿಗೆ ಮೃಷ್ಟಾನ್ನ ಭೋಜನ ಸವಿಯುವ ಸಾಧ್ಯತೆ. ಮಹಿಳೆಯರು ಚೋರಭಯವನ್ನು ಎದುರಿಸಬೇಕಾದೀತು.

ಸಿಂಹ: ಜ್ಞಾನಾರ್ಜನೆಗಾಗಿ ಪರಸ್ಥಳದಲ್ಲಿ ವಾಸಿಸಬೇಕಾದ ಅಥವಾ ದೂರ ಪ್ರಯಾಣ ಕೈಗೊಳ್ಳಬೇಕಾದ ಪ್ರಸಂಗ ಎದುರಾದೀತು. ಜ್ಞಾನದೊಂದಿಗೆ ಧನಾರ್ಜನೆಯ ಕೆಲಸವೂ ನಡೆಯಲಿದೆ. ಸಜ್ಜನರ ಸಾಂಗತ್ಯದಿಂದಾಗಿ ನೆಮ್ಮದಿ.

ಕನ್ಯಾ: ಆಸೆ ಆಕಾಂಕ್ಷೆಗಳು ಸುಗಮವಾಗಿ ನೆರವೇರುವುದರಿಂದಾಗಿ ಮಾನಸಿಕ ನೆಮ್ಮದಿಯನ್ನು ನಿಮ್ಮದಾಗಿಸಿಕೊಳ್ಳುವಿರಿ. ಮಕ್ಕಳ ಆರೋಗ್ಯದಲ್ಲಿ ಸುಧಾರಣೆ ಕಂಡುಬರುವುದು. ವಸ್ತ್ರಾಭರಣ ಖರೀದಿ ಸಾಧ್ಯತೆ ಕಂಡುಬರುವುದು.

ತುಲಾ: ಉತ್ತಮ ಆರೋಗ್ಯವನ್ನು ಹೊಂದುವಿರಿ. ಉತ್ತಮ ದಾಂಪತ್ಯ ಜೀವನ ನಿಮ್ಮದಾಗಲಿದೆ. ವ್ಯವಹಾರದಲ್ಲಿ ಹೆಚ್ಚಳ. ಆದಾಯದಲ್ಲಿ ಹೆಚ್ಚಳದಿಂದಾಗಿ ಆರ್ಥಿಕ ಅಭಿವೃದ್ಧಿ. ಹಿರಿಯರ ಆರೋಗ್ಯದ ನಿಮಿತ್ತ ಖರ್ಚು.

ವೃಶ್ಚಿಕ: ಅಪರೂಪದ ಬಂಧುಗಳ ಭೇಟಿ ಅಥವಾ ಆಗಮನ ಸಾಧ್ಯತೆ. ಅಧಿಕಾರಿಗಳಿಂದ ಗೌರವ, ಪ್ರಶಂಸೆಗಳನ್ನು ಗಳಿಸಿಕೊಳ್ಳಲಿದ್ದೀರಿ. ಆಕಾಂಕ್ಷಿಗಳಿಗೆ ಸಂತಾನ ಪ್ರಾಪ್ತಿಯಾಗುವ ಸಾಧ್ಯತೆ.

ಧನು: ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಯಶಸ್ಸು. ವ್ಯವಹಾರದಲ್ಲಿ ಉತ್ತಮ ಪ್ರತಿಫಲ ನಿರೀಕ್ಷೆ. ಆದಾಯದಲ್ಲಿ ಹೆಚ್ಚಳ. ಆರೋಗ್ಯದಲ್ಲಿ ಉತ್ತಮ. ಸಂಗಾತಿಯೊಂದಿಗೆ ಸ್ನೇಹಪರ ಮಾತುಕತೆ. ಒಟ್ಟಾರೆ ದಿನವಿಡೀ ಸಂತಸ.

ಮಕರ: ವ್ಯವಹಾರ ಕ್ಷೇತ್ರದಲ್ಲಿ ಗಳಿಕೆ ಅಧಿಕಗೊಂಡು ಉತ್ತಮ ಆದಾಯವನ್ನು ನಿರೀಕ್ಷಿಸಬಹುದು. ಮಕ್ಕಳ ಆರೋಗ್ಯದ ಬಗ್ಗೆ ಹೆಚ್ಚಿನ ಗಮನ ಅಗತ್ಯ. ಮಕ್ಕಳ ವಿವಾಹ ಸಂಬಂಧಿಸಿದ ಪ್ರಯತ್ನಗಳು ಫಲಕಾರಿಯಾಗಿ ಪರಿಣಮಿಸುವವು.

ಕುಂಭ: ವಾಹನ ಖರೀದಿ ಸಾಧ್ಯತೆ. ಉತ್ತಮ ದಾಂಪತ್ಯ ಜೀವನ ನಿಮ್ಮದಾಗಲಿದೆ. ರೈತಾಪಿ ವರ್ಗದವರಿಗೆ ಹೈನುಗಾರಿಕೆ ನಡೆಸುವವರಿಗೆ ಉತ್ತಮ ದಿನ. ಉನ್ನತಾಧಿಕಾರಿಗಳಿಂದ ಪ್ರಶಂಸೆಗೆ ಪಾತ್ರರಾಗುವಿರಿ.

ಮೀನ: ಅಧಿಕಾರಿಗಳ ಅವಕೃಪೆಗೆ ಪಾತ್ರರಾಗುವ ಸಾಧ್ಯತೆ. ಕೋಪವನ್ನು ಹದ್ದು-ಬಸ್ತಿನಲ್ಲಿಟ್ಟುಕೊಳ್ಳುವುದು ಉತ್ತಮ. ಕಷ್ಟವಾದರೂ ವ್ಯವಹಾರದಲ್ಲಿ ಉತ್ತಮ ಸಾಧನೆ ಮಾಡಲಿದ್ದೀರಿ. ಆರೋಗ್ಯದಲ್ಲಿ ಸ್ಥಿರತೆ ಕಾಪಾಡಿಕೊಳ್ಳುವಿರಿ.

ನಿಮ್ಮ ಜನ್ಮದಿನ 19-ಫೆಬ್ರುವರಿ ಈ ದಿನ ಅತ್ಯಂತ ಶುಭಕರ. ನೀವು ಎಲ್ಲಾ ವಿಧದ ಅಂದವನ್ನು ಇಷ್ಟಪಡುವಿರಿ. ಎಲ್ಲ ರೀತಿಯ ಸಾಧನೆಗಳನ್ನು ಪ್ರಶಂಸಿಸುವಿರಿ. ಹೊಸ ಹೊಸ ಸಂಶೋಧನಾ ಕ್ಷೇತ್ರದಲ್ಲಿ ಯಶಸ್ಸನ್ನು ಸಾಧಿಸಲಿದ್ದೀರಿ. ದೇಶದ ವಿವಿಧ ಭಾಗಗಳಲ್ಲಿ ಕಾರ್ಯ ನಿರ್ವಹಿಸುವ ಸಾಧ್ಯತೆ. ಉತ್ತಮ ದಾಂಪತ್ಯ ಜೀವನ ನಿಮ್ಮದಾಗಲಿದೆ.

ಬೆರಗಿನ ಬೆಳಕು

ಗುರುರಾಜ ಕರಜಗಿ



ಕಡ್ಡಿಯ ಬುಡ – ತುದಿ

ಪ್ರತಿ ಪರೀಕ್ಷೆಯಲ್ಲೂ ಹೀಗೆ ಯಶಸ್ಸು ಗಳಿಸಿದ ಮಹೋಷಧಕುಮಾರನನ್ನು ರಾಜ ವಿದೇಹ ಮೆಚ್ಚಿಕೊಂಡ. ಅವನನ್ನು ರಾಜ್ಯಕ್ಕೆ ಕರೆಸಿಕೊಂಡು ಮರ್ಯಾದೆ ಮಾಡಲೇ ಎಂದು ತನ್ನ ಅಮಾತ್ಯರನ್ನು ಕೇಳಿದ. ಅವರು, 'ಪ್ರಭೂ, ಆತ ಬುದ್ಧಿವಂತ, ನಿಜ. ಆದರೆ ಅವನ ಪಾಂಡಿತ್ಯವನ್ನು ಮತ್ತಷ್ಟು ಪರೀಕ್ಷಿಸೋಣ, ಅವಸರ ಬೇಡ' ಎಂದರು. ರಾಜ ಒಪ್ಪಿದ.

ಈ ಬಾರಿ ಅಮಾತ್ಯರು ಒಂದು ವಿಶೇಷ ಪರೀಕ್ಷೆಯನ್ನು ಯೋಜಿಸಿದರು. ಒಬ್ಬ ಕುಶಲ ಕಮ್ಮಾರನನ್ನು ಕರೆಯಿಸಿ ಒಂದು ಗೇಣುದ್ದದ ಹಿತ್ತಾಳೆಯ ಕಡ್ಡಿಯನ್ನು ಮಾಡಿಸಿದರು. ಅದನ್ನು ಸಾಣೆ ಹಿಡಿಸಿ, ಚೆನ್ನಾಗಿ ನಯಗೊಳಿಸಿದರು. ಅದನ್ನು ಹೇಗೆ ನೋಡಿದರೂ ಒಂದೇ ಗಾತ್ರದ ಸಪೂರವಾದ ಕಡ್ಡಿಯಂತೆ ತೋರುತ್ತಿತ್ತು. ಆದರೆ ಅದರ ಒಂದು ತುದಿ ಕೊಂಚವೇ ಹೆಚ್ಚು ತೂಕದ್ದಾಗಿತ್ತು. ಅದನ್ನು ಕಂಡು ಹಿಡಿಯುವುದು ಅಸಾಧ್ಯವಾಗಿತ್ತು. ಅಮಾತ್ಯರು ಈ ಕಡ್ಡಿಯನ್ನು ಮಹೋಷಧಕುಮಾರನ ನಗರಕ್ಕೆ ಕಳುಹಿಸಿದರು. ಅದರೊಂದಿಗೆ ಒಂದು ಪತ್ರ. 'ಈ ನಗರದಲ್ಲಿರುವ ಶ್ರೇಷ್ಠ ಪಂಡಿತರಿಗೆ ಇದೊಂದು ಸವಾಲು. ಮಹಾರಾಜರು ಈ ಕಡ್ಡಿಯ ತುದಿ ಯಾವುದು ಮತ್ತು ಬುಡ ಯಾವುದು ಎಂಬುದನ್ನು ತಿಳಿಯ ಬಯಸಿದ್ದಾರೆ. ತಮಗೆ ಮೂರು ದಿವಸದ ಕಾಲಾವಕಾಶವನ್ನು ಕೊಡಲಾಗಿದೆ. ಅಷ್ಟರಲ್ಲಿ ಪಂಡಿತರಿಗೆ ಅದು ತಿಳಿಯದೆ ಹೋದರೆ ಈ ನಗರಕ್ಕೆ ಸಾವಿರ ನಾಣ್ಯಗಳ ದಂಡ ವಿಧಿಸಲಾಗುವುದು'.

ನಗರದ ಜನ ತಮ್ಮ ತಮ್ಮಲ್ಲೇ ಮಾತನಾಡಿಕೊಂಡು ತಮಗೆ ತಿಳಿದ ಪಂಡಿತರುಗಳನ್ನೆಲ್ಲ ಕರೆದು ತಂದರು. ಅವರು ಆ ಕಡ್ಡಿಯನ್ನು ಹೇಗೆ ಅಳೆದರೂ, ಪರೀಕ್ಷಿಸಿದರೂ ಎರಡೂ ಬದಿಗೆ ಒಂದೇ ಗಾತ್ರದಂತೆ ಕಾಣುತಿತ್ತು. ತಮ್ಮಿಂದ ಅದನ್ನು ಕಂಡು ಹಿಡಿಯುವುದು ಆಗುವುದಿಲ್ಲವೆಂದು ಅವರೆಲ್ಲ ಕೈ ಎತ್ತಿದರು. ತಮ್ಮ ವೈಫಲ್ಯದಿಂದ ನಗರಕ್ಕೆ ಅಪಖ್ಯಾತಿ ಬರುತ್ತದೆಂದು ಚಿಂತಿಸಿದರು. ಆಗ ಅವರಿಗೆ ಹೊಳೆದದ್ದು ಒಂದೇ. ಮಹೋಷಧಕುಮಾರ ಇದಕ್ಕೆ ಪರಿಹಾರವನ್ನು ಕಂಡುಹಿಡಿಯಬಹುದು. ಆ ಪಂಡಿತರೆಲ್ಲ ಸೇರಿ ಕುಮಾರನ ಬಳಿಗೆ ಬಂದರು. ತಾವು ತಂದಿದ್ದ ಕಡ್ಡಿಯನ್ನು ತೋರಿಸಿ, ಅದರ ಬುಡ ಮತ್ತು ತುದಿ ಯಾವುದು ಎಂದು ಕೇಳಿ, ರಾಜನಿಂದ ಬಂದ ಪತ್ರವನ್ನು ತೋರಿಸಿದರು. ಪತ್ರವನ್ನು ಓದಿದ ಕುಮಾರನಿಗೆ, ಇದು ತನಗೆ ಒಡ್ಡಿದ ಪರೀಕ್ಷೆ ಎಂಬುದು ಖಚಿತವಾಯಿತು. ಯಾಕೆಂದರೆ ರಾಜನಿಗೆ ಈ ಕಡ್ಡಿಯ ಬುಡ, ತುದಿಯನ್ನು ತಿಳಿದು ಆಗುವುದೇನಿದೆ?

ಪಂಡಿತರೆಲ್ಲ ಅವನಿಗೆ ದುಂಬಾಲು ಬಿದ್ದರು. ಹೇಗಾದರೂ ಮಾಡಿ ಸರಿಯಾದ ಉತ್ತರವನ್ನು ಕಂಡುಹಿಡಿದರೆ ನಗರಕ್ಕೆ ಒಳ್ಳೆಯ ಹೆಸರು ಬರುವುದಲ್ಲದೆ, ಸಾವಿರ ನಾಣ್ಯಗಳ ದಂಡವನ್ನು ಕಟ್ಟುವುದು ಉಳಿಯುತ್ತದೆ. ಕಡ್ಡಿಯನ್ನು ನೋಡಿದಾಕ್ಷಣ ಮಹೋಷಧಕುಮಾರನ ಚುರುಕು ಕಣ್ಣಿಗೆ ಬುಡ ಯಾವುದು ಎಂಬುದು ತಿಳಿಯಿತು. ಆದರೂ ಜನರಿಗೆಲ್ಲ ತಿಳಿಸಬೇಕೆಂದು ಒಂದು ಅಗಲವಾದ ನೀರಿನ ಬಟ್ಟಲನ್ನು ತರಿಸಿದ. ಅದರಲ್ಲಿ ನೀರು ತುಂಬಿಸಿದ. ಕಡ್ಡಿಯನ್ನು ಕೈಯಲ್ಲಿ ಹಿಡಿದು ನಿಧಾನಕ್ಕೆ ಅದನ್ನು ನೀರಿನ ಮೇಲ್ಮೈಗೆ ಸಮಾಂತರವಾಗಿ ತಂದ. ಇಡೀ ಕಡ್ಡಿ ನೀರನ್ನು ಮುಟ್ಟುತ್ತಿದ್ದಂತೆ ತನ್ನ ಬೆರಳುಗಳನ್ನು ತೆಗೆದುಬಿಟ್ಟ. ಆಗ ಕಡ್ಡಿ ಹಾಗೆಯೇ ನೀರಿನಲ್ಲಿ ಮುಳುಗದೆ, ಸೊಟ್ಟಾಗಿ ಬಂದು ತುದಿ ಕೆಳಗಾಗಿ ಬಟ್ಟಲಿನ ತಳವನ್ನು ಮುಟ್ಟಿತು. ಮಹೋಷಧಕುಮಾರ ಹೇಳಿದ, 'ಯಾವ ಭಾಗ ತಳವನ್ನು ಮೊದಲು ಮುಟ್ಟಿತೋ ಅದು ಬುಡ, ಇನ್ನೊಂದು ತುದಿ'. ಎರಡೂ ತುದಿಗಳಿಗೆ ಬೇರೆ ಬಣ್ಣ ಬಳಿಸಿ, ಬುಡ ಮತ್ತು ತುದಿಗಳೆಂದು ಗುರುತು ಮಾಡಿ ರಾಜನಿಗೆ ಕಳುಹಿಸಿದ. ರಾಜನಿಗೆ ಕುಮಾರನ ಬಗ್ಗೆ ಅಭಿಮಾನ ಮತ್ತಷ್ಟು ಬಲಿಯಿತು.

ಪದಬಂಧ 4513


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಕಾಯಿಲೆಯನ್ನೂ ಹೀಗೂ ಹೇಳುವರು! (3)
2.ಬರವಿದ್ದಾಗೂ ತೋರಿದ ಮಾತಿನ ಅಟ್ಟಹಾಸ! (5)
4.ಎದುರಿಗೆ ಮೂರ್ತೀಭವಿಸುವುದು (4)
6.ಹಸುವಿನ ಹತ್ತಿರವಿರುವ ಎಳೆ ಮಗು (3)
7.ಒತ್ತು ಕಳೆದುಕೊಂಡ ತಮ್ಮನ ಅಜ್ಞಾನ! (2)
9.ದಿಕ್ಕನ್ನು ತೋರಿಸುವ ಯಂತ್ರ (3)
11.ಸ್ವಲ್ಪ ಎಂದು ಹೀಗೆನ್ನಿ (2)
13.ಆ ವರ್ತಕನಿಗೆ ಕಾಣಿಸುತ್ತಿರುವ ನೀರಿನ ಸುಳಿ (3)
14.ನಾಲ್ಕು ಯುಗಗಳಲ್ಲಿ ಕಡೆಯದು (4)
15.ಕಲಹ ಮಾಡುವ ಸ್ವಭಾವದವಳು (5)
16.ಸೃಷ್ಟಿ ಇಲ್ಲಿ ಕಾಣುತ್ತಿದೆ (3)

ಮೇಲಿಂದ ಕೆಳಕ್ಕೆ

1.ಹಿಂಸೆ ಮಾಡಬಾರದೆಂಬ ವ್ರತ (5)
3.ನೇರವಲ್ಲದ ನುಡಿ (5)
5.ಪಾವತಿ ಪತ್ರ ಇಲ್ಲಿದೆ (3)
8.ಈತ ಲಗ್ನವಾಗುತ್ತಿರುವವ (5)
10.ಬಾಗಿಲಿಗೆ ಹಾಕುವ ಕೊಂಡಿ (3)
12.ಬೆಟ್ಟ ಅಥವಾ ನೆಲವನ್ನು ಕೊರೆದು ಮಾಡಿದ ದಾರಿ (5)



4512ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 4. ಅಕ್ಷ 5.ಚಂದನ 6.ಸಾರಜನಕ 9.ಪಾರಜ 10.ಗಣಿತ 11.ಕನಸುಗಾರ 14.ಇಂಗಿತ 15.ವಿತ್ತ
ಮೇಲಿಂದ ಕೆಳಕ್ಕೆ: 1.ರಕ್ಷಣಾ 2.ಸ್ಪಂದನ 3.ಮಂದಮಾರುತ 7.ಜಲಜನಕ 8.ಕಡೆಗಣಿಸು 9.ಪಾತರಗಿತ್ತಿ 12.ನಳಿಗೆ 13.ರವಿಕೆ

ಸುಡೊಕು 4899

			7		2		8	6
						3		4
	7	8	3		9		1	
1		4			5		2	3
	2			3				
8		7	6					9
		3	9		6	5	4	8
5	4					1		
	8		5		4		3	2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4898 ಸುಡೊಕು

5	6	3	9	2	7	8	1	4
8	1	7	6	5	4	2	3	9
4	2	9	3	8	1	7	5	6
2	4	6	7	1	3	9	8	5
3	9	1	8	4	5	6	7	2
7	5	8	2	9	6	3	4	1
6	8	5	1	7	9	4	2	3
1	3	2	4	6	8	5	9	7
9	7	4	5	3	2	1	6	8

ಎಲ್ಲಾ ಸಚಿವರಿಂದ ಅಭಿಪ್ರಾಯ ಸಂಗ್ರಹ • ಮುಂದಿನ ಸಂಪುಟ ಸಭೆಯಲ್ಲಿ ಮತ್ತೆ ಚರ್ಚೆ


ಮೀಸಲಾತಿ: ನ್ಯಾಯಸಮ್ಮತ ತೀರ್ಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೀಸಲಾತಿ ಸ್ಥಿತಿಗತಿ ಕುರಿತು ವಿವಿಧ ಸಮುದಾಯಗಳು ಸಲ್ಲಿಸಿರುವ ಮನವಿ ಮತ್ತು ಬೇಡಿಕೆಗಳ ಬಗ್ಗೆ ಸುಪ್ರೀಂಕೋರ್ಟ್ ತೀರ್ಪುಗಳು ಹಾಗೂ ಸಂವಿಧಾನದ ಚೌಕಟ್ಟಿನಲ್ಲಿ ನ್ಯಾಯಸಮ್ಮತ ತೀರ್ಮಾನ ತೆಗೆದುಕೊಳ್ಳಲು ಸಚಿವ ಸಂಪುಟ ಸಭೆ ನಿರ್ಧರಿಸಿದೆ.

ಮೀಸಲಾತಿ ಕುರಿತು ವಿವಿಧ ಸಮುದಾಯಗಳು ನಡೆಸುತ್ತಿರುವ ಹೋರಾಟಗಳು ಮತ್ತು ಬೇಡಿಕೆಗಳ, ಬಗ್ಗೆ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಎಲ್ಲ ಸಚಿವರಿಂದ ಅಭಿಪ್ರಾಯಗಳನ್ನು ಪಡೆದು ವಿಸ್ತೃತ ಚರ್ಚೆ ನಡೆಸಿದರು ಎಂದು ಸಂಪುಟ ಸಭೆ ಬಳಿಕ ಕಾನೂನು ಸಚಿವ ಬಸವರಾಜ ಬೊಮ್ಮಾಯಿ ಸುದ್ದಿಗಾರರಿಗೆ ತಿಳಿಸಿದರು.

ಸಭೆಯಲ್ಲಿ ಎಲ್ಲ ಸಚಿವರು ತಮ್ಮ ಅಭಿಪ್ರಾಯಗಳನ್ನು ಮುಕ್ತವಾಗಿ ಹೇಳಿದರು. ಕೆಲವು ದೊಡ್ಡ ಸಮುದಾಯಗಳು ಹೋರಾಟದ ಮೂಲಕ ಮನವಿ ಸಲ್ಲಿಸಿದ್ದರೆ, ಇನ್ನು ಕೆಲವು ಸಣ್ಣ ಪುಟ್ಟ ಮತ್ತು ಪ್ರಬಲವಲ್ಲದ ಸಮುದಾಯಗಳು ಹಿಂದುಳಿದ ವರ್ಗಗಳ ಆಯೋಗಕ್ಕೆ ಮನವಿ ಸಲ್ಲಿಸಿವೆ. ಇವೆಲ್ಲವನ್ನೂ ಪರಿಗಣಿಸಬೇಕು. ಯಾರಿಗೂ ಅನ್ಯಾಯ ವಾಗಬಾರದು. ಸಂಪೂರ್ಣ ವಿವರಗಳನ್ನು ಪಡೆದು ಕಾನೂನು ತಜ್ಞರ ಜತೆ ಚರ್ಚಿಸಿ ಮುಂದಿನ ಸಚಿವ ಸಂಪುಟ ಸಭೆಯಲ್ಲಿ ವಿಷಯವನ್ನು ಕೈಗೆತ್ತಿಕೊಳ್ಳಲು ಮುಖ್ಯಮಂತ್ರಿ ಸೂಚಿಸಿದರು ಎಂದು ಬೊಮ್ಮಾಯಿ ಹೇಳಿದರು.



ಬಸವರಾಜ ಬೊಮ್ಮಾಯಿ

ಸಂಪುಟ ಸಭೆ ಮುಗಿದ ಬಳಿಕ ಅಧಿಕಾರಿಗಳನ್ನು ಹೊರಗೆ ಕಳುಹಿಸಿ, ಅನೌಪಚಾರಿಕವಾಗಿ ಮೀಸಲಾತಿ ವಿಷಯವನ್ನು ಚರ್ಚಿಸಲಾಯಿತು. ಆಗ ಹಲವು ಸಚಿವರು ತಮ್ಮ ಸಮುದಾಯದ ಬೇಡಿಕೆಗಳನ್ನು ಮುಂದಿಟ್ಟು, ಈಡೇರಿಸುವ ಅನಿವಾರ್ಯವನ್ನು ಪ್ರತಿಪಾದಿಸಿದರು. ಮುಖ್ಯಮಂತ್ರಿಯವರು ಎಲ್ಲ ಮಾತುಗಳನ್ನೂ ಆಲಿಸಿದರು ಎಂದು ಮೂಲಗಳು ಹೇಳಿವೆ.

ಕುರುಬರು, ಲಿಂಗಾಯತ ಪಂಚಮಸಾಲಿ, ವಾಲ್ಮೀಕಿ, ಆದಿ ಜಾಂಬವ, ನೇಕಾರ, ಉಪ್ಪಾರ, ಮಡಿವಾಳ ಸಮುದಾಯಗಳು ಈಗಾಗಲೇ ಹೋರಾಟ ಆರಂಭಿಸಿದ್ದರೆ, ಒಕ್ಕಲಿಗರು ಸೇರಿ ಇನ್ನೂ ಹಲವು ಸಮುದಾಯಗಳ ಸ್ವಾಮೀಜಿಗಳೂ ತಮ್ಮ ಸಮುದಾಯಗಳ ಪರವಾಗಿ ಮೀಸಲಾತಿಯಲ್ಲಿ ಪಾಲಿಗಾಗಿ ಪಟ್ಟು ಹಿಡಿದಿದ್ದಾರೆ. ಕುರುಬ ಸಮಾಜ ಈಗಾಗಲೇ ದೊಡ್ಡ ಮಟ್ಟದ ಸಮಾವೇಶ ನಡೆಸಿದ್ದು, ಪಂಚಮಸಾಲಿ ಸಮುದಾಯ ಕೂಡ ಶಕ್ತಿ ಪ್ರದರ್ಶನಕ್ಕೆ ಸಜ್ಜಾಗಿದೆ. ಇವೆಲ್ಲದರ ಸೂಕ್ಷ್ಮತೆಯ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು ಎಂದು ಮೂಲಗಳು ತಿಳಿಸಿವೆ.

ವಾಲ್ಮೀಕಿ ಸಮುದಾಯಕ್ಕೆ ಮೀಸಲಾತಿ ಪ್ರಮಾಣ ಹೆಚ್ಚಿಸುವ ಭರವಸೆ

ಬೆಂಗಳೂರು: ವಾಲ್ಮೀಕಿ ಸಮುದಾಯಕ್ಕೆ ಮೀಸಲಾತಿ ಪ್ರಮಾಣ ಹೆಚ್ಚಳ ಮಾಡುವ ಸಂಬಂಧ ಆ ಸಮುದಾಯಕ್ಕೆ ಸೇರಿದ ಸಚಿವರು ಮತ್ತು ಶಾಸಕರು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ಗುರುವಾರ ಭೇಟಿ ಮಾತುಕತೆ ನಡೆಸಿದರು.

ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಶಾಸಕ ರಾಜುಗೌಡ, 'ವಾಲ್ಮೀಕಿ ಸಮುದಾಯಕ್ಕೆ ಮೀಸಲಾತಿ ಹೆಚ್ಚಿಸುವ ಕುರಿತಂತೆ ನಮ್ಮ ಬೇಡಿಕೆಗಳನ್ನು ಮುಖ್ಯಮಂತ್ರಿಯವರು ಆಲಿಸಿದ್ದಾರೆ. ಕಾನೂನು ತಜ್ಞರ ಜತೆ ಚರ್ಚಿಸಿ ನಿರ್ಧಾರ ತೆಗೆದುಕೊಳ್ಳುವುದಾಗಿ ಭರವಸೆ ನೀಡಿದ್ದಾರೆ' ಎಂದರು.

'ನಮ್ಮ ಸಮುದಾಯದ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿದ್ದು, ಅದಕ್ಕೆ ಅನುಗುಣವಾಗಿ ಮೀಸಲಾತಿ ಪ್ರಮಾಣ ಹೆಚ್ಚಿಸಲು ಕೋರಿದೆವು' ಎಂದು ಹೇಳಿದರು.

'ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದಾಗಲೇ ಮೀಸಲಾತಿ ಹೆಚ್ಚಿಸುವುದಕ್ಕೆ ಸಂಬಂಧಿಸಿದಂತೆ ಹೋರಾಟ ಆರಂಭಿಸಿದೆವು. ಪರಿಶಿಷ್ಟಜಾತಿ– ಪಂಗಡಗಳಿಗೆ ಒಟ್ಟು ಶೇ 50 ರಷ್ಟು ಮೀಸಲಾತಿ ನೀಡಬೇಕು ಎಂದು ಒತ್ತಾಯಿಸಲಾಗಿತ್ತು' ಎಂದರು.'ಮುಖ್ಯಮಂತ್ರಿ ಯಡಿಯೂರಪ್ಪ ಅವರು ಎಲ್ಲರಿಗೂ ನ್ಯಾಯ ಒದಗಿಸುತ್ತಾರೆ ಎಂಬ ಕಾರಣಕ್ಕೆ ಈಗ ಇತರ ಸಮುದಾಯದವರೂ ಹೋರಾಟಕ್ಕೆ ಇಳಿದಿದ್ದಾರೆ. ಅದಕ್ಕೆ ನಮ್ಮ ಆಕ್ಷೇಪ ಇಲ್ಲ' ಎಂದು ಅವರು ಹೇಳಿದರು.

ಇಂದಿನ ಸಭೆಯಲ್ಲಿ ಸಚಿವರಾದ ಬಿ.ಶ್ರೀರಾಮುಲು, ರಮೇಶ ಜಾರಕಿಹೊಳಿ, ಶಾಸಕರಾದ ಶಿವನಗೌಡ ನಾಯಕ್, ರಾಮಚಂದ್ರ, ಮಾಜಿ ಶಾಸಕ ಪ್ರತಾಪಗೌಡ ಪಾಟೀಲ ಮುಂತಾದವರು ಸಭೆಯಲ್ಲಿದ್ದರು.

'ವರದಿ ಬಿಡುಗಡೆಗೆ ಆಗ್ರಹ'

ಮಡಿಕೇರಿ: ಹಿಂದುಳಿದ ವರ್ಗಗಳ ಶಾಶ್ವತ ಆಯೋಗ ರಾಜ್ಯದಲ್ಲಿ ನಡೆಸಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ವರದಿ ಸ್ವೀಕರಿಸಿ, ಬಿಡುಗಡೆ ಮಾಡಬೇಕು ಎಂದು 'ಅಹಿಂದ' ಒಕ್ಕೂಟದ ಸ್ಥಳೀಯ ಘಟಕ ಆಗ್ರಹಪಡಿಸಿದೆ.

ಗುರುವಾರ ನಗರದಲ್ಲಿ ಈ ಬಗ್ಗೆ ಪ್ರತಿಭಟನೆ ನಡೆಯಿತು. 'ವರದಿ ಅನುಷ್ಠಾನಗೊಂಡರೆ, ಮೀಸಲಾತಿ ದೊರಕದಿರುವ ಸಣ್ಣ ಜಾತಿಗಳಿಗೆ ವೈಜ್ಞಾನಿಕವಾಗಿ ಸೌಲಭ್ಯ ಪಡೆಯಲು ಸಾಧ್ಯವಾಗಲಿದೆ. ರಾಜ್ಯದಲ್ಲಿರುವ ಜಾತಿಗಳ ಅಂಕಿ–ಅಂಶಗಳು ಅಧಿಕೃತವಾಗಿ ದೊರೆಯಲು ಸಾಧ್ಯವಾಗಲಿದೆ' ಎಂದು ಒಕ್ಕೂಟದ ಸ್ಥಾಪಕ ಅಧ್ಯಕ್ಷ ಟಿ.ಪಿ. ರಮೇಶ್ ಹೇಳಿದರು.

'ಎಲ್ಲರಿಗೂ ನ್ಯಾಯ ಒದಗಿಸಲು ಯತ್ನ'

ಬೆಂಗಳೂರು: 'ಮೀಸಲಾತಿಯ ವಿಚಾರದಲ್ಲಿ ಕಾನೂನು ಚೌಕಟ್ಟಿನಲ್ಲಿ ಎಲ್ಲ ಸಮುದಾಯಗಳಿಗೂ ನ್ಯಾಯ ಒದಗಿಸಲು ಪ್ರಯತ್ನ ಮಾಡುತ್ತೇನೆ' ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹೇಳಿದರು.



ಬಿ.ಎಸ್. ಯಡಿಯೂರಪ್ಪ

ನಗರದಲ್ಲಿ ಗುರುವಾರ ರಾಜ್ಯ ಉಗ್ರಾಣ ನಿಗಮದ ನೂತನ ಆಡಳಿತ ಕಚೇರಿ ಉದ್ಘಾಟನೆ ಬಳಿಕ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದ ಅವರು, 'ವಾಲ್ಮೀಕಿ ಸಮುದಾಯ, ಕುರುಬ ಸಮುದಾಯ ಸೇರಿದಂತೆ ಯಾವುದೇ ಸಮುದಾಯದವರು ಮೀಸಲಾತಿಗಾಗಿ ಹೋರಾಟ ಮಾಡಿದರೂ ಕಾನೂನು ಮತ್ತು ಸಂವಿಧಾನದ ಚೌಕಟ್ಟಿನಲ್ಲಿ ನ್ಯಾಯ ಒದಗಿಸುವುದು ನನ್ನ ಜವಾಬ್ದಾರಿ' ಎಂದರು.

ಎಲ್ಲ ಸಮುದಾಯಗಳಿಗೂ ಹೋರಾಟ ಮಾಡುವ ಹಕ್ಕಿದೆ. ಕಾನೂನು ವ್ಯಾಪ್ತಿಯಲ್ಲಿ ಆಯಾ ಸಮುದಾಯಗಳಿಗೆ ಸಿಗಬೇಕಾದ ಸೌಲಭ್ಯ ಖಂಡಿತವಾಗಿಯೂ ದೊರಕುತ್ತದೆ. ಹೋರಾಟಕ್ಕೆ ತಮ್ಮ ವಿರೋಧವಿಲ್ಲ. ಆದರೆ, ನಿರ್ಧಾರಗಳನ್ನು ಕೈಗೊಳ್ಳುವ ಮೊದಲು ವಿಸ್ತೃತವಾಗಿ ಚರ್ಚಿಸಬೇಕಾಗುತ್ತದೆ ಎಂದು ಹೇಳಿದರು.

'ಇನ್ನೊಂದು ವಾರದಲ್ಲಿ ಮತ್ತೆ ಶೂಟಿಂಗ್‌ಗೆ'

ಬೆಂಗಳೂರು: ಹೃದಯಬಡಿತದಲ್ಲಿ ಆದ ಏರುಪೇರಿನಿಂದ ಮಂಗಳವಾರ ಸಂಜೆ ಯಶವಂತಪುರದ ಕೊಲಂಬಿಯಾ ಏಷಿಯಾ ಆಸ್ಪತ್ರೆಗೆ ದಾಖಲಾಗಿದ್ದ ನಟ ರಾಘವೇಂದ್ರ ರಾಜ್‌ಕುಮಾರ್, ಚಿಕಿತ್ಸೆ ಬಳಿಕ ಗುರುವಾರ ಮನೆಗೆ ತೆರಳಿದ್ದಾರೆ.



ರಾಘವೇಂದ್ರ ರಾಜ್‌ಕುಮಾರ್

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಹೃದಯಬಡಿತದಲ್ಲಿ ಸ್ವಲ್ಪ ಏರುಪೇರು ಕಾಣಿಸಿಕೊಂಡಿತ್ತು. ಹೀಗಾಗಿ ಆಸ್ಪತ್ರೆಗೆ ದಾಖಲಾಗಿದ್ದೆ. ಇದೀಗ ಆ್ಯಂಜಿಯೊಗ್ರಾಮ್ ಮಾಡಿದ ಬಳಿಕ ಪೇಸ್‌ಮೇಕರ್(ಹೃದಯಬಡಿತ ನಿಯಂತ್ರಿಸುವ ಉಪಕರಣ) ಹಾಕಿದ್ದಾರೆ' ಎಂದರು.

'ಚಿತ್ರೀಕರಣವೇ ನನ್ನನ್ನು ಕಾಪಾಡಿತು': 'ನಾನು ಬೇರೆ ಎಲ್ಲೋ ಇದ್ದಿದ್ದರೆ ಏನಾಗುತ್ತಿತ್ತೋ. ಅವತ್ತು ಚಿತ್ರೀಕರಣವೇ ನನ್ನನ್ನು ಕಾಪಾಡಿತು. ಚಿತ್ರೀಕರಣದಲ್ಲಿದ್ದ ಕಾರಣವೇ ತಕ್ಷಣವೇ ಆಸ್ಪತ್ರೆಗೆ ಬರಲು ಸಾಧ್ಯವಾಯಿತು' ಎಂದರು. ಶಿವರಾಜ್‌ಕುಮಾರ್ ಜೊತೆಗಿದ್ದರು.

'ಪಾರ್ಸಿ ಜನಸಂಖ್ಯೆ ಹೆಚ್ಚಳಕ್ಕೆ ಕ್ರಮ'

ಬೆಂಗಳೂರು: ಪಾರ್ಸಿ ಸಮುದಾಯದ ಜನಸಂಖ್ಯೆ ದಿನೇ ದಿನೇ ಕಡಿಮೆ ಆಗುತ್ತಿರುವುದರಿಂದ ಆ ಸಮುದಾಯದ ಜನಸಂಖ್ಯೆ ಪ್ರಮಾಣ ಹೆಚ್ಚಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು ಎಂದು ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಶ್ರೀಮಂತ ಪಾಟೀಲ ಹೇಳಿದರು.

ಈ ಸಂಬಂಧ ಕೇಂದ್ರ ಸರ್ಕಾರ ಯೋಜನೆ ರೂಪಿಸುತ್ತಿದೆ. ಕೇಂದ್ರದ ಮಾರ್ಗಸೂಚಿ ಬಂದ ಬಳಿಕ ರಾಜ್ಯದಲ್ಲೂ ಜಾರಿಗೆ ತರಲಾಗುತ್ತದೆ. ರಾಜ್ಯದಲ್ಲಿ ಪಾರ್ಸಿ ಸಮುದಾಯದ ಜಸಂಖ್ಯೆ ಒಂದು ಸಾವಿರ ಇದೆ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.



ಕೇಂದ್ರ ಸರ್ಕಾರ ಈ ವಿಷಯವನ್ನು ಬಜೆಟ್‌ನಲ್ಲಿ ಪ್ರಸ್ತಾಪಿಸಿದೆ. ಆಹಾರ ಕ್ರಮ, ವೈವಾಹಿಕ ಪದ್ಧತಿ ಸೇರಿದಂತೆ ವಿವಿಧ ಕಾರಣಗಳಿಂದಾಗಿ ಪಾರ್ಸಿಗಳ ಸಂಖ್ಯೆ ಅಳಿವಿನಂಚಿಗೆ ಬಂದಿದೆ. ಆ ಸಮುದಾಯದ ಸಂಖ್ಯೆ ಹೆಚ್ಚಿಸಲು ವೈಜ್ಞಾನಿಕವಾಗಿ ಸಲಹೆ ಸೂಚನೆಗಳನ್ನು ಪಡೆದು ಕ್ರಮ ತೆಗೆದುಕೊಳ್ಳಲಾಗುವುದು. ಇದಕ್ಕೆ ತಜ್ಞರ ನೆರವು ಪಡೆಯಲಾಗುವುದು ಎಂದರು.

'ಬಸ್ ಪ್ರಯಾಣ ದರ ಏರಿಕೆ ಇಲ್ಲ'

ಕಲಬುರ್ಗಿ: 'ಇಂಧನ ದರ ಏರಿಕೆಯಾಗಿದ್ದರೂ ಬಸ್ ಪ್ರಯಾಣ ದರ ಹೆಚ್ಚಳ ಮಾಡುವುದಿಲ್ಲ' ಎಂದು ಸಾರಿಗೆ ಸಚಿವ ಲಕ್ಷ್ಮಣ ಸವದಿ ಸ್ಪಷ್ಟಪಡಿಸಿದರು.

'ಪ್ರಯಾಣ ದರ ಹೆಚ್ಚಿಸುವಂತೆ ಸಾರಿಗೆ ಸಂಸ್ಥೆಗಳಿಂದ ಪ್ರಸ್ತಾವ ಬಂದಿದೆ. ಆದರೆ, ಕೊರೊನಾ ಮತ್ತು ನೈಸರ್ಗಿಕ ವಿಕೋಪದಿಂದ ಜನರು ಈಗಾಗಲೇ ಸಾಕಷ್ಟು ಸಂಕಷ್ಟದಲ್ಲಿದ್ದಾರೆ. ಈ ಸ್ಥಿತಿಯಲ್ಲಿ ಪ್ರಯಾಣ ದರ ಪರಿಷ್ಕರಿಸಿದರೆ, ಅವರಿಗೆ ಮತ್ತಷ್ಟು ತೊಂದರೆ ಕೊಟ್ಟಂತಾಗುತ್ತದೆ' ಎಂದೂ ಗುರುವಾರ ಸುದ್ದಿಗಾರರಿಗೆ ತಿಳಿಸಿದರು.

'ಕಳೆದ ಸಲ ಬಜೆಟ್‌ನಲ್ಲಿ ಸಾರಿಗೆ ಸಂಸ್ಥೆಯ ನಾಲ್ಕೂ ಘಟಕಗಳಿಗೆ ತಲಾ ಒಂದು ಸಾವಿರ ಹೊಸ ಬಸ್ ನೀಡುವುದಾಗಿ ಘೋಷಿಸಲಾಗಿತ್ತು. ಬದಲಾದ ಸನ್ನಿವೇಶದಲ್ಲಿ ಸರ್ಕಾರ ಆರ್ಥಿಕ ಮುಗ್ಗಟ್ಟಿಗೆ ಸಿಲುಕಿದ್ದರಿಂದ ಅದು ಈಡೇರಲಿಲ್ಲ' ಎಂದರು.

'ಈ ಸಲದ ಬಜೆಟ್‌ನಲ್ಲಿ ಈಶಾನ್ಯ, ವಾಯವ್ಯ ರಸ್ತೆ ಸಾರಿಗೆ ಸಾರಿಗೆ ಸಂಸ್ಥೆಗಳು ಹಾಗೂ ಕೆಎಸ್‌ಆರ್‌ಟಿಸಿಗೆ ತಲಾ ಒಂದು ಸಾವಿರ ಬಸ್ ನೀಡಲಾಗುವುದು. ತಡೆ ಹಿಡಿದ 4 ಸಾವಿರ ಸಿಬ್ಬಂದಿ ನೇಮಕ ಪ್ರಕ್ರಿಯೆಯೂ ಆರಂಭವಾಗಲಿದೆ' ಎಂದರು.

ವಿವಿಧೆಡೆ ಅಕಾಲಿಕ ಮಳೆ, ಕೃಷಿಕರಿಗೆ ಆತಂಕ

ಚಿಕ್ಕಜಾಜೂರುನಲ್ಲಿ ರಾಗಿ ನೀರು ಪಾಲು • ಬ್ಯಾಡಗಿ: ಮೆಣಸಿನಕಾಯಿ ರಕ್ಷಣೆಗೆ ಪಡಿಪಾಟಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಚಿತ್ರದುರ್ಗ, ಮೈಸೂರು, ಧಾರವಾಡ ಜಿಲ್ಲೆಗಳ ಕೆಲವೆಡೆ ಗುರುವಾರ ಅಕಾಲಿಕ ಮಳೆ ಸುರಿದಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ ರಾಗಿ ಫಸಲು ನೀರು ಪಾಲಾಗಿದೆ. ಹುಬ್ಬಳ್ಳಿ, ಮೈಸೂರಿನಲ್ಲಿ ಗುಡುಗು ಸಹಿತ ಮಳೆಯಾಗಿದೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಗುರುವಾರ ಸಂಜೆ ಗುಡುಗು ಸಹಿತ ಸುರಿದ ಮಳೆಗೆ, ಚಿಕ್ಕಜಾಜೂರಿನಲ್ಲಿ ಒಕ್ಕಣೆ ಮಾಡುತ್ತಿದ್ದ ರಾಗಿ ನೀರುಪಾಲಾಯಿತು. ಅಕಾಲಿಕ ವರ್ಷಧಾರೆ ಕೃಷಿ ಚಟುವಟಿಕೆಗೆ ಅಡ್ಡಿಯಾಯಿತು.

ಗುರುವಾರ ಮಧ್ಯಾಹ್ನದ ಬಳಿಕ ಆವರಿಸಿದ ಮೋಡ ಸಂಜೆಯ ಹೊತ್ತಿಗೆ ಮಳೆಯಾಗಿ ಸುರಿಯಲಾರಂಭಿಸಿತು. ಹೊಸದುರ್ಗ, ಹಿರಿಯೂರು, ಚಳ್ಳಕೆರೆ ಹಾಗೂ ಚಿತ್ರದುರ್ಗ ತಾಲ್ಲೂಕಿನ ಹಲವೆಡೆ ಸಾಧಾರಣ ಮಳೆ ಸುರಿಯಿತು.

ಚಿಕ್ಕಜಾಜೂರಿನ ರೈತರೊಬ್ಬರು ಒಕ್ಕಲು ಕಣದಲ್ಲಿ ರಾಗಿ ಹುಲ್ಲು ಹರಡಿದ್ದರು. ಮಳೆ ಆರಂಭವಾಗುತ್ತಿದ್ದಂತೆ ಹುಲ್ಲನ್ನು ಒಂದೆಡೆ ಗುಡ್ಡೆಹಾಕಲು ಪ್ರಯತ್ನಿಸಿದರು. ಮಳೆ ಬಿರುಸು ಪಡೆದ ಪರಿಣಾಮ ಒಕ್ಕಲು ಮಾಡಿದ್ದ ರಾಗಿ ಹಾಗೂ ಹುಲ್ಲು ನೀರು ಪಾಲಾದವು. ಅಮೃತಾಪುರ ಗ್ರಾಮದಲ್ಲಿ ರೈತರು ಮೆಕ್ಕೆಜೋಳದ ಕಾಳನ್ನು ಮಳೆಯಿಂದ ರಕ್ಷಿಸಲು ಪರದಾಡಿದರು.

ನಿಧಾನವಾಗಿ ಆರಂಭವಾದ ಮಳೆ ಗುಡುಗು, ಸಿಡಿಲು ಕಾಣಿಸಿಕೊಂಡ ಬಳಿಕ ಬಿರುಸು ಪಡೆಯಿತು. ರಸ್ತೆ, ಚರಂಡಿಯಲ್ಲಿ ನೀರು ಹರಿಯಿತು. ಅಡಿಕೆ ಮತ್ತು ತೆಂಗಿನ ತೋಟಗಳಿಗೆ ಮಳೆ ತಂಪೆರೆಯಿತು.

ಗುಡುಗು ಸಹಿತ ಜೋರು ಮಳೆ: ಉತ್ತರ ಕರ್ನಾಟಕದಲ್ಲಿ ಬೆಳಗಾವಿ, ಉತ್ತರ ಕನ್ನಡ, ಹಾವೇರಿ, ಧಾರವಾಡ ಜಿಲ್ಲೆಯ ವಿವಿಧೆಡೆ ಗುರುವಾರ ಮಧ್ಯಾಹ್ನ ಗುಡುಗು ಸಹಿತ ಮಳೆ ಸುರಿಯಿತು. ಧಾರವಾಡ, ಹುಬ್ಬಳ್ಳಿ ನಗರಗಳಲ್ಲೂ ಬಿರುಸಿನ ಮಳೆ ಸುರಿಯಿತು.

ಬೆಳಗಾವಿ, ಬೈಲಹೊಂಗಲ, ನಿಪ್ಪಾಣಿ, ಖಾನಾಪುರ, ಸವದತ್ತಿ, ಗೋಕಾಕ ಹಾಗೂ ಎಂ.ಕೆ.ಹುಬ್ಬಳ್ಳಿ ಭಾಗದಲ್ಲಿ ಮಳೆಯಾಯಿತು. ಬೆಳಗಾವಿಯಲ್ಲಿ ಲಕ್ಷ್ಮಿನಗರದ ತೆಂಗಿನ ಮರವೊಂದಕ್ಕೆ ಸಿಡಿಲು ಬಡಿದು ಬೆಂಕಿ ಹೊತ್ತಿಕೊಂಡಿತ್ತು.

ಬ್ಯಾಡಗಿಯಲ್ಲಿ ಸಂಜೆ ಗುಡುಗು ಸಹಿತ ಮಳೆ ಸುರಿದ ಪರಿಣಾಮ ಮೆಣಸಿನಕಾಯಿ ಚೀಲಗಳನ್ನು ಮಳೆಯಿಂದ ರಕ್ಷಿಸಿಕೊಳ್ಳಲು ರೈತರು ವರ್ತಕರು ಹರಸಾಹಸ ಪಟ್ಟರು. ಹಂಸಭಾವಿಯಲ್ಲಿ ತುಂತುರ ಮಳೆ ಸುರಿಯಿತು.

ಉತ್ತರ ಕನ್ನಡ ಜಿಲ್ಲೆಕರಾವಳಿಯ ಹೊನ್ನಾವರ ಪಟ್ಟಣ ಹಾಗೂ ತಾಲ್ಲೂಕಿನ ಗ್ರಾಮಾಂತರ ಪ್ರದೇಶಗಳಲ್ಲಿ ಉತ್ತಮ ಮಳೆ ಆಗಿದ್ದರೆ, ಶಿರಸಿಯಲ್ಲೂ ತುಂತುರು ಹನಿ ಬಿದ್ದಿದೆ. ಅಕಾಲಿಕ ಮಳೆ ಕೃಷಿಕ ಆತಂಕಕ್ಕೆ ಕಾರಣವಾಗಿದೆ.

ಮೈಸೂರು ಭಾಗದಲ್ಲಿ ಮಳೆ ಮೈಸೂರು, ಮಂಡ್ಯ, ಹಾಸನ ಜಿಲ್ಲೆಯ ಹಲವೆಡೆ ಗುರುವಾರ ಸಂಜೆ ಗುಡುಗು–ಸಿಡಿಲು ಸಹಿತ ತುಂತುರು ಮಳೆಯಾಗಿದೆ. ಹಾಸನ ತಾಲ್ಲೂಕಿನ ಶಾಂತಿಗ್ರಾಮ, ಚನ್ನರಾಯಪಟ್ಟಣ ತಾಲ್ಲೂಕಿನ ನುಗ್ಗೇಹಳ್ಳಿ ಮತ್ತು ಹಿರೀಸಾವೆಯಲ್ಲಿ ಹಾಗೂ ಅರಸೀಕೆರೆ ತಾಲ್ಲೂಕಿನಲ್ಲಿ ಬಿರುಸಿನ ಮಳೆಯಾಗಿದೆ.



ಚಿಕ್ಕಜಾಜೂರು ಗ್ರಾಮದಲ್ಲಿ ಒಕ್ಕಣೆ ಮಾಡುತ್ತಿದ್ದ ರಾಗಿ ಗುರುವಾರ ಸುರಿದ ಅಕಾಲಿಕ ಮಳೆಯಿಂದ ನೀರು ಪಾಲಾಯಿತು.

ಸಿಡಿಲು ಬಡಿದು ವ್ಯಕ್ತಿ ಸಾವು

ಖಾನಾಪುರ (ಬೆಳಗಾವಿ): ತಾಲ್ಲೂಕಿನ ನಿಡಗಲ್ ಗ್ರಾಮದಲ್ಲಿ ಗುರುವಾರ ಸಿಡಿಲು ಬಡಿದು ಇಟ್ಟಿಗೆ ತಯಾರಿಸುತ್ತಿದ್ದ ವ್ಯಕ್ತಿಯೊಬ್ಬರು ಮೃತಪಟ್ಟಿದ್ದಾರೆ. ಮೃತರನ್ನು ಉತ್ತರ ಕನ್ನಡ ಜಿಲ್ಲೆಯ ಜೊಯಿಡಾ ತಾಲ್ಲೂಕಿನ ಅಸು ಗ್ರಾಮದ ನಿವಾಸಿ ಗುರುನಾಥ ಪಾಂಡುರಂಗ ನಾರ್ವೇಕರ್ (20)ಎಂದು ಗುರುತಿಸಲಾಗಿದೆ.

₹ 15 ಕೋಟಿ, 81 ಕೆ.ಜಿ. ಚಿನ್ನ ವಶ

ಒಂದನೇ ಪುಟದಿಂದ

ದಾಳಿಗೊಳಗಾದ ಸಂಸ್ಥೆಗಳ ಟ್ರಸ್ಟಿಗಳು ಮತ್ತು ಪ್ರಮುಖರ ಮನೆಗಳಿಂದ 40 ಕೆ.ಜಿ. ಬೆಳ್ಳಿ, 50 ಕ್ಯಾರಟ್ ವಜ್ರ, ಬೇನಾಮಿ ಹೆಸರಿನಲ್ಲಿ ಖರೀದಿಸಿರುವ 35 ಐಷಾರಾಮಿ ಕಾರುಗಳನ್ನು ವಶಕ್ಕೆ ಪಡೆಯಲಾಗಿದೆ. ಘಾನಾದಲ್ಲಿ ಮಾಡಿರುವ ₹ 2.39 ಕೋಟಿ ಮೊತ್ತದ ಅಘೋಷಿತ ವಿದೇಶಿ ಹೂಡಿಕೆಯನ್ನೂ ಪತ್ತೆಹಚ್ಚಲಾಗಿದೆ. ಆರೋಪಿತ ಸಂಸ್ಥೆಗಳು ಮತ್ತು ವ್ಯಕ್ತಿಗಳು ಭಾರಿ ಪ್ರಮಾಣದ ಆದಾಯವನ್ನು ಘೋಷಣೆ ಮಾಡದೇ ತೆರಿಗೆ ವಂಚಿಸಿರುವುದಕ್ಕೂ ಸಾಕ್ಷ್ಯಗಳು ಲಭಿಸಿವೆ ಎಂಬ ಮಾಹಿತಿಯನ್ನು ಐ.ಟಿ ಅಧಿಕಾರಿಗಳು ಬಹಿರಂಗಪಡಿಸಿದ್ದಾರೆ.

ಪ್ರವೇಶ ಪ್ರಕ್ರಿಯೆಯಲ್ಲೇ ಅಕ್ರಮ: ಹೆಚ್ಚಿನ ರ‍್ಯಾಂಕಿಂಗ್ ಪಡೆದ ವಿದ್ಯಾರ್ಥಿಗಳನ್ನು ಬಳಸಿಕೊಂಡು ಸೀಟು ಕಾಯ್ದಿರಿಸಿ, ಅವುಗಳನ್ನು ಕಡಿಮೆ ರ‍್ಯಾಂಕಿಂಗ್ ಪಡೆದ ವಿದ್ಯಾರ್ಥಿಗಳಿಗೆ ಮಾರಾಟ ಮಾಡಲಾಗುತ್ತಿತ್ತು. ಎಂಬಿಬಿಎಸ್, ದಂತ ವೈದ್ಯಕೀಯ ಮತ್ತು ಸ್ನಾತಕೋತ್ತರ ವೈದ್ಯಕೀಯ ಕೋರ್ಸ್‌ಗಳ ಪ್ರವೇಶದಲ್ಲಿ ಹಣ ಪಡೆದು ಸೀಟು ಹಂಚಿಕೆ ಮಾಡಿರುವುದು ದೃಢಪಟ್ಟಿದೆ. ವಿದ್ಯಾರ್ಥಿಗಳಿಂದ ನಗದು ಪಡೆದಿರುವುದಕ್ಕೆ ಸಂಬಂಧಿಸಿದ ಮಾಹಿತಿಯುಳ್ಳ ನೋಟ್ ಪುಸ್ತಕಗಳು, ಡೈರಿಗಳು, ಎಕ್ಸೆಲ್ ಶೀಟ್ ದಾಖಲೆಗಳನ್ನು ವಶಕ್ಕೆ ಪಡೆಯಲಾಗಿದೆ. ಹೀಗೆ ಸಂಗ್ರಹಿಸಿದ ಭಾರಿ ಮೊತ್ತದ ಹಣವನ್ನು ಸ್ಥಿರಾಸ್ತಿಗಳ ಮೇಲೆ ಹೂಡಿಕೆ ಮಾಡಿರುವುದು ಪತ್ತೆಯಾಗಿದೆ ಎಂದು ತಿಳಿಸಿದ್ದಾರೆ.

ಪರೀಕ್ಷೆಗೂ 'ಪ್ಯಾಕೇಜ್': ಒಂದು ಸಂಸ್ಥೆಯಲ್ಲಿ ಆಡಳಿತ ಮಂಡಳಿ ಕೋಟಾದಲ್ಲಿ ಸೀಟು ಪಡೆದ ವಿದ್ಯಾರ್ಥಿಗಳನ್ನು ಪರೀಕ್ಷೆಯಲ್ಲಿ ಪಾಸು ಮಾಡಿಸುವುದಕ್ಕೆ 'ಪ್ಯಾಕೇಜ್' ವ್ಯವಸ್ಥೆ ಇರುವುದೂ ಪತ್ತೆಯಾಗಿದೆ. ₹ 1 ಲಕ್ಷದಿಂದ ₹ 2 ಲಕ್ಷದವರೆಗೂ 'ಪ್ಯಾಕೇಜ್' ದರವಿದೆ. ಈ ಮೊತ್ತ ನೀಡಿದ ವಿದ್ಯಾರ್ಥಿಗಳನ್ನು ಲಿಖಿತ ಮತ್ತು ಮೌಖಿಕ ಪರೀಕ್ಷೆಗಳಲ್ಲಿ ಪಾಸು ಮಾಡುವ ವ್ಯವಸ್ಥೆಗೆ ಸಂಬಂಧಿಸಿದ ದಾಖಲೆಗಳೂ ಪತ್ತೆಯಾಗಿವೆ ಎಂದು ಇಲಾಖೆ ಹೇಳಿದೆ.

'ಬಿಹಾರದಲ್ಲಿ ಬಿಜೆಪಿ ಸೋಲಿಸಲು ವಿಜಯೇಂದ್ರ ದುಡ್ಡು'

ಒಂದನೇ ಪುಟದಿಂದ

'ಭ್ರಷ್ಟಾಚಾರ, ಹಸ್ತಕ್ಷೇಪ, ವರ್ಗಾವಣೆ ದಂಧೆ ಬಗ್ಗೆ ತನಿಖೆ ಮಾಡಬೇಕು ಎಂದೂ ಕೋರಿದ್ದೇನೆ. ನೋಟಿಸ್‌ಗೆ ಉತ್ತರ ಕೊಡುವಾಗ ಪತ್ರದಲ್ಲಿ ಎಲ್ಲೂ ಕ್ಷಮೆ ಯಾಚಿಸಿಲ್ಲ' ಎಂದೂ ಸ್ಪಷ್ಟಪಡಿಸಿದರು.

'ಸಿಡಿ, ಇಡಿ ಬಗ್ಗೆಯೂ ಪತ್ರದಲ್ಲಿ ಉಲ್ಲೇಖಿಸಿದ್ದೇನೆ. ಮಾರಿಷಸ್ ವಿಚಾರವನ್ನೂ ಬರೆದಿದ್ದೇನೆ. ಮಾರಿಷಸ್‌ಗೆ ಯಾಕೆ ಹೋಗಿದ್ದರು. ಎಷ್ಟು ಮಂದಿ ಹೋಗಿದ್ದರು. ಯಾವ ವಿಮಾನದಲ್ಲಿ ಹೋಗಿದ್ದರು, ಮಾಜಿ ಗೃಹ ಸಚಿವರೊಬ್ಬರ ಆಪ್ತ ಸಹಾಯಕನ ಮೂಲಕ ಮಾರಿಷಸ್‌ಗೆ ಹೋಗಿ ಏನೇನು ತೆಗೆದುಕೊಂಡಿದ್ದಾರೆ ಎಲ್ಲವನ್ನೂ ಪತ್ರದಲ್ಲಿ ಉಲ್ಲೇಖಿಸಿದ್ದೇನೆ. ಇದರ ತನಿಖೆ ಮಾಡಲು ಆಗ್ರಹಿಸಿದ್ದೇನೆ' ಎಂದರು.

ಸಿದ್ದರಾಮಯ್ಯ ವಿರುದ್ಧವೂ ಗರಂ: 'ಸುಪ್ರೀಂ ಕೋರ್ಟ್ ತೀರ್ಪಿಗೆ ಸಿದ್ದರಾಮಯ್ಯ ಅಪಚಾರ ಮಾಡಿದ್ದಾರೆ. ರಾಮಮಂದಿರ ವಿಚಾರದಲ್ಲಿ ಸುಪ್ರೀಂ ಕೋರ್ಟ್ ಸ್ಪಷ್ಟ ತೀರ್ಪು ನೀಡಿದೆ. ಅವರ ಹೇಳಿಕೆ ವಿರುದ್ಧ ಮುಂದಿನ ದಿನಗಳಲ್ಲಿ ಕಾನೂನು ಹೋರಾಟ ಮಾಡಲಾಗುವುದು. ಮುಸ್ಲಿಮರ ಮತಗಳಿಗಾಗಿ ಅವರು ಈ ರೀತಿ ಮಾತಾಡುತ್ತಾರೆ' ಎಂದು ಸಿದ್ದರಾಮಯ್ಯ ವಿರುದ್ಧವೂ ಯತ್ನಾಳ ಗರಂ ಆದರು.

ಯತ್ನಾಳರಿಂದ ಸುಳ್ಳು ಆರೋಪ: ಅರುಣ್ ಸಿಂಗ್

ಬೆಂಗಳೂರು: 'ಬಸನಗೌಡ ಪಾಟೀಲ ಯತ್ನಾಳ ಹಲವು ವರ್ಷಗಳಿಂದ ಇದೇ ರೀತಿ ಸುಳ್ಳು ಆರೋಪ ಮಾಡುತ್ತಿದ್ದಾರೆ. ಮಾಧ್ಯಮಗಳಲ್ಲಿ ಸುದ್ದಿಯಾಗಲು ಅವರು ಮಾಡುತ್ತಿರುವ ಆರೋಪಗಳಿಗೆ ಹೆಚ್ಚಿನ ಬೆಲೆ ನೀಡಬೇಕಿಲ್ಲ' ಎಂದು ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಹೇಳಿದರು.

ನಗರದಲ್ಲಿ ಗುರುವಾರ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದ ಅವರು, 'ರಾಜ್ಯದಲ್ಲಿ ಸರ್ಕಾರ ಉತ್ತಮವಾಗಿ ಕೆಲಸ ಮಾಡುತ್ತಿದೆ. ಯತ್ನಾಳರ ಆರೋಪಗಳಲ್ಲಿ ಹುರುಳಿಲ್ಲ. 16 ರಾಜ್ಯಗಳಲ್ಲಿ ಬಿಜೆಪಿ ಸರ್ಕಾರವಿದೆ. 2,000 ಶಾಸಕರಿದ್ದಾರೆ. ಮಾಧ್ಯಮಗಳು ಒಬ್ಬ ಶಾಸಕನಿಗೆ ಅಷ್ಟೊಂದು ಪ್ರಾಮುಖ್ಯತೆ ನೀಡುವ ಅಗತ್ಯವೇನು' ಎಂದು ಪ್ರಶ್ನಿಸಿದರು.

'ಯತ್ನಾಳ ಅವರಿಗೆ ಪಕ್ಷದ ಶಿಸ್ತು ಸಮಿತಿ ಈಗಾಗಲೇ ನೋಟಿಸ್ ನೀಡಿದೆ. ಉತ್ತರ ಪರಿಶೀಲಿಸಿ ಸೂಕ್ತ ನಿರ್ಧಾರ ಕೈಗೊಳ್ಳಲಿದೆ. ಬಿ.ವೈ. ವಿಜಯೇಂದ್ರ ಪಕ್ಷದ ರಾಜ್ಯ ಘಟಕದ ಉಪಾಧ್ಯಕ್ಷ. ಅವರನ್ನು ಬೆಂಬಲಿಸುವುದರಲ್ಲಿ ತಪ್ಪೇನೂ ಇಲ್ಲ. ಶಾಸಕ, ಮುಖಂಡ, ಕಾರ್ಯಕರ್ತ ಎಲ್ಲರೂ ಪಕ್ಷಕ್ಕೆ ಮುಖ್ಯ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ಎಡಗೈ'ಗೆ ಕೆಪಿಸಿಸಿ ಕಾರ್ಯಾಧ್ಯಕ್ಷ ಸ್ಥಾನ: ಸುರ್ಜೇವಾಲಗೆ ಮನವಿ

ಬೆಂಗಳೂರು: ಪರಿಶಿಷ್ಟ ಜಾತಿಯ ಎಡಗೈ ಸಮುದಾಯಕ್ಕೆ ಕೆಪಿಸಿಸಿ ಕಾರ್ಯಾಧ್ಯಕ್ಷ ಸ್ಥಾನ ನೀಡುವಂತೆ ಕಾಂಗ್ರೆಸ್ ಮುಖಂಡ ಎಚ್. ಆಂಜನೇಯ ಸೇರಿದಂತೆ ಎಡಗೈ ಸಮುದಾಯದ ನಾಯಕರು, ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರಿಗೆ ಮನವಿ ಸಲ್ಲಿಸಿದರು.

ಕುಮಾರಕೃಪಾ ಅತಿಥಿಗೃಹದಲ್ಲಿ ಸುರ್ಜೆವಾಲ ಅವರನ್ನು ಭೇಟಿಯಾದ ಆಂಜನೇಯ, ರಾಜ್ಯಸಭೆ ಸದಸ್ಯ ಎಲ್. ಹನುಮಂತಯ್ಯ, ವಿಧಾನಪರಿಷತ್ ಸದಸ್ಯ ಆರ್.ಬಿ. ತಿಮ್ಮಾಪೂರ ಈ ಮನವಿ ಮಾಡಿದರು.

ಬಳಿಕ ಮಾತನಾಡಿದ ಆಂಜನೇಯ, 'ರಾಜ್ಯದಲ್ಲಿ ಪರಿಶಿಷ್ಟ ಜಾತಿಯಲ್ಲಿ ನಮ್ಮದು ಪ್ರಬಲ ಸಮುದಾಯ. ಸುಮಾರು 60 ಲಕ್ಷ ಜನರಿದ್ದೇವೆ. ಹೀಗಾಗಿ ಕಾರ್ಯಾಧ್ಯಕ್ಷ ಸ್ಥಾನ ಕೇಳಿದ್ದೇವೆ. ಎಲ್ಲ ಸಮುದಾಯಗಳಿಗೂ ಅವಕಾಶ ಕೊಟ್ಟಿದ್ದೀರಿ. ನಮಗೂ ಕೊಡಿ. ನಮ್ಮ ಸಮುದಾಯ ಹಿಂದಿನಿಂದಲೂ ಕಾಂಗ್ರೆಸ್ ಬೆಂಬಲಕ್ಕೆ ನಿಂತಿದೆ ಎಂದು ಮನವರಿಕೆ ಮಾಡಿದ್ದೇವೆ' ಎಂದರು.

'ಸಮುದಾಯದ ಯಾರಿಗೆ ಬೇಕಾದರೂ ಅವಕಾಶ ಕೊಡಿ. ನಾಲ್ಕೈದು ಮಂದಿ ಆಕಾಂಕ್ಷಿಗಳಿದ್ದೇವೆ. ಅಧಿಕಾರಕ್ಕೆ ತರಲು ಪಕ್ಷವನ್ನು ಸಜ್ಜುಗೊಳಿಸಬೇಕಿದೆ ಎಂಬ ನಮ್ಮ ಮನವಿಗೆ ಸುರ್ಜೇವಾಲ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ' ಎಂದೂ ಹೇಳಿದರು.

'ಅದೇ ರಾಮನ ಶಕ್ತಿಗಿರುವ ತಾಕತ್ತು'

ಬೆಂಗಳೂರು: 'ಅಯೋಧ್ಯೆ ರಾಮ ಮಂದಿರಕ್ಕೆ ದೇಣಿಗೆ ನೀಡಿದವರ ಪ್ರಕಾರ, ದೇಣಿಗೆ ಸಂಗ್ರಹಿಸಲು ಬಂದವರು ಸಜ್ಜನಿಕೆ ನಡವಳಿಕೆ ತೋರಿದ್ದಾರೆ. ಕುಮಾರಣ್ಣನ ಪ್ರಕಾರ ಅವರು ಪುಂಡು ಪೋಕರಿಗಳು. ಅಬ್ಬಾ ಎಷ್ಟು ಮಹಾನ್ ಸಂಸ್ಕೃತಿ ನಮ್ಮದು' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಬಿ.ಎಲ್. ಸಂತೋಷ್ ವ್ಯಂಗ್ಯವಾಗಿ ತಿರುಗೇಟು ನೀಡಿದ್ದಾರೆ.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸಿರುವ ಅವರು, 'ಭಾರತದ ಪುಂಡುಪೋಕರಿಗಳ ವರ್ತನೆಯೇ ಇಷ್ಟು ಸಭ್ಯತೆಯಿಂದ ಕೂಡಿದ್ದರೆ ಇನ್ನು ಪ್ರಾಜ್ಞರ, ಪ್ರಜಾಜನರ ನಡವಳಿಕೆ ಇನ್ನೆಷ್ಟು ಉತ್ತಮವಿದ್ದೀತು. ಅದೇ ರಾಮನ ಶಕ್ತಿಗಿರುವ ತಾಕತ್ತು, ಹಿಂದೂ ಸಂಸ್ಕೃತಿಯ ಮಹತ್ತು' ಎಂದಿದ್ದಾರೆ.

> **ಬಿಜೆಪಿ, ರಾಷ್ಟ್ರ ನಿರ್ಮಾಣದ ರಾಜಕಾರಣ ಮಾಡುತ್ತಿದೆಯೇ ಹೊರತು ಗೂಂಡಾಗಿರಿ ರಾಜಕಾರಣವಲ್ಲ**
>
> **–ನಳಿನ್ ಕುಮಾರ್ ಕಟೀಲ್,** ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

'ರಾಮ ಮಂದಿರಕ್ಕೆ ದೇಣಿಗೆ ನೀಡಿದ ಪ್ರತಿಯೊಬ್ಬರ ಪ್ರಕಾರ ಅವರ ಮನೆಗೆ ಸಂಗ್ರಹಕ್ಕೆಂದು ಬಂದಿದ್ದವರು ಬಹು ಸಂಯಮದಿಂದ ವಿಷಯ ವಿವರಿಸಿ, ಅಧಿಕೃತ ರಸೀದಿ (ಕೂಪನ್) ಕೊಟ್ಟು ಹೋಗಿದ್ದಾರೆ' ಎಂದೂ ಸಂತೋಷ್ ಹೇಳಿದ್ದಾರೆ.

'ಕುಮಾರಣ್ಣನವರೇ, ರಾಮನಗರದಲ್ಲಿ ಅಳಿದುಳಿದಿರುವ ನಿಮ್ಮ ಕಾರ್ಯಕರ್ತರನ್ನು ರಾಮನ ಕಾರ್ಯದಲ್ಲಿ ತೊಡಗಿಸಿ, ಶ್ರೀರಾಮನ ಕೃಪೆಯಿಂದ ಅವರೂ ಸಜ್ಜನರಾಗಿ ಬದಲಾಗುತ್ತಾರೆ' ಎಂದೂ ಅವರು ಸಲಹೆ ನೀಡಿದ್ದಾರೆ.

ರೈತ ಸಂಘದ ಹೆಸರು, ಲಾಂಛನ, ಹಸಿರು ಟವಲ್‌ನಲ್ಲಿ ಮಾರ್ಪಾಡು

ರೈತ ಚಳವಳಿಗೆ ಹೊಸ ಆಯಾಮ

ಪ್ರಜಾವಾಣಿ ವಾರ್ತೆ

ಮೈಸೂರು: 'ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ'ಯ ಹೆಸರಿನಲ್ಲಿ ತುಸು ಮಾರ್ಪಾಡು ಮಾಡಲಾಗಿದ್ದು, ಇನ್ನು ಮುಂದೆ 'ಕರ್ನಾಟಕ ರಾಜ್ಯ ರೈತ ಸಂಘ' ಎಂದಷ್ಟೇ ಗುರುತಿಸಲಾಗುತ್ತದೆ.

ಸಂಘದ ವತಿಯಿಂದ ಗುರುವಾರ ಇಲ್ಲಿ ನಡೆದ ರೈತ ನಾಯಕ 'ಕೆ.ಎಸ್. ಪುಟ್ಟಣ್ಣಯ್ಯನವರ ನೆನಪು' ಕಾರ್ಯಕ್ರಮದಲ್ಲಿ ಈ ಬದಲಾವಣೆಯನ್ನು ಅಂಗೀಕರಿಸಲಾಯಿತು. ನೇಗಿಲಿನ ಚಿತ್ರ ಇರುವ ಹಸಿರು ಟವಲ್, ಹೊಸ ಲಾಂಛನ, ಹೊಸ ಬಾವುಟ ಹಾಗೂ 'ನೇಗಿಲ ಹಾಡು' ಹೆಸರಿನ ಪತ್ರಿಕೆಯನ್ನು ಅನಾವರಣಗೊಳಿಸಲಾಯಿತು.


ರಾಜ್ಯದ ಪ್ರತಿ ಗ್ರಾಮದಲ್ಲಿ 'ನಮ್ಮ ಭೂಮಿ ನಮ್ಮ ಹಕ್ಕು, ಅನ್ಯರಿಗೆ ಮಾರಾಟಕ್ಕಿಲ್ಲ' ಎಂಬ ನಾಮಫಲಕ ಅಳವಡಿಸಲು ನಿರ್ಣಯ ಕೈಗೊಳ್ಳಲಾಯಿತು. ರೈತ ಚಳವಳಿಗೆ ಹೊಸ ಆಯಾಮ ನೀಡುವ ಉದ್ದೇಶದೊಂದಿಗೆ ಸಂಘದ ಹೊಸ ಸಂವಿಧಾನವನ್ನು ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಬಿಡುಗಡೆ ಮಾಡಿದರು.

ಮಹಿಳೆಯರಿಗೆ ಹಾಗೂ ಯುವ ಜನರಿಗೆ ಹೆಚ್ಚಿನ ಆದ್ಯತೆ ನೀಡಲು ತೀರ್ಮಾನಿಸಲಾಗಿದ್ದು, ಸಂಘದ ಹೊಸ ವೆಬ್‌ಸೈಟ್ (www.krrs.org) ಜೊತೆಗೆ ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್, ಟ್ವಿಟರ್ ಖಾತೆಯನ್ನು ಘೋಷಿಸಲಾಯಿತು.

'ರಾಜಕಾರಣಿಗಳು ರೈತರ ಹೆಸರು ಹೇಳಿಕೊಂಡು, ಹಸಿರು ಶಾಲು ಹೊದ್ದು ರಾಜಕಾರಣ ಮಾಡುತ್ತಿದ್ದಾರೆ. ಯಾವುದೇ ತತ್ವ ಸಿದ್ಧಾಂತ ಇಲ್ಲದ ಬಿ.ಸಿ. ಪಾಟೀಲ ಅವರಂಥವರೂ ಹಸಿರು ಶಾಲು ಹಾಕಿಕೊಂಡು ಬರುತ್ತಾರೆ. ಈಚೆಗೆ ರೈತರಿಂದ ಉಗಿಸಿಕೊಂಡಿದ್ದಾರೆ' ಎಂದು ಸಂಘದ ಗೌರವ ಅಧ್ಯಕ್ಷ ಚಾಮರಸ ಮಾಲೀಪಾಟೀಲ ಹೇಳಿದರು.

'ಯಾವುದೇ ಕಾಳಜಿ ಇಲ್ಲದ ಕೆಲವರು, ರೈತ ಸಂಘದ ಹೆಸರು ಹೇಳಿಕೊಂಡು ಹೋರಾಟದ ಹೆಸರಿನಲ್ಲಿ ಆಸ್ತಿ ಅಂತಸ್ತು ಮಾಡಿಕೊಂಡಿದ್ದಾರೆ. ಇನ್ನು ಕೆಲವರು ಮೇಧಾವಿಗಳು ಎಂದು ಭಾವಿಸಿಕೊಂಡು ಗುಂಪುಗಾರಿಕೆ ನಡೆಸುತ್ತಿದ್ದಾರೆ. ಸರ್ಕಾರದಿಂದ, ಹೊರದೇಶದಿಂದ ಬರುವ ಹಣ ಲೂಟಿ ಹೊಡೆಯುತ್ತಿದ್ದಾರೆ' ಎಂದು ಆರೋಪಿಸಿದರು.

ಸಂಘದ ಮಹಿಳಾ ಘಟಕದ ಅಧ್ಯಕ್ಷರಾದ ನಂದಿನಿ ಜಯರಾಂ ಮಾತನಾಡಿದರು. ರೈತಗೀತೆ ಹಾಡುವಾಗ ಕೆ.ಎಸ್.ಪುಟ್ಟಣ್ಣಯ್ಯ ಅವರನ್ನು ನೆನೆದು, ಪತ್ನಿ ಸುನೀತಾ ಪುಟ್ಟಣ್ಣಯ್ಯ, ಪುತ್ರಿ ಸ್ಮಿತಾ ಪುಟ್ಟಣ್ಣಯ್ಯ ಕಣ್ಣೀರಾದರು.



ಮೈಸೂರಿನಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ಸುನೀತಾ ಪುಟ್ಟಣ್ಣಯ್ಯ ಅವರು ಕರ್ನಾಟಕ ರಾಜ್ಯ ರೈತ ಸಂಘದ ಧ್ವಜ ಬಿಡುಗಡೆ ಮಾಡಿದರು. ನಂದಿನಿ ಜಯರಾಂ, ಸ್ಮಿತಾ ಪುಟ್ಟಣ್ಣಯ್ಯ, ಬಡಗಲಪುರ ನಾಗೇಂದ್ರ, ಚಾಮರಸ ಮಾಲೀಪಾಟೀಲ ಇದ್ದಾರೆ

'ಆದಾಯ ಘೋಷಿಸಿಕೊಳ್ಳಬೇಕು'

'ಹೋರಾಟದಲ್ಲಿ ತೊಡಗಿರುವವರ ಮೇಲೂ ಭ್ರಷ್ಟಾಚಾರದ ಆರೋಪ ಬರುತ್ತಿದೆ. ಕೆಲವರು ಹಸಿರು ಶಾಲು ಹಾಕಿಕೊಂಡು ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ, ಸಂಘದ ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಹೀಗಾಗಿ, ಸಂಘದ ರಾಜ್ಯ ಪದಾಧಿಕಾರಿಗಳೂ ವಾರ್ಷಿಕ ಸಾರ್ವಜನಿಕವಾಗಿ ಆಸ್ತಿ ಘೋಷಣೆ ಮಾಡಬೇಕು, ಆರ್ಥಿಕ ವ್ಯವಹಾರ ಪಾರದರ್ಶಕವಾಗಿರಬೇಕು' ಎಂದೂ ಬಡಗಲಪುರ ನಾಗೇಂದ್ರ ಹೇಳಿದರು.

ಮುಖ್ಯಾಂಶಗಳು

- ರೈತ ಸಂಘದ ಸಂವಿಧಾನ ಬಿಡುಗಡೆ
- ಕೆ.ಎಸ್.ಪುಟ್ಟಣ್ಣಯ್ಯ ನೆನಪಿನ ಕಾರ್ಯಕ್ರಮ
- ಇನ್ನುಮುಂದೆ 'ಕರ್ನಾಟಕ ರಾಜ್ಯ ರೈತ ಸಂಘ'

ವರ್ಗಾವಣೆ, ಬಡ್ತಿಗೆ ಆನ್‌ಲೈನ್ ವ್ಯವಸ್ಥೆ

ಸಂತೋಷ ಈ. ಚಿನಗುಡಿ

ಕಲಬುರ್ಗಿ: ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಪಡೆಯಲ್ಲಿ (ಕೆಎಸ್‌ಆರ್‌ಪಿ) ವರ್ಗಾವಣೆ, ಬಡ್ತಿ, ನಿಯೋಜನೆ ಮುಂತಾದ ಕೆಲಸಗಳಿಗೆ ಸಿಬ್ಬಂದಿ ಇನ್ನು ಮುಂದೆ ಬೆಂಗಳೂರಿಗೆ ಅಲೆಯಬೇಕಿಲ್ಲ. ಇಲಾಖೆಯಿಂದ ಆನ್‌ಲೈನ್ ಪ್ರಕ್ರಿಯೆ ಆರಂಭಿಸಲಾಗಿದ್ದು, ಅರ್ಹರು 24 ಗಂಟೆಗಳಲ್ಲೇ ವರ್ಗಾವಣೆ, ಬಡ್ತಿ ಆದೇಶ ಪಡೆಯಬಹುದು.

'ಪೊಲೀಸರ ಕಾರ್ಯಕ್ಷಮತೆ ಹೆಚ್ಚಿಸಲು ಮತ್ತು ಆಧುನಿಕ ತಂತ್ರಜ್ಞಾನ ಪರಿಣಾಮಕಾರಿಯಾಗಿ ಬಳಸುವುದು ಇದರ ಉದ್ದೇಶ. ದಕ್ಷಿಣ ಕರ್ನಾಟಕ ಭಾಗದ ಸಿಬ್ಬಂದಿ ಬೆಂಗಳೂರಿಗೆ ಬರುವುದು ಕಷ್ಟವಲ್ಲ. ಆದರೆ, ಉತ್ತರ ಕರ್ನಾಟಕ, ಕಲ್ಯಾಣ ಕರ್ನಾಟಕದ ಜಿಲ್ಲೆಗಳಿಂದ ಬೆಂಗಳೂರಿಗೆ ಅಲೆಯುವುದು ಕಷ್ಟ. ಸಿಬ್ಬಂದಿಯ ಸಮಯ, ಹಣ, ಶ್ರಮ ವ್ಯರ್ಥವಾಗುವುದನ್ನು ತಪ್ಪಿಸುವುದು ಇದರ ಉದ್ದೇಶ' ಕೆಎಸ್‌ಆರ್‌ಪಿ ಎಡಿಜಿಪಿ ಅಲೋಕ್ ಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

'ಈಗಾಗಲೇ 45 ಮಂದಿ ಹೀಗೇ ವರ್ಗಾವಣೆ ಪಡೆದಿದ್ದಾರೆ. ಕೆಲವರಿಗೆ 3 ತಾಸಿನೊಳಗೆ ವರ್ಗಾವಣೆ ಆದೇಶ ನೀಡಿದ್ದೂ ಇದೆ. ನನ್ನ ಜೊತೆ ಸಂದರ್ಶನದಲ್ಲಿ ಹಿರಿಯ ಅಧಿಕಾರಿಗಳೂ ಇರುತ್ತಾರೆ. ಸಿಬ್ಬಂದಿ ವರ್ಗಾವಣೆ ಕೋರಿಕೆಗೆ ನೀಡಿದ ಕಾರಣಗಳ ಬಗ್ಗೆ ಸಂದೇಹವಿದ್ದರೆ ಅವರ ಮುಖ್ಯಸ್ಥರಿಂದ ಮಾಹಿತಿ ಪಡೆಯುವೆ. ಕಾರಣ ಸರಿ ಇದೆ ಎಂದರೆ, ವರ್ಗಾವಣೆ ಸಿಗಲಿದೆ' ಎಂದರು.

'ಮಾರ್ಚ್ ತಿಂಗಳಲ್ಲಿ ಕಲಬುರ್ಗಿ ಹಾಗೂ ಬೀದರ್ ಸಿಬ್ಬಂದಿಗೆ ಇದೇ ಬಗೆಯ ವರ್ಗಾವಣೆ ಕೌನ್ಸೆಲಿಂಗ್ ನಡೆಯಲಿದೆ. ಒಂದು ವೇಳೆ ಆನ್‌ಲೈನ್‌ನಲ್ಲಿ ಸಮರ್ಪಕ ಅನ್ನಿಸದವರು ಖುದ್ದಾಗಿ ಬೆಂಗಳೂರಿಗೆ ಬರಬಹುದು' ಎಂದರು.

'ಕೆಎಸ್‌ಆರ್‌ಪಿಯೂ ಸಮರ್ಥವಾಗಿದೆ'

'ಕೆಎಸ್‌ಆರ್‌ಪಿ ಸೇರಿದವರಲ್ಲಿ ಶೇ 25 ಸಿಬ್ಬಂದಿ ಪ್ರತಿ ವರ್ಷ ಸಿವಿಲ್ ವಿಭಾಗಕ್ಕೆ ಹೋಗುತ್ತಾರೆ. ಅಲ್ಲಿ ಅವಕಾಶ ಸಿಗದಿದ್ದರೆ ಮಾತ್ರ ಇಲ್ಲಿ ಉಳಿಯುತ್ತಾರೆ. ಈ ಪ್ರವೃತ್ತಿ ಸರಿಯಲ್ಲ. ಕೆಎಸ್‌ಆರ್‌ಪಿ ಕೂಡ ಅತ್ಯಂತ ಸಮರ್ಥ ಪೊಲೀಸ್ ವ್ಯವಸ್ಥೆ ಆಗಿದೆ' ಎನ್ನುತ್ತಾರೆ ಅಲೋಕ್ ಕುಮಾರ್.



ಅಲೋಕ್ ಕುಮಾರ್

'ಸಿವಿಲ್ ವಿಭಾಗದಲ್ಲಿ ಬಡ್ತಿಗೆ ಕನಿಷ್ಠ 10 ವರ್ಷ ಕಾಯಬೇಕು. ಆದರೆ, ಕೆಎಸ್‌ಆರ್‌ಪಿಯಲ್ಲಿ 5 ವರ್ಷ ಸಾಕು. ಆರಂಭದಲ್ಲೇ ₹ 35 ಸಾವಿರ ಸಂಬಳ, ಸುಸಜ್ಜಿತ ಮನೆ, ಆರೋಗ್ಯ ವಿಮೆ, ಕ್ಯಾಂಟೀನ್, ಮಕ್ಕಳಿಗೆ ಪೊಲೀಸ್ ಪಬ್ಲಿಕ್ ಸ್ಕೂಲ್, ವಿವಿಧ ಭತ್ಯೆ ಸೇರಿ ಕಾನ್‌ಸ್ಟೆಬಲ್ ಸಂಬಳವೇ ₹ 60ರಿಂದ ₹ 75 ಸಾವಿರ ದಾಟುತ್ತದೆ' ಎಂದರು.

8 ಸಾವಿರ ಸ್ಮಾರ್ಟ್ ಕ್ಲಾಸ್ ರೂಂ: ಅಶ್ವತ್ಥನಾರಾಯಣ

ಬೆಂಗಳೂರು: 'ಕೊರೊನೋತ್ತರ ಕಾಲದಲ್ಲಿ ಡಿಜಿಟಲ್ ಕಲಿಕೆ ಪ್ರೋತ್ಸಾಹಿಸಲು ಆರು ತಿಂಗಳಲ್ಲಿ ಎಂಟು ಸಾವಿರ ಸ್ಮಾರ್ಟ್‌ಕ್ಲಾಸ್ ರೂಂ ನಿರ್ಮಾಣ ಮಾಡಲಾಗುವುದು' ಎಂದು ಉಪಮುಖ್ಯಮಂತ್ರಿಯೂ ಆಗಿರುವ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.

ನಗರದಲ್ಲಿ ಗುರುವಾರ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, 'ರಾಜ್ಯದ ಸರ್ಕಾರಿ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿನ ಪ್ರತಿ ಕಾಲೇಜಿಗೂ ಹೈಸ್ಪೀಡ್ ಇಂಟರ್‌ನೆಟ್ ಸೌಲಭ್ಯ ಒದಗಿಸಲಾಗುವುದು. ಡಿಜಿಟಲ್ ಕಲಿಕೆಗಾಗಿ ಸಮಗ್ರ ಕಲಿಕಾ ವ್ಯವಸ್ಥೆ (ಎಲ್‌ಎಂಎಸ್) ರೂಪಿಸಲಾಗುತ್ತಿದೆ. ಇದಕ್ಕೆ ಪೂರಕವಾಗಿ ಎಲ್ಲ ವಿದ್ಯಾರ್ಥಿಗಳಿಗೆ ಗುಣಮಟ್ಟದ ಟ್ಯಾಬ್ ವಿತರಿಸಲಾಗುವುದು' ಎಂದರು.

'ಈ ಉಪಕ್ರಮಗಳ ಮೂಲಕ ಜಾಗತಿಕ ಶಿಕ್ಷಣ ಸಂಸ್ಥೆಗಳ ಜತೆಗೂ ಪೈಪೋಟಿ ನಡೆಸಲು ಸಮರ್ಥವಾಗಲಿವೆ' ಎಂದರು.

ಜೈಪುರ: ಇಂದಿನಿಂದ 'ಸಾಹಿತ್ಯದ ಕುಂಭಮೇಳ'

ಬಿಲ್‌ಗೇಟ್ಸ್, ಮಲಾಲಾ ಸಮ್ಮೇಳನದ ಪ್ರಮುಖ ಆಕರ್ಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾಹಿತ್ಯದ ಕುಂಭಮೇಳ' ಎಂದೇ ಕರೆಯಲಾಗುವ ಜೈಪುರ ಸಾಹಿತ್ಯ ಸಮ್ಮೇಳನ (ಜೆಎಲ್‌ಎಫ್) ಶುಕ್ರವಾರ ಆರಂಭವಾಗಲಿದ್ದು, ಈ ಸಲ ಹತ್ತು ದಿನಗಳವರೆಗೆ ನಡೆಯಲಿದೆ.

ಇದೇ ಮೊದಲ ಬಾರಿಗೆ ಈ ಸಮ್ಮೇಳನ ವರ್ಚುವಲ್ ಆಗಿ ನಡೆಯುತ್ತಿದ್ದು, ಅಂದಾಜು ಒಂದು ಕೋಟಿ ಸಾಹಿತ್ಯಾಸಕ್ತರು ಪಾಲ್ಗೊಳ್ಳಬಹುದು ಎಂದು ಸಂಘಟಕರು ನಿರೀಕ್ಷೆ ಇಟ್ಟುಕೊಂಡಿದ್ದಾರೆ.

ಜೆಎಲ್‌ಎಫ್‌ನ ಕಾಯಂ ತಾಣವಾದ ರಾಜಸ್ಥಾನದ ಡಿಗ್ಗಿ ಪ್ಯಾಲೆಸ್‌ನಲ್ಲಿಯೇ ಚರ್ಚೆಗಳು ನಡೆಯುತ್ತಿರುವಂತೆ ಭಾಸವಾಗಲು ಡಿಗ್ಗಿ ಪ್ಯಾಲೆಸ್‌ನ ವರ್ಚುವಲ್ ಪ್ಲಾಟ್‌ಫಾರ್ಮ್‌ಗಳನ್ನು ಸೃಷ್ಟಿ ಮಾಡಲಾಗಿದೆ. ಸಮ್ಮೇಳನದಲ್ಲಿ ಭಾರತದ 25 ಭಾಷೆಗಳ ಮಾತುಗಳಿಗೆ 'ತಾವು' ಸಿಕ್ಕಿದ್ದು, ಕನ್ನಡವೂ ಅದರಲ್ಲಿ ಸೇರಿದೆ.

ಭಾರತದಲ್ಲಿ ಸದ್ಯ ಬಹುವಾಗಿ ಚರ್ಚಿತವಾಗುತ್ತಿರುವ ರೈತ ಚಳವಳಿ, ಭಾರತ–ಚೀನಾ ಸಂಬಂಧ, ಹವಾಮಾನ ತುರ್ತು ಪರಿಸ್ಥಿತಿ ವಿಷಯಗಳು ಜೆಎಲ್‌ಎಫ್‌ನ ಚರ್ಚೆಗಳಿಗೂ ಕಾವು ತುಂಬಲಿವೆ. ಮೈಕ್ರೊಸಾಫ್ಟ್ ರೂವಾರಿ

ಮುಖ್ಯಾಂಶಗಳು

- ಕೋಟಿ ಸಾಹಿತ್ಯಾಸಕ್ತರು ಪಾಲ್ಗೊಳ್ಳುವ ನಿರೀಕ್ಷೆ
- ಚರ್ಚೆಯಲ್ಲಿ 300 ಜನ ಭಾಗವಹಿಸುವರು

ಬಿಲ್ ಗೇಟ್ಸ್, ನೊಬೆಲ್ ಪ್ರಶಸ್ತಿ ಪುರಸ್ಕೃತ ಪಾಕಿಸ್ತಾನದ ಚಳವಳಿಗಾರ್ತಿ ಮಲಾಲಾ, ಮ್ಯಾನ್ ಬೂಕರ್ ಪ್ರಶಸ್ತಿ ಪುರಸ್ಕೃತ ಡಗ್ಲಾಸ್ ಸ್ಟುವರ್ಟ್, ಪುಲಿಟ್ಜರ್ ಪ್ರಶಸ್ತಿ ಪುರಸ್ಕೃತ ಪತ್ರಕರ್ತ ಜೆಫ್ರಿ ಗೆಟ್ಲೆಮನ್ ಪ್ರಧಾನ ಆಕರ್ಷಣೆ ಎನಿಸಿದ್ದಾರೆ.

ಬೆಂಗಳೂರಿನ ರಾಮಚಂದ್ರ ಗುಹಾ, ಸುಧಾಮೂರ್ತಿ, ರಘು ಕಾರ್ನಾಡ ಅವರೂ ಚರ್ಚೆಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಗಾಯಕ ಟಿ.ಎಂ. ಕೃಷ್ಣ ಅವರ ಗೋಷ್ಠಿಯೂ ಕುತೂಹಲ ಕೆರಳಿಸಿದೆ.

ಅಮೆರಿಕದ ಟಿವಿ ಚಾನೆಲ್‌ನಲ್ಲಿ ಪ್ರಧಾನ ಪಾತ್ರದಲ್ಲಿ ಮಿಂಚುತ್ತಿರುವ ಪ್ರಿಯಾಂಕಾ ಚೋಪ್ರಾ ಸಮ್ಮೇಳನದಲ್ಲಿ ತಮ್ಮ ಬಾಲ್ಯದ ಪುಟಗಳನ್ನು ತೆರೆದಿಡಲಿದ್ದಾರೆ. ಸಾಹಿತ್ಯ, ಸಂಗೀತ, ಕ್ರೀಡೆ, ರಾಜಕೀಯ, ಉದ್ಯಮ ಮತ್ತಿತರ ವಲಯಗಳ 300 ಜನ ಚರ್ಚೆಯಲ್ಲಿ ಭಾಗವಹಿಸಲಿದ್ದಾರೆ.

ಗಂಭೀರ ಸಮಾಲೋಚನೆಗಳ ನಡುವೆಯೇ ರಸವತ್ತಾದ ಕಥೆಗಳ ಹಾಯಿದೋಣಿಗಳು ತೇಲಿ ಬರಲಿವೆ ಎನ್ನುತ್ತಾರೆ ಮುಖ್ಯ ಸಂಘಟಕ ಸಂಜಯ್ ರಾಯ್. ಕಳೆದ ವರ್ಷಪೂರ್ತಿ ಕಾಡಿ, ಈ ಸಲ 'ಲೈವ್' ಸಾಹಿತ್ಯ ಸಮ್ಮೇಳನಕ್ಕೂ ಸಂಚಕಾರ ತಂದ ಕೊರೊನಾ ಸೋಂಕಿನ ಕುರಿತು ತಜ್ಞ ವೈದ್ಯರಿಂದಲೇ ವಿಶೇಷ ಚರ್ಚೆ ನಡೆಯಲಿದೆ. ಸಾಂಕ್ರಾಮಿಕದ ನಾನಾ ಮುಖಗಳ ಕುರಿತು ಗೋಷ್ಠಿಗಳನ್ನು ಆಯೋಜಿಸಲಾಗಿದೆ ಎಂದು ಹೇಳುತ್ತಾರೆ.

ಯೂರೋಪಿಯನ್ ಒಕ್ಕೂಟದತ್ತ ನಾವು ಇದುವರೆಗೆ ಹೆಚ್ಚು ಲಕ್ಷ್ಯ ವಹಿಸಿರಲಿಲ್ಲ. ಆದರೆ, ಈ ವರ್ಷ ಆ ಭಾಗದಿಂದ ದೊಡ್ಡ ಸಂಖ್ಯೆಯಲ್ಲಿ ಲೇಖಕರು ಭಾಗವಹಿಸುತ್ತಿದ್ದಾರೆ ಎನ್ನುತ್ತಾರೆ ಸಂಘಟಕರಲ್ಲಿ ಒಬ್ಬರಾದ ವಿಲಿಯಂ ಡಾಲ್ರಿಂಪಲ್.

ಹೆಚ್ಚಿನ ಸಮಯವನ್ನು ಸ್ಕ್ರೀನ್‌ನಲ್ಲೇ (ಆನ್‌ಲೈನ್) ಕಳೆಯುವವರನ್ನು ಸಾಹಿತ್ಯದಂತಹ 'ಲೈವ್' ಕಾರ್ಯಕ್ರಮಗಳತ್ತ ಸೆಳೆದ ಶ್ರೇಯಸ್ಸು ಜೆಎಲ್‌ಎಫ್‌ನದ್ದು. ಆದರೆ, ಈ ಸಲ ಲೈವ್ ಕಾರ್ಯಕ್ರಮವನ್ನು ಸ್ಕ್ರೀನ್‌ನಲ್ಲೇ ನೋಡಿ ಎನ್ನುವ ಧ್ಯೇಯವಾಕ್ಯವನ್ನು ಅದು ಹೊತ್ತುಕೊಂಡು ಬಂದಿದೆ.

ಪುದುಚೇರಿ: 22 ರಂದು ಬಹುಮತ ಸಾಬೀತಿಗೆ ಸಿ.ಎಂಗೆ ಸೂಚನೆ

ಪುದುಚೇರಿ (ಪಿಟಿಐ): ಅಲ್ಪಮತಕ್ಕೆ ಕುಸಿದಿರುವ ಮುಖ್ಯಮಂತ್ರಿ ವಿ.ನಾರಾಯಣ ಸ್ವಾಮಿ ನೇತೃತ್ವದ ಕಾಂಗ್ರೆಸ್ ಸರ್ಕಾರಕ್ಕೆ ಇದೇ 22 ರಂದು ಸದನದಲ್ಲಿ ಬಹುಮತ ಸಾಬೀತುಪಡಿಸಲು ಲೆಫ್ಟಿನೆಂಟ್ ಗವರ್ನರ್ ತಮಿಳಿಸೈ ಸೌಂದರ್‌ರಾಜನ್ ಹೇಳಿದ್ದಾರೆ.

ನಾಲ್ವರು ಶಾಸಕರ ರಾಜೀನಾಮೆಯಿಂದಾಗಿ ಮುಖ್ಯಮಂತ್ರಿ ವಿ.ನಾರಾಯಣ ಸ್ವಾಮಿ ನೇತೃತ್ವದ ಸರ್ಕಾರ ಅಲ್ಪಮತಕ್ಕೆ ಕುಸಿದಿದೆ. ಹೀಗಾಗಿ, ವಿಧಾನಸಭೆಯ ವಿರೋಧ ಪಕ್ಷ ಎಐಎನ್‌ಆರ್‌ಸಿ ಮುಖ್ಯಸ್ಥ ಎನ್.ರಂಗಸ್ವಾಮಿ ನೇತೃತ್ವದಲ್ಲಿ 14 ಶಾಸಕರ ನಿಯೋಗ, ವಿ.ನಾರಾಯಣ ಸ್ವಾಮಿಯವರು ಬಹುಮತ ಸಾಬೀತುಪಡಿಸಲು ನಿರ್ದೇಶನ ನೀಡುವಂತೆ ಒತ್ತಾಯಿಸಿ ಮನವಿ ಸಲ್ಲಿಸಿತ್ತು. ಈ ಮನವಿ ಮೇರೆಗೆ ಬಹುಮತ ಸಾಬೀತು ಪಡಿಸುವಂತೆ ನಾರಾಯಣಸ್ವಾಮಿ ಅವರಿಗೆ ಲೆಫ್ಟಿನೆಂಟ್ ಗವರ್ನರ್ ಸೂಚಿಸಿದ್ದಾರೆ.

ಫೆಬ್ರುವರಿ 22 ರಂದು ಸಂಜೆ 5 ರೊಳಗೆ ಬಹುಮತ ಸಾಬೀತು ಪಡಿಸುವ ಪ್ರಕ್ರಿಯೆ ಮುಕ್ತಾಯಗೊಳಿಸಲಾಗುವುದು. ಕೈ ಎತ್ತುವ ಮೂಲಕ ಮತದಾನ ನಡೆಯಲಿದ್ದು, ಅದರ ವಿಡಿಯೊ ಮಾಡಲಾಗುವುದು ಎಂದು ಗವರ್ನರ್ ಕಚೇರಿ ತಿಳಿಸಿದೆ.

'ಬಚ್ಚನ್ ಚಿತ್ರಗಳ ಚಿತ್ರೀಕರಣಕ್ಕೆ ಅವಕಾಶ ನೀಡುವುದಿಲ್ಲ'

ಮುಂಬೈ: ತೈಲ ಬೆಲೆ ಏರಿಕೆ ಬಗ್ಗೆ ಯಾವುದೇ ಪ್ರಸ್ತಾವ ಮಾಡದ ಕಾರಣ ಬಾಲಿವುಡ್ ನಟರಾದ ಅಮಿತಾಬ್ ಬಚ್ಚನ್ ಹಾಗೂ ಅಕ್ಷಯ್ ಕುಮಾರ್ ವಿರುದ್ಧ ಗುಡುಗಿರುವ ಮಹಾರಾಷ್ಟ್ರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ನಾನಾ ಪಟೋಲೆ, ಈ ನಾಯಕರ ಚಿತ್ರಗಳ ಚಿತ್ರೀಕರಣಕ್ಕೆ ಅವಕಾಶ ನೀಡುವುದಿಲ್ಲ ಎಂದು ಗುರುವಾರ ಬೆದರಿಕೆ ಹಾಕಿದ್ದಾರೆ.

ಮನಮೋಹನ್ ಸಿಂಗ್ ಅವರು ಪ್ರಧಾನಿಯಾಗಿದ್ದ ಅವಧಿಯಲ್ಲಿ ಪೆಟ್ರೋಲ್, ಡೀಸೆಲ್ ದರ ಏರಿಕೆ ಆದ ಸಂದರ್ಭದಲ್ಲಿ ಈ ಇಬ್ಬರೂ ನಾಯಕರು ಟ್ವೀಟ್ ಮೂಲಕ ಟೀಕಿಸಿದ್ದನ್ನು ಪಟೋಲೆ ಉಲ್ಲೇಖಿಸಿದ್ದಾರೆ.

'ಈ ನಾಯಕ ನಟರ ಚಲನಚಿತ್ರಗಳನ್ನು ಮಹಾರಾಷ್ಟ್ರದಲ್ಲಿ ಚಿತ್ರೀಕರಿಸಲು ನಾವು ಅನುಮತಿ ನೀಡುವುದಿಲ್ಲ. ಅವರ ಚಿತ್ರವನ್ನು ಮಹಾರಾಷ್ಟ್ರದಲ್ಲಿ ಪ್ರದರ್ಶಿಸಲು ಸಹ ಅವಕಾಶ ನೀಡುವುದಿಲ್ಲ' ಎಂದಿರುವ ಪಟೋಲೆ, ಪೆಟ್ರೋಲಿಯಂ ಉತ್ಪನ್ನಗಳ ದರ ಹೆಚ್ಚಾಗುತ್ತಿರುವಾಗ ಅವರು ಈಗ ಏಕೆ ಟ್ವೀಟ್ ಮಾಡುತ್ತಿಲ್ಲ? ಅವರು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರದ ಒತ್ತಡದಲ್ಲಿದ್ದಾರೆ ಎಂದು ಹೇಳಿದ್ದಾರೆ.

'ಯುಪಿಎ ಸರ್ಕಾರದ ಅವಧಿಯಲ್ಲಿನ ದರಗಳಿಗೆ ಹೋಲಿಸಿದರೆ, ಬಿಜೆಪಿ ಆಡಳಿತದ 7 ವರ್ಷಗಳ ಅವಧಿಯಲ್ಲಿ ತೈಲ ದರ ದ್ವಿಗುಣವಾಗಿದೆ. ಆ ಸಮಯದಲ್ಲಿ ಈ ಎಲ್ಲ ಖ್ಯಾತನಾಮರು ಸರ್ಕಾರದ ವಿರುದ್ಧ ಮಾತನಾಡುತ್ತಿದ್ದರು, ಆದರೆ ಈಗ ಅವರು ಬಿಜೆಪಿಗೆ ಹೆದರುತ್ತಿದ್ದಾರೆ. ಯುಪಿಎ ಸರ್ಕಾರವು ಪ್ರಜಾಪ್ರಭುತ್ವ ಮತ್ತು ಸಾಂವಿಧಾನಿಕ ಆಡಳಿತ ನೀಡುತ್ತಿತ್ತು. ಅದಕ್ಕಾಗಿಯೇ ಅನೇಕ ಖ್ಯಾತನಾಮರು ಸರ್ಕಾರದ ವಿರುದ್ಧ ಭಯವಿಲ್ಲದೆ ಧ್ವನಿ ಎತ್ತುತ್ತಿದ್ದರು. ಇಂದು, ಅವರು ಬಿಜೆಪಿಯ ಕೈಗೊಂಬೆಗಳಾಗಿದ್ದಾರೆ' ಎಂದು ಆರೋಪಿಸಿದರು.

ಪಟೋಲೆ ಅವರ ಹೇಳಿಕೆಗೆ ಪ್ರತಿಕ್ರಿಯೆ ನೀಡಿರುವ ವಿರೋಧ ಪಕ್ಷದ ನಾಯಕ ದೇವೇಂದ್ರ ಫಡಣವೀಸ್, 'ಪ್ರಚಾರಕ್ಕಾಗಿ ಮಾತ್ರ ಕೆಲವರು ಹೇಳಿಕೆ ನೀಡುತ್ತಾರೆ' ಎಂದು ವ್ಯಂಗ್ಯವಾಡಿದ್ದಾರೆ.

ಬಿಜೆಪಿಗೆ ಸೇರ್ಪಡೆಯಾಗಲಿರುವ 'ಮೆಟ್ರೊ ಮ್ಯಾನ್' ಇ. ಶ್ರೀಧರನ್

ಪ್ರಜಾವಾಣಿ ವಾರ್ತೆ

ತಿರುವನಂತಪುರ: 'ಮೆಟ್ರೊ ಮ್ಯಾನ್' ಖ್ಯಾತಿಯ ಇ. ಶ್ರೀಧರನ್ ಭಾರತೀಯ ಜನತಾ ಪಕ್ಷಕ್ಕೆ (ಬಿಜೆಪಿ) ಸೇರ್ಪಡೆಯಾಗಲು ನಿರ್ಧರಿಸಿದ್ದಾರೆ.

ಫೆಬ್ರುವರಿ 21ರಂದು ನಡೆಯಲಿರುವ 'ವಿಜಯ ಯಾತ್ರೆ' ಸಂದರ್ಭದಲ್ಲಿ ಇ. ಶ್ರೀಧರನ್ ಅವರು ಅಧಿಕೃತವಾಗಿ ಬಿಜೆಪಿ ಪಕ್ಷಕ್ಕೆ ಸೇರ್ಪಡೆಯಾಗಲಿದ್ದಾರೆ ಎಂದು ಕೇರಳ ಬಿಜೆಪಿ ಅಧ್ಯಕ್ಷ ಕೆ. ಸುರೇಂದ್ರನ್ ಹೇಳಿದ್ದಾರೆ.

ಈ ಸುದ್ದಿಯನ್ನು ನಂತರದಲ್ಲಿ ಶ್ರೀಧರನ್ ಅವರೂ ಖಚಿತಪಡಿಸಿದ್ದಾರೆ. ಬಿಜೆಪಿ ನೇತೃತ್ವದ ಎನ್‌ಡಿಎ ಮಾತ್ರ ಕೇರಳ ಅಭಿವೃದ್ಧಿಗೆ ಕ್ರಮ ತೆಗೆದುಕೊಳ್ಳಲು ಸಾಧ್ಯ. ಹಾಗಾಗಿ ಬಿಜೆಪಿ ಸೇರಲು ನಿರ್ಧರಿಸಿರುವುದಾಗಿ ಹೇಳಿದ್ದಾರೆ.

ಮುಂಬರುವ ವಿಧಾನಸಭಾ ಚುನಾವಣೆಯಲ್ಲೂ ಅವರು ಸ್ಪರ್ಧಿಸುವ ಸಾಧ್ಯತೆ ಇದೆ. ಇ. ಶ್ರೀಧರನ್ ದೆಹಲಿ ಮತ್ತು ಕೊಚ್ಚಿ ಮೆಟ್ರೊ ಯೋಜನೆಗಳ ಯಶಸ್ಸಿನ ಸೂತ್ರಧಾರರಾಗಿದ್ದಾರೆ. ಈ ಕಾರಣದಿಂದ ಅವರು 'ಮೆಟ್ರೊ ಮ್ಯಾನ್' ಎಂದೇ ಹೆಸರುವಾಸಿ.

ಮಾಧ್ಯಮದಿಂದ ಖಾಸಗಿತನದ ಹಕ್ಕು ಉಲ್ಲಂಘನೆ: ದಿಶಾ ಆರೋಪ

ಒಂದನೇ ಪುಟದಿಂದ

ಆದರೆ, ದಿಶಾ ವಿರುದ್ಧದ ತನಿಖೆಯ ವಿವರಗಳನ್ನು ಮಾಧ್ಯಮಕ್ಕೆ ಸೋರಿಕೆ ಮಾಡಿಲ್ಲ ಎಂದು ದೆಹಲಿ ಪೊಲೀಸರು ಹೈಕೋರ್ಟ್‌ಗೆ ತಿಳಿಸಿದ್ದಾರೆ.

ತನಿಖೆಗೆ ಸಂಬಂಧಿಸಿದ ಯಾವುದೇ ದಾಖಲೆಗಳನ್ನು ಮಾಧ್ಯಮಕ್ಕೆ ಸೋರಿಕೆ ಮಾಡಿಲ್ಲ ಎಂಬ ಪ್ರಮಾಣಪತ್ರ ಸಲ್ಲಿಸುವಂತೆ ನ್ಯಾಯಮೂರ್ತಿ ಪ್ರತಿಭಾ ಎಂ. ಸಿಂಗ್ ಅವರ ಪೀಠವು ದೆಹಲಿ ಪೊಲೀಸರ ಪರವಾಗಿ ಹಾಜರಾಗಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರಿಗೆ ಸೂಚಿಸಿತು.

ಟೈಮ್ಸ್ ನೌ, ನ್ಯೂಸ್ 18 ಮತ್ತು ಇಂಡಿಯಾ ಟುಡೆ ಸುದ್ದಿ ವಾಹಿನಿಗಳನ್ನು ದಿಶಾ ಅವರ ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ. ಸುದ್ದಿ ಪ್ರಸಾರ ಗುಣಮಟ್ಟ ಪ್ರಾಧಿಕಾರ (ಎನ್‌ಬಿಎಸ್‌ಎ) ಮತ್ತು ಸುದ್ದಿ ವಾಹಿನಿಗಳ ಪರವಾಗಿ ಯಾರೂ ಹಾಜರಿಲ್ಲದ ಕಾರಣ ಈ ಪ್ರಾಧಿಕಾರ ಮತ್ತು ಸಂಸ್ಥೆಗಳಿಗೆ ನೋಟಿಸ್ ನೀಡಲಾಗಿದೆ. ಮುಂದಿನ ವಿಚಾರಣೆಯನ್ನು ಶುಕ್ರವಾರ ನಡೆಸುವುದಾಗಿ ಪೀಠವು ಹೇಳಿದೆ.

ತಮ್ಮ ಬಂಧನಕ್ಕೆ ಸಂಬಂಧಿಸಿ ಮಾಧ್ಯಮದಲ್ಲಿ ನಡೆಯುತ್ತಿರುವ ವಿಚಾರಣೆಯು ತೀವ್ರವಾಗಿ ಪೂರ್ವಗ್ರಹಪೀಡಿತವಾಗಿದ್ದು ವೇದನೆಗೆ ಕಾರಣವಾಗಿದೆ. ಪೊಲೀಸರು ಮತ್ತು ಕೆಲವು ಮಾಧ್ಯಮ ಸಂಸ್ಥೆಗಳು ತಮ್ಮ ಭಾವನೆಗಳ ಮೇಲೆ ದಾಳಿ ನಡೆಸುತ್ತಿವೆ ಎಂದು ದಿಶಾ ಅವರು ಹೇಳಿದ್ದಾರೆ.

ದೆಹಲಿಯ ಸೈಬರ್ ಘಟಕದ ಪೊಲೀಸರು ಬೆಂಗಳೂರಿನಿಂದ ಇದೇ 13ರಂದು ತಮ್ಮನ್ನು ಬಂಧಿಸಿದ್ದು ಸಂಪೂರ್ಣವಾಗಿ ಕಾನೂನುಬಾಹಿರ; ಆಧಾರರಹಿತ ಎಂದು ಅವರು ವಾದಿಸಿದ್ದಾರೆ. ಈಗ ಪ್ರಸಾರವಾಗುತ್ತಿರುವ ಸುದ್ದಿಯೇ ನಿಜವೆಂದು ನಂಬಿ ಜನರು ತಮ್ಮನ್ನು ಅಪರಾಧಿ ಎಂದು ಭಾವಿಸುವ ಸಾಧ್ಯತೆ ಅತ್ಯಂತ ಹೆಚ್ಚು ಎಂದೂ ಅವರು ಹೇಳಿದ್ದಾರೆ.

'ಪೊಲೀಸರ ಕಾನೂನುಬಾಹಿರ ನಡವಳಿಕೆಯು ನನ್ನ ಖಾಸಗಿತನದ ಮೂಲಭೂತ ಹಕ್ಕು, ಘನತೆ ಮತ್ತು ವರ್ಚಸ್ಸನ್ನು ಸರಿಪಡಿಸಲಾರದ ರೀತಿಯಲ್ಲಿ ಹಾನಿ ಮಾಡಿದೆ. ವಾಟ್ಸ್‌ಆ್ಯಪ್ ಚಾಟ್‌ನಂತಹ ತನಿಖಾ ದಾಖಲಾತಿಗಳನ್ನು ಪೊಲೀಸರು ಮಾಧ್ಯಮಕ್ಕೆ ಸೋರಿಕೆ ಮಾಡಿದ್ದಾರೆ. ಈ ವಿವರಗಳು ತನಿಖಾ ಸಂಸ್ಥೆಯ ಬಳಿಯಲ್ಲಿ ಮಾತ್ರ ಇರಲು ಸಾಧ್ಯ' ಎಂದಿದ್ದಾರೆ.

ವಾಟ್ಸ್‌ಆ್ಯಪ್‌ನಲ್ಲಿ ನಡೆಸಿದ್ದ ಖಾಸಗಿ ಚಾಟ್‌ಗಳನ್ನು ಕೂಡ ವಿವಿಧ ಮಾಧ್ಯಮಗಳು ಪ್ರಕಟಿಸಿವೆ. ಇದು ಕೇಬಲ್ ಟಿ.ವಿ. ಜಾಲಗಳ (ನಿಯಂತ್ರಣ) ಕಾಯ್ದೆಯ ಉಲ್ಲಂಘನೆ ಎಂದೂ ಹೇಳಲಾಗಿದೆ.

ಕೃಷಿ ಕಾಯ್ದೆ ರದ್ದತಿಗೆ ಆಗ್ರಹ; ದೇಶದಾದ್ಯಂತ ರೈಲು ತಡೆ ಆಂದೋಲನ

ರೈಲ್ವೆ ಹಳಿಗಳ ಮೇಲೆ ರೈತ ಚಳವಳಿ

ಪ್ರಜಾವಾಣಿ ವಾರ್ತೆ



ಪಂಜಾಬ್‌ನ ಅಮೃತಸರದಲ್ಲಿ ವಿವಿಧ ಸಂಘಟನೆಗಳ ಕಾರ್ಯಕರ್ತರು ರೈಲು ಹಳಿ ಮೇಲೆ ಮಲಗಿ ಪ್ರತಿಭಟನೆ ನಡೆಸಿದರು

ಚಂಡೀಗಡ: ದೆಹಲಿ, ಮಹಾರಾಷ್ಟ್ರ, ರಾಜಸ್ಥಾನ, ಹರಿಯಾಣ ಹಾಗೂ ಪಂಜಾಬ್ ಸೇರಿದಂತೆ ದೇಶದ ಹಲವು ಭಾಗಗಲ್ಲಿ ಗುರುವಾರ ರೈಲು ತಡೆ ಚಳವಳಿ ನಡೆಸಲಾಯಿತು. ಸಾವಿರಾರು ರೈತರು ರೈಲ್ವೆ ಹಳಿಗಳ ಮೇಲೆ ಕುಳಿತು ಧರಣಿ ನಡೆಸಿದರು. ರಾಷ್ಟ್ರವ್ಯಾಪಿ ರೈಲು ತಡೆ ಚಳವಳಿಗೆ ಸಂಯುಕ್ತ ಕಿಸಾನ್ ಮೋರ್ಚಾ ಕಳೆದವಾರ ಕರೆ ನೀಡಿತ್ತು.

ಕೇಂದ್ರ ಸರ್ಕಾರದ ಮೂರು ಕೃಷಿ ಕಾಯ್ದೆಗಳನ್ನು ವಿರೋಧಿಸಿ 4 ತಾಸುಗಳ ರೈಲು ತಡೆ ಚಳವಳಿ ಹಮ್ಮಿಕೊಂಡಿದ್ದ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಕನಿಷ್ಠ 25 ರೈಲುಗಳ ಸಂಚಾರವನ್ನು ಇಲಾಖೆ ಕೆಲಕಾಲ ಸ್ಥಗಿತಗೊಳಿಸಿತ್ತು. ಹೀಗಾಗಿ ಯಾವುದೇ ಅವಘಡಗಳು ಸಂಭವಿಸಿಲ್ಲ.

ಹರಿಯಾಣದ ಕುರುಕ್ಷೇತ್ರದಲ್ಲಿ ಗೀತಾ ಜಯಂತಿ ಎಕ್ಸ್‌ಪ್ರೆಸ್ ರೈಲಿನ ಮೇಲೆ ಹತ್ತಿದ ರೈತರು ರೈಲು ನಿಲುಗಡೆ ಮಾಡಿಸುವಲ್ಲಿ ಯಶಸ್ವಿಯಾದರು. ಆದರೆ ರೈಲಿನ ಎಂಜಿನ್ ಇರುವ ಬೋಗಿಗೆ ಪ್ರವೇಶಿಸಲು ಅವಕಾಶ ಮಾಡಿಕೊಡಲಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಅಂಬಾಲ, ಪಾಣಿಪತ್, ಪಂಚಕುಲಾ, ರೋಹ್ಟಕ್, ಸೋನಿಪತ್, ಹಿಸ್ಸಾರ್ ಮತ್ತು ಫತೇಹ್‌ಬಾದ್ ಜಿಲ್ಲೆಗಳಲ್ಲೂ ಧರಣಿ ಇತ್ತು. ಜಿಂದ್ ಮತ್ತು ಫತೇಹ್‌ಬಾದ್ ಜಿಲ್ಲೆಗಳಲ್ಲಿ ಕೆಲವು ರೈತರು ಹಳಿ ಮೇಲೆ ಕುಳಿತು ಹುಕ್ಕಾ ಸೇದಿದ್ದು ಕಂಡುಬಂದಿತು.

ಪಂಜಾಬ್‌ನಲ್ಲಿ ಪ್ರತಿಭಟನಕಾರರು ದೆಹಲಿ–ಲೂಧಿಯಾನ–ಅಮೃತಸರ ರೈಲ್ವೆ ಮಾರ್ಗದ ಹಳಿಗಳ ಮೇಲೆ ಧರಣಿ ನಡೆಸಿದರು. ಜಲಂಧರ್‌ನಲ್ಲಿ ಜಲಂಧರ್–ಜಮ್ಮು ಮಾರ್ಗದ ಹಳಿಯ ಮೇಲೆ ಪ್ರತಿಭಟನೆ ನಡೆಯಿತು. ಲೂಧಿಯಾನದಲ್ಲಿ ಲೂಧಿಯಾನ–ಫಿರೋಜ್‌ಪುರ ಮಾರ್ಗದ ಮುಲ್ಲನ್‌ಪುರ, ದಖಾ, ಜಾಗರಣ್‌ಗಳಲ್ಲಿ ಹಳಿಗಳ ಮೇಲೆ ಕುಳಿತಿದ್ದರು.

ಭಟಿಂಡಾದಲ್ಲಿ ಭಟಿಂಡಾ–ದೆಹಲಿ ಮಾರ್ಗ, ಅಮೃತಸರದಲ್ಲಿ ದೆಹಲಿ–ಅಮೃತಸರ ಮಾರ್ಗ, ಅಮೃತಸರ–ತರನ್ ತಾರನ್ ಮಾರ್ಗದ ಹಳಿಗಳಲ್ಲೂ ರೈತರು ಪ್ರತಿಭಟಿಸಿದರು. ಭಾರತೀಯ ಕಿಸಾನ್ ಮೋರ್ಚಾದ ಗುಲಾಬ್ ಸಿಂಗ್ ಮಾಂಕ್ಪುರ್ ನೇತೃತ್ವದಲ್ಲಿ ರೈತರು ಅಂಬಾಲಾ ಕಂಟೋನ್ಮೆಂಟ್ ನಿಲ್ದಾಣದಿಂದ 2 ಕಿಲೋಮೀಟರ್ ದೂರದಲ್ಲಿರುವ ಶಾಹಪುರ ಗ್ರಾಮದ ಹಳಿಗಳ ಮೇಲೆ ಓಡಾಡಿದರು. 'ಕೃಷಿ ಕಾನೂನುಗಳನ್ನು ರದ್ದುಗೊಳಿಸುವವರೆಗೂ ನಮ್ಮ ಪ್ರತಿಭಟನೆ ಶಾಂತಿಯುತವಾಗಿ ಮುಂದುವರಿಯುತ್ತದೆ' ಎಂದು ಸಿಂಗ್ ಹೇಳಿದರು.

ಪ್ರತಿಭಟನೆಯ ಕಾರಣದಿಂದ ಪಂಜಾಬ್, ಹರಿಯಾಣ ರಾಜ್ಯಗಳಲ್ಲಿ ಪೊಲೀಸ್ ಭದ್ರತೆಯನ್ನು ಹೆಚ್ಚಿಸಲಾಗಿತ್ತು.

ರೈತರು 50 ಸ್ಥಳಗಳಲ್ಲಿ ಧರಣಿ ನಡೆಸಿದ್ದಾರೆ ಎಂದು ವಿಭಾಗೀಯ ರೈಲ್ವೆ ವ್ಯವಸ್ಥಾಪಕ ರಾಜೇಶ್ ಅಗರ್‌ವಾಲ್ ತಿಳಿಸಿದ್ದಾರೆ. ಪ್ರತಿಭಟನೆಯ ಕಾರಣಕ್ಕೆ ಯಾವುದೇ ರೈಲುಗಳ ಮಾರ್ಗ ಬದಲಾವಣೆ ಅಥವಾ ರದ್ದತಿ ಮಾಡಿರಲಿಲ್ಲ ಎಂದು ಅವರು ತಿಳಿಸಿದ್ದಾರೆ. ಉತ್ತರ ರೈಲ್ವೆ ವಲಯದ ಫಿರೋಜ್‌ಪುರ ವಿಭಾಗದ ರೈಲುಗಳನ್ನು ನಿಲ್ದಾಣದಲ್ಲಿ ನಿಲುಗಡೆ ಮಾಡಿದ್ದರಿಂದ ಪ್ರಯಾಣಿಕರಿಗೆ ಅಲ್ಪ ಮಟ್ಟಿನ ತೊಂದರೆಯಾಯಿತು. ಮಧ್ಯಾಹ್ನ 12ರಿಂದ 4 ಗಂಟೆ ಅವಧಿಯಲ್ಲಿ ಸಂಚರಿಸಬೇಕಿದ್ದ ರೈಲುಗಳು ನಿಲ್ದಾಣಗಳಲ್ಲಿ ಉಳಿದಿದ್ದವು. ಸಂಜೆ ನಾಲ್ಕು ಗಂಟೆ ಬಳಿಕ ಪ್ರಯಾಣ ಪುನರಾರಂಭವಾಯಿತು ಎಂದು ತಿಳಿಸಿದ್ದಾರೆ.

ರಾಜಸ್ಥಾನದಲ್ಲಿ ರೇವರಿ–ಶ್ರೀ ಗಂಗಾನಗರ ವಿಶೇಷ ರೈಲನ್ನು ಮಾತ್ರ ರದ್ದುಗೊಳಿಸಲಾಯಿತು. ಕೆಲವು ರೈಲುಗಳು ವಿಳಂಬವಾಗಿದ್ದವು.

ಮಹಾರಾಷ್ಟ್ರದಲ್ಲೂ ಆಂದೋಲನ: ಮಹಾರಾಷ್ಟ್ರದ ಔರಂಗಾಬಾದ್ ಹಾಗೂ ಪುಣೆ ನಗರಗಳಲ್ಲಿ ಕೆಲಕಾಲ ರೈಲು ತಡೆ ನಡೆಸಲಾಯಿತು. ಔರಂಗಾಬಾದ್‌ನ ಲಾಸೂರ್ ನಿಲ್ದಾಣದಲ್ಲಿ 12 ಜನರನ್ನು ಪೊಲೀಸರು ವಶಕ್ಕೆ ಪಡೆದರು. ಜಲ್ನಾ–ಮುಂಬೈ ಜನಶತಾಬ್ದಿ ರೈಲನ್ನು ಅರ್ಧಗಂಟೆ ತಡೆಹಿಡಿಯಲಾಗಿತ್ತು. ಔರಂಗಾಬಾದ್ ನಿಲ್ದಾಣದ ಹೊರಗೆ ಪ್ರತಿಭಟನೆ ನಡೆಯಿತು.

ವಿವಿಧ ಸಂಘಟನೆಗಳು ಮತ್ತು ರಾಜಕೀಯ ಪಕ್ಷಗಳಿಗೆ ಸೇರಿದ ಸದಸ್ಯರು ಗುರುವಾರ ಪುಣೆ ರೈಲು ನಿಲ್ದಾಣದಲ್ಲಿ ಆಂದೋಲನ ನಡೆಸಿದರು. ಕಾಂಗ್ರೆಸ್, ಶಿವಸೇನಾ, ಎನ್‌ಸಿಪಿ, ಜನತಾದಳ ಮತ್ತು ಆಮ್ ಆದ್ಮಿ ಪಕ್ಷ ಸೇರಿದಂತೆ ಹಲವಾರು ಸಂಘಟನೆಗಳ ಸದಸ್ಯರು ಮತ್ತು ರಾಜಕೀಯ ಪಕ್ಷಗಳ ಕಾರ್ಯಕರ್ತರು ರೈಲು ನಿಲ್ದಾಣದಲ್ಲಿ ನಡೆದ ಚಳವಳಿಯಲ್ಲಿ ಭಾಗವಹಿಸಿದ್ದರು ಎಂದು ಕಾರ್ಮಿಕ ಕಲ್ಯಾಣ ಕಾರ್ಯಕರ್ತ ನಿತಿನ್ ಪವಾರ್ ತಿಳಿಸಿದರು. ಪ್ರತಿಭಟನಕಾರರು ಕೊಯ್ನಾ ಎಕ್ಸ್‌ಪ್ರೆಸ್ ರೈಲು ತಡೆದರು.

ಟಿಕ್ರಿ ಗಡಿಯ ನಿಲ್ದಾಣ ತಾತ್ಕಾಲಿಕ ಸ್ಥಗಿತ

(ನವದೆಹಲಿ ವರದಿ): ರೈತರು ಪ್ರತಿಭಟನೆ ನಡೆಸುತ್ತಿರುವ ದೆಹಲಿಯ ಟಿಕ್ರಿ ಗಡಿಯ ನಿಲ್ದಾಣವೂ ಸೇರಿದಂತೆ ಕೆಲವು ಮೆಟ್ರೊ ನಿಲ್ದಾಣಗಳ ಪ್ರವೇಶದ್ವಾರವನ್ನು ರೈಲು ತಡೆ ಚಳವಳಿ ಕಾರಣಕ್ಕೆ 4 ಗಂಟೆಗಳ ಕಾಲ ಮುಚ್ಚಲಾಗಿತ್ತು. ಈ ಬಗ್ಗೆ ಪ್ರಯಾಣಿಕರಿಗೆ ರೈಲ್ವೆ ನಿಗಮ ಮಾಹಿತಿ ನೀಡಿತ್ತು. ಪ್ರತಿಭಟನೆ ಹಿನ್ನೆಲೆಯಲ್ಲಿ ನಗರದ ಬಹುತೇಕ ರೈಲು ನಿಲ್ದಾಣಗಳಲ್ಲಿ ಭದ್ರತೆಯನ್ನು ಹೆಚ್ಚಿಸಲಾಗಿತ್ತು.

ಪರಿಣಾಮ ಅತ್ಯಲ್ಪ: ರೈಲ್ವೆ

ರೈಲು ತಡೆ ಚಳವಳಿಯಿಂದ ರೈಲು ಸೇವೆಯ ಮೇಲೆ ಅತ್ಯಲ್ಪ ಪರಿಣಾಮವಷ್ಟೇ ಉಂಟಾಗಿದೆ ಎಂದು ಇಲಾಖೆಯ ವಕ್ತಾರರು ಗುರುವಾರ ತಿಳಿಸಿದ್ದಾರೆ. 'ಯಾವುದೇ ಅಹಿತಕರ ಘಟನೆ ನಡೆಯದೆ ಚಳವಳಿ ಮುಕ್ತಾಯವಾಗಿದೆ. ಎಲ್ಲ ವಲಯಗಳಲ್ಲಿ ರೈಲು ಸಂಚಾರ ಸಹಜವಾಗಿತ್ತು' ಎಂದು ತಿಳಿಸಿದ್ದಾರೆ.

'ಬಹುತೇಕ ವಲಯಗಳಲ್ಲಿ ಒಂದೂ ಘಟನೆ ವರದಿಯಾಗಿಲ್ಲ. ಕೆಲವು ನಿಲ್ದಾಣಗಳಲ್ಲಿ ರೈಲುಗಳ ಓಡಾಟವನ್ನು ಕೆಲಕಾಲ ತಡೆದಿದ್ದನ್ನು ಬಿಟ್ಟರೆ ಬಹುತೇಕ ಸಂಚಾರ ವ್ಯವಸ್ಥೆ ಸಾಮಾನ್ಯವಾಗಿತ್ತು' ಎಂದು ತಿಳಿಸಿದ್ದಾರೆ.

ಮಹಾಪಂಚಾಯಿತಿಗೆ ಇಲ್ಲ ಅನುಮತಿ

(ನಾಗ್ಪುರ ವರದಿ): ರೈತ ನಾಯಕ ರಾಕೇಶ್ ಟಿಕಾಯತ್ ಅವರು ಶನಿವಾರ (ಫೆ.20ರಂದು) ನಡೆಸಲು ಉದ್ದೇಶಿಸಿರುವ ಮಹಾಪಂಚಾಯಿತಿಗೆ ಅನುಮತಿ ಸಿಕ್ಕಿಲ್ಲ. ಕೊರೊನಾ ಪ್ರಕರಣಗಳು ಏರಿಕೆಯಾಗುತ್ತಿವೆ ಎಂಬ ಕಾರಣವನ್ನು ಮಹಾರಾಷ್ಟ್ರದ ಯವತ್ಮಾಲ್ ಜಿಲ್ಲಾಡಳಿತ ನೀಡಿದೆ.

'ಕಳೆದ ಎರಡು ದಿನಗಳಿಂದ ಕೊರೊನಾ ಪ್ರಕರಣಗಳ ಹೆಚ್ಚಳವನ್ನು ಗಮನಿಸಿ, ಅನುಮತಿ ನೀಡಬಾರದು ಎಂದು ಪೊಲೀಸ್ ಅಧೀಕ್ಷಕರು ವರದಿ ನೀಡಿದ್ದಾರೆ. ಹೀಗಾಗಿ ಗುರುವಾರ ರಾತ್ರಿಯಿಂದಲೇ ಲಾಕ್‌ಡೌನ್ ಜಾರಿಯಾಗಲಿದ್ದು, ಸಮಾವೇಶಕ್ಕೆ ಅನುಮತಿ ನೀಡಿಲ್ಲ' ಎಂದು ಯವತ್ಮಾಲ್ ಜಿಲ್ಲಾಧಿಕಾರಿ ಎಂ.ಡಿ. ಸಿಂಗ್ ಹೇಳಿದ್ದಾರೆ.

ಧರ್ಮೇಗೌಡ ಸಾವಿನಿಂದ ತೆರವಾದ ಸ್ಥಾನ: ಮಾರ್ಚ್ 15ಕ್ಕೆ ಚುನಾವಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಉಪ ಸಭಾಪತಿಯಾಗಿದ್ದ ಎಸ್.ಎಲ್. ಧರ್ಮೇಗೌಡ ಅವರ ಸಾವಿನಿಂದ ತೆರವಾಗಿರುವ ಕರ್ನಾಟಕ ವಿಧಾನ ಪರಿಷತ್‌ನ ಒಂದು ಸ್ಥಾನಕ್ಕೆ ಚುನಾವಣೆ ಘೋಷಣೆಯಾಗಿದೆ.

ವಿಧಾನಸಭೆ ಸದಸ್ಯರಿಂದ ಈ ಸ್ಥಾನದ ಆಯ್ಕೆ ನಡೆಯಲಿದ್ದು, ಮಾರ್ಚ್ 15ರಂದು ಮತದಾನ ನಿಗದಿಪಡಿಸಿ ಕೇಂದ್ರ ಚುನಾವಣಾ ಆಯೋಗ ಆದೇಶಿಸಿದೆ.

ಫೆಬ್ರುವರಿ 25ರಂದು ಈ ಸಂಬಂಧ ಅಧಿಸೂಚನೆ ಹೊರಬೀಳಲಿದೆ. ನಾಮಪತ್ರ ಸಲ್ಲಿಕೆಗೆ ಮಾರ್ಚ್ 4 ಕೊನೆಯ ದಿನವಾಗಿದ್ದು, ಮಾರ್ಚ್ 5ರಂದು ನಾಮಪತ್ರ ಪರಿಶೀಲನೆ ನಡೆಯಲಿದೆ. ಹಿಂದಕ್ಕೆ ಪಡೆಯಲು ಮಾರ್ಚ್ 8 ಕೊನೆಯ ದಿನವಾಗಿದೆ.

ಮಾರ್ಚ್ 15ರಂದು ಬೆಳಿಗ್ಗೆ 9ರಿಂದ ಮಧ್ಯಾಹ್ನ 4ರವರೆಗೆ ಮತದಾನ, ಸಂಜೆ 5ಕ್ಕೆ ಮತ ಎಣಿಕೆ ನಡೆಯಲಿದೆ.

ಉಪ ಸಭಾಪತಿಯಾಗಿದ್ದ ಜೆಡಿಎಸ್‌ನ ಎಸ್.ಎಲ್. ಧರ್ಮೇಗೌಡ ಅವರು ಡಿಸೆಂಬರ್ 28ರಂದು ಮಧ್ಯರಾತ್ರಿ ಕಡೂರು ಬಳಿ ರೈಲಿಗೆ ಸಿಲುಕಿ ಆತ್ಮಹತ್ಯೆ ಮಾಡಿಕೊಂಡಿದ್ದರು.

ಗೊಗೊಯಿ ವಿರುದ್ಧ ಸಂಚು ಸಾಧ್ಯತೆ ತಳ್ಳಿಹಾಕಲಾಗದು

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್ ನಿವೃತ್ತ ಮುಖ್ಯ ನ್ಯಾಯಮೂರ್ತಿ ರಂಜನ್ ಗೊಗೊಯಿ ಅವರನ್ನು ಲೈಂಗಿಕ ದೌರ್ಜನ್ಯ ಆರೋಪದಲ್ಲಿ ಸಿಲುಕಿಸಲು ಸಂಚು ರೂಪಿಸಿರುವ ಸಾಧ್ಯತೆಯನ್ನು ತಳ್ಳಿಹಾಕಲಾಗದು ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ. ರಂಜನ್ ಗೊಗೊಯಿ ಅವರು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿದ್ದಾಗ ಅವರ ಕಚೇರಿ ಸಿಬ್ಬಂದಿ ಒಬ್ಬರು, ಲೈಂಗಿಕ ದೌರ್ಜನ್ಯದ ಆರೋಪ ಮಾಡಿದ್ದರು. ವಕೀಲ ಉತ್ಸವ್ ಬೈನ್ಸ್ ಎಂಬುವವರು, ಈ ಆರೋಪದ ಹಿಂದೆ ಸಂಚುಗಳು ಇರುವ ಸಾಧ್ಯತೆ ಇದೆ ಎಂದು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು. ಆನಂತರ ನಿವೃತ್ತ ನ್ಯಾಯಮೂರ್ತಿ ಎ.ಕೆ.ಪಟ್ನಾಯಕ್ ನೇತೃತ್ವದ ತನಿಖಾ ಸಮಿತಿಯನ್ನು ಸುಪ್ರೀಂ ಕೋರ್ಟ್ ರಚಿಸಿತ್ತು. ಈ ಸಮಿತಿಯು ಸಲ್ಲಿಸಿದ್ದ ವರದಿ ಆಧರಿಸಿ ಸುಪ್ರೀಂ ಕೋರ್ಟ್ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

ರಾಷ್ಟ್ರೀಯ ಪೌರತ್ವ ನೋಂದಣಿಗೆ ಸಂಬಂಧಿಸಿದಂತೆ ರಂಜನ್ ಗೊಗೊಯಿ ಅವರ ನಿಲುವುಗಳು, ಸುಪ್ರೀಂ ಕೋರ್ಟ್‌ನ ಕಾರ್ಯಚಟುವಟಿಕೆಗಳನ್ನು ಕ್ರಮಬದ್ಧಗೊಳಿಸುವ ಅವರ ಪ್ರಯತ್ನಗಳು ಇಂತಹ ಸಂಚು ರೂಪಿಸಲು ಕಾರಣವಾಗಿರಬಹುದು ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ.

'ರಾಷ್ಟ್ರೀಯ ಪೌರತ್ವ ನೋಂದಣಿಯ ಬಗ್ಗೆ ರಂಜನ್ ಗೊಗೊಯಿ ಗಂಭೀರವಾದ ನಿಲುವುಗಳನ್ನು ತೆಗೆದುಕೊಂಡಿದ್ದರು. ಇದು ಕೆಲವರಿಗೆ ಅಪಥ್ಯವಾಗಿರಬಹುದು. ಹೀಗಾಗಿ ಅವರ ಮೇಲೆ ಪ್ರಭಾವ ಬೀರಲು, ಈ ಸಂಚು ರೂಪಿಸಿರಬಹುದು' ಎಂದು ಸಮಿತಿಯು ತನ್ನ ವರದಿಯಲ್ಲಿ ಹೇಳಿದೆ.

ಕೇಂದ್ರ ಸಚಿವ ಅಮಿತ್ ಶಾಗೆ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಸವಾಲು

'ಅಭಿಷೇಕ್ ಎದುರಿಸಿ, ನಂತರ ನನ್ನ ವಿರುದ್ಧ ಹೋರಾಡಿ'

ಪೈಲಾನ್ (ಪಶ್ಚಿಮಬಂಗಾಳ) (ಪಿಟಿಐ): ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ 'ದೀದಿ-ಭಾಯಿಪೋ' ಹೇಳಿಕೆಗೆ ಪ್ರತ್ಯುತ್ತರ ನೀಡಿರುವ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು, 'ಮೊದಲು ನನ್ನ ಸೋದರಳಿಯ ಅಭಿಷೇಕ್ ಬ್ಯಾನರ್ಜಿ ವಿರುದ್ಧ ಚುನಾವಣೆಯಲ್ಲಿ ಸ್ಪರ್ಧಿಸಿ, ನಂತರ ನನ್ನ ವಿರುದ್ಧ ಹೋರಾಡುವ ಬಗ್ಗೆ ಯೋಚಿಸುವಿರಂತೆ' ಎಂದು ಸವಾಲು ಹಾಕಿದ್ದಾರೆ.



ಪೈಲಾನ್‌ನಲ್ಲಿ ಗುರುವಾರದ ನಡೆದ ಟಿಎಂಸಿ ಚುನಾವಣಾ ರ್‍ಯಾಲಿಯಲ್ಲಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮಾತನಾಡಿದರು (ಪಿಟಿಐ ಚಿತ್ರ)

ದಕ್ಷಿಣ 24 ಪರಗಣ ಜಿಲ್ಲೆಯ ಪೈಲಾನ್‌ನಲ್ಲಿ ಪಕ್ಷದ ರ್‍ಯಾಲಿ ಉದ್ದೇಶಿಸಿ ಮಾತನಾಡಿದ ಅವರು, ಅಭಿಷೇಕ್ ಸಂಸದರಾಗಲು ರಾಜ್ಯಸಭಾ ಸದಸ್ಯರಾಗಿ ಆಯ್ಕೆಯಾಗುವ ಸುಲಭ ಮಾರ್ಗ ಹಿಡಿಯಬಹುದಿತ್ತು. ಆದರೆ ಅವರು ಹಾಗೆ ಮಾಡದೇ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ ಜನಾದೇಶ ಪಡೆದಿದ್ದಾರೆ ಎಂದರು.

'ಅವರೆಲ್ಲರೂ ಹಗಲು ರಾತ್ರಿ ದೀದಿ-ಸಂಬಂಧಿಗಳ ಬಗ್ಗೆ ಮಾತನಾಡುತ್ತಿದ್ದಾರೆ. ಮೊದಲು ಅಭಿಷೇಕ್ ಬ್ಯಾನರ್ಜಿ ವಿರುದ್ಧ ಸ್ಪರ್ಧಿಸಿ, ನಂತರ ನನ್ನ ಬಗ್ಗೆ ಯೋಚಿಸಿ ಎಂದು ಅಮಿತ್ ಶಾ ಅವರಿಗೆ ನಾನು ಸವಾಲು ಹಾಕುವೆ' ಎಂದು ಮಮತಾ ತಿರುಗೇಟು ನೀಡಿದ್ದಾರೆ.

ಮುಂಬರುವ ಚುನಾವಣೆಯಲ್ಲಿ ತಮ್ಮ ಪಕ್ಷವು ಹಿಂದಿನ ಚುನಾವಣೆಯ ಎಲ್ಲಾ ದಾಖಲೆಗಳನ್ನು ಮುರಿಯಲಿದೆ. ಅತಿ ಹೆಚ್ಚಿನ ಮತಗಳನ್ನು ಪಡೆಯುವ ಜತೆಗೆ, ಅತಿ ಹೆಚ್ಚು ಸ್ಥಾನಗಳನ್ನು ಗೆಲ್ಲುತ್ತದೆ ಎಂದು ಮಮತಾ ಬ್ಯಾನರ್ಜಿ ವಿಶ್ವಾಸ ವ್ಯಕ್ತಪಡಿಸಿದರು.

ಅಮಿತ್ ಶಾ ಸೇರಿ ಬಿಜೆಪಿಯ ಹಲವು ನಾಯಕರು, ಮಮತಾ ಬ್ಯಾನರ್ಜಿ ಕುಟುಂಬ ರಾಜಕಾರಣ ಮಾಡುತ್ತಿದ್ದು, ಸೋದರಳಿಯನಿಗೆ ('ಭಾಯಿಪೋ') ಆದ್ಯತೆ ನೀಡುತ್ತಿದ್ದಾರೆ. ಅಂತಿಮವಾಗಿ ಅವರನ್ನೇ ರಾಜ್ಯದ ಮುಖ್ಯಮಂತ್ರಿಯನ್ನಾಗಿ ಮಾಡುತ್ತಾರೆ ಎಂದು ದೂರುತ್ತಿದ್ದಾರೆ.

'ಪ್ರವಾಸಿ ನಕ್ಷೆಗೆ ಗಂಗಾಸಾಗರ್ ಸೇರ್ಪಡೆ'

ಗಂಗಾಸಾಗರ್(ಪಶ್ಚಿಮಬಂಗಾಳ): 'ಮುಂಬರುವ ವಿಧಾನಸಭಾ ಚುನಾವಣೆಯ ನಂತರ ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಆಡಳಿತ ರಚಿಸುವ ಸಂಪೂರ್ಣ ನಂಬಿಕೆ ಇದೆ. ಆಗ ಗಂಗಾಸಾಗರ ಮೇಳ ಅಂತರರಾಷ್ಟ್ರೀಯ ಪ್ರವಾಸಿ ನಕ್ಷೆಗೂ ಸೇರಲಿದೆ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಇಲ್ಲಿನ ಕಪಿಲಮುನಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದ ನಂತರ ಮಾತನಾಡಿದ ಅವರು, ಬಂಗಾಳದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಾಗ ಕೇಂದ್ರದ ಎಲ್ಲ ಪ್ರವಾಸೋದ್ಯಮ ಯೋಜನೆಗಳನ್ನು ಇಲ್ಲಿ ಯಶಸ್ವಿಯಾಗಿ ಜಾರಿಗೊಳಿಸಲಾಗುವುದು. ಗಂಗಾ ನದಿ ಸ್ವಚ್ಛಗೊಳಿಸುವ 'ನವಾಮಿ ಗಂಗೆ'ಯನ್ನು ರಾಜ್ಯದಲ್ಲಿ ಕೈಗೆತ್ತಿಕೊಳ್ಳಲಾಗುವುದು. ಗಂಗಾಸಾಗರ ವೇಳವನ್ನು ಅಂತರ ರಾಷ್ಟ್ರೀಯ ಪ್ರವಾಸಿ ನಕ್ಷೆಗೆ ಸೇರಿಸಲಾಗುವುದು ಎಂದು ಶಾ ಹೇಳಿದರು.

'ಟಿಎಂಸಿ ಸರ್ಕಾರ ಪಶ್ಚಿಮ ಬಂಗಾಳದಲ್ಲಿ 'ಕಟ್-ಮನಿ' (ಹಣ ಕಡಿತ) ಸಂಸ್ಕೃತಿ ಪರಿಚಯಿಸಿದೆ. ಜನತೆ ಬಿಜೆಪಿಗೆ ಅಧಿಕಾರ ನೀಡಿದರೆ, ಈ ಸಂಸ್ಕೃತಿ ಕೊನೆಗಾಣಿಸಿ, ರಾಜ್ಯವನ್ನು ಅಭಿವೃದ್ಧಿಯತ್ತ ಕೊಂಡೊಯ್ಯಲಾಗುವುದು' ಎಂದು ಕಾಕ್‌ದ್ವೀಪ್‌ನಲ್ಲಿ ಪರಿವರ್ತನಾ ರ್‍ಯಾಲಿಯಲ್ಲಿ ಶಾ ಹೇಳಿದ್ದಾರೆ.

ವಕೀಲ ದಂಪತಿ ಕೊಲೆ ಪ್ರಕರಣ ಸ್ವಯಂಪ್ರೇರಿತವಾಗಿ ವಿಚಾರಣೆ

ತೆಲಂಗಾಣ ಸರ್ಕಾರಕ್ಕೆ ಹೈಕೋರ್ಟ್ ನೋಟಿಸ್

ಹೈದರಾಬಾದ್ (ಪಿಟಿಐ): ತೆಲಂಗಾಣದ ಪೆದ್ದಪಲ್ಲಿ ಜಿಲ್ಲೆಯಲ್ಲಿ ಬುಧವಾರ ನಡೆದಿದ್ದ ವಕೀಲ ದಂಪತಿಯ ಕೊಲೆ ಪ್ರಕರಣವನ್ನು ಸ್ವಯಂಪ್ರೇರಿತವಾಗಿ ವಿಚಾರಣೆಗೆ ಪರಿಗಣಿಸಿರುವ ತೆಲಂಗಾಣ ಹೈಕೋರ್ಟ್, ಈ ಕುರಿತು ಸಮರ್ಪಕ ಮತ್ತು ತ್ವರಿತಗತಿಯಲ್ಲಿ ತನಿಖೆ ನಡೆಸಲು ಸರ್ಕಾರಕ್ಕೆ ನಿರ್ದೇಶನ ನೀಡಿತು.

ಹೈಕೋರ್ಟ್‌ನ ವಕೀಲ ದಂಪತಿಗಳಾದ ಗತ್ತುವಾಮನ್ ರಾವ್ ಮತ್ತು ಪಿ.ವಿ.ನಾಗಮಣಿ ಅವರು ಕಾರಿನಲ್ಲಿ ಪ್ರಯಾಣಿಸುವಾಗ ದಾಳಿ ನಡೆಸಿ ಕೊಲೆ ಮಾಡಲಾಗಿತ್ತು. ಚಾಕು ಮತ್ತು ಇತರೆ ಮಾರಕಾಸ್ತ್ರಗಳನ್ನು ಬಳಸಿ ದುಷ್ಕರ್ಮಿಗಳು ರಾಮಗಿರಿ ಮಂಡಲ್ ಬಳಿ ಕೃತ್ಯ ಎಸಗಿದ್ದರು.

ವಿಚಾರಣೆಯನ್ನು ಮಾರ್ಚ್ 1ಕ್ಕೆ ನಿಗದಿಪಡಿಸಿದ ಕೋರ್ಟ್, ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿ ತನಿಖೆಯ ವಸ್ತುಸ್ಥಿತಿ ವರದಿಯನ್ನು ಸಲ್ಲಿಸಲು ಸೂಚಿಸಿತು. ದಂಪತಿ ಕೊಲೆ ಖಂಡಿಸಿ ವಕೀಲರು ರಾಜ್ಯದಾದ್ಯಂತ ಪ್ರತಿಭಟನೆ ನಡೆಸಿದ್ದು, ದುಷ್ಕರ್ಮಿಗಳ ತ್ವರಿತ ಬಂಧನಕ್ಕೆ ಆಗ್ರಹಪಡಿಸಿದ್ದರು.

ಕೃತ್ಯವನ್ನು ಖಂಡಿಸಿದ್ದ ಮುಖ್ಯ ನ್ಯಾಯಮೂರ್ತಿ ಹಿಮಾ ಕೊಯ್ಲಿ ಅವರು, ಸಾಕ್ಷ್ಯ ಸಂಗ್ರಹ ಚುರುಕಾಗಿ ತನಿಖೆ ನಡೆಸಬೇಕು. ಯಾವುದೇ ವಿಳಂಬ ಆಗಬಾರದು ಎಂದೂ ಸೂಚಿಸಿದರು.

ಹಲ್ಲೆಗೆ ಆಡಳಿತಾರೂಢ ಟಿಆರ್‌ಎಸ್‌ನ ಸ್ಥಳೀಯ ನಾಯಕ ಕಾರಣ ಎಂದು ವಾಮನ್ ರಾವ್ ಹೇಳಿಕೆ ನೀಡಿ ಕೊನೆಯುಸಿರೆಳೆದಿದ್ದಾರೆ ಎಂದು ವರದಿಯಾಗಿದೆ. ರಾವ್ ಅವರ ಕುಟುಂಬದವರೂ ಟಿಆರ್‌ಎಸ್‌ನ ಸ್ಥಳೀಯ ನಾಯಕರ ಬಗ್ಗೆ ಆರೋಪ ಮಾಡಿದ್ದಾರೆ.

ಕಸ್ಟಡಿಯಲ್ಲಿದ್ದಾಗಲೇ ವ್ಯಕ್ತಿಯೊಬ್ಬರು ಸಾವಿಗೀಡಾಗಿದ್ದರೆನ್ನಲಾದ ಆರೋಪದ ಕುರಿತು ತಾವು ಕೋರ್ಟ್‌ಗೆ ಪತ್ರ ಬರೆದ ಬಳಿಕ ತಮಗೆ ಪೊಲೀಸರು ಕಿರುಕುಳ ನೀಡಿ ಬೆದರಿಕೆಯೊಡ್ಡುತ್ತಿದ್ದಾರೆ ಎಂದು ದಂಪತಿ ಸೆಪ್ಟೆಂಬರ್‌ನಲ್ಲಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಸಾರ್ವಜನಿಕ ವಿಷಯಗಳಿಗೆ ಸಂಬಂಧಿಸಿದಂತೆ ವಕೀಲ ದಂಪತಿ ವಿವಿಧ ಕೋರ್ಟ್‌ಗಳಲ್ಲಿ ಪಿಐಎಲ್ ಕೂಡ ಸಲ್ಲಿಸಿದ್ದರು.

ಮೂವರ ಬಂಧನ: ವಕೀಲ ದಂಪತಿ ಹತ್ಯೆಗೆ ಸಂಬಂಧಿಸಿದಂತೆ ಟಿಆರ್‌ಎಸ್‌ನ ಮಂಥಾನಿ ಮಂಡಲ್ ಘಟಕದ ಅಧ್ಯಕ್ಷ ಕುಂತಾ ಶ್ರೀನಿವಾಸ್ ಹಾಗೂ ಇತರ ಇಬ್ಬರನ್ನು ಬಂಧಿಸಲಾಗಿದೆ.

ಶ್ರೀನಿವಾಸ್‌ನನ್ನು ಟಿಆರ್‌ಎಸ್ ಪಕ್ಷದಿಂದ ಅಮಾನತುಗೊಳಿಸಲಾಗಿದೆ.

ಉನ್ನಾವ್‌ನಲ್ಲಿ ಮತ್ತೊಂದು ದುರಂತ; ಸಿಬಿಐ ತನಿಖೆಗೆ ಕುಟುಂಬ ಆಗ್ರಹ

ಪರಿಶಿಷ್ಟ ಜಾತಿಗೆ ಸೇರಿದ ಇಬ್ಬರು ಹುಡುಗಿಯರ ಸಾವು

ಲಖನೌ: ದನಕರುಗಳಿಗೆ ಹಸಿರು ಮೇವು ತರಲು ಅರಣ್ಯಕ್ಕೆ ಹೋಗಿದ್ದ ಪರಿಶಿಷ್ಟ ಜಾತಿಗೆ ಸೇರಿದ ಹದಿಹರೆಯದ ಮೂವರು ಹುಡುಗಿಯರಲ್ಲಿ ಇಬ್ಬರು ಶವವಾಗಿ ಪತ್ತೆಯಾಗಿದ್ದು, ಮತ್ತೊಬ್ಬಾಕೆ ಅಸ್ವಸ್ಥಳಾಗಿ ಚಿಂತಾಜನಕ ಸ್ಥಿತಿಯಲ್ಲಿದ್ದ ಘಟನೆ ಉತ್ತರಪ್ರದೇಶದ ಉನ್ನಾವ್ ಜಿಲ್ಲೆಯ ಬಾಬುರಾಹಾ ಹಳ್ಳಿಯಲ್ಲಿ ನಡೆದಿದೆ.

ಹುಡುಗಿಯರ ಕುಟುಂಬದ ಸದಸ್ಯರ ರೋದನ ಮುಗಿಲುಮುಟ್ಟಿದ್ದು, ಪ್ರಕರಣವನ್ನು ಸಿಬಿಐಗೆ ವಹಿಸಬೇಕು ಎಂದು ಸಂತ್ರಸ್ತ ಕುಟುಂಬ ಒತ್ತಾಯಿಸಿದೆ. ಗ್ರಾಮಸ್ಥರು ಕೂಡ ಪ್ರತಿಭಟನೆ ನಡೆಸಿ, ಕುಟುಂಬದವರ ಬೇಡಿಕೆಯನ್ನು ಬೆಂಬಲಿಸಿದ್ದಾರೆ.




ಉನ್ನಾವ್ ಜಿಲ್ಲೆಯ ಬಾಬುರಾಹಾ ಗ್ರಾಮದಲ್ಲಿ ಸಂತ್ರಸ್ತ ಕುಟುಂಬ ಮತ್ತು ಗ್ರಾಮಸ್ಥರು ಪ್ರತಿಭಟನೆ ನಡೆಸಿದರು. (ಪಿಟಿಐ ಚಿತ್ರ)

ಈ ಮೂವರು ಅಕ್ಕತಂಗಿಯರು 13, 16 ಹಾಗೂ 17 ವರ್ಷ ವಯೋಮಾನದವರು. ಈ ಪೈಕಿ 13 ಮತ್ತು 16 ವರ್ಷದ ಹುಡುಗಿಯರು ಮೃತಪಟ್ಟಿದ್ದಾರೆ. ಇವರ ಅಕ್ಕನನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಆಕೆಯ ಸ್ಥಿತಿ ಗಂಭೀರವಾಗಿದೆ ಎಂದು ಪೊಲೀಸ್ ಮೂಲಗಳು ಹೇಳಿವೆ.

ಈ ಘಟನೆಯ ನಂತರ ಗ್ರಾಮದಲ್ಲಿ ಹೆಚ್ಚಿನ ಸಂಖ್ಯೆಯ ಭದ್ರತಾ ಸಿಬ್ಬಂದಿ ನಿಯೋಜಿಸಲಾಗಿದೆ. ಸಂತ್ರಸ್ತ ಕುಟುಂಬ ಸದಸ್ಯರನ್ನು ಅವರ ಮನೆಯಿಂದ ಹೊರಬರದಂತೆ ತಡೆಯಲಾಗಿದೆ. ಗ್ರಾಮಕ್ಕೆ ಮಾಧ್ಯಮ ಪ್ರತಿನಿಧಿಗಳ ಪ್ರವೇಶವನ್ನೂ ನಿರ್ಬಂಧಿಸಲಾಗಿದೆ ಎಂದು ಮೂಲಗಳು ಹೇಳಿವೆ.

ಘಟನೆಯ ಬಗ್ಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿರುವ ವಿರೋಧ ಪಕ್ಷಗಳು, ರಾಜ್ಯದಲ್ಲಿ ಮಹಿಳೆಯರಿಗೆ ಸುರಕ್ಷತೆ ನೀಡುವಲ್ಲಿ ಯೋಗಿ ಆದಿತ್ಯನಾಥ್ ಸರ್ಕಾರ ಸಂಪೂರ್ಣ ವಿಫಲವಾಗಿದೆ ಎಂದು ಕಿಡಿಕಾರಿವೆ.



ಕೋವಿಡ್ ನಿರ್ವಹಣೆ ದಿಕ್ಸೂಚಿ ಕಾರ್ಯಾಗಾರದಲ್ಲಿ ಪ್ರಧಾನಿ ನರೇಂದ್ರ ಮೋದಿ ಪ್ರಸ್ತಾವ

ದಕ್ಷಿಣ ಏಷ್ಯಾದಲ್ಲಿ ಪ್ರಾದೇಶಿಕ ಆಂಬುಲೆನ್ಸ್

ಪ್ರಜಾವಾಣಿ ವಾರ್ತೆ

ನವದೆಹಲಿ (ಪಿಟಿಐ): ದಕ್ಷಿಣ ಏಷ್ಯಾ ರಾಷ್ಟ್ರಗಳ ನಡುವೆ ಪ್ರಾದೇಶಿಕ ಆಂಬುಲೆನ್ಸ್ ಆರಂಭಿಸುವ ಪ್ರಸ್ತಾವವನ್ನು ಪ್ರಧಾನಿ ನರೇಂದ್ರ ಮೋದಿ ಮುಂದಿಟ್ಟಿದ್ದಾರೆ.

'ಕೋವಿಡ್–19 ನಿರ್ವಹಣೆ: ಅನುಭವ, ಉತ್ತಮ ಪದ್ಧತಿಗಳು ಮತ್ತು ಮುಂದಿನ ದಿಕ್ಸೂಚಿ' ಕುರಿತ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು. ನೆರೆಯ ಹತ್ತು ರಾಷ್ಟ್ರಗಳ ಪ್ರತಿನಿಧಿಗಳು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.

'ತುರ್ತು ವೈದ್ಯಕೀಯ ಸಂದರ್ಭಗಳಲ್ಲಿ ಈ ಆಂಬುಲೆನ್ಸ್ ಸೇವೆಗಳನ್ನು ಬಳಸಿಕೊಳ್ಳಬಹುದು. ನಾಗರಿಕ ವಿಮಾನಯಾನ ಸಚಿವರು ಈ ನಿಟ್ಟಿನಲ್ಲಿ ಯೋಜನೆ ರೂಪಿಸಬೇಕು' ಎಂದು ಪ್ರಧಾನಿ ಮೋದಿ ಸಲಹೆ ನೀಡಿದ್ದಾರೆ.


ಮೋದಿ

'ತುರ್ತು ಪರಿಸ್ಥಿತಿ ಸಂದರ್ಭಗಳಲ್ಲಿ ವೈದ್ಯರು ಮತ್ತು ನರ್ಸ್‌ಗಳು ತಕ್ಷಣವೇ ಸಂಚರಿಸಲು ಅನುಕೂಲವಾಗುವಂತೆ ವಿಶೇಷ ವೀಸಾ ಯೋಜನೆ ಜಾರಿಗೊಳಿಸುವ ಅಗತ್ಯವಿದೆ' ಎಂದು ಅವರು ಹೇಳಿದ್ದಾರೆ.

'21ನೇ ಶತಮಾನದಲ್ಲಿ ಏಷ್ಯಾ ಮುಂಚೂಣಿಯಲ್ಲಿರಬೇಕಾದರೆ ದಕ್ಷಿಣ ಏಷ್ಯಾ ರಾಷ್ಟ್ರಗಳು ಒಗ್ಗಟ್ಟಾಗಬೇಕು. ಕೋವಿಡ್–19 ಸಂದರ್ಭದಲ್ಲಿ ಪ್ರಾದೇಶಿಕ ಏಕತೆ ಸಾಧಿಸಬಹುದು ಎನ್ನುವುದನ್ನು ಈ ರಾಷ್ಟ್ರಗಳು ತೋರಿಸಿವೆ. ಹೀಗಾಗಿ, ಒಗ್ಗಟ್ಟು ಸಾಧ್ಯವಿದೆ' ಎಂದು ವರ್ಚುವಲ್ ಭಾಷಣದಲ್ಲಿ ಮೋದಿ ಹೇಳಿದರು.

ಕೋವಿಡ್ ಲಸಿಕೆ ನೀಡಿಕೆ: ಮೂರನೇ ಸ್ಥಾನದಲ್ಲಿ ಭಾರತ


ಸಾಂಕೇತಿಕ ಚಿತ್ರ

ನವದೆಹಲಿ (ಪಿಟಿಐ): ಕೋವಿಡ್ 19ರ ಲಸಿಕೆಯನ್ನು ಸಮರ್ಪಕವಾಗಿ ನೀಡುತ್ತಿರುವ ಭಾರತ ದೇಶ ವಿಶ್ವದಲ್ಲಿಯೇ ಮೂರನೇ ಸ್ಥಾನದಲ್ಲಿದೆ. ಅಮೆರಿಕ ಮತ್ತು ಬ್ರಿಟನ್ ಮೊದಲ ಎರಡು ಸ್ಥಾನಗಳಲ್ಲಿವೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಗುರುವಾರ ತಿಳಿಸಿದೆ.

ಗುರುವಾರ ಬೆಳಿಗ್ಗೆ 8 ಗಂಟೆ ವೇಳೆಗೆ ಆರೋಗ್ಯ ಕಾರ್ಯಕರ್ತರು ಮತ್ತು ಮುಂಚೂಣಿ ಕಾರ್ಮಿಕರನ್ನು ಒಳಗೊಂಡಂತೆ 94 ಲಕ್ಷಕ್ಕೂ ಹೆಚ್ಚು ಜನರಿಗೆ ಲಸಿಕೆ ನೀಡಲಾಗಿದೆ ಎಂದು ಸಚಿವಾಲಯ ಮಾಹಿತಿ ನೀಡಿದೆ.

ಕೋವಿಡ್–19 ಸೋಂಕು ಪ್ರಸರಣದ ವೇಗ ಸತತ ಏಳು ದಿನಗಳಲ್ಲಿ ಇಳಿಕೆಯ ಹಾದಿಯಲ್ಲಿದೆ ಎಂದು ತಿಳಿಸಿದೆ.

ಕಳೆದ 24 ಗಂಟೆಗಳಲ್ಲಿ ದೆಹಲಿ, ಒಡಿಶಾ, ಜಮ್ಮು ಮತ್ತು ಕಾಶ್ಮೀರ, ಜಾರ್ಖಂಡ್, ಹಿಮಾಚಲ ಪ್ರದೇಶ, ಲಕ್ಷದೀಪ, ಮಣಿಪುರ, ಮೇಘಾಲಯ, ಸಿಕ್ಕಿಂ, ಲಡಾಖ್, ನಾಗಾಲ್ಯಾಂಡ್, ಮಿಜೋರಾಂ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು, ತ್ರಿಪುರಾ, ದಮನ್ ಮತ್ತು ಡಿಯು, ದಾದರ್ ಮತ್ತು ನಗರ್ ಹವೇಲಿ, ಅರುಣಾಚಲ ಪ್ರದೇಶದ ವ್ಯಾಪ್ತಿಯಲ್ಲಿ ಕೋವಿಡ್–19ರ ಕಾರಣಕ್ಕೆ ಯಾವುದೇ ಸಾವುಗಳು ಸಂಭವಿಸಿಲ್ಲ ಎಂದು ಸಚಿವಾಲಯ ತಿಳಿಸಿದೆ.

ಜಿಮ್ ಕಾರ್ಬೆಟ್ ಉದ್ಯಾನದಲ್ಲಿ ಬಸ್ ಸಂಚಾರಕ್ಕೆ ತಡೆ

ನವದೆಹಲಿ: ಉತ್ತರಾಖಂಡದಲ್ಲಿ ಜಿಮ್ ಕಾರ್ಬೆಟ್ ರಾಷ್ಟ್ರೀಯ ಉದ್ಯಾನದ ಹುಲಿ ಸಂರಕ್ಷಣಾ ಪ್ರದೇಶದ ವ್ಯಾಪ್ತಿಯಲ್ಲಿ ಬಸ್ಸುಗಳು ಮತ್ತು ಖಾಸಗಿ ವಾಹನಗಳ ಸಂಚಾರಕ್ಕೆ ಅವಕಾಶ ಕಲ್ಪಿಸುವ ಆದೇಶಕ್ಕೆ ಸುಪ್ರೀಂ ಕೋರ್ಟ್ ತಡೆಯಾಜ್ಞೆ ನೀಡಿದೆ.

ಮುಖ್ಯ ನ್ಯಾಯಮೂರ್ತಿ ಎಸ್.ಎ. ಬೊಬಡೆ, ನ್ಯಾಯಮೂರ್ತಿಗಳಾದ ಎ.ಎಸ್.ಬೋಪಣ್ಣ ಮತ್ತು ವಿ.ರಾಮಸುಬ್ರಹ್ಮಣಿಯನ್ ಅವರಿದ್ದ ಪೀಠವು ಕೇಂದ್ರ ಸರ್ಕಾರ, ಉತ್ತರಾಖಂಡ ಸರ್ಕಾರ ಮತ್ತು ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರಕ್ಕೆ ನೋಟಿಸ್ ಜಾರಿ ಮಾಡಿತು.

ಅರ್ಜಿ ಸಲ್ಲಿಸಿದ್ದ ವಕೀಲ ಗೌರವ್ ಕುಮಾರ್ ಬನ್ಸಲ್, ವಾಹನಗಳ ಸಂಚಾರಕ್ಕೆ ಅವಕಾಶ ಕಲ್ಪಿಸುವ ರಾಷ್ಟ್ರೀಯ ಉದ್ಯಾನ ಆಡಳಿತದ ನಿರ್ಧಾರ ವನ್ಯಜೀವಿ ಸಂರಕ್ಷಣಾ ಕಾಯ್ದೆಯ ಉಲ್ಲಂಘನೆಯಾಗಿದೆ ಎಂದು ಪ್ರತಿಪಾದಿಸಿದ್ದರು.

ಆನ್‌ಲೈನ್‌ನಲ್ಲಿ 'ಪರೀಕ್ಷಾ ಪೆ ಚರ್ಚಾ'

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿಯವರು ವಿದ್ಯಾರ್ಥಿಗಳೊಂದಿಗೆ ಪರೀಕ್ಷೆ ಕುರಿತು ನಡೆಸುವ ಸಂವಾದ ಕಾರ್ಯಕ್ರಮ 'ಪರೀಕ್ಷಾ ಪೆ ಚರ್ಚಾ' – ಈ ವರ್ಷ ಆನ್‌ಲೈನ್‌ನಲ್ಲಿ ನಡೆಯಲಿದೆ ಎಂದು ಕೇಂದ್ರ ಶಿಕ್ಷಣ ಸಚಿವ ರಮೇಶ್ ಪೋಖ್ರಿಯಾಲ್ ನಿಶಾಂಕ್ ಟ್ವೀಟ್ ಮಾಡಿದ್ದಾರೆ.

'ಕೋವಿಡ್ 19 ಸಾಂಕ್ರಾಮಿಕದ ಹಿನ್ನೆಲೆಯಲ್ಲಿ ಈ ಕಾರ್ಯಕ್ರಮವನ್ನು ಆನ್‌ಲೈನ್ ಮೂಲಕ ನಡೆಸಲಾಗುತ್ತಿದೆ' ಎಂದು ಹೇಳಿದ್ದಾರೆ.

ಪರೀಕ್ಷೆಗಳು ಆರಂಭವಾಗುವ ಮುನ್ನ ಅಂದರೆ, ಮಾರ್ಚ್ ತಿಂಗಳಲ್ಲಿ, 9 ರಿಂದ 12ನೇ ತರಗತಿಯ ವಿದ್ಯಾರ್ಥಿಗಳೊಂದಿಗೆ ಪ್ರಧಾನಿ ಸಂವಾದ ನಡೆಸಲಿದ್ದಾರೆ.

ಕಾರ್ಯಕ್ರಮದ ನೋಂದಣಿ ಗುರುವಾರದಿಂದ ಪ್ರಾರಂಭವಾಗಿ ಮಾರ್ಚ್ 14 ರಂದು ಮುಕ್ತಾಯಗೊಳ್ಳಲಿದೆ. ಪ್ರಶ್ನೆಗಳನ್ನು ಕೇಳುವ ವಿದ್ಯಾರ್ಥಿಗಳನ್ನು ಸ್ಪರ್ಧೆಯ ಮೂಲಕ ಆಯ್ಕೆ ಮಾಡಲಾಗುತ್ತದೆ.

ಪ್ರಧಾನಿಯವರು ಶಾಲೆ ಮತ್ತು ಕಾಲೇಜು ವಿದ್ಯಾರ್ಥಿಗಳೊಂದಿಗೆ ನಡೆಸಿದ ಸಂವಾದದ ಮೊದಲ ಆವೃತ್ತಿ ಕಳೆದ ವರ್ಷ ಫೆ.16ರಂದು ತಾಲ್‌ಕಟೋರಾ ಸ್ಟೇಡಿಯಂನಲ್ಲಿ ನಡೆದಿತ್ತು.

ಲಸಿಕೆ: ಶೇ 29ರಷ್ಟು ಮಂದಿ ಮಾತ್ರ ಹಾಜರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಲಸಿಕೆ ಅಭಿಯಾನ ಪ್ರಾರಂಭವಾಗಿ ತಿಂಗಳು ಕಳೆದರೂ ಗುರುತಿಸಲಾದ ಫಲಾನುಭವಿಗಳಲ್ಲಿ ಅರ್ಧದಷ್ಟು ಮಂದಿ ಲಸಿಕೆ ಪಡೆಯಲು ಹಿಂದೇಟು ಹಾಕುತ್ತಲೇ ಇದ್ದಾರೆ.

ಗುರುವಾರ ನಿಗದಿಪಡಿಸಲಾಗಿದ್ದ ಫಲಾನುಭವಿಗಳಲ್ಲಿ 15,786 ಮಂದಿ ಕೋವಿಡ್ ಲಸಿಕೆ ಪಡೆದುಕೊಂಡಿದ್ದಾರೆ. ಮೊದಲ ಹಾಗೂ ಎರಡನೇ ಡೋಸ್ ಲಸಿಕೆ ಪಡೆಯಲು 54,682 ಮಂದಿಯನ್ನು ಗುರುತಿಸಲಾಗಿತ್ತು. ಅವರಲ್ಲಿ ಶೇ 29ರಷ್ಟು ಮಂದಿ ಹಾಜರಾಗಿ ಲಸಿಕೆ ಪಡೆದುಕೊಂಡಿದ್ದಾರೆ. ಉಳಿದವರು ಹಿಂಜರಿಕೆ ಸೇರಿದಂತೆ ನಾನಾ ಕಾರಣಗಳಿಂದ ಗೈರಾಗಿದ್ದಾರೆ. ಲಸಿಕೆ ಪಡೆದವರಲ್ಲಿ ಯಾರಲ್ಲಿಯೂ ತೀವ್ರ ಮತ್ತು ಗಂಭೀರ ಸ್ವರೂಪದ ಅಡ್ಡ ಪರಿಣಾಮಗಳು ಕಾಣಿಸಿಕೊಂಡಿಲ್ಲ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ರಾಜ್ಯದಲ್ಲಿ ಲಸಿಕೆ ವಿತರಣೆ ಪ್ರಾರಂಭವಾದಾಗಿನಿಂದ ಈವರೆಗೆ ನಿಗದಿಪಡಿಸಲಾಗಿದ್ದ 8,21,939 ಆರೋಗ್ಯ ಕಾರ್ಯಕರ್ತರಲ್ಲಿ 4,17,124 ಮಂದಿ ಲಸಿಕೆ ಹಾಕಿಸಿಕೊಂಡಿದ್ದಾರೆ.

ಇದರಿಂದ ಶೇ 51ರಷ್ಟು ಗುರಿ ಸಾಧ್ಯವಾಗಿದೆ. ಇವರಲ್ಲಿ 62,149 ಮಂದಿ ಎರಡನೇ ಡೋಸ್ ಲಸಿಕೆ ಪಡೆದಿದ್ದಾರೆ. 2,84,950 ಮುಂಚೂಣಿ ಯೋಧರನ್ನು ಈವರೆಗೆ ಲಸಿಕೆ ಪಡೆಯಲು ಗುರುತಿಸಲಾಗಿತ್ತು. ಅವರಲ್ಲಿ 1,03,933 ಮಂದಿ ಹಾಜರಾಗಿ ಲಸಿಕೆ ಪಡೆದುಕೊಂಡಿದ್ದಾರೆ. ಇದರಿಂದ ಶೇ 36ರಷ್ಟು ಗುರಿ ಸಾಧ್ಯವಾಗಿದೆ.

406 ಮಂದಿಗೆ ಸೋಂಕು: ರಾಜ್ಯದಲ್ಲಿ ಹೊಸದಾಗಿ 406 ಕೋವಿಡ್ ಪ್ರಕರಣಗಳು ದೃಢಪಟ್ಟಿವೆ. ಈವರೆಗೆ ಕೋವಿಡ್ ಪೀಡಿತರಾದವರ ಸಂಖ್ಯೆ 9.46 ಲಕ್ಷ ದಾಟಿದೆ.

ಸೋಂಕಿತರಲ್ಲಿ ಬೆಂಗಳೂರಿನಲ್ಲಿ ನಾಲ್ವರು ಹಾಗೂ ಧಾರವಾಡ, ತುಮಕೂರಿನಲ್ಲಿ ತಲಾ ಒಬ್ಬರು ಮೃತಪಟ್ಟಿರುವುದು ದೃಢಪಟ್ಟಿದೆ. ಈವರೆಗೆ ಸಾವಿಗೀಡಾದವರ ಸಂಖ್ಯೆ 12,282ಕ್ಕೆ ತಲುಪಿದೆ. ಕೋವಿಡ್ ಪೀಡಿತರಲ್ಲಿ ಮತ್ತೆ 306 ಮಂದಿ ಗುಣಮುಖರಾಗಿದ್ದಾರೆ. ಇದರಿಂದಾಗಿ ಕಾಯಿಲೆಯಿಂದ ಚೇತರಿಸಿಕೊಂಡವರ ಸಂಖ್ಯೆ 9.28 ಲಕ್ಷ ದಾಟಿದೆ.

5,792 ಸೋಂಕಿತರು ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಅವರಲ್ಲಿ 125 ಮಂದಿ ತೀವ್ರ ನಿಗಾ ಘಟಕದಲ್ಲಿ (ಐಸಿಯು) ಇದ್ದಾರೆ.

ಬೆಂಗಳೂರಿನಲ್ಲಿ 256 ಮಂದಿ ಕೋವಿಡ್ ಪೀಡಿತರಾಗಿದ್ದು, ಸೋಂಕಿತರ ಸಂಖ್ಯೆ 4.03 ಲಕ್ಷ ದಾಟಿದೆ. ಮೈಸೂರಿನಲ್ಲಿ ಮತ್ತೆ 12 ಪ್ರಕರಣಗಳು ವರದಿಯಾಗಿದೆ. ಅಲ್ಲಿ ಸೋಂಕಿತರ ಸಂಖ್ಯೆ 53,834ಕ್ಕೆ ಏರಿಕೆಯಾಗಿದೆ.

ಕುಪ್ಪಂ: ವೈಎಸ್‌ಆರ್ ಕಾಂಗ್ರೆಸ್ ಜಯಭೇರಿ

ಹೈದರಾಬಾದ್: ತೆಲುಗು ದೇಶಂ ಪಕ್ಷದ ಭದ್ರಕೋಟೆ ಎನಿಸಿರುವ ಚಿತ್ತೂರು ಜಿಲ್ಲೆಯ ಕುಪ್ಪಂ ವಿಧಾನಸಭಾ ಕ್ಷೇತ್ರದ ಸ್ಥಳೀಯ ಸಂಸ್ಥೆಗಳಿಗೆ ನಡೆದ ಮೂರನೇ ಹಂತದ ಚುನಾವಣೆಯಲ್ಲಿ ವೈಎಸ್‌ಆರ್ ಕಾಂಗ್ರೆಸ್ ಮೇಲುಗೈ ಸಾಧಿಸಿದೆ. ಟಿಡಿಪಿ ಮುಖ್ಯಸ್ಥ ಚಂದ್ರಬಾಬು ನಾಯ್ಡು ಅವರು ಕುಪ್ಪಂ ಕ್ಷೇತ್ರದಿಂದ ಸತತ ಏಳು ಬಾರಿ ಆರಿಸಿ ಬಂದಿದ್ದಾರೆ. ಇಲ್ಲೇ ಟಿಡಿಪಿ ಭಾರಿ ಹಿನ್ನಡೆ ಅನುಭವಿಸಿದೆ.

ಸ್ಥಳೀಯ ಸಂಸ್ಥೆಯ ಚುನಾವಣೆಗಳಲ್ಲಿ ಪಕ್ಷಗಳು ಅಧಿಕೃತವಾಗಿ ಭಾಗಿಯಾಗುವಂತಿಲ್ಲ. ಆದರೆ ಅಭ್ಯರ್ಥಿಗಳನ್ನು ಪಕ್ಷಗಳು ಬೆಂಬಲಿಸುತ್ತವೆ. ಕುಪ್ಪಂನಲ್ಲಿ 89 ಸ್ಥಾನಗಳಿಗೆ ಚುನಾವಣೆ ನಡೆದಿತ್ತು. ಇದರಲ್ಲಿ 75ರಲ್ಲಿ ವೈಎಸ್‌ಆರ್ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳು ಜಯಗಳಿಸಿದ್ದಾರೆ. 14ರಲ್ಲಿ ಟಿಡಿಪಿ ಬೆಂಬಲಿತ ಅಭ್ಯರ್ಥಿಗಳು ಜಯಗಳಿಸಿದ್ದಾರೆ.

ಪಾಕ್ ನಿಜಬಣ್ಣ ರಾಜತಾಂತ್ರಿಕರಿಗೆ ಮನವರಿಕೆ

ಶ್ರೀನಗರ (ಪಿಟಿಐ): 'ಗಡಿ ನಿಯಂತ್ರಣ ರೇಖೆ ವ್ಯಾಪ್ತಿಯಲ್ಲಿ ಉಗ್ರರರಿಗೆ ತರಬೇತಿ ಶಿಬಿರಗಳನ್ನು ಆಯೋಜಿಸುವ ಮೂಲಕ ಪಾಕಿಸ್ತಾನ ಭಯೋತ್ಪಾದಕರನ್ನು ಉತ್ಪಾದಿಸುವ ಕಾರ್ಖಾನೆಗಳನ್ನು ನಡೆಸುತ್ತಿದೆ' ಎಂದು ಭಾರತೀಯ ಸೇನಾ ಅಧಿಕಾರಿಗಳು ಜಮ್ಮು ಮತ್ತು ಕಾಶ್ಮೀರಕ್ಕೆ ಭೇಟಿ ನೀಡಿರುವ 24 ದೇಶಗಳ ರಾಜತಾಂತ್ರಿಕ ಅಧಿಕಾರಿಗಳಿಗೆ ತಿಳಿಸಿದರು.

ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನ ರದ್ದುಗೊಳಿಸಿದ ನಂತರ ಕಣಿವೆ ರಾಜ್ಯದಲ್ಲಾಗಿರುವ ಬದಲಾವಣೆಗಳನ್ನು ಅವಲೋಕಿಸಲು ಬಂದಿರುವ ರಾಜತಾಂತ್ರಿಕ ಅಧಿಕಾರಿಗಳಿಗೆ ವಿವರಣೆ ನೀಡಿದ ಸೇನಾ ಅಧಿಕಾರಿಗಳು, ಜಮ್ಮು ಕಾಶ್ಮೀರದ ಸಾಂಬಾ ಸೆಕ್ಟರ್‌ನಲ್ಲಿ ಸುರಂಗಗಳ ಮೂಲಕ ಭಯೋತ್ಪಾದಕರು ಭಾರತಕ್ಕೆ ನುಸುಳಲು ನೆರವು ನೀಡುವಲ್ಲಿ ಪಾಕಿಸ್ತಾನ ಸೈನ್ಯದ ಪಾತ್ರವಿರುವ ಅಂಶಗಳನ್ನು ಒತ್ತಿ ಹೇಳಿದರು. ಪಾಕಿಸ್ತಾನದ ಸೈನ್ಯದ ಗುರುತುಗಳಿರುವ ಹಾಗೂ ವಿವಿಧ ಉಗ್ರರಿಂದ ವಶಪಡಿಸಿಕೊಂಡ ಶಸ್ತ್ರಾಸ್ತ್ರಗಳ ಕುರಿತು ಮಾಹಿತಿ ನೀಡಿದರು.

ಗಡಿ ನಿಯಂತ್ರಣ ರೇಖೆಯಲ್ಲಿ (ಎಲ್‌ಒಸಿ) ಸೇನೆ ತನ್ನ ತಂತ್ರವನ್ನು ಬದಲಿಸುವ ಜತೆಗೆ, ಗಸ್ತು ತಿರುಗುವುದನ್ನು ಹೆಚ್ಚಿಸಿದ ನಂತರ, ಎಲ್‌ಒಸಿ ಮೂಲಕ ಉಗ್ರ ನುಸುಳುವಿಕೆ ಪ್ರಮಾಣ ಕಡಿಮೆಯಾಗಿ, ಸುರಂಗಗಳ ಮೂಲಕ ಒಳ ನುಸುಳುವ ಪ್ರಯತ್ನ ಹೆಚ್ಚಾಗುತ್ತಿರುವ ಕುರಿತು ಅಧಿಕಾರಿಗಳು ತಿಳಿಸಿದರು.

ಸೇನಾ ಅಧಿಕಾರಿಗಳು ಕಾಶ್ಮೀರ ಕಣಿವೆಯ ಪರಿಸ್ಥಿತಿಯನ್ನು ವಿವರಿಸುತ್ತಾ, ಬುಧವಾರ ಸಂಜೆ ಬಿಗಿಭದ್ರತೆಯಿರುವ ಶ್ರೀನಗರ ಪ್ರದೇಶದಲ್ಲಿದ್ದ ಪ್ರಮುಖ ಹೋಟೆಲ್ ಮಾಲೀಕರ ಮೇಲೆ ಉಗ್ರರು ಗುಂಡು ಹಾರಿಸಿದ ಘಟನೆಯನ್ನು ರಾಜತಾಂತ್ರಿಕ ಅಧಿಕಾರಿಗಳಿಗೆ ವಿವರಿಸಿದರು. 'ಇದು ಕಾಶ್ಮೀರದಲ್ಲಿರುವವರು ಉಗ್ರರ ಆಜ್ಞೆಯನ್ನು ನಿರಾಕರಿಸಿದವರನ್ನು ಮೌನವಾಗಿಸುವ ಭಯೋತ್ಪಾದಕರ ಯೋಜನೆಯ ಭಾಗವಾಗಿದೆ' ಎಂದು ಸೇನಾಧಿಕಾರಿಗಳು ಹೇಳಿದರು.


ಜಮ್ಮುವಿನಲ್ಲಿ ಗುರುವಾರ ಯುರೋಪಿಯನ್ ಒಕ್ಕೂಟದ 24 ದೇಶಗಳ ರಾಜತಾಂತ್ರಿಕರ ನಿಯೋಗದ ಸದಸ್ಯರು ಜಮ್ಮು ಮತ್ತು ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಅವರನ್ನು ಭೇಟಿ ಮಾಡಿತು. (ಪಿಟಿಐ ಚಿತ್ರ)

ಯೂಟ್ಯೂಬ್, ಫೇಸ್‌ಬುಕ್‌ನಲ್ಲಿ ಭಟ್ ಸಹೋದರರ ಪಾಕಪ್ರಾವೀಣ್ಯ

ಸುದರ್ಶನ್ ಭಟ್ ಬೆದ್ರಾಡಿ ಹಾಗೂ ಮನೋಹರ್ ಭಟ್ ಬೆದ್ರಾಡಿ ಅವಳಿ ಸಹೋದರರ ಅಡುಗೆ ವಿಡಿಯೊಗಳನ್ನು ಬಹುಶಃ ನೋಡದವರು ಇಲ್ಲವೇ ಇಲ್ಲ ಎನ್ನಬಹುದು. ತಮ್ಮ ಮಾತು, ಹಾವಭಾವದ ಜೊತೆಗೆ ಸಾಂಪ್ರದಾಯಿಕ ರುಚಿಯ ಅಡುಗೆ ವಿಡಿಯೊಗಳ ಮೂಲಕ ಜನರ ಮುಂದೆ ಬರುವ ಈ ಸಹೋದರರು ಈಗ ಹೆಚ್ಚು ಜನಪ್ರಿಯರು.

• ಸಂದರ್ಶನ: ರೇಷ್ಮಾ

ಲಾಕ್‌ಡೌನ್ ಅವಧಿಯಲ್ಲಿ ಹಲವರೊಳಗಿದ್ದ ಸುಪ್ತ ಪ್ರತಿಭೆಗಳು ಅವರಿಗೇ ಅರಿವಿಲ್ಲದೆ ಹೊರ ಬಂದವು. ಕೈತೋಟ ಮಾಡುವುದು, ಕಸೂತಿ, ಬಗೆ ಬಗೆ ರೆಸಿಪಿಗಳನ್ನು ತಯಾರಿಸುವುದನ್ನು ದೈನಂದಿನ ಹವ್ಯಾಸವಾಗಿ ಮಾಡಿಕೊಂಡವರು ಬಹುತೇಕ ಮಂದಿ. ಈ ರೀತಿ ತಮಗಿದ್ದ ಅಡುಗೆ ಮಾಡುವ ಹವ್ಯಾಸವನ್ನೇ ಮುಂದುವರಿಸಿ 'ಭಟ್ ಎನ್ ಭಟ್' ಯೂಟ್ಯೂಬ್ ಚಾನೆಲ್ ಮಾಡಿ ಆ ಮೂಲಕ ಕರ್ನಾಟಕದಾದ್ಯಂತ ಹೆಸರು ಗಳಿಸಿದ್ದಾರೆ ಕಾಸರಗೋಡಿನ ಸೀತಾಂಗೋಳಿಯ ಭಟ್ ಸಹೋದರರು.

ಸುದರ್ಶನ್ ಭಟ್ ಬೆದ್ರಾಡಿ ಹಾಗೂ ಮನೋಹರ್ ಭಟ್ ಬೆದ್ರಾಡಿ ಅವಳಿ ಸಹೋದರರ ಅಡುಗೆ ವಿಡಿಯೊಗಳನ್ನು ಬಹುಶಃ ನೋಡದವರು ಇಲ್ಲವೇ ಇಲ್ಲ ಎನ್ನಬಹುದು. ತಮ್ಮ ಮಾತು, ಹಾವಭಾವದ ಜೊತೆಗೆ ಸಾಂಪ್ರದಾಯಿಕ ರುಚಿಯ ಅಡುಗೆ ವಿಡಿಯೊಗಳ ಮೂಲಕ ಜನರ ಮುಂದೆ ಬರುವ ಈ ಸಹೋದರರು ಈಗ ಕರ್ನಾಟಕದಾದ್ಯಂತ ಜನ ಮೆಚ್ಚುಗೆ ಗಳಿಸಿದ್ದಾರೆ. ಕೇವಲ ಅಡುಗೆ ವಿಡಿಯೊ ಮಾತ್ರವಲ್ಲದೇ ಕೃಷಿ, ತಂತ್ರಜ್ಞಾನ, ತುಳುನಾಡ ಸಂಸ್ಕೃತಿ, ಸಂಪ್ರದಾಯದ ಕುರಿತಾಗಿಯೂ ವಿಡಿಯೊಗಳನ್ನು ಮಾಡಿ ಯೂಟ್ಯೂಬ್, ಫೇಸ್‌ಬುಕ್ ಪುಟದಲ್ಲಿ ಹಂಚಿಕೊಳ್ಳುತ್ತಿದ್ದಾರೆ.



ತಾಯಿಯೊಂದಿಗೆ ಅಡುಗೆ ತಯಾರಿಯಲ್ಲಿ ತೊಡಗಿರುವ ಸುದರ್ಶನ್ ಭಟ್

ಯೂಟ್ಯೂಬ್ ಚಾನೆಲ್ ಯೋಚನೆಯ ಹಿಂದೆ..

ಸದ್ಯ ಎಲ್‌ಎಲ್‌ಬಿ ಮುಗಿಸಿ ಪ್ರಾಕ್ಟೀಸ್‌ನಲ್ಲಿ ತೊಡಗಿರುವ ಭಟ್ ಸಹೋದರರು ಪಿಯುಸಿ ದಿನಗಳಿಂದಲೂ ಬಿಡುವಿನ ವೇಳೆಯಲ್ಲಿ ಕೇಟರಿಂಗ್ ವೃತ್ತಿಯಲ್ಲಿ ತೊಡಗಿಸಿಕೊಂಡವರು. ಈ ಸಹೋದರರಲ್ಲಿ ಒಬ್ಬರಾದ ಮನೋಹರ್ ಅವರಿಗೆ ವಿಡಿಯೊಗ್ರಫಿ ಹಾಗೂ ಫೋಟೊಗ್ರಫಿ ಮೇಲೆ ಆಸಕ್ತಿಯೂ ಇತ್ತು. ಲಾಕ್‌ಡೌನ್ ಸಮಯದಲ್ಲಿ ಸುಮ್ಮನೆ ಮನೆಯಲ್ಲಿ ಕುಳಿತಾಗ ಅಡುಗೆಗೆ ಸಂಬಂಧಿಸಿದ ವಿಡಿಯೊ ಮಾಡುವ ಮನಸ್ಸು ಮಾಡಿದರು.

ಕಳೆದ ವರ್ಷ ಏಪ್ರಿಲ್‌ನಲ್ಲಿ ಮೊದಲ ಬಾರಿಗೆ ವಿಡಿಯೊ ಮಾಡಿದರು. ಮನೆಯ ತೋಟದಲ್ಲಿ ಬೆಳೆದ ಬಾಳೆಕಾಯಿ ಇತ್ತು. ಹೀಗಾಗಿ ಬಾಳೆಕಾಯಿ ಚಿಪ್ಸ್ ಮಾಡಿ ಯೂಟ್ಯೂಬ್‌ನಲ್ಲಿ ವಿಡಿಯೊ ಹರಿಬಿಟ್ಟರು. ಹಾಗೆ ಫೇಸ್‌ಬುಕ್‌ನಲ್ಲೂ ವಿಡಿಯೊ ಹಾಕಲು ಆರಂಭಿಸಿದರು. ಮೊದ ಮೊದಲು ಸಾವಿರ, ಹತ್ತು ಸಾವಿರಕ್ಕೆ ಸೀಮಿತವಾಗಿದ್ದ ವಿಡಿಯೊ ವ್ಯೂಸ್ ಈಗ ಇಪ್ಪತ್ತು ಲಕ್ಷಕ್ಕೂ ಮೀರಿದೆ. ಇಲ್ಲಿಯವರೆಗೆ 80ಕ್ಕೂ ಹೆಚ್ಚು ವಿಡಿಯೊಗಳನ್ನು ರೂಪಿಸಿ ಅಪ್‌ಲೋಡ್ ಮಾಡಿದ್ದಾರೆ ಈ ಅವಳಿ ಸಹೋದರರು. ಹೀಗೆ ಜನಪ್ರಿಯವಾಗಿದ್ದು ಭಟ್ 'ಎನ್' ಭಟ್ ಯೂಟ್ಯೂಬ್ ಚಾನೆಲ್.

ಫೇಸ್‌ಬುಕ್‌ನಿಂದ ವೈರಲ್

ಯೂಟ್ಯೂಬ್‌ನಲ್ಲಿ ವಿಡಿಯೊ ಹಾಕಲು ಆರಂಭಿಸಿ ಒಂದು ತಿಂಗಳು ಕಳೆದ ಮೇಲೆ ಭಟ್ 'ಎನ್' ಭಟ್ ಫೇಸ್‌ಬುಕ್ ಪುಟದಲ್ಲಿ ವಿಡಿಯೊ ಹಾಕಲು ಆರಂಭಿಸಿದರು. ಫೇಸ್‌ಬುಕ್‌ನಲ್ಲಿ ಇವರು ಹಾಕಿದ ಮೊದಲ ವಿಡಿಯೊ ಹಲಸಿನ ಬೀಜದ ಹಲ್ವಾ. ಆ ವಿಡಿಯೊ ತುಂಬಾನೇ ವೈರಲ್ ಆಗಿತ್ತು.

ಕುಟುಂಬದವರ ಸಹಕಾರ

'ನನಗೆ ಅಡುಗೆ ಬಗ್ಗೆ ಆಸಕ್ತಿ ಇದ್ದಿದ್ದು ನಿಜ, ಆದರೆ ಮನೆಯಲ್ಲಿ ತಂದೆ–ತಾಯಿ, ತಮ್ಮ, ಜೊತೆಗೆ ಅಕ್ಕ, ಅಕ್ಕನ ಮನೆಯವರು, ಮಾವಂದಿರು ಎಲ್ಲರೂ ನನಗೆ ಸಹಾಯ ಮಾಡುತ್ತಾರೆ. ಸಾಂಪ್ರದಾಯಿಕ ಅಡುಗೆಗಳನ್ನು ತಯಾರಿಸುವ ವಿಧಾನವನ್ನು ತಾಯಿ, ಅಕ್ಕನಿಂದ ಕಲಿಯುತ್ತೇನೆ' ಎಂದು ಹೇಳುತ್ತಾರೆ ಸುದರ್ಶನ್.

ಸಾಂಪ್ರದಾಯಿಕ ಖಾದ್ಯಗಳಿಗೆ ಒತ್ತು

ಭಟ್ ಸಹೋದರರು ದಕ್ಷಿಣ ಕನ್ನಡದ ಸಾಂಪ್ರದಾಯಿಕ ರೆಸಿಪಿಗಳನ್ನು ಹೆಚ್ಚು ತಯಾರಿಸುತ್ತಾರೆ. 'ಹಿಂದಿನ ಸಾಂಪ್ರದಾಯಿಕ ತಿನಿಸುಗಳನ್ನು ಜನರು ಕಲಿಯಲಿ ಎನ್ನುವ ಕಾರಣಕ್ಕೆ ಇಂತಹ ರೆಸಿಪಿಗಳನ್ನು ಹೆಚ್ಚು ಹೆಚ್ಚು ತಯಾರಿಸುತ್ತೇವೆ' ಎನ್ನುತ್ತಾರೆ ಅವರು.

ಈ ಅವಳಿ ಸಹೋದರರು ಮಾಡಿದ ಬಾಳೆಹಣ್ಣಿನ ಹಲ್ವಾವನ್ನು ಯೂಟ್ಯೂಬ್‌ನಲ್ಲಿ ಬಹಳ ಜನ ನೋಡಿ ಮೆಚ್ಚಿ ಲೈಕ್ಸ್ ನೀಡಿದ್ದಾರೆ. ಇದನ್ನು 10 ಲಕ್ಷಕ್ಕೂ ಅಧಿಕ ಮಂದಿ ನೋಡಿದ್ದಾರೆ.

ಅಡುಗೆ ವಿಡಿಯೊದೊಂದಿಗೆ ಜೇನು ಕೃಷಿ, ಭತ್ತದ ಕೃಷಿ, ಅಡಿಕೆ ಕೊಯ್ಲು ಮುಂತಾದವಕ್ಕೆ ಸಂಬಂಧಿಸಿದ ವಿಡಿಯೊಗಳನ್ನು ಮಾಡುತ್ತಾರೆ ಸುದರ್ಶನ್ ಮತ್ತು ಮನೋಹರ್.

ಜನ ಮೆಚ್ಚಲು ಭಾಷೆಯೂ ಕಾರಣ

'ನನ್ನ ವಿಡಿಯೊಗಳನ್ನು ಜನ ಮೆಚ್ಚಲು ಹುಡುಗ ಅಡುಗೆ ಮಾಡುತ್ತಿದ್ದಾನೆ ಎನ್ನುವುದು ಒಂದು ಕಾರಣ. ನಾವು ಮಾತನಾಡುವ ಶೈಲಿಯೂ ಜನರಿಗೆ ಇಷ್ಟವಾಗುತ್ತದೆ' ಎನ್ನುತ್ತಾರೆ ಸುದರ್ಶನ್.

ಸಂಪೂರ್ಣ ಲೇಖನ ಓದಲು: https://bit.ly/3udb93E ನೋಡಿ

ರಥಸಪ್ತಮಿಯ ಸೂರ್ಯಾರಾಧನೆ

• ಭಾನುಶ್ರೀ

ರಥಸಪ್ತಮಿ ಬಂತು ಎಂದರೆ ಸೆಕೆ ಆರಂಭವಾದಂತೆ–ಎಂಬ ಮಾತು ಬಳಕೆಯಲ್ಲಿದೆಯಷ್ಟೆ.

ಹೌದು, ಈ ಭೌತಿಕ ವಿದ್ಯಮಾನಕ್ಕೂ ರಥಸಪ್ತಮಿಗೂ ಸಂಬಂಧ ಇದೆ. ಇಂದು ಸೂರ್ಯನು ತನ್ನ ರಥವನ್ನು ಏರುತ್ತಾನೆ ಎಂಬ ಕಲ್ಪನೆಯಲ್ಲಿ ರೂಪುಗೊಂಡಿರುವ ಪರ್ವವೇ ರಥಸಪ್ತಮಿ. ಹೆಸರಿನಲ್ಲೇ ಈ ಸೂಚನೆ ಇದೆಯೆನ್ನಿ! ಸೂರ್ಯನು ರಥ ಏರುವುದು ಕೇವಲ ಪೌರಾಣಿಕ ಕಲ್ಪನೆಯಷ್ಟೆ ಅಲ್ಲ, ನಿಸರ್ಗದ ತತ್ತ್ವಕ್ಕೂ ಈ ಕಲ್ಪನೆಗೂ ಸಾವಯವ ಸಂಬಂಧ ಇದೆ ಎನ್ನುವುದು ಗಮನಾರ್ಹ.

ಸೂರ್ಯ ನಮ್ಮ ಕಣ್ಣಿಗೆ ಕಾಣುವ ಪ್ರತ್ಯಕ್ಷ ದೇವರು. ಸೂರ್ಯದೇವನನ್ನು ಆರಾಧಿಸುವ ಪ್ರಮುಖ ಪರ್ವದಿನವೇ ರಥಸಪ್ತಮಿ. ಸೂರ್ಯನಿಲ್ಲದೆ ನಮ್ಮ ಬದುಕಿಲ್ಲ. ಸೃಷ್ಟಿಯಲ್ಲಿರುವ ಎಲ್ಲ ಜೀವಿಗಳ ಅಳಿವು–ಉಳಿವು ಸೂರ್ಯನನ್ನೇ ಆಶ್ರಯಿಸಿದೆ. ಹೀಗಾಗಿ ಅವನು ನಮ್ಮ ಪಾಲಿಗೆ ದೇವರೇ ಆಗಿದ್ದಾನೆ. ಋಗ್ವೇದದಲ್ಲಿಯ ಮಂತ್ರವೊಂದು, ಸೂರ್ಯನನ್ನು ಕುರಿತಾದ್ದು, ಹೀಗಿದೆ:

'ಯೇನ ಸೂರ್ಯ ಜ್ಯೋತಿಷಾ ಬಾಧಸೇ ತಮೋ
ಜಗಚ್ಚ ವಿಶ್ವಮುದಿಯರ್ಷಿ ಭಾನುನಾ
ತೇನಾಸ್ಮದ್ವಿಶ್ವಾಮನಿರಾಮನಾಹುತಿಂ
ಅಪಾಮೀವಾಮಪ ದುಷ್ಷ್ವಪ್ನ್ಯಂ ಸುವ '

ಇಂದು ರಥಸಪ್ತಮಿ

ಇದರ ಭಾವಾರ್ಥ: 'ಎಲೈ ಸೂರ್ಯನೇ, ನೀನು ಯಾವ ತೇಜಸ್ಸಿನಿಂದ ಅಂಧಕಾರವನ್ನು ಹೋಗಲಾಡಿಸುವೆಯೋ, ಯಾವ ನಿನ್ನ ಬೆಳಕಿನಿಂದ ಇಡಿಯ ಜಗತ್ತನ್ನು ಎಚ್ಚರಿಸುವೆಯೋ, ಆ ತೇಜಸ್ಸಿನಿಂದಲೇ ಅನ್ನದ ಅಭಾವವನ್ನೂ ಹೋಗಲಾಡಿಸು; ನಮ್ಮ ಜಡತ್ವವನ್ನೂ ತೊಲಗಿಸು; ರೋಗಗಳಿಂದಲೂ ಕೆಟ್ಟ ಕನಸುಗಳಿಂದಲೂ ನಮ್ಮನ್ನು ಕಾಪಾಡು.'


ಸೂರ್ಯ ನಮ್ಮ ಜೀವನದ ಎಲ್ಲ ಆಯಾಮಗಳನ್ನೂ ಹೇಗೆ ಪ್ರಭಾವಿಸುತ್ತಿದ್ದಾನೆ ಎಂಬುದನ್ನು ಈ ಮಂತ್ರ ಸೊಗಸಾಗಿ ಧ್ವನಿಸಿದೆ. ನಮ್ಮ ಆಹಾರ, ವಿಹಾರ, ಆರೋಗ್ಯ, ಬುದ್ಧಿ – ಹೀಗೆ ಎಲ್ಲ ವಿವರಗಳಲ್ಲೂ ಸೂರ್ಯನ ಪ್ರಭಾವ ಇರುವುದು ಸ್ಪಷ್ಟ. ಇಂಥ ಸೂರ್ಯನ ಆರಾಧನೆಗೆ ಮೀಸಲಾದ ದಿನವೇ ರಥಸಪ್ತಮಿ.

ಸೂರ್ಯಾರಾಧನೆಗೆ ಇನ್ನೊಂದು ಆಯಾಮವೂ ಉಂಟು. ಇಡಿಯ ಸೃಷ್ಟಿಯೇ ಪರಮಾತ್ಮನ ಅಧೀನ. ಈ ಪರಮಾತ್ಮನು ಪರಂಜ್ಯೋತಿಯೂ ಹೌದು. ಅವನ ಪ್ರತೀಕವೇ ಸೂರ್ಯ. ಹೀಗಾಗಿ ಭಗವಂತನ ಆರಾಧನೆಯಲ್ಲಿ ನಮ್ಮ ಋಷಿಗಳು ಸೂರ್ಯೋಪಾಸನೆಗೆ ತುಂಬ ಮಹತ್ವವನ್ನು ಕೊಟ್ಟರು. ಸೂರ್ಯನಾರಾಯಣ – ಎಂದೇ ಅವನನ್ನು ಪೂಜಿಸಲಾಗುತ್ತದೆ.

ರಥಸಪ್ತಮಿಯ ದಿನ ಸೂರ್ಯನಮಸ್ಕಾರವನ್ನು ಮಾಡುವ ಪದ್ಧತಿಯೂ ಉಂಟು. ಆರೋಗ್ಯಕ್ಕೂ ಸೂರ್ಯನಿಗೂ ಇರುವ ಸಂಬಂಧವನ್ನು ಈ ಆಚರಣೆ ಎತ್ತಿಹಿಡಿಯುತ್ತದೆ.

ಸೂರ್ಯನ ಸ್ವಭಾವ ಬೆಳಕು. ಬೆಳಕು ನಮ್ಮ ಜೀವನಕ್ಕೆ ಬೇಕಾದ ದಾರಿಯೇ ಹೌದು. ನಮ್ಮ ಬಹಿರಂಗಕ್ಕೆ ಮಾತ್ರವಲ್ಲದೆ, ಅಂತರಂಗಕ್ಕೂ ಬೆಳಕಿನ ಆವಶ್ಯಕತೆಯಿದೆ. ಹೊರಗಿನ ಬೆಳಕಿಗೆ ಸೂರ್ಯ ಕಾರಣವಾದರೆ, ಒಳಗಿನ ಬೆಳಕಿಗೆ ನಮ್ಮೊಳಗೆ ಚೈತನ್ಯಸ್ವರೂಪದಲ್ಲಿರುವ ಆತ್ಮವಸ್ತುವೇ ಕಾರಣ. ಹೀಗಾಗಿ ಸೂರ್ಯನು ಪರಬ್ರಹ್ಮಸ್ವರೂಪನೂ ಎನಿಸಿಕೊಳ್ಳುತ್ತಾನೆ.

ಭಗವಂತನನ್ನು ವಿವಿಧ ಸಂಕೇತಗಳಲ್ಲಿ ಕಂಡು, ಆರಾಧಿಸುವ ಕ್ರಮ ಉಂಟು. ಆದರೆ ಸೂರ್ಯ ನಮ್ಮ ಪಾಲಿಗೆ ಪ್ರತ್ಯಕ್ಷ ದೈವ. ನಮ್ಮ ಕಣ್ಣಿಗೆ ಕಾಣುವ ಈ ದೇವರನ್ನು ಪೂಜಿಸಿದರೆ ಎಲ್ಲ ದೇವರನ್ನೂ ಪೂಜಿಸಿದ ಫಲ ಬರುತ್ತದೆ ಎಂದು ಶಾಸ್ತ್ರಗಳಲ್ಲಿ ಹೇಳಲಾಗಿದೆ.




ಸೂರ್ಯನಮಸ್ಕಾರ

ಎಕ್ಕದ ಎಲೆಗಳ ಸ್ನಾನ

ರಥಸಪ್ತಮಿಯಂದು ನಾವು ಮಾಡುವ ಸ್ನಾನಕ್ಕೆ ವಿಶೇಷ ಸ್ಥಾನವಿದೆ. ಎಕ್ಕದ ಎಲೆಗಳನ್ನು ತಲೆ, ತೋಳುಗಳ ಮೇಲೆ ಇಟ್ಟುಕೊಂಡು ಸ್ನಾನ ಮಾಡುವುದು ರೂಢಿ. ಹೀಗೆ ಏಳು ಎಕ್ಕದ ಎಲೆಗಳನ್ನು ಉಪಯೋಗಿಸಬೇಕು. ಏಳು ಎಂಬ ಸಂಖ್ಯೆಗೂ ಸೂರ್ಯತತ್ತ್ವಕ್ಕೂ ನಂಟಿದೆ. ಸೂರ್ಯನ ರಥನಿಗೆ ಇರುವುದು ಏಳು ಕುದುರೆಗಳು. ಈ ಸಪ್ತಾಶ್ವಗಳು ಸಪ್ತಪ್ರಾಣಗಳಿಗೆ ಸಂಕೇತ ಎನ್ನುವುದುಂಟು. ಸೂರ್ಯನಿಗೆ ಹಲವು ಹೆಸರುಗಳಲ್ಲಿ ಅರ್ಕ ಎಂಬುದೂ ಒಂದು; ಅರ್ಕ ಎಂದರೆ ಎಕ್ಕದ ಗಿಡವೂ ಹೌದು.

ಎರಡು ದಿನಗಳಲ್ಲಿ ಚಿನ್ನ ₹ 1,037 ಇಳಿಕೆ



ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನದ ದರವು ಎರಡು ದಿನಗಳಲ್ಲಿ 10 ಗ್ರಾಂಗೆ ₹ 1,037ರಷ್ಟು ಇಳಿಕೆ ಆಗಿದೆ. ಗುರುವಾರ ₹ 45,867ರಂತೆ ಮಾರಾಟವಾಗಿದೆ.

ಬೆಳ್ಳಿ ಧಾರಣೆ ಗುರುವಾರ ಕೆ.ಜಿಗೆ ₹ 28ರಷ್ಟು ಅಲ್ಪ ಏರಿಕೆ ಕಂಡು, ₹ 68,283ಕ್ಕೆ ತಲುಪಿದೆ.

ಫೆ. 26ಕ್ಕೆ ವಾಣಿಜ್ಯ ಮಾರುಕಟ್ಟೆ ಬಂದ್


ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯ ಕೆಲವು ಅಂಶಗಳನ್ನು ಪುನರ್ ಪರಿಶೀಲಿಸುವಂತೆ ಒತ್ತಾಯಿಸಿ ಕರೆ ನೀಡಿರುವ 'ಭಾರತ್ ಬಂದ್' ಕಾರಣದಿಂದಾಗಿ ಫೆಬ್ರುವರಿ 26ರಂದು ದೇಶದಾದ್ಯಂತ ಎಲ್ಲ ವಾಣಿಜ್ಯ ಮಾರುಕಟ್ಟೆಗಳು ಮುಚ್ಚಿರಲಿವೆ ಎಂದು ಅಖಿಲ ಭಾರತ ವರ್ತಕರ ಸಂಘಟನೆ (ಸಿಎಐಟಿ) ಹೇಳಿದೆ.

ಜಿಎಸ್‌ಟಿ ವ್ಯವಸ್ಥೆಯಲ್ಲಿನ ಕಠಿಣ ನಿಯಮಗಳನ್ನು ಅಮಾನತಿನಲ್ಲಿ ಇರಿಸಬೇಕು ಎಂದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳನ್ನು, ಜಿಎಸ್‌ಟಿ ಮಂಡಳಿಯನ್ನು ಒತ್ತಾಯಿಸಿ ದೇಶದಾದ್ಯಂತ ಒಟ್ಟು 1,500 ಕಡೆಗಳಲ್ಲಿ ಧರಣಿ ನಡೆಯಲಿದೆ ಎಂದು ಸಿಎಐಟಿ ಹೇಳಿದೆ.

'ಅಖಿಲ ಭಾರತ ಸರಕು ಸಾಗಣೆದಾರರ ಅಭಿವೃದ್ಧಿ ಸಂಘ'ವು ಬಂದ್‌ಗೆ ಬೆಂಬಲ ನೀಡಿದ್ದು, ಅದು ಫೆ. 26ರಂದು 'ಚಕ್ಕಾ ಜಾಮ್'ನಲ್ಲಿ ಭಾಗಿಯಾಗಲಿದೆ ಎಂದು ಸಿಎಐಟಿ ಪ್ರಧಾನ ಕಾರ್ಯದರ್ಶಿ ಪ್ರವೀಣ್ ಖಂಡೇಲ್ವಾಲ್ ಹೇಳಿದ್ದಾರೆ.

ಜಿಎಸ್‌ಟಿ ವ್ಯವಸ್ಥೆ ಯಶಸ್ಸು ಕಾಣಬೇಕು ಎಂದಾದರೆ ಅದನ್ನು ಸ್ವಯಂಪ್ರೇರಣೆಯಿಂದ ಪಾಲಿಸುವಂತಹ ಸಂದರ್ಭ ಸೃಷ್ಟಿಯಾಗಬೇಕು. ಹಾಗೆ ಮಾಡಿದರೆ ಹೆಚ್ಚು ಜನ ಈ ವ್ಯವಸ್ಥೆಯ ಭಾಗವಾಗುತ್ತಾರೆ, ಸರ್ಕಾರದ ಆದಾಯ ಹೆಚ್ಚುತ್ತದೆ ಎಂದು ಅವರು ಹೇಳಿದ್ದಾರೆ.

ಷೇರುಪೇಟೆ ವಹಿವಾಟು 379



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,209
ಇಂದಿನ ಅಂತ್ಯ	15,119
▼	90
ದಿನದ ಕನಿಷ್ಠ	15,078

ವಿನಿಮಯ ದರ

$ ಡಾಲರ್	72.65
£ ಪೌಂಡ್	100.98
€ ಯುರೊ	87.68
¥ ಯೆನ್ (100ಕ್ಕೆ)	69

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹470
12 ಮೊಟ್ಟೆಗೆ	₹65
ಮೈಸೂರು	
100 ಮೊಟ್ಟೆಗೆ	₹473

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1460 (1460)
ಸೋಯಾ (ರಿಫೈನ್ಡ್)	₹1150 (1150)
ಸೂರ್ಯಕಾಂತಿ (ರಿಫೈನ್ಡ್)	₹1430 (1430)
ಪಾಮೋಲಿನ್	₹1118 (1130)

ಆಸ್ಟ್ರೇಲಿಯಾದಲ್ಲಿ ಸುದ್ದಿಗಳ ವೀಕ್ಷಣೆಗೆ ಫೇಸ್‌ಬುಕ್ ನಿರ್ಬಂಧ

ಕ್ಯಾನ್‌ಬೆರಾ (ಎಪಿ): ಆಸ್ಟ್ರೇಲಿಯಾದಲ್ಲಿ ಸುದ್ದಿಗಳ ವೀಕ್ಷಣೆ ಮತ್ತು ಹಂಚಿಕೆ ಮಾಡುವುದಕ್ಕೆ ಫೇಸ್‌ಬುಕ್ ಗುರುವಾರ ನಿರ್ಬಂಧ ವಿಧಿಸಿದೆ.

ಆಸ್ಟ್ರೇಲಿಯಾದಲ್ಲಿ ಜಾರಿಗೆ ತರಲು ಉದ್ದೇಶಿಸಿರುವ ನೂತನ ಕಾನೂನಿನ ಪ್ರಕಾರ ಸುದ್ದಿ, ಲೇಖನ ಸೇರಿದಂತೆ ಇತರೆ ವಿಷಯಗಳನ್ನು ಬಳಸಿಕೊಳ್ಳಲು ಡಿಜಿಟಲ್ ದೈತ್ಯ ಸಂಸ್ಥೆಗಳು, ಮಾಧ್ಯಮ ಸಂಸ್ಥೆಗಳಿಗೆ ಹಣ ಪಾವತಿಸಬೇಕಾಗುತ್ತದೆ. ಈ ಕಾರಣದಿಂದ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಫೇಸ್‌ಬುಕ್ ತಿಳಿಸಿದೆ.

ತುರ್ತು ಸೇವೆಗಳ ವಿಷಯ ಸೇರಿ ಸರ್ಕಾರ ನೀಡುವ ಹಲವು ಸಂದೇಶಗಳಿಗೂ ನಿರ್ಬಂಧ ವಿಧಿಸಲಾಗಿದೆ. ಆರೋಗ್ಯ, ಅಗ್ನಿಶಾಮಕ ಮತ್ತು ಇತರ ತುರ್ತುಸೇವೆಗಳ ಪುಟಗಳನ್ನು ಯಥಾಸ್ಥಿತಿ ಉಳಿಸುವಂತೆ ಫೇಸ್‌ಬುಕ್‌ಗೆ ಆಸ್ಟ್ರೇಲಿಯಾ ಸರ್ಕಾರ ಸೂಚಿಸಿದೆ.

ಈ ನಿರ್ಧಾರ ದುಬಾರಿಯಾಗಿ ಪರಿಣಮಿಸಲಿದೆ. ಜೊತೆಗೆ ಇತರ ದೊಡ್ಡ ರಾಷ್ಟ್ರಗಳು ಸಹ ಇದೇ ನೀತಿಯನ್ನು ಅನುಸರಿಸುವ ಸಾಧ್ಯತೆ ಇದೆ ಎಂದು ಫೇಸ್‌ಬುಕ್ ಅಭಿಪ್ರಾಯಪಟ್ಟಿದೆ.

ಆಸ್ಟ್ರೇಲಿಯಾದ ಪ್ರಕಾಶಕರು ಫೇಸ್ ಬುಕ್‌ನಲ್ಲಿ ಸುದ್ದಿ ಪ್ರಕಟಿಸುವುದನ್ನು ಮುಂದುವರಿಸಬಹುದು. ಆದರೆ ಅದರ ಲಿಂಕ್‌ಗಳು ಮತ್ತು ಪೋಸ್ಟ್‌ಗಳನ್ನು ಆಸ್ಟ್ರೇಲಿಯಾದವರು ವೀಕ್ಷಿಸಲು ಅಥವಾ ಹಂಚಿಕೊಳ್ಳಲು ಸಾಧ್ಯವಿಲ್ಲ ಎಂದು ಅದು ತಿಳಿಸಿದೆ.

'ಪ್ರಸ್ತಾವಿತ ಕಾನೂನು ನಮ್ಮ ವೇದಿಕೆ ಮತ್ತು ಸುದ್ದಿಯನ್ನು ಹಂಚಿಕೊಳ್ಳಲು ಬಳಸುವ ಪ್ರಕಾಶಕರ ನಡುವಿನ ಸಂಬಂಧವನ್ನು ತಪ್ಪಾಗಿ ಅರ್ಥೈಸುತ್ತದೆ' ಎಂದು ಫೇಸ್‌ಬುಕ್ ಪ್ರಾದೇಶಿಕ ವ್ಯವಸ್ಥಾಪಕ ನಿರ್ದೇಶಕ ವಿಲಿಯಂ ಈಸ್ಟನ್ ಬೇಸರ ವ್ಯಕ್ತಪಡಿಸಿದ್ದಾರೆ.

ಆಸ್ಟ್ರೇಲಿಯಾ ಸರ್ಕಾರ ಕಾನೂನು ಜಾರಿಗೊಳಿಸಲು ಮುಂದಾದರೆ ಪ್ರತಿಕಾರದ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ ಎಂದು ಫೇಸ್‌ಬುಕ್ ಮತ್ತು ಗೂಗಲ್ ಬೆದರಿಕೆ ಹಾಕಿದ್ದವು. ಈ ಕಾನೂನು ಜಾರಿಗೊಳಿಸಲು ಮುಂದಾದರೆ ಸರ್ಚ್ ಎಂಜಿನ್‌ಗಳನ್ನು ತೆಗೆದುಹಾಕಬೇಕಾಗುತ್ತದೆ ಎಂದು ಗೂಗಲ್ ಬೆದರಿಕೆ ಹಾಕಿದೆ.

'ದೇಶದ ಸಾರ್ವಭೌಮತ್ವಕ್ಕೆ ಧಕ್ಕೆ'



ಫೇಸ್‌ಬುಕ್‌ನ ಈ ಕ್ರಮಕ್ಕೆ ಆಸ್ಟ್ರೇಲಿಯಾ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದು, ಇದು ದೇಶದ ಸಾರ್ವಭೌಮತ್ವಕ್ಕೆ ಧಕ್ಕೆ ತರುವ ಮತ್ತು ಅಧಿಕಾರ ದುರುಪಯೋಗದ ವಿಷಯವಾಗಿದೆ ಎಂದು ಕಿಡಿಕಾರಿದೆ.

'ಜನರ ಸ್ವಾತಂತ್ರ್ಯಕ್ಕೆ ಧಕ್ಕೆ ತರುವ ವಿಷಯ ಇದಾಗಿದೆ. ತಂತ್ರಜ್ಞಾನದ ಮತ್ತು ಮಾರುಕಟ್ಟೆ ಮೇಲೆ ನಿಯಂತ್ರಣ ಸಾಧಿಸಿ ಅಧಿಕಾರ ದುರುಪಯೋಗಪಡಿಸಿಕೊಳ್ಳುವದಾಗಿದೆ' ಎಂದು ಆರೋಗ್ಯ ಸಚಿವ ಗ್ರೆಗ್ ಹಂಟ್ ಸಂಸತ್‌ನಲ್ಲಿ ತಿಳಿಸಿದ್ದಾರೆ.

'ಜನಪ್ರತಿನಿಧಿಗಳ ಸಭೆ ಹೊಸ ಕಾನೂನಿಗೆ ಅನುಮೋದನೆ ನೀಡಿದೆ. ಸೆನೆಟ್ ಅನುಮೋದನೆ ನೀಡಿದ ಬಳಿಕ ಈ ಕಾನೂನು ಜಾರಿಯಾಗುತ್ತದೆ ಈ ಕಾಯ್ದೆ ಅನ್ವಯ ಆಸ್ಟ್ರೇಲಿಯಾದ ಪತ್ರಿಕೋದ್ಯಮಕ್ಕೆ ಫೇಸ್‌ಬುಕ್ ಮತ್ತು ಗೂಗಲ್ ಹಣ ಪಾವತಿಸಬೇಕಾಗುತ್ತದೆ. ಇದರಿಂದಾಗಿ, ಫೇಸ್‌ಬುಕ್ ಇಂತಹ ಕಠಿಣ ನಿಲುವು ಕೈಗೊಂಡಿದೆ. ಫೇಸ್‌ಬುಕ್‌ನ ಈ ಕ್ರಮ ಅನಗತ್ಯವಾಗಿತ್ತು' ಎಂದು ಆಸ್ಟ್ರೇಲಿಯಾ ಸಂಸದ ಜೋಷ್ ಫ್ರಿಡನ್‌ಬರ್ಗ್ ವಿವರಿಸಿದ್ದಾರೆ.



ಬ್ಯಾಡಗಿ ಮಾರುಕಟ್ಟೆ ಪ್ರಾಂಗಣದಲ್ಲಿ ಗುರುವಾರ ಟೆಂಡರ್‌ಗೆ ಇಡಲಾಗಿದ್ದ ಮೆಣಸಿನಕಾಯಿ ಚೀಲಗಳು

ಬ್ಯಾಡಗಿ ಮಾರುಕಟ್ಟೆಗೆ ದಾಖಲೆಯ ಆವಕ

ಪ್ರಜಾವಾಣಿ ವಾರ್ತೆ

ಬ್ಯಾಡಗಿ (ಹಾವೇರಿ): ಇಲ್ಲಿಯ ಅಂತರರಾಷ್ಟ್ರೀಯ ಮಾರುಕಟ್ಟೆಗೆ ಗುರುವಾರ 2.47 ಲಕ್ಷ ಚೀಲ (61,782 ಕ್ವಿಂಟಲ್) ಮೆಣಸಿನಕಾಯಿ ಆವಕವಾಗಿದೆ. ಇದು ಈ ಹಂಗಾಮಿನ ದಾಖಲೆ.

ಸೋಮವಾರ ಬ್ಯಾಡಗಿ ಪಟ್ಟಣದಲ್ಲಿ ನಡೆಯಲಿರುವ ವೀರಭದ್ರೇಶ್ವರ ಜಾತ್ರಾ ಮಹೋತ್ಸವದ ಪ್ರಯುಕ್ತ ಮಾರುಕಟ್ಟೆ ವಹಿವಾಟು ಸ್ಥಗಿತಗೊಳ್ಳಲಿದೆ. ಈ ಹಿನ್ನೆಲೆಯಲ್ಲಿ ದಾಖಲೆ ಪ್ರಮಾಣದಲ್ಲಿ ಮೆಣಸಿನಕಾಯಿ ಚೀಲಗಳನ್ನು ಮಾರಾಟಕ್ಕೆ ತರಲಾಗಿದ್ದು, ರಸ್ತೆಯ ಮೇಲೆಯೇ ಟೆಂಡರ್‌ಗೆ ಇಡಲಾಗಿತ್ತು.

ಗುರುವಾರದ ದರ (ಪ್ರತಿ ಕ್ವಿಂಟಲ್‌ಗೆ)

ಮೆಣಸಿನ ತಳಿ	ಕನಿಷ್ಠ	ಗರಿಷ್ಠ
ಬ್ಯಾಡಗಿ ಕಡ್ಡಿ	₹1,189	₹25,989
ಬ್ಯಾಡಗಿ ಡಬ್ಬಿ	₹1,909	₹70,111
ಗುಂಟೂರು ತಳಿ	₹700	₹10,109

ಸಾವಯವ ಕೃಷಿ ಪದ್ಧತಿಯಲ್ಲಿ ಬೆಳೆದ ಎರಡು ಚೀಲ (50 ಕೆ.ಜಿ) ಬ್ಯಾಡಗಿ ಡಬ್ಬಿ ಮೆಣಸಿನಕಾಯಿ ಕ್ವಿಂಟಲ್‌ಗೆ ₹70,111 ಗರಿಷ್ಠ ಬೆಲೆಯಲ್ಲಿ ಮಾರಾಟವಾಗಿದೆ. ಒಟ್ಟು 323 ವರ್ತಕರು ಟೆಂಡರ್‌ನಲ್ಲಿ ಭಾಗವಹಿಸಿದ್ದರು.

ಆರ್ಥಿಕ ಚೇತರಿಕೆ: ಸಂಬಳ ಜಾಸ್ತಿ ಮಾಡಲು ಒಲವು

ನೌಕರರ ವೇತನ ಹೆಚ್ಚಳ ಪ್ರಮಾಣ ಶೇ 7.3ರಷ್ಟು

ನವದೆಹಲಿ (ಪಿಟಿಐ): ಭಾರತದ ಕಂಪನಿಗಳು ಈ ವರ್ಷ ತಮ್ಮ ಉದ್ಯೋಗಿಗಳ ವೇತನದಲ್ಲಿ ಸರಾಸರಿ ಶೇಕಡ 7.3ರಷ್ಟು ಹೆಚ್ಚಳ ಮಾಡುವ ಸಾಧ್ಯತೆ ಇದೆ ಎಂದು ಸಮೀಕ್ಷೆಯೊಂದು ಹೇಳಿದೆ.

ಆರ್ಥಿಕತೆಯು ನಿರೀಕ್ಷೆಗಿಂತಲೂ ವೇಗವಾಗಿ ಚೇತರಿಕೆ ಕಾಣುತ್ತಿದ್ದು, ಉದ್ಯಮಿಗಳು ಮತ್ತು ಗ್ರಾಹಕರಲ್ಲಿನ ವಿಶ್ವಾಸವೂ ವೃದ್ಧಿಸುತ್ತಿದೆ. ಈ ಕಾರಣಗಳಿಂದಾಗಿ ಕಂಪನಿಗಳು ಈ ಪ್ರಮಾಣದಲ್ಲಿ ವೇತನ ಹೆಚ್ಚಳ ಮಾಡಲಿವೆ ಎಂದು ಡೆಲಾಯ್ಟ್ ತೋಷೆ ತೊಮಾಟ್ಸು ಇಂಡಿಯಾ ಎಲ್‌ಎಲ್‌ಪಿ (ಡಿಟಿಟಿಐಎಲ್‌ಎಲ್‌ಪಿ) ವರದಿಯಲ್ಲಿ ಹೇಳಲಾಗಿದೆ.

ಕಂಪನಿಯು ನಡೆಸಿದ ಮೊದಲ ಹಂತದ ಸಮೀಕ್ಷೆಯ ವರದಿ ಪ್ರಕಾರ 2021ರಲ್ಲಿ ಕಂಪನಿಗಳು ಮಾಡಲಿರುವ ವೇತನ ಹೆಚ್ಚಳವು 2020ರಲ್ಲಿ ನೀಡಿದ್ದ ಶೇ 4.4ರಷ್ಟಕ್ಕಿಂತಲೂ ಜಾಸ್ತಿ ಇರಲಿದೆ. ಆದರೆ, 2019ರಲ್ಲಿ ನೀಡಿದ್ದ ಶೇ 8.6ಕ್ಕಿಂತಲೂ ಕಡಿಮೆ ಇರಲಿದೆ.



ಸಮೀಕ್ಷೆಯಲ್ಲಿ ಭಾಗವಹಿಸಿರುವ ಕಂಪನಿಗಳ ಪೈಕಿ ಶೇ 92ರಷ್ಟು ಕಂಪನಿಗಳು ವೇತನ ಹೆಚ್ಚಳ ಮಾಡುವ ಒಲವು ವ್ಯಕ್ತಪಡಿಸಿವೆ. 2020ರಲ್ಲಿ ಶೇ 60ರಷ್ಟು ಕಂಪನಿಗಳು ವೇತನ ಹೆಚ್ಚಳ ಮಾಡುವುದಾಗಿ ಹೇಳಿದ್ದವು.

2020ರ ಡಿಸೆಂಬರ್‌ನಲ್ಲಿ ಈ ಸಮೀಕ್ಷೆ ನಡೆಸಿದ್ದು, ಏಳು ವಲಯಗಳು ಮತ್ತು 25 ಉಪ ವಲಯಗಳ ಒಟ್ಟಾರೆ 400 ಸಂಘ–ಸಂಸ್ಥೆಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ.

ಈ ವರ್ಷ ಶೇ 20ರಷ್ಟು ಕಂಪನಿಗಳು ವೇತನದಲ್ಲಿ ಎರಡಂಕಿಗಳಷ್ಟು ಏರಿಕೆ ಮಾಡುವ ಆಲೋಚನೆ ಇಟ್ಟುಕೊಂಡಿವೆ. 2020ರಲ್ಲಿ ಶೇ 12ರಷ್ಟು ಕಂಪನಿಗಳು ಮಾತ್ರವೇ ವೇತನದಲ್ಲಿ ಎರಡಂಕಿಗಳಷ್ಟು ಹೆಚ್ಚಳ ಮಾಡಿದ್ದವು.

ಮುಖ್ಯಾಂಶಗಳು

- ಜೀವ ವಿಜ್ಞಾನ, ಐ.ಟಿ. ವಲಯಗಳ ವೇತನದಲ್ಲಿ ಗರಿಷ್ಠ ಹೆಚ್ಚಳ ನಿರೀಕ್ಷೆ
- ತಯಾರಿಕೆ ಮತ್ತು ಸೇವಾ ವಲಯಗಳ ವೇತನ ಹೆಚ್ಚಳದ ಪ್ರಮಾಣ ಕಡಿಮೆ ಇರಲಿದೆ

ಮೂರನೇ ದಿನವೂ ಸೂಚ್ಯಂಕ ಇಳಿಕೆ

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳಲ್ಲಿ ಸತತ ಮೂರನೇ ದಿನವೂ ನಕಾರಾತ್ಮಕ ವಹಿವಾಟು ನಡೆಯಿತು. ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ 379 ಅಂಶ ಇಳಿಕೆ ಕಂಡು 51,325 ಅಂಶಗಳಲ್ಲಿ ವಹಿವಾಟು ಅಂತ್ಯವಾಯಿತು.

ಎನ್‌ಎಸ್‌ಇ ನಿಫ್ಟಿ 90 ಅಂಶ ಇಳಿಕೆಯಾಗಿ 15,119 ಅಂಶಗಳಿಗೆ ತಲುಪಿತು. ಕಚ್ಚಾ ತೈಲ ದರ ಏರಿಕೆ ಹಾಗೂ ಹಣದುಬ್ಬರ ಹೆಚ್ಚಳ ಆಗುವ ಆತಂಕವು ವಹಿವಾಟಿನ ಮೇಲೆ ಪರಿಣಾಮ ಉಂಟುಮಾಡಿತು ಎಂದು ತಜ್ಞರು ಹೇಳಿದ್ದಾರೆ.

ದಿನದ ವಹಿವಾಟಿನಲ್ಲಿ ಬಜಾಜ್ ಫೈನಾನ್ಸ್ ಷೇರು ಶೇ 2.43ರಷ್ಟು ಗರಿಷ್ಠ ನಷ್ಟ ಕಂಡಿತು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	1000-1050
ನಡುಗೋಲು	1150-1250
ರಾಶಿ	1450-1500
ರಾಶಿ ಉತ್ತಮ	1600-1700
ಜರಡಿ	1800-1850
ಹೆರಕಿದ್ದು	2200-2300
ಹಸಿರು ಸಾಧಾರಣ	1300-1400
ಹಸಿರು ಉತ್ತಮ	1700-1750
ಹಸಿರು ಅತಿ ಉತ್ತಮ	2200-2500
ಕಾಳು ಮೆಣಸು	325
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-42500
ಹಳತು	42500-51000
ಕುಮಟ	
ಚಿಪ್ಪು	24299-30548
ಕೋಕ	16110-28488
ಹಳೆಚಾಲಿ	42099-42599
ಹೊಸಚಾಲಿ	33000-37639
ಪುತ್ತೂರು	
ಕೋಕ	9500-24000
ಹೊಸತು	29000-42500
ಸಿದ್ದಾಪುರ	
ಬಿಳಿಗೋಟು	21689-30009
ಕೋಕ	20299-28900
ಹಳೆಚಾಲಿ	36899-41639
ಹೊಸಚಾಲಿ	36899-41639
ಕೆಂಪುಗೋಟು	28469-30089
ರಾಶಿ	41809-43469
ತಟ್ಟಿಬೆಟ್ಟೆ	32889-38089
ಯಲ್ಲಾಪುರ	
ಬಿಳಿಗೋಟು	23612-32319
ಚಾಲಿ	32612-42799
ಕೋಕ	20100-30499
ಕೆಂಪುಗೋಟು	27899-34969
ರಾಶಿ	39699-47189
ತಟ್ಟಿಬೆಟ್ಟೆ	35209-39419
ಶಿವಮೊಗ್ಗ	
ಬೆಟ್ಟೆ	40000-44700
ಗೊರಬಲು	17169-31950
ರಾಶಿ	37809-43059
ಸರಕು	45000-75600
ರಾಮನಗರ ರೇಷ್ಮೆ	
ಮಿಶ್ರತಳಿ (ಸಿ.ಬಿ)	335-419
ದ್ವಿತಳಿ (ಬಿ.ವಿ)	255-552

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	10000	10000	122.70 ಸೆಂಟ್ಸ್
ಎಸಿ	---	3900	3900	
ಆರ್‌ಪಿ	---	5200	5200	
ಆರ್‌ಸಿ	---	2950	2950	1349 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

18-2-2021

ಜಾವಾ 70/80(ಹೊಸ)	10850-10900
ಜಾವಾ 80/90(ಹೊಸ)	10350-10400
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	8800-8900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1470 (1470)
ಒಂದು ವಾರದ ಡೆಲಿವರಿ	1465 (1465)
ಸೋಯಾ ಕಚ್ಚಾ	1110 (1110)
ಪಾಮ್ ವಾರದ ಡೆಲಿವರಿ	1116 (1128)
ಸೂರ್ಯಕಾಂತಿ ಎಣ್ಣೆ ಕಚ್ಚಾ	1390 (1390)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

46,300 (46,250)

ಬೆಳ್ಳಿ ಕೆ.ಜಿ

68,750 (68,400)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪೆಟ್ರೋಲ್‌ಗೆ ₹ 100: ಈಗ ಮಧ್ಯಪ್ರದೇಶದ ಸರದಿ

ನವದೆಹಲಿ (ಪಿಟಿಐ): ಮಧ್ಯಪ್ರದೇಶದಲ್ಲಿ ಲೀಟರ್ ಪೆಟ್ರೋಲ್ ದರ ಗುರುವಾರ ₹ 100ರ ಗಡಿ ದಾಟಿದೆ. ನಿರಂತರವಾಗಿ ಹತ್ತು ದಿನಗಳಿಂದ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಹೆಚ್ಚಿಸಲಾಗುತ್ತಿದೆ.

ರಾಜಸ್ಥಾನದ ಶ್ರೀಗಂಗಾನಗರದಲ್ಲಿ ಪೆಟ್ರೋಲ್ ಬೆಲೆಯು ₹ 100ರ ಗಡಿಯನ್ನು ಬುಧವಾರ ದಾಟಿತ್ತು. ಈಗ ಮಧ್ಯಪ್ರದೇಶದ ಅನುಪ್ಪುರದಲ್ಲಿ ಕೂಡ ಪೆಟ್ರೋಲ್ ಬೆಲೆ ಈ ಗಡಿಯನ್ನು ದಾಟಿದ್ದು, ಲೀಟರ್ ಪೆಟ್ರೋಲ್ ₹ 100.25ಕ್ಕೆ ಮಾರಾಟವಾಗಿದೆ. ಅನುಪ್ಪುರದಲ್ಲಿ ಡೀಸೆಲ್ ಬೆಲೆ ₹ 90.35ಕ್ಕೆ ತಲುಪಿದೆ.

ರಾಜಸ್ಥಾನದಲ್ಲಿ ಪೆಟ್ರೋಲ್ ಮೇಲೆ ವಿಧಿಸಲಾಗಿರುವ ಮೌಲ್ಯವರ್ಧಿತ ತೆರಿಗೆಯ (ವ್ಯಾಟ್) ಪ್ರಮಾಣವು ದೇಶದಲ್ಲೇ ಅತಿ ಹೆಚ್ಚು. ಇದಾದ ನಂತರದ ಸ್ಥಾನದಲ್ಲಿ ಮಧ್ಯಪ್ರದೇಶ ಇದೆ.

ಮುಂಬೈನಲ್ಲಿ ಪೆಟ್ರೋಲ್ ದರವು ಗುರುವಾರ ₹ 96.32ಕ್ಕೆ ತಲುಪಿದೆ. 'ತೈಲ ಉತ್ಪಾದನೆ ಮಾಡುವ ರಾಷ್ಟ್ರಗಳು ಉತ್ಪಾದನೆಯ ಪ್ರಮಾಣವನ್ನು ತಗ್ಗಿಸಿರುವ ಕಾರಣ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ಬೆಲೆ ಹೆಚ್ಚಾಗಿದೆ' ಎಂದುರ ಪೆಟ್ರೋಲಿಯಂ ಸಚಿವ ಧರ್ಮೇಂದ್ರ ಪ್ರಧಾನ್ ಬುಧವಾರ ಹೇಳಿದ್ದಾರೆ.

ಸೌದಿ ಅರೇಬಿಯಾ ಮತ್ತು ತೈಲ ಉತ್ಪಾದಿಸುವ ಇತರ ರಾಷ್ಟ್ರಗಳು ಉತ್ಪಾದನೆಯ ಪ್ರಮಾಣ ಹೆಚ್ಚಿಸಬೇಕು. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ಬೆಲೆ ಹೆಚ್ಚುತ್ತಿರುವುದರಿಂದ ಆರ್ಥಿಕ ಪುನಶ್ಚೇತನಕ್ಕೆ ಅಡ್ಡಿ ಉಂಟಾಗುತ್ತದೆ ಎಂದೂ ಪ್ರಧಾನ್ ಅವರು ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

'ಉಭಯ ಸೇನೆ ಹಿಂತೆಗೆತ ಪ್ರಕ್ರಿಯೆ ಸುಗಮ'

ಬೀಜಿಂಗ್ (ಪಿಟಿಐ): 'ಪೂರ್ವ ಲಡಾಖ್ ಗಡಿ ಪ್ರದೇಶದಲ್ಲಿ ಚೀನಾ ಹಾಗೂ ಭಾರತೀಯ ಸೇನೆಯನ್ನು ವಾಪಸ್ ಕರೆಸಿಕೊಳ್ಳುವ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಉಭಯ ದೇಶಗಳು ಶಾಂತಿ ಮರುಸ್ಥಾಪನೆಗೆ ವ್ಯವಸ್ಥಿತ ಪಯತ್ನ ನಡೆಸುತ್ತಿವೆ' ಎಂದು ಚೀನಾ ಗುರುವಾರ ತಿಳಿಸಿದೆ.

ಸೇನೆಯನ್ನು ವಾಪಸ್ ಕರೆಸಿ ಕೊಳ್ಳುವ ಪ್ರಕ್ರಿಯೆ ಯಾವಾಗ ಪೂರ್ಣಗೊಳ್ಳಲಿದೆ ಎಂಬ ಪ್ರಶ್ನೆಗೆ ಉತ್ತರಿಸಿದ ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರ 'ಈ ಕುರಿತು ನನಗೆ ಮಾಹಿತಿ ಯಿಲ್ಲ. ಸೇನಾ ಸಿಬ್ಬಂದಿಯನ್ನು ಪ್ರಶ್ನಿಸಿ' ಎಂದು ತಿಳಿಸಿದ್ದಾರೆ.

ಸೇನಾ ಮಾತುಕತೆಯ ಒಪ್ಪಂದದ ಭಾಗವಾಗಿ, ಚೀನಾ ಹಾಗೂ ಭಾರತೀಯ ಪಡೆಗಳು ಪ್ಯಾಂಗೊಂಗ್ ಸರೋವರ ಪ್ರದೇಶದಲ್ಲಿ ಏಕಕಾಲದಲ್ಲಿ ಮತ್ತು ವ್ಯವಸ್ಥಿತವಾಗಿ ಸೇನೆಯನ್ನು ಹಿಂಪಡೆದುಕೊಳ್ಳುವ ಪ್ರಕ್ರಿಯೆಯನ್ನು ಆರಂಭಿಸಿವೆ ಎಂದು ಚೀನಾದ ರಕ್ಷಣಾ ಸಚಿವಾಲಯದ ವಕ್ತಾರ ಇತ್ತೀಚೆಗೆ ತಿಳಿಸಿದ್ದರು.

ಆಕ್ಸ್‌ಫರ್ಡ್ ವಿದ್ಯಾರ್ಥಿ ಸಂಘ: ರಶ್ಮಿ ರಾಜೀನಾಮೆ

ಲಂಡನ್ (ಪಿಟಿಐ): ಆಕ್ಸ್‌ಫರ್ಡ್ ವಿದ್ಯಾರ್ಥಿ ಸಂಘದ (ಎಸ್‌ಯು) ಅಧ್ಯಕ್ಷರಾಗಿ ಇತ್ತೀಚೆಗೆಷ್ಟೇ ಆಯ್ಕೆಯಾದ ಮಣಿಪಾಲ ಮೂಲದ ರಶ್ಮಿ ಸಾಮಂತ್ ಅವರು ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.



ರಶ್ಮಿ ಸಾಮಂತ್

ಈ ಸ್ಥಾನಕ್ಕೆ ಆಯ್ಕೆಯಾದ ಮೊದಲ ಭಾರತೀಯ ಮಹಿಳೆ ಆಗಿದ್ದ ರಶ್ಮಿ ಅವರು, ಸಾಮಾಜಿಕ ಮಾಧ್ಯಮಗಳಲ್ಲಿ ಈ ಹಿಂದೆ ಪೋಸ್ಟ್ ಮಾಡಿದ್ದ ಜನಾಂಗೀಯ ಮತ್ತು ಸಂವೇದನಾರಹಿತವಾದ ಹೇಳಿಕೆಗಳಿಗೆ ವ್ಯಾಪಕ ಟೀಕೆ ವ್ಯಕ್ತವಾಗಿತ್ತು. ಈ ಹಿನ್ನೆಲೆಯಲ್ಲಿ ಅವರು ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಇವರ ರಾಜೀನಾಮೆಯಿಂದ ಅಧ್ಯಕ್ಷ ಸ್ಥಾನಕ್ಕೆ ಉಪ ಚುನಾವಣೆ ನಡೆಯಲಿದೆ.

ಮಿಲಿಟರಿ: ಆಧ್ಯಾತ್ಮದ ಮಾರ್ಗದರ್ಶಕಿ ಜಬೀನ್

ವಾಷಿಂಗ್ಟನ್ (ಪಿಟಿಐ): ಭಾರತೀಯ ಸಂಜಾತ ಮುಸ್ಲಿಂ ಮಹಿಳೆ ಸಲೇಹಾ ಜಬೀನ್ ಅವರು ಅಮೆರಿಕದ ಮಿಲಿಟರಿಯಲ್ಲಿ ಆಧ್ಯಾತ್ಮಿಕ ಮಾರ್ಗದರ್ಶಕರಾಗಿ ಕಾರ್ಯ ನಿರ್ವಹಿಸಲಿದ್ದಾರೆ. ಅಮೆರಿಕ ಮಿಲಿಟರಿಯಲ್ಲಿ ಈ ಕಾರ್ಯಕ್ಕೆ ನಿಯೋಜನೆಗೊಂಡಿರುವ ಮೊದಲ ಮುಸ್ಲಿಂ ಮಹಿಳೆ ಎಂಬ ಹೆಗ್ಗಳಿಕೆ ಅವರದ್ದು.

ಅವರು ಅಮೆರಿಕ ವಾಯುಪಡೆಯಲ್ಲಿ 'ಚಾಪ್ಲೈನ್ ಕೋರ್ಸ್' ಪೂರೈಸಿದ್ದು, ಫೆಬ್ರುವರಿ 5ರಂದು ಪದವಿ ಪ್ರತಿಜ್ಞೆ ಸ್ವೀಕರಿಸಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

25ರ ಸಂಭ್ರಮದಲ್ಲಿ ಹುಂಡೈ

ಬೆಂಗಳೂರು: ಹುಂಡೈ ಮೋಟರ್ಸ್ ಇಂಡಿಯಾ ಲಿಮಿಟೆಡ್ ಕಂಪನಿಯು ಭಾರತ ಪ್ರವೇಶಿಸಿ 25 ವರ್ಷಗಳು ಸಂದಿರುವ ಸಂಭ್ರಮದಲ್ಲಿದೆ. 1996ರಲ್ಲಿ ತಮಿಳುನಾಡಿನಲ್ಲಿ ಕಂಪನಿಯ ಘಟಕಕ್ಕೆ ಅಡಿಪಾಯ ಹಾಕಲಾಗಿತ್ತು.

ಈ ಘಟಕದಲ್ಲಿ ಕಾರು ತಯಾರಿಕೆಯು 1998ರಲ್ಲಿ ಆರಂಭವಾಯಿತು. ಕೊರಿಯಾ ಹೊರಗೆ ಆರಂಭ ಆದ ಮೊದಲ ಏಕೀಕೃತ ಕಾರು ತಯಾರಿಕಾ ಘಟಕ ಇದಾಗಿತ್ತು ಎಂದು ಕಂಪನಿಯ ಪ್ರಕಟಣೆ ಹೇಳಿದೆ.

1998ರ ನಂತರದಲ್ಲಿ ಹುಂಡೈ ಕಂಪನಿಯು ಸ್ಯಾಂಟ್ರೊ, ಐ20ನಂತಹ ಕಾರುಗಳನ್ನು ಗ್ರಾಹಕರಿಗೆ ನೀಡಿದೆ. 2020ರ ಕ್ಯಾಲೆಂಡರ್ ವರ್ಷದಲ್ಲಿ ಕಂಪನಿಯು ಭಾರತದ ಮಾರುಕಟ್ಟೆಯಲ್ಲಿ ಶೇಕಡ 17.4ರಷ್ಟು ಪಾಲನ್ನು ಪಡೆದುಕೊಂಡಿದೆ ಎಂದು ಪ್ರಕಟಣೆಯಲ್ಲಿ ಹೇಳಲಾಗಿದೆ.

'ಭಾರತದ ಗ್ರಾಹಕರ ಪಾಲಿಗೆ ಅತ್ಯಂತ ಪ್ರೀತಿಪಾತ್ರವಾದ, ಅತ್ಯಂತ ವಿಶ್ವಾಸಾರ್ಹವಾದ ವಾಹನ ಬ್ರ್ಯಾಂಡ್ ಆಗುವುದು ನಮ್ಮ ಗುರಿ' ಎಂದು ಕಂಪನಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಎಸ್.ಎಸ್. ಕಿಮ್ ಹೇಳಿದ್ದಾರೆ.

ಐಪಿಎಲ್ ಹರಾಜು: ಆಸ್ಟ್ರೇಲಿಯಾದ ಗ್ಲೆನ್ ಮ್ಯಾಕ್ಸ್‌ವೆಲ್, ನ್ಯೂಜಿಲೆಂಡ್‌ನ ಆಲ್‌ರೌಂಡರ್ ಕೈಲ್ ಜೆಮಿಸನ್ ಸೇರ್ಪಡೆ

ರಾಯಲ್ ಚಾಲೆಂಜರ್ಸ್ ಬಲವರ್ಧನೆ

ಬೆಂಗಳೂರು: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಈ ಬಾರಿ ಶ್ರೇಷ್ಠ ಆಲ್‌ರೌಂಡರ್‌ಗಳನ್ನು ಬುಟ್ಟಿಗೆ ಹಾಕಿಕೊಳ್ಳುವ ಮೂಲಕ ತನ್ನ ಬಲ ವರ್ಧಿಸಿಕೊಂಡಿದೆ.

ಕಳೆದ 13 ಆವೃತ್ತಿಗಳಲ್ಲಿಯೂ ಪ್ರಶಸ್ತಿ ಗೆಲುವಿನ ಕನಸು ನನಸಾಗದ ಬೆಂಗಳೂರು ತಂಡವು ಈ ಬಾರಿ ಎದುರಾಳಿಗಳಿಗೆ ದಿಟ್ಟ ಉತ್ತರ ಕೊಡಲು ಸಿದ್ಧವಾಗಿದೆ. ಪಂಜಾಬ್ ಕಿಂಗ್ಸ್ ತಂಡದಿಂದ ಬಿಡುಗಡೆಯಾಗಿದ್ದ ಗ್ಲೆನ್ ಮ್ಯಾಕ್ಸ್‌ವೆಲ್ ಮತ್ತು ನ್ಯೂಜಿಲೆಂಡ್‌ನ ಆಲ್‌ರೌಂಡರ್ ಕೈಲ್ ಜೆಮಿಸನ್ ಅವರನ್ನು ತನ್ನ ತಂಡಕ್ಕೆ ಸೆಳೆದುಕೊಂಡಿದೆ.

ಈ ಬಾರಿ ತಂಡವು ಮಧ್ಯಮವೇಗಿ ಉಮೇಶ್ ಯಾದವ್, ದಕ್ಷಿಣ ಆಫ್ರಿಕಾದ ವೇಗಿ ಡೆಲ್ ಸ್ಟೇಯ್ನ್, ಬ್ಯಾಟ್ಸ್‌ಮನ್ ಆ್ಯರನ್ ಫಿಂಚ್ ಮತ್ತು ಆಲ್‌ರೌಂಡರ್ ಕ್ರಿಸ್ ಮೊರಿಸ್ ಅವರನ್ನು ಬಿಡುಗಡೆ ಮಾಡಿತ್ತು. ವಿಕೆಟ್‌ಕೀಪರ್ ಪಾರ್ಥಿವ್ ಪಟೇಲ್ ನಿವೃತ್ತಿ ಘೋಷಿಸಿದ್ದರು.

ಈ ಹರಾಜಿನಲ್ಲಿ ಆರ್‌ಸಿಬಿಯು ಒಟ್ಟು ಎಂಟು ಆಟಗಾರರನ್ನು ಖರೀದಿಸಿದೆ. ಅದರಲ್ಲಿ ನಾಲ್ವರು ಆಲ್‌ರೌಂಡರ್, ಇಬ್ಬರು ಬ್ಯಾಟ್ಸ್‌ಮನ್ ಮತ್ತು ಇಬ್ಬರು ವಿಕೆಟ್‌ಕೀಪರ್‌ಗಳಿದ್ದಾರೆ.

ನ್ಯೂಜಿಲೆಂಡ್‌ನ ಜೆಮಿಸನ್ ಮತ್ತು ಆಸ್ಟ್ರೇಲಿಯಾದ ಡೇನಿಯಲ್ ಕ್ರಿಸ್ಟಿಯನ್ ವೇಗದ ಬೌಲರ್ –ಬ್ಯಾಟ್ಸ್‌ಮನ್‌ಗಳಾಗಿದ್ದಾರೆ. ಸ್ಫೋಟಕ ಶೈಲಿಯ ಬ್ಯಾಟ್ಸ್‌ಮನ್ ಮ್ಯಾಕ್ಸ್‌ವೆಲ್ ಆಫ್‌ಸ್ಪಿನ್ ಬೌಲಿಂಗ್ ಮಾಡುತ್ತಾರೆ. ಇನ್ನುಳಿದಂತೆ ಯುವ ಆಟಗಾರರನ್ನೇ ತಂಡವು ಆಯ್ಕೆ ಮಾಡಿಕೊಂಡಿದೆ. ಮ್ಯಾಕ್ಸ್‌ವೆಲ್ ಹೋದವರ್ಷ ಪಂಜಾಬ್ ತಂಡದಲ್ಲಿದ್ದರು. ಆ ಋತುವಿನಲ್ಲಿ ಅವರು ಉತ್ತಮ ಲಯದಲ್ಲಿರಲಿಲ್ಲ.

ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಟೂರ್ನಿಯಲ್ಲಿ ಮಿಂಚಿದ್ದ ಮೊಹಮ್ಮದ್ ಅಜರುದ್ದೀನ್ ಮತ್ತು ಕೋನಾ ಶ್ರೀಕರ್ ಭರತ್ ಅವರು ವಿಕೆಟ್‌ಕೀಪರ್ ಬ್ಯಾಟ್ಸ್‌ಮನ್‌ಗಳಾಗಿದ್ದಾರೆ.

ಎಬಿ ಡಿವಿಲಿಯರ್ಸ್ ಅವರೊಂದಿಗೆ ವಿಕೆಟ್‌ಕೀಪಿಂಗ್ ಹೊಣೆಯನ್ನು ಈ ಇಬ್ಬರೂ ಹಂತ ಹಂತವಾಗಿ ಹಂಚಿಕೊಳ್ಳುವ ನಿರೀಕ್ಷೆ ಇದೆ. ಬಾಟ್ಸ್‌ಮನ್‌ಗಳಾದ ಸಚಿನ್ ಬೇಬಿ ಮತ್ತು ರಜತ್ ಪಾಟೀದಾರ ಅವರು ತಂಡಕ್ಕೆ ಸೇರ್ಪಡೆಯಾಗಿದ್ದಾರೆ.

ಆದರೆ, ತಂಡವು ಕರ್ನಾಟಕದ ಆಟಗಾರರಿಗೆ ಈ ಸಲ ಮಣೆ ಹಾಕಿಲ್ಲ. ಬೆಂಗಳೂರಿನ ದೇವದತ್ತ ಪಡಿಕ್ಕಲ್ ಹೋದ ವರ್ಷದ ಟೂರ್ನಿಯಲ್ಲಿ ಆರ್‌ಸಿಬಿಗೆ ಪದಾರ್ಪಣೆ ಮಾಡಿ ಮಿಂಚಿದ್ದರು. ಅವರನ್ನು ಮತ್ತು ಕನ್ನಡಿಗ ಪವನ್ ದೇಶಪಾಂಡೆಯನ್ನು ತಂಡವು ಉಳಿಸಿಕೊಂಡಿದೆ.


ಗ್ಲೆನ್ ಮ್ಯಾಕ್ಸ್‌ವೆಲ್


ಕೈಲ್ ಜೆಮಿಸನ್

ಐಪಿಎಲ್ ಹರಾಜು

ಆಟಗಾರ	ಶೈಲಿ	ಮೌಲ್ಯ(₹)
ರಾಯಲ್ ಚಾಲೆಂಜರ್ಸ್ ಬೆಂಗಳೂರು		
ಕೈಲ್ ಜೆಮಿಸನ್	ಆಲ್‌ರೌಂಡರ್	15 ಕೋಟಿ
ಗ್ಲೆನ್ ಮ್ಯಾಕ್ಸ್‌ವೆಲ್	ಆಲ್‌ರೌಂಡರ್	14.25 ಕೋಟಿ
ಡ್ಯಾನ್ ಕ್ರಿಸ್ಟಿಯನ್	ಆಲ್‌ರೌಂಡರ್	4.80 ಕೋಟಿ
ಸಚಿನ್ ಬೇಬಿ	ಬ್ಯಾಟ್ಸ್‌ಮನ್	20 ಲಕ್ಷ
ರಜತ್ ಪಾಟೀದಾರ್	ಬ್ಯಾಟ್ಸ್‌ಮನ್	20 ಲಕ್ಷ
ಮೊಹಮ್ಮದ್ ಅಜರುದ್ದೀನ್	ವಿಕೆಟ್‌ಕೀಪರ್	20 ಲಕ್ಷ
ಸುಯಶ್ ಪ್ರಭುದೇಸಾಯಿ	ಆಲ್‌ರೌಂಡರ್	20 ಲಕ್ಷ
ಕೋನಾ ಶ್ರೀಕರ್ ಭರತ್	ವಿಕೆಟ್‌ಕೀಪರ್	20 ಲಕ್ಷ
ಚೆನ್ನೈ ಸೂಪರ್ ಕಿಂಗ್ಸ್		
ಕೃಷ್ಣಪ್ಪ ಗೌತಮ್	ಆಲ್‌ರೌಂಡರ್	9.25 ಕೋಟಿ
ಮೋಯಿನ್ ಅಲಿ	ಆಲ್‌ರೌಂಡರ್	7 ಕೋಟಿ
ಚೇತೇಶ್ವರ್ ಪೂಜಾರ	ಬ್ಯಾಟ್ಸ್‌ಮನ್	50 ಲಕ್ಷ
ಕೆ. ಭಗತ್ ವರ್ಮಾ	ಆಲ್‌ರೌಂಡರ್	20 ಲಕ್ಷ
ಸಿ. ಹರಿ ನಿಶಾಂತ್	ಬ್ಯಾಟ್ಸ್‌ಮನ್	20 ಲಕ್ಷ
ಎಂ. ಹರಿಶಂಕರ್ ರೆಡ್ಡಿ	ಬೌಲರ್	20 ಲಕ್ಷ
ಮುಂಬೈ ಇಂಡಿಯನ್ಸ್		
ನೇಥನ್ ಕೌಲ್ಟರ್‌ನೈಲ್	ಬೌಲರ್	5 ಕೋಟಿ
ಆ್ಯಡಂ ಮಿಲ್ನೆ	ಬೌಲರ್	3.20 ಕೋಟಿ
ಪೀಯೂಷ್ ಚಾವ್ಲಾ	ಬೌಲರ್	2.40 ಕೋಟಿ
ಜೇಮ್ಸ್ ನಿಶಾಮ್	ಆಲ್‌ರೌಂಡರ್	50 ಲಕ್ಷ
ಯದವೀರ್ ಚರಕ್	ಆಲ್‌ರೌಂಡರ್	20 ಲಕ್ಷ
ಮಾರ್ಕೊ ಜೆನ್ಸನ್	ಆಲ್‌ರೌಂಡರ್	20 ಲಕ್ಷ
ಅರ್ಜುನ್ ತೆಂಡೂಲ್ಕರ್	ಆಲ್‌ರೌಂಡರ್	20ಲಕ್ಷ
ಕೋಲ್ಕತ್ತ ನೈಟ್ ರೈಡರ್ಸ್		
ಶಕೀಬ್ ಅಲ್ ಹಸನ್	ಆಲ್‌ರೌಂಡರ್	3.20 ಕೋಟಿ
ಹರಭಜನ್ ಸಿಂಗ್	ಬೌಲರ್	2 ಕೋಟಿ
ಬೆನ್ ಕಟಿಂಗ್	ಆಲ್‌ರೌಂಡರ್	75 ಲಕ್ಷ
ಕರುಣ್ ನಾಯರ್	ಬ್ಯಾಟ್ಸ್‌ಮನ್	50ಲಕ್ಷ
ಪವನ್ ನೇಗಿ	ಆಲ್‌ರೌಂಡರ್	50 ಲಕ್ಷ
ವೆಂಕಟೇಶ್ ಅಯ್ಯರ್	ಆಲ್‌ರೌಂಡರ್	20 ಲಕ್ಷ
ಶೆಲ್ಡನ್ ಜಾಕ್ಸನ್	ವಿಕೆಟ್‌ಕೀಪರ್	20 ಲಕ್ಷ
ವೈಭವ್ ಅರೋರಾ	ಬೌಲರ್	20 ಲಕ್ಷ
ಡೆಲ್ಲಿ ಕ್ಯಾಪಿಟಲ್ಸ್		
ಟಾಮ್ ಕರನ್	ಆಲ್‌ರೌಂಡರ್	5.25 ಕೋಟಿ
ಸ್ಟೀವನ್ ಸ್ಮಿತ್	ಬ್ಯಾಟ್ಸ್‌ಮನ್	2.20 ಕೋಟಿ
ಸ್ಯಾಮ್ ಬಿಲಿಂಗ್ಸ್	ವಿಕೆಟ್ ಕೀಪರ್	2 ಕೋಟಿ
ಉಮೇಶ್ ಯಾದವ್	ಬೌಲರ್	1 ಕೋಟಿ
ರಿಪಾಲ್ ಪಟೇಲ್	ಆಲ್‌ರೌಂಡರ್	20 ಲಕ್ಷ
ವಿಷ್ಣು ವಿನೋದ್	ವಿಕೆಟ್ ಕೀಪರ್	20 ಲಕ್ಷ
ಲುಕ್ಮಾನ್ / ಮೆರಿವಾಲಾ	ಬೌಲರ್	20 ಲಕ್ಷ
ಮಣಿಮಾರನ್ ಸಿದ್ಧಾರ್ಥ್	ಬೌಲರ್	20 ಲಕ್ಷ
ರಾಜಸ್ಥಾನ ರಾಯಲ್ಸ್		
ಕ್ರಿಸ್ ಮೊರಿಸ್	ಆಲ್‌ರೌಂಡರ್	16.25 ಕೋಟಿ
ಶಿವಂ ದುಬೆ	ಆಲ್‌ರೌಂಡರ್	4.40 ಕೋಟಿ
ಚೇತನ್ ಸಕಾರಿಯಾ	ಬೌಲರ್	1.20 ಕೋಟಿ
ಮುಸ್ತಫಿಜುರ್ ರೆಹಮಾನ್	ಬೌಲರ್	1 ಕೋಟಿ
ಲಿಯಾಮ್ ಲಿವಿಂಗ್‌ಸ್ಟೋನ್	ಆಲ್‌ರೌಂಡರ್	75 ಲಕ್ಷ
ಕೆ.ಸಿ.ಕಾರಿಯಪ್ಪ	ಬೌಲರ್	20 ಲಕ್ಷ
ಆಕಾಶ್ ಸಿಂಗ್	ಬೌಲರ್	20 ಲಕ್ಷ
ಕುಲದೀಪ್ ಯಾದವ್	ಬೌಲರ್	20 ಲಕ್ಷ
ಪಂಜಾಬ್ ಕಿಂಗ್ಸ್		
ಜಯ್ ರಿಚರ್ಡ್ಸನ್	ಬೌಲರ್	14 ಕೋಟಿ
ರಿಲಿ ಮರಡಿತ್	ಬೌಲರ್	8 ಕೋಟಿ
ಶಾರೂಕ್ ಖಾನ್	ಆಲ್‌ರೌಂಡರ್	5.25 ಕೋಟಿ
ಮೊಯಿಸೆಸ್ ಹೆನ್ರಿಕ್ಸ್	ಆಲ್‌ರೌಂಡರ್	4.20 ಕೋಟಿ
ಡೇವಿಡ್ ಮಲಾನ್	ಆಲ್‌ರೌಂಡರ್	1.50 ಕೋಟಿ
ಫ್ಯಾಬಿಯನ್ ಅಲೆನ್	ಆಲ್‌ರೌಂಡರ್	75 ಲಕ್ಷ
ಜಲಜ್ ಸಕ್ಸೇನಾ	ಆಲ್‌ರೌಂಡರ್	30 ಲಕ್ಷ
ಸೌರಭ್ ಕುಮಾರ್	ಆಲ್‌ರೌಂಡರ್	20 ಲಕ್ಷ
ಉತ್ಕರ್ಷ್ ಸಿಂಗ್	ಆಲ್‌ರೌಂಡರ್	20 ಲಕ್ಷ
ಸನ್‌ರೈಸರ್ಸ್ ಹೈದರಾಬಾದ್		
ಕೇದಾರ್ ಜಾಧವ್	ಆಲ್‌ರೌಂಡರ್	2 ಕೋಟಿ
ಮುಜೀಬ್ ಜದ್ರಾನ್	ಬೌಲರ್	1.50 ಕೋಟಿ
ಜಗದೀಶ್ ಸುಚಿತ್	ಬೌಲರ್	30 ಲಕ್ಷ

ಗೌತಮ್ ದುಬಾರಿ ಭಾರತೀಯ ಆಟಗಾರ

ಚೆನ್ನೈ: ಕನ್ನಡಿಗ ಕೃಷ್ಣಪ್ಪ ಗೌತಮ್ ಅವರಿಗೆ ಈ ಬಾರಿಯ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯ ಹರಾಜು ಪ್ರಕ್ರಿಯೆಯಲ್ಲಿ ಅದೃಷ್ಟಲಕ್ಷ್ಮೀ ಒಲಿದಳು.

ಗೌತಮ್ ಈ ಸಲದ ಹರಾಜಿನಲ್ಲಿ ಅತಿ ಹೆಚ್ಚು ಮೌಲ್ಯ ಗಳಿಸಿದ ಭಾರತದ ಆಟಗಾರನೆಂಬ ಹೆಗ್ಗಳಿಕೆಗೆ ಪಾತ್ರರಾದರು. ಗೌತಮ್ ಅವರನ್ನು ಚೆನ್ನೈ ಸೂಪರ್ ಕಿಂಗ್ಸ್ (ಸಿಎಸ್‌ಕೆ) ಫ್ರಾಂಚೈಸಿಯು ₹ 9.25 ಕೋಟಿ ನೀಡಿ ಖರೀದಿಸಿತು. ಅವರ ಮೂಲ ಬೆಲೆ ₹ 20 ಲಕ್ಷ ಇತ್ತು.

ಸದ್ಯ ಅಹಮದಾಬಾದಿನಲ್ಲಿ ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಪಂದ್ಯ ಆಡಲು ಸಿದ್ಧವಾಗುತ್ತಿರುವ ಭಾರತ ತಂಡದಲ್ಲಿ ನೆಟ್ಸ್ ಬೌಲರ್ ಆಗಿದ್ದಾರೆ. ಹೋದ ವರ್ಷ ಗೌತಮ್ ಕಿಂಗ್ಸ್ ಇಲೆವನ್ ಪಂಜಾಬ್ ತಂಡ (ಕಿಂಗ್ಸ್ ಪಂಜಾಬ್) ವನ್ನು ಪ್ರತಿನಿಧಿಸಿದ್ದರು. ಅದಕ್ಕೂ ಮುನ್ನ ಮುಂಬೈ ಇಂಡಿಯನ್ಸ್ ಮತ್ತು ರಾಜಸ್ಥಾನ್ ರಾಯಲ್ಸ್ ತಂಡಗಳಲ್ಲಿಯೂ ಇದ್ದರು.

ಐಪಿಎಲ್‌ನಲ್ಲಿ ಒಟ್ಟು 24 ಪಂದ್ಯಗಳನ್ನು ಆಡಿರುವ ಗೌತಮ್ 186 ರನ್ ಗಳಿಸಿದ್ದಾರೆ. 13 ವಿಕೆಟ್‌ಗಳನ್ನೂ ಕಬಳಿಸಿದ್ದಾರೆ. ಒಂದು ಟೂರ್ನಿಯಲ್ಲಿ ಅವರು ಆರ್‌ಸಿಬಿ ನಾಯಕ ವಿರಾಟ್ ಕೊಹ್ಲಿ ಅವರನ್ನು ಎರಡು ಪಂದ್ಯಗಳಲ್ಲಿ ಔಟ್ ಮಾಡಿ ಗಮನ ಸೆಳೆದಿದ್ದರು.

ಮಹೇಂದ್ರಸಿಂಗ್ ಧೋನಿ ನಾಯಕತ್ವದ ಚೆನ್ನೈ ತಂಡದಲ್ಲಿ ಈ ಬಾರಿ ಅವರು ಕಣಕ್ಕಿಳಿಯಲಿದ್ದಾರೆ. ಗುರುವಾರ ಮಧ್ಯಾಹ್ನ ಬಿಡ್ ಆರಂಭವಾದಾಗ ಕರ್ನಾಟಕದ ಕರುಣ್ ನಾಯರ್ ಅವರ ಹೆಸರು ಮೊದಲಿಗೆ ಹರಾಜಿಗೆ ಬಂದಿತು. ಆದರೆ ಯಾವುದೇ ಫ್ರಾಂಚೈಸಿಯು ಅವರನ್ನು ಪಡೆದುಕೊಳ್ಳಲು ಆಸಕ್ತಿ ತೋರಲಿಲ್ಲ.

ಈಚೆಗೆ ಟ್ರೇಡ್ ವಿಂಡೋದಲ್ಲಿ ರಾಬಿನ್ ಉತ್ತಪ್ಪ ಚೆನ್ನೈ ತಂಡಕ್ಕೆ ಸೇರ್ಪಡೆಯಾಗಿದ್ದಾರೆ.


ಕೃಷ್ಣಪ್ಪ ಗೌತಮ್

> ಚೆನ್ನೈ ಸೂಪರ್ ಕಿಂಗ್ಸ್‌ನಂತಹ ಪ್ರತಿಷ್ಠಿತ ತಂಡದಲ್ಲಿ ಆಡುವ ಅವಕಾಶ ಸಿಕ್ಕಿರುವುದಕ್ಕೆ ಖುಷಿಯಾಗಿದೆ. ಅನುಭವಿಗಳಿಂದ ಸಾಕಷ್ಟು ಕಲಿಯುವುದಕ್ಕೆ ಇದೆ
> **ಕೆ.ಗೌತಮ್** ಆಲ್‌ರೌಂಡರ್

ಕರುಣ್‌ಗೆ ಮೂಲಬೆಲೆ: ದೇಶಿ ಕ್ರಿಕೆಟ್‌ನಲ್ಲಿಯೂ ಲಯ ಕಳೆದುಕೊಂಡಿರುವ ಕರ್ನಾಟಕ ತಂಡದ ಕರುಣ್ ನಾಯರ್ ಈ ಬಾರಿ ಮೂಲಬೆಲೆಗೆ (₹ 50 ಲಕ್ಷ), ಕೋಲ್ಕತ್ತ ನೈಟ್ ರೈಡರ್ಸ್ ತಂಡಕ್ಕೆ ಸೇರ್ಪಡೆಯಾಗಿದ್ದಾರೆ. ಹೋದ ಸಲ ಅವರು ಪಂಜಾಬ್ ತಂಡದಲ್ಲಿದ್ದರು. ಆದರೆ ಬ್ಯಾಟಿಂಗ್‌ನಲ್ಲಿ ವೈಫಲ್ಯ ಅನುಭವಿಸಿದ್ದರು.

ಮೈಸೂರಿನ ಜೆ. ಸುಚಿತ್ (₹ 30 ಲಕ್ಷ) ಸನ್‌ರೈಸರ್ಸ್ ಹೈದರಾಬಾದ್ ಸೇರ್ಪಡೆಯಾಗಿದ್ದಾರೆ. ಕೆ.ಸಿ. ಕಾರಿಯಪ್ಪ (₹ 20 ಲಕ್ಷ) ರಾಜಸ್ಥಾನ್ ರಾಯಲ್ಸ್ ತಂಡಗಳಿಗೆ ಸೇರಿದ್ದಾರೆ.

ಕ್ರಿಸ್ ಮೊರಿಸ್: ಗಳಿಸಿರುವ ರನ್ 551; ಉರುಳಿಸಿದ ವಿಕೆಟ್ ಸಂಖ್ಯೆ 80

ಯಾರ್ಕರ್ ವೀರ, ಈ ಛಲಗಾರ

ಚೆನ್ನೈ (ಪಿಟಿಐ): ಮೂಲಬೆಲೆ ₹ ಒಂದು ಕೋಟಿಯೂ ನಿಗದಿಯಾಗಿಲ್ಲದೇ ಇದ್ದ ಕ್ರಿಸ್ ಮೊರಿಸ್‌ಗೆ ಗುರುವಾರ ನಡೆದ ಐಪಿಎಲ್ ಹರಾಜಿನಲ್ಲಿ ಕೊನೆಗೆ ಲಭಿಸಿದ್ದು ದಾಖಲೆಯ ₹ ಹದಿನಾರುಕಾಲು ಕೋಟಿ. ವೇಗದ ದಾಳಿಯ ಮೂಲಕ ಎದುರಾಳಿ ಬ್ಯಾಟ್ಸ್‌ಮನ್‌ಗಳನ್ನು ಕಂಗೆಡಿಸಬಲ್ಲ ಈ ‘ಎತ್ತರದ’ ಆಟಗಾರ ಅಗತ್ಯ ಬಿದ್ದರೆ ಬ್ಯಾಟ್ ಮೂಲಕವೂ ಉತ್ತರ ನೀಡುವ ಸಾಮರ್ಥ್ಯ ಹೊಂದಿದ್ದಾರೆ.

ದಕ್ಷಿಣ ಆಫ್ರಿಕಾದ ಪ್ರೆಟೋರಿಯಾದಲ್ಲಿ ಏಪ್ರಿಲ್ 30ರಂದು ಜನಿಸಿದ ಮೊರಿಸ್‌ಗೆ ಈಗ 33 ವರ್ಷ ವಯಸ್ಸು. ರಾಷ್ಟ್ರೀಯ ತಂಡದ ಪರ ಎಲ್ಲ ಮಾದರಿಯಲ್ಲೂ ಆಡಿರುವ ಅವರು 2013ರಿಂದ ಐಪಿಎಲ್‌ನಲ್ಲಿ ಕಣಕ್ಕೆ ಇಳಿಯುತ್ತಿದ್ದಾರೆ. ಈ ವರೆಗೆ ಒಟ್ಟು 70 ಪಂದ್ಯಗಳನ್ನು ಆಡಿದ್ದು 551 ರನ್ ಕಲೆ ಹಾಕಿದ್ದಾರೆ. 80 ವಿಕೆಟ್‌ಗಳನ್ನೂ ಉರುಳಿಸಿದ್ದಾರೆ.


ಕ್ರಿಸ್ ಮೊರಿಸ್

‘ಹರಾಜಿಗಿಂತ ಮುನ್ನ ಕ್ರಿಸ್ ಮೊರಿಸ್ ಜೊತೆ ಚರ್ಚೆ ನಡೆಸಿದ್ದೇವೆ. ಅವರ ಆರೋಗ್ಯದ ಕುರಿತು ಸಂಪೂರ್ಣ ಮಾಹಿತಿ ಕಲೆ ಹಾಕಲಾಗಿದ್ದು ದಕ್ಷಿಣ ಆಫ್ರಿಕದಲ್ಲಿ ಬಯೋ ಬಬಲ್‌ನಲ್ಲಿರುವ ಅವರು ದೇಶಿ ಕ್ರಿಕೆಟ್ ಆಡಲು ಸಜ್ಜಾಗಿದ್ದಾರೆ. ಈ ಹಿಂದೆ ರಾಯಲ್ ತಂಡದಲ್ಲಿ ಇದ್ದ ಅವರು ಹರಾಜಿನಲ್ಲಿ ಕೊಂಡುಕೊಂಡ ಮೊತ್ತಕ್ಕೆ ನ್ಯಾಯ ಒದಗಿಸುವ ರೀತಿಯಲ್ಲಿ ಆಡುವ ವಿಶ್ವಾಸವಿದೆ. ಹೀಗಾಗಿ ಅವರ ಮೇಲೆ ಗರಿಷ್ಠ ಹಣ ಹೂಡಲು ಮುಂದಾಗಿದ್ದೆವು’ ಎಂದು ತಂಡದ ಸಿಒಒ ಜೇಕ್ ರೂಚ್ ಮೆಕ್ರಂ ತಿಳಿಸಿದರು.

ಚೆನ್ನೈ ಸೂಪರ್ ಕಿಂಗ್ಸ್‌ನಲ್ಲಿ ಐಪಿಎಲ್ ಅಭಿಯಾನ ಆರಂಭಿಸಿದ ಮೊರಿಸ್ ನಂತರ ರಾಜಸ್ಥಾನ ರಾಯಲ್ಸ್ ಪರ ಆಡಿದ್ದಾರೆ. ಛಲ ಬಿಡದ ಆಟಗಾರ ಎಂದೇ ಖ್ಯಾತಿ ಪಡೆದಿದ್ದಾರೆ. ಡೆತ್ ಓವರ್‌ಗಳಲ್ಲಿ ಯಾರ್ಕರ್‌ಗಳ ಬ್ಯಾಟ್ಸ್‌ಮನ್‌ಗಳನ್ನು ಕಂಗೆಡಿಸಿರುವ ಮೊರಿಸ್ ಕೆಲವು ಪಂದ್ಯಗಳಲ್ಲಿ ‘ಫಿನಿಷರ್’ ಪಾತ್ರವನ್ನೂ ವಹಿಸಿದ್ದಾರೆ.

2013ರ ನಂತರ ಮುಂದಿನ ಆವೃತ್ತಿಯಲ್ಲಿ ಮೊರಿಸ್ ಆಡಿರಲಿಲ್ಲ. 2015ರಿಂದ ಕಳೆದ ಬಾರಿಯ ವರೆಗೂ ಆಡಿದ್ದಾರೆ. ಅತಿ ಹೆಚ್ಚು, 16 ಪಂದ್ಯಗಳಲ್ಲಿ ಆಡಿದ್ದು 2013ರಲ್ಲಿ. ಆ ವರ್ಷ ಕೇವಲ 14 ರನ್ ಗಳಿಸಿದ್ದ ಅವರು 15 ವಿಕೆಟ್ ಉರುಳಿಸಿದ್ದಾರೆ. 2015 ಮತ್ತು 2016ರ ಆವೃತ್ತಿಯಲ್ಲಿ ಕ್ರಮವಾಗಿ 11 ಮತ್ತು 12 ಪಂದ್ಯಗಳನ್ನು ಆಡಿದ್ದಾರೆ. 2015ರಲ್ಲಿ 76 ರನ್ ಮತ್ತು 13 ವಿಕೆಟ್ ಗಳಿಸಿದ್ದ ಅವರು ನಂತರದ ವರ್ಷ 195 ರನ್ ಮತ್ತು 13 ವಿಕೆಟ್ ಗಳಿಸಿ ಮಿಂಚಿದರು.

ಮುಂದಿನ ನಾಲ್ಕು ಆವೃತ್ತಿಗಳಲ್ಲಿ ಕ್ರಮವಾಗಿ 9,4,9,9 ಪಂದ್ಯಗಳನ್ನು ಆಡಿದ್ದು 154, 46, 32 ಮತ್ತು 34 ರನ್ ಗಳಿಸಿದ್ದಾರೆ. ಕ್ರಮವಾಗಿ 12, 3, 13 ಮತ್ತು 11 ವಿಕೆಟ್‌ಗಳೂ ಅವರ ಪಾಲಾಗಿವೆ.

21 ಬಾರಿ ನಾಟೌಟ್ ಆಗಿರುವ ಮೊರಿಸ್ ಒಟ್ಟು 551 ರನ್ ಗಳಿಸಿದ್ದು ಅಜೇಯ 82 ಅವರ ಗರಿಷ್ಠ ಗಳಿಕೆ. ಎರಡು ಅರ್ಧಶತಕಗಳಿಸಿದ್ದಾರೆ. ಒಟ್ಟು 80 ವಿಕೆಟ್ ಉರುಳಿಸಿದ್ದು 23ಕ್ಕೆ4 ವಿಕೆಟ್ ಶ್ರೇಷ್ಠ ಬೌಲಿಂಗ್.

ಆ್ಯರನ್ ಫಿಂಚ್, ಹನುಮ ವಿಹಾರಿಗೆ ಇಲ್ಲ ಬೇಡಿಕೆ

ಚೆನ್ನೈ: ಸ್ಫೋಟಕ ಶೈಲಿಯ ಬ್ಯಾಟ್ಸ್‌ಮನ್ ಆಸ್ಟ್ರೇಲಿಯಾದ ಆ್ಯರನ್ ಫಿಂಚ್ ಮತ್ತು ಮೋಹಕ ಹೊಡೆತಗಾರ ಹನುಮವಿಹಾರಿ ಅವರನ್ನು ಕೊಂಡುಕೊಳ್ಳಲು ಯಾವ ಫ್ರಾಂಚೈಸ್‌ಗಳೂ ಮುಂದೆ ಬಂದಿಲ್ಲ. ಇವರಿಬ್ಬರು ಮಾತ್ರವಲ್ಲದೆ ವರುಣ್ ಆ್ಯರನ್, ಜೇಸನ್ ರಾಯ್, ಲಿಯಾಮ್ ಪ್ಲಂಕೆಟ್, ಮಾರ್ನೆ ಮಾರ್ಕೆಲ್, ಶೆಲ್ಡನ್ ಕಾಟ್ರೆಲ್, ಆದಿಲ್ ರಶೀದ್, ಮುಷ್ಫಿಕುರ್ ರಹೀಮ್, ಅಲೆಕ್ಸ್ ಕ್ಯಾರಿ ಮತ್ತು ಅಲೆಕ್ಸ್ ಹೇಲ್ಸ್ ಹರಾಜಾಗದೆ ಉಳಿದರು.

ಜೇಸನ್ ರಾಯ್ ಹಾಗೂ ಪ್ಲಂಕೆಟ್ ಅವರಿಗೆ ತಲಾ ₹ 2 ಕೋಟಿ ಮೂಲಬೆಲೆ ನಿಗದಿಯಾಗಿತ್ತು.

ಮುಂಬೈ ತಂಡಕ್ಕೆ ಅರ್ಜುನ್ ತೆಂಡೂಲ್ಕರ್

ಚೆನ್ನೈ: ಕ್ರಿಕೆಟ್ ದಿಗ್ಗಜ ಸಚಿನ್ ತೆಂಡೂಲ್ಕರ್ ಅವರ ಮಗ ಅರ್ಜುನ್ ತೆಂಡೂಲ್ಕರ್ ಅವರನ್ನು ಮುಂಬೈ ಇಂಡಿಯನ್ಸ್ ತಂಡವು ಸೇರ್ಪಡೆ ಮಾಡಿಕೊಂಡಿತು. ಮೊದಲ ಬಾರಿ ಅವರು ಐಪಿಎಲ್‌ಗೆ ಸೇರ್ಪಡೆಯಾಗಿದ್ದಾರೆ. ಹರಾಜು ಪ್ರಕ್ರಿಯೆಯಲ್ಲಿ ಕೊನೆಯ ಆಟಗಾರನಾಗಿ ಬಿಡ್ ಆದ ಆಲ್‌ರೌಂಡರ್ ಅರ್ಜುನ್ ಮೂಲಬೆಲೆ ₹ 20 ಲಕ್ಷಕ್ಕೆ ತವರೂರಿನ ತಂಡಕ್ಕೆ ಆಯ್ಕೆಯಾದರು.

ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿ: ಸೆರೆನಾ ವಿಲಿಯಮ್ಸ್ ಕನಸು ಭಗ್ನ

ಫೈನಲ್‌ಗೆ ನವೊಮಿ ಒಸಾಕ

ಮೆಲ್ಬರ್ನ್ (ಎಎಫ್‌ಪಿ): ದಾಖಲೆಯ ಹಾದಿಯಲ್ಲಿ ಮತ್ತೊಮ್ಮೆ ಎಡವಿದ ಅಮೆರಿಕದ ಸೆರೆನಾ ವಿಲಿಯಮ್ಸ್ ಕಣ್ಣೀರು ಹಾಕಿ ಪತ್ರಿಕಾಗೋಷ್ಠಿಯಿಂದ ಎದ್ದುಹೋದರು. ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯಲ್ಲಿ ಗುರುವಾರ ನಡೆದ ಮಹಿಳೆಯರ ಸೆಮಿಫೈನಲ್‌ನಲ್ಲಿ ನವೊಮಿ ಒಸಾಕ 6-3, 6-4ರಲ್ಲಿ ಸೆರೆನಾ ವಿರುದ್ಧ ಗೆಲುವು ಸಾಧಿಸಿದರು.

ಆಸ್ಟ್ರೇಲಿಯಾ ಓಪನ್‌ನಲ್ಲಿ ಒಂಬತ್ತನೇ ಪ್ರಶಸ್ತಿ ಗೆದ್ದು ಒಟ್ಟಾರೆ ಅತಿಹೆಚ್ಚು ಗ್ರ್ಯಾನ್‌ಸ್ಲಾಂ ಪ್ರಶಸ್ತಿ ಗೆದ್ದ ಮಾರ್ಗರೆಟ್ ಕೋರ್ಟ್ ಅವರ ದಾಖಲೆ ಸರಿಗಟ್ಟುವ ಸೆರೆನಾ ಅವರ ಕನಸು ಈ ಮೂಲಕ ನುಚ್ಚುನೂರಾಯಿತು. ಪಂದ್ಯದ ನಂತರ ನಡೆದ ಪತ್ರಿಕಾಗೋಷ್ಠಿಯಲ್ಲಿ ‘ಇದು ನನ್ನ ವೃತ್ತಿಜೀವನದ ದೊಡ್ಡ ಲೋಪ’ ಎಂದು ಹೇಳಿ ಕಣ್ಣೀರು ಹಾಕಿದರು.

23 ಗ್ರ್ಯಾನ್‌ಸ್ಲಾಂ ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿರುವ 39 ವರ್ಷದ ಸೆರೆನಾಗೆ ಇಲ್ಲಿ 10ನೇ ಶ್ರೇಯಾಂಕ ನೀಡಲಾಗಿತ್ತು. ಜಪಾನ್‌ನ ಒಸಾಕ ಮೂರನೇ ಶ್ರೇಯಾಂಕ ಹೊಂದಿದ್ದರು. ‘ಯಾರೂ ನಿರೀಕ್ಷೆ ಮಾಡದಷ್ಟು ತಪ್ಪುಗಳನ್ನು ಮಾಡಿದೆ. ಅವೆಲ್ಲವೂ ಸುಲಭವಾಗಿ ತಪ್ಪಿಸಬಹುದಾಗಿದ್ದ ತಪ್ಪುಗಳಾಗಿದ್ದವು. ಆದ್ದರಿಂದ ಈ ಪಂದ್ಯದ ಸೋಲಿಗೆ ಯಾವುದೇ ವಿವರಣೆ ನೀಡಲು ಬಯಸುವುದಿಲ್ಲ’ ಎಂದು ಸೆರೆನಾ ಹೇಳಿದರು.


ನವೊಮಿ ಒಸಾಕ ಅವರ ಆಟದ ಭಂಗಿ –ರಾಯಿಟರ್ಸ್ ಚಿತ್ರ

ಕೊರೊನಾ ಆತಂಕದಿಂದಾಗಿ ಪ್ರೇಕ್ಷಕರಿಗೆ ನಿರ್ಬಂಧ ವಿಧಿಸಲಾಗಿತ್ತು. ಅದು ಬುಧವಾರಕ್ಕೆ ಮುಕ್ತಾಯಗೊಂಡಿತ್ತು. ಆದ್ದರಿಂದ ಒಸಾಕ ಮತ್ತು ಸೆರೆನಾ ಪಂದ್ಯ ವೀಕ್ಷಿಸಲು ಸಾವಿರಾರು ಪ್ರೇಕ್ಷಕರು ಸೇರಿದ್ದರು. ಇಬ್ಬರೂ ಬಲಶಾಲಿ ಹೊಡೆತಗಳ ಮೂಲಕ ಪ್ರೇಕ್ಷಕರನ್ನು ರಂಜಿಸಿದರು. ಆದರೆ ಎರಡೂ ಸೆಟ್‌ಗಳಲ್ಲಿ ಸುಲಭ ಜಯ ಸಾಧಿಸಿದ ಒಸಾಕ ಪಂದ್ಯ ಗೆದ್ದು ಸಂಭ್ರಮಿಸಿದರು. 2018ರ ಅಮೆರಿಕ ಓಪನ್ ಫೈನಲ್‌ನಲ್ಲಿ ಸೆರೆನಾ ವಿಲಿಯಮ್ಸ್‌ಗೆ ಒಸಾಕ ಸೋಲುಣಿಸಿದ್ದರು.

ನಾಲ್ಕನೇ ಗ್ರ್ಯಾನ್‌ಸ್ಲಾಂ ಮೇಲೆ ಕಣ್ಣಿಟ್ಟಿರುವ ಒಸಾಕ ಶನಿವಾರ ನಡೆಯಲಿರುವ ಫೈನಲ್‌ನಲ್ಲಿ ಅಮೆರಿಕದ ಜೆನಿಫರ್ ಬ್ರಾಡಿ ಎದುರು ಸೆಣಸುವರು. ಜೆಕ್ ಗಣರಾಜ್ಯದ ಕರೊಲಿನಾ ಮುಚೋವ ಅವರನ್ನು 6-4, 3-6, 6-4ರಲ್ಲಿ ಮಣಿಸಿ ಬ್ರಾಡಿ ಪ್ರಶಸ್ತಿ ಸುತ್ತು ಪ್ರವೇಶಿಸಿದ್ದಾರೆ.

ಪುರುಷರ ಸಿಂಗಲ್ಸ್ ಸೆಮಿಫೈನಲ್‌ನಲ್ಲಿ ಸರ್ಬಿಯಾದ ನೊವಾಕ್ ಜೊಕೊವಿಚ್ 6-3, 6-4, 6-2ರಲ್ಲಿ ರಷ್ಯಾದ ಅಸ್ಲಾನ್ ಕರಸ್ತೇವ್ ವಿರುದ್ಧ ಜಯ ಸಾಧಿಸಿದರು. ಟೂರ್ನಿಯಲ್ಲಿ ಅಮೋಘ ಓಟ ಓಡುತ್ತಿದ್ದ ಕರಸ್ತೇವ್ ಹಾಲಿ ಚಾಂಪಿಯನ್ ನೊವಾಕ್‌ಗೆ ಪ್ರತಿಸ್ಪರ್ಧೆ ಒಡ್ಡುವಲ್ಲಿ ವಿಫಲರಾದರು. ಆರಂಭದಿಂದಲೇ ಆಧಿಪತ್ಯ ಸ್ಥಾಪಿಸಿದ ಜೊಕೊವಿಚ್ ಮೂರನೇ ಸೆಟ್‌ನ ಎಂಟನೇ ಗೇಮ್‌ನಲ್ಲಿ ಭರ್ಜರಿ ಏಸ್ ಸಿಡಿಸಿ ಗೆಲುವಿನ ನಗೆ ಚೆಲ್ಲಿದರು. ಪ್ರೇಕ್ಷಕರ ಸ್ಟ್ಯಾಂಡ್‌ನಲ್ಲಿ ಕುಳಿತಿದ್ದ ಸರ್ಬಿಯಾ ಅಭಿಮಾನಿಗಳು ಕುಣಿದು ಕುಪ್ಪಳಿಸಿದರು.

ಶುಕ್ರವಾರ ನಡೆಯಲಿರುವ ಮತ್ತೊಂದು ಸೆಮಿಫೈನಲ್‌ನಲ್ಲಿ ಗ್ರೀಸ್‌ನ ಸ್ಟೆಫನೋಸ್ ಸಿಟ್ಸಿಪಾಸ್ ಮತ್ತು ರಷ್ಯಾದ ಡ್ಯಾನಿಲ್ ಮೆಡ್ವೆಡೆವ್ ಸೆಣಸುವರು.

ಚುಟುಕು ಕ್ರಿಕೆಟ್‌ಗೆ ಮರಳಿದ ಪೂಜಾರ

ಚೆನ್ನೈ (ಪಿಟಿಐ): ಟೆಸ್ಟ್ ಕ್ರಿಕೆಟ್ ಪರಿಣತ ಬ್ಯಾಟ್ಸ್‌ಮನ್ ಚೇತೇಶ್ವರ್ ಪೂಜಾರ ಆರು ವರ್ಷಗಳ ನಂತರ ಐಪಿಎಲ್ ಟೂರ್ನಿಗೆ ಮರಳಿದರು. ಗುರುವಾರ ನಡೆದ 14ನೇ ಆವೃತ್ತಿಯ ಆಟಗಾರರ ಹರಾಜು ಪ್ರಕ್ರಿಯೆಯಲ್ಲಿ ಪೂಜಾರ ಅವರನ್ನು ಮೂಲಬೆಲೆ (₹ 50 ಲಕ್ಷ)ಗೆ ಚೆನ್ನೈ ಸೂಪರ್ ಕಿಂಗ್ಸ್ ಖರೀದಿಸಿತು.

2014ರಲ್ಲಿ ಕಿಂಗ್ಸ್ ಇಲೆವನ್ ಪಂಜಾಬ್ ತಂಡದಲ್ಲಿ ಪೂಜಾರ ಆಡಿದ್ದರು. ಅದರ ನಂತರ ಅವರು ಐಪಿಎಲ್‌ನಲ್ಲಿ ಅವಕಾಶ ಗಿಟ್ಟಿಸಿರಲಿಲ್ಲ. ಇದೀಗ ಚೆನ್ನೈ ಬಳಗದಲ್ಲಿ ಅವಕಾಶ ಪಡೆದಿದ್ದಾರೆ.


ಪೂಜಾರ

ವಿಶ್ವಕಪ್: ಭಾರತದ ಜಯಕ್ಕೆ ಐಸಿಸಿ ‘ಸರಣಿ’ ಸಂಭ್ರಮ

ದುಬೈ: ಭಾರತ ತಂಡ ತವರಿನ ಅಂಗಣದಲ್ಲಿ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಪ್ರಶಸ್ತಿ ಗೆದ್ದ ದಶಮಾನೋತ್ಸವದ ಸಂಭ್ರಮ ಆಚರಣೆಗಾಗಿ ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ (ಐಸಿಸಿ) #ಸಿಡಬ್ಲ್ಯುಸಿ11ರೀವೈಂಡ್ ಎಂಬ ಹೆಸರಿನಲ್ಲಿ ಸರಣಿಯೊಂದನ್ನು ಆರಂಭಿಸಿದೆ. ಇದಕ್ಕೆ ಶುಕ್ರವಾರ ಚಾಲನೆ ಸಿಗಲಿದೆ. ಟೂರ್ನಿಯ ಪ್ರಮುಖ ಅಂಶಗಳನ್ನು ಒಳಗೊಂಡ 100 ತುಣುಕುಗಳನ್ನು ಇದಕ್ಕಾಗಿ ಐಸಿಸಿ ಆರಿಸಿಕೊಂಡಿದೆ.

ಪಂದ್ಯಗಳು ನಡೆದ ದಿನ ಐಸಿಸಿ ತನ್ನ ವೆಬ್‌ಸೈಟ್‌ನಲ್ಲಿ ಹಾಕಿದ ಪ್ರಮುಖ ಅಂಶಗಳು, ಆಯಾ ಪಂದ್ಯದಲ್ಲಿ ಉತ್ತಮ ಸಾಮರ್ಥ್ಯ ತೋರಿದವರ ಆಟದ ಭಂಗಿ ಹಾಗೂ ಇತರ ಕೆಲವು ಭಾಗಗಳು ಕೂಡ ಸರಣಿಯಲ್ಲಿ ಇರುತ್ತವೆ. ಯುವ ಆಟಗಾರನಿಗೆ ಸಂಬಂಧಿಸಿದ ಇನ್‌ಸ್ಟಾಗ್ರಾಮ್ ಮಾಹಿತಿ, ಸಂದರ್ಶನ ಮತ್ತು ಟೂರ್ನಿಯ ಪ್ರಮುಖ ಆಟಗಾರರ ಕುರಿತ ಮಾಹಿತಿಯೂ ಇರಲಿದೆ. ಹಿಂದಿಯಲ್ಲೂ ಇಂಗ್ಲಿಷ್‌ನಲ್ಲೂ ವಿವರಣೆ ಇರುತ್ತದೆ.

ಮಹೇಂದ್ರ ಸಿಂಗ್ ಧೋನಿ ನಾಯಕತ್ವದಲ್ಲಿ ಕಣಕ್ಕೆ ಇಳಿದಿದ್ದ ಭಾರತ ತಂಡ ಮುಂಬೈನಲ್ಲಿ ನಡೆದಿದ್ದ ಫೈನಲ್‌ನಲ್ಲಿ ಶ್ರೀಲಂಕಾವನ್ನು ಆರು ವಿಕೆಟ್‌ಗಳಿಂದ ಮಣಿಸಿ ಪ್ರಶಸ್ತಿ ಗೆದ್ದಿತ್ತು.

ಒಲಿಂಪಿಕ್ಸ್: ಸೀಕೊ ಅಧ್ಯಕ್ಷೆ

ಟೋಕಿಯೊ(ಎಪಿ): ಮಾಜಿ ಒಲಿಂಪಿಯನ್ ಸೀಕೊ ಹಶಿಮೊಟೊ ಅವರು ಟೋಕಿಯೊ ಒಲಿಂಪಿಕ್ಸ್ ಆಯೋಜನಾ ಸಮಿತಿಯ ಅಧ್ಯಕ್ಷೆಯಾಗಿ ಗುರುವಾರ ನೇಮಕಗೊಂಡಿದ್ದಾರೆ.


ಶೀಕೊ ಹಶಿಮೊಟೊ

ಒಲಿಂಪಿಕ್ಸ್ ಆಯೋಜನಾ ಸಮಿತಿಯ ಕಾರ್ಯಕಾರಿ ಮಂಡಳಿ ಸಭೆಯಲ್ಲಿ ಹಶಿಮೊಟೊ ಅವರ ಹೆಸರನ್ನು ಪ್ರಕಟಿಸಲಾಯಿತು. ಮಹಿಳೆಯರ ಬಗ್ಗೆ ಅನುಚಿತ ಹೇಳಿಕೆ ನೀಡಿದ್ದ ಈ ಹಿಂದಿನ ಅಧ್ಯಕ್ಷ ಯೋಶಿರೊ ಮೊರಿ, ವ್ಯಾಪಕ ವಿರೋಧ ವ್ಯಕ್ತವಾದ ಕಾರಣ ಎರಡು ವಾರಗಳ ಹಿಂದೆ ರಾಜೀನಾಮೆ ನೀಡಿದ್ದರು.

ಕೋಲ್ಕತ್ತ ಡರ್ಬಿಗೆ 100ರ ಸಂಭ್ರಮ

ಫತೋರ್ಡ, ಗೋವಾ (ಪಿಟಿಐ: ಭಾರತ ಫುಟ್‌ಬಾಲ್‌ನಲ್ಲಿ ಮಹತ್ವದ ಮೈಲುಗಲ್ಲೊಂದಕ್ಕೆ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಶುಕ್ರವಾರ ಸಾಕ್ಷಿಯಾಗಲಿದೆ. ಕೋಲ್ಕತ್ತದ ಪ್ರಮುಖ ತಂಡಗಳಾದ ಎಟಿಕೆ ಮೋಹನ್ ಬಾಗನ್ ಮತ್ತು ಎಸ್‌ಸಿ ಈಸ್ಟ್ ಬೆಂಗಾಲ್ ನಡುವಿನ 100ನೇ ಡರ್ಬಿ ಫತೋರ್ಡ ಕ್ರೀಡಾಂಗಣದಲ್ಲಿ ನಡೆಯಲಿದೆ.

ಮೋಹನ್ ಬಾಗನ್ ಹಾಗೂ ಈಸ್ಟ್ ಬೆಂಗಾಲ್ ತಂಡಗಳು 1921ರ ಕೂಚ್ ಬೆಹಾರ್ ಕಪ್ ಟೂರ್ನಿಯಲ್ಲಿ ಮೊದಲ ಬಾರಿ ಮುಖಾಮುಖಿಯಾಗಿದ್ದವು. ಈ ತಂಡಗಳ ಹೆಸರು ಈಗ ಬದಲಾಗಿದ್ದು ಎಟಿಕೆ ಮೋಹನ್ ಬಾಗನ್ ಮತ್ತು ಎಸ್‌ಸಿ ಈಸ್ಟ್ ಬೆಂಗಾಲ್ ಎಂದಾಗಿದೆ. ಐಎಸ್‌ಎಲ್‌ನ ಹಾಲಿ ಚಾಂಪಿಯನ್ ಎಟಿಕೆ ಮೋಹನ್ ಬಾಗನ್ ಈ ಬಾರಿಯೂ ಉತ್ತಮ ಸಾಮರ್ಥ್ಯ ತೋರಿದ್ದು ಪಾಯಿಂಟ್ ಪಟ್ಟಿಯ ಅಗ್ರಸ್ಥಾನದಲ್ಲಿದೆ.ಲೀಗ್ ಹಂತದ ಚಾಂಪಿಯನ್ ತಂಡಕ್ಕೆ ನೀಡುವ ‘ಲೀಗ್ ವಿನ್ನರ್ಸ್ ಶೀಲ್ಡ್’ ತನ್ನದಾಗಿಸಿಕೊಳ್ಳುವತ್ತ ಎಟಿಕೆಎಂಬಿ ಹೆಜ್ಜೆ ಇರಿಸಿದೆ. ಐಎಸ್‌ಎಲ್‌ಗೆ ಇದೇ ಮೊದಲ ಬಾರಿ ಪ್ರವೇಶಿಸಿರುವ ಈಸ್ಟ್ ಬೆಂಗಾಲ್ ಆರಂಭದಲ್ಲಿ ಕಳಪೆ ಆಟವಾಡಿತ್ತು. ಈಚಿನ ಪಂದ್ಯಗಳಲ್ಲಿ ಉತ್ತಮ ಸಾಮರ್ಥ್ಯ ತೋರುತ್ತಿದೆ. ಆದರೂ 10 ತಂಡಗಳಿರುವ ಲೀಗ್‌ನ ಪಾಯಿಂಟ್ ಪಟ್ಟಿಯಲ್ಲಿ ಒಂಬತ್ತನೇ ಸ್ಥಾನದಲ್ಲಿದೆ.


ಎಟಿಕೆ ಮೋಹನ್ ಬಾಗನ್ ತಂಡದ ಆಟಗಾರರು – ಐಎಸ್‌ಎಲ್ ಮೀಡಿಯಾ ಚಿತ್ರ

‘ಕುಸ್ತಿ ಪಟು ಆರೋಪ ನಿರಾಧಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಟ್ರಯಲ್ಸ್‌ನಲ್ಲಿ ಉತ್ತಮ ಪ್ರದರ್ಶನ ತೋರಿದರೂ ತಂಡಕ್ಕೆ ಆಯ್ಕೆ ಮಾಡಿಲ್ಲ ಎಂದಿರುವ ಕುಸ್ತಿಪಟು ರಾಜೇಂದ್ರ ಮಠಪತಿ ಆರೋಪ ಸತ್ಯಕ್ಕೆ ದೂರವಾದದ್ದು’ ಎಂದು ಕರ್ನಾಟಕ ರಾಜ್ಯ ಕುಸ್ತಿ ಸಂಘದ ಗೌರವ ಅಧ್ಯಕ್ಷ ಕೆ.ಆರ್. ರಂಗಯ್ಯ ತಿಳಿಸಿದ್ದಾರೆ.

ಗುರುವಾರ ‘ಪ್ರಜಾವಾಣಿ’ಯಲ್ಲಿ ಪ್ರಕಟವಾದ ವರದಿಗೆ ಪ್ರತಿಕ್ರಿಯಿಸಿರುವ ಅವರು ‘ಕಳೆದ ವರ್ಷ ಉತ್ತಮ ಪ್ರದರ್ಶನ ತೋರಿದ ಕುಸ್ತಿಪಟುಗಳಿಗೆ ಅವಕಾಶ ನೀಡುವಂತೆ ರಾಷ್ಟ್ರೀಯ ಕುಸ್ತಿ ಸಂಘ ನಿರ್ದೇಶನ ನೀಡಿತ್ತು. ಇದರ ಪ್ರಕಾರವೇ ಅನುಭವಿ ಕೋಚ್‌ಗಳನ್ನು ಒಳಗೊಂಡ ಆಯ್ಕೆ ಸಮಿತಿ 65ನೇ ರಾಷ್ಟ್ರೀಯ ಕುಸ್ತಿ ಚಾಂಪಿಯನ್‌ಷಿಪ್‌ಗೆ ಕುಸ್ತಿಪಟುಗಳನ್ನು ಆಯ್ಕೆ ಮಾಡಿದೆ’ ಎಂದಿದ್ದಾರೆ.

‘ರಾಜೇಂದ್ರ ಮೂರು ವರ್ಷಗಳಿಂದ ಅಂತರ ವಿಶ್ವವಿದ್ಯಾಲಯ ಹೊರತುಪಡಿಸಿ ಯಾವುದೇ ರಾಷ್ಟ್ರೀಯ ಟೂರ್ನಿಯಲ್ಲಿ ಪಾಲ್ಗೊಂಡಿಲ್ಲ. ರಾಷ್ಟ್ರೀಯ ಮಟ್ಟದ ಸ್ಪರ್ಧೆಗಳಲ್ಲಿ ಅಗ್ರ 10ರ ಒಳಗೆ ಸ್ಥಾನ ಪಡೆಯದ ಕಾರಣ ರಾಜೇಂದ್ರ ಹಾಗೂ ಆತ ಹೆಸರಿಸಿರುವ ಮೂವರು ಕುಸ್ತಿಪಟುಗಳನ್ನು ತಂಡಕ್ಕೆ ಪರಿಗಣಿಸಿಲ್ಲ. ರಾಜ್ಯ ಕುಸ್ತಿ ಸಂಘದ ಹೆಸರಿಗೆ ಮಸಿ ಬಳಿಯಲು ರಾಜೇಂದ್ರ ವಿನಾಕಾರಣ ಕುಸ್ತಿಪಟುಗಳ ದಾರಿ ತಪ್ಪಿಸುತ್ತಿದ್ದಾನೆ’ ಎಂದಿದ್ದಾರೆ.